ಸಂವಾದ

ಸೆಪ್ಟೆಂಬರ್ 2012 ರೂ. 20

ಬ್ರಾಹ್ಮಣ್ಯವೇ ಕಮ್ಯುನಿಷ್ಟರ ವಿಫಲತೆಗೆ ಕಾರಣ

• ತೇಲ್ತುಂಬ್ಡೆ

‘ಗೀತೆ’ಯ ಸತ್ಯಗಳು

DR. AMBEDKAR INSTITUTE OF TECHNOLOGY

An Autonomous Institution affiliated to Visvesvaraya Technological University, Belgaum and Aided by Govt. of Karnataka

ADMISSION OPEN FOR 2012-2013

The 23 acre flourishing campus is situated on the outer ring road, adjacent to Jnana Bharathi Campus of Bangalore University and just 10 Kms from the heart of the city. Its other illustrious neighboring institutions are Indian Institute of Plantation Management (IIPM), National Law School of India University (NLSIU), Institute for Social and Economic Change (ISEC), Atomic Energy Department (AED) and National Assessment and Accreditation Council (NAAC). The conveyance to the college is very cosy with the help of better transport connectivity from all the locations.

As a Grant in-Aid Institution of Government of Karnataka, 95% of the seats are filled up purely on the basis of merit through Common Entrance Test (CET) Cell. Thus The academic environment is assiduous and intellectual on the campus. The Institution is accredited by National Board of Accreditation (NBA), New Delhi.

It has a total built-up area of 39691sq.mtrs with a large number of spacious, well ventilated class rooms with e-learning facilities, laboratories, Data Center, Virtual Instrumentation laboratory, English language laboratory, Workshops, Drawing halls, Seminar halls, Library & Information centre, Sports complex and Auditorium. Besides the campus also provide hostel facilities separately to the boys and girls students of the institute.

The entire campus is a Wi-Fi campus with 1:1 sysmetric dedicated leased line internet connectivity with optical fiber back bone.

Computer Lab

Chemistry Lab

Digital Library



Data Centre

Gym

Auditorium

Under - Graduate Courses Offered

Sl. No	B.E. Degree Course in	Sanctioned Student Intake
1	Civil Engineering	60
2	Mechanical Engineering	120
3	Electrical & Electronics Engineering	60
4	Electronics & Communication Engineering	120
5	Industrial Engineering & Management	30
6	Instrumentation & Technology	60
7	Computer Science & Engineering	120
8	Telecommunication Engineering	60
9	Information Science & Engineering	60
10	Medical Electronics	30

Post - Graduate Courses Offered

Sl. No	Master Degree Course in	Sanctioned Student Intak
1	M.Tech. in Computer Science & Engg.	25
2	M.Tech. in VLSI Design & Embedded Systems	18
3	M.Tech. in Digital Communication & Networking	18
4	M.Tech. in Power Electronics	18
5	M.Tech. in Structrural Engineering	18
6	Master of Computer Application (MCA)	60
7	Master of Business Administration (MBA)	60

Sl. No	Ph.D. Degree through research
1	Civil Engineering
2	Mechanical Engineering
3	Electrical & Electronics Engineering
4	Electronics & Communication Engineering
5	Instrumentation Technology
6	Telecommunication Engineering
7	Master of Computer Application
8	Physics
9	Chemistry
10	Mathematics

Girls Hostel

Boys Hostel

VISION

True to the characteristics of the Panchajanya, the trust envisions eradication of illiteracy, ignorance and poverty using quality education as the means. The aim is to transform our large population in to a national asset where each individual contributes to the overall development of India.

MISSION

To create an environment for the moral, social, cultural and educational progress of the underprivileged population in the realization of an egalitarian society.

556 STUDENTS

Students Selection through campus interview

PLACED IN 2010-11

TCS | HCL TECHNOLOGIES | MINDTREE
TITAN | SOMA CONSTRUCTION CO.
ACT TV | SYNTEL | MPHASIS (HP Company)
RAMKY INFRASTRUCTURE | ROBERT BOSCH
ORACLE | SASKEN | YOKOGAWA | L&T ECC
TECH MAHINDRA | INFOTECH |
EUREKA FORBES LTD.

For Admission contact : Managing Trustee
Panchajanya Vidya Peetha Welfare Trust (R)
Tel : 080-23211351 / 23215070

Near Jnana Bharathi Campus, Bangalore - 560 056
Tel +91 80 23211505 / 06 / 07, 23218534
Fax +91 80 23217789, E-mail : principal@dr-ait.org
www.dr-ait.org

ಸಂವಾದ

ಮಾಸ ಪತ್ರಿಕೆ

ಸಂಪುಟ 10 ಸಂಚಿಕೆ 11
ಸೆಪ್ಟಂಬರ್ 2012

ಸಂಪಾದಕ:
ಇಂದೂಧರ ಹೊನ್ನಾಪುರ

ಉಪ ಸಂಪಾದಕ:
ಭೈರಸಂದ್ರ ಗಂಗರಾಜು

ಸಂಪಾದಕೀಯ ಬಳಗ:
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಡಾ|| ಕೆ. ಪುಟ್ಟಸ್ವಾಮಿ
ಡಾ|| ಡಿ. ಡೊಮಿನಿಕ್
ಡಾ|| ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ **Editorial: 9448048306**
✆ **Circulation: 9945264687**
080 - 23480278

e-mail :
Editorial: samvaada@hotmail.com
honnapura@yahoo.co.in

Circulation :
samvaadacirculation@gmail.com

EDITOR :
INDUDHARA HONNAPURA

ಒಳಪುಟಗಳಲ್ಲಿ




- ಪತ್ರಗಳು ೦೪
- ಹೊಸ ಪುಸ್ತಕ ೦೫
- ಸಂಪಾದಕರೊಂದಿಗೆ ಸಂವಾದ:
  - ಡಾ|| ರಾಜೇಗೌಡ ಹೊಸಹಳ್ಳಿ ೦೬
  - ಪ್ರೊ|| ಕೆ.ಎಸ್ ಭಗವಾನ್ ೦೮
  - ಮಹದೇವ ಬಣಕಾರ ೦೯
  - ಸನತ್‌ಕುಮಾರ ಬೆಳಗಲಿ ೧೦
  - ಉಮಾಶಂಕರ್ ಹೆಚ್. ಡಿ ೧೨
- ಪುರುಷ ಪ್ರಧಾನ ವ್ಯವಸ್ಥೆಯೆಂದರೆ ಸ್ತ್ರೀಯರ ಮೇಲಿನ ದೌರ್ಜನ್ಯವೇ?
  - ಎಸ್.ಎಮ್ ಸೋಮನಗೌಡ ೧೪

- ಮನ ಮಿಡಿಯುವ ಎರಡು ಬರಹಗಳು
  - ಡಾ|| ಎನ್. ಜಗದೀಶ್ ಕೊಪ್ಪ ೧೬
- 'ಗೀತೆ'ಯ ಸತ್ಯಗಳು
  - ಮೂಲ: ಡಾ|| ವಿ.ಆರ್ ನಾರ್ಲಾ
  - ಅನು: ಪ್ರೊ|| ಬಿ ಗಂಗಾಧರಮೂರ್ತಿ ೨೦
- ಇನ್ನೊಂದು ದಾರಿ
  - ಡಾ|| ಹಿ.ಶಿ ರಾಮಚಂದ್ರೇಗೌಡ ೨೪
- ಏಕೈಕ ಸಮುದಾಯ: ಒಂದು ಭಾವನಾತ್ಮಕ ಘೋಷಣೆ
  - ಮೂಲ: ಡಾ|| ಅಸ್ಗರ್‌ಅಲಿ ಎಂಜನೀಯರ್
  - ಅನು: ಹಸನ್ ನಯೀಂ ಸುರಕೋಡ ೨೮
- ರೈತ ಮತ್ತು ಆದಿವಾಸಿ ಚಳವಳಿಗಳ ಸಿಂಹಾವಲೋಕನ; ಮಾಹಿತಿಗಳು ಭರಪೂರ
  - ಡಾ|| ಕಾವಲಮ್ಮ ಆರ್ ೩೨
- ಬ್ರಾಹ್ಮಣ್ಯವೇ ಕಮ್ಯುನಿಸ್ಟರ ವಿಫಲತೆಗೆ ಕಾರಣ-ತೇಲ್ತುಂಬ್ಡೆ ಸಂದರ್ಶನ
  - ಮೂಲ: ಆರ್.ಕೆ ಬಿಜುರಾಜ್
  - ಅನು: ಡಾ|| ಎಚ್.ಎಸ್ ಅನುಪಮಾ ೩೪

- ನೋಯುವ ಹಲ್ಲಿಗೆ ಹೊರಳುವ ನಾಲಿಗೆ-೧೦
  - ಡಾ|| ಎಚ್.ಎಸ್ ಅನುಪಮಾ ೩೮
- ಬತ್ತದ ಬಯಲು-೮
  - ಡಾ|| ಬಿ.ಎಂ ಪುಟ್ಟಯ್ಯ ೪೨
- ದಲಿತ್ ಡೈರಿ
  - ಚಂದ್ರಭಾನ್ ಪ್ರಸಾದ್/ ಎಸ್ ಮರಿಸ್ವಾಮಿ ೪೬
- ಮುಲ್ಲಾ ನಸ್ರುದ್ದೀನ್ ಕಥೆಗಳು ೫೦
- ಕವನಗಳು:
- ಶ್ರೀ ಕೃಷ್ಣ ೧೧
- ಕೊರಡು ೦೯

ಮುಖಪುಟ ವಿನ್ಯಾಸ: ಮುರಳೀಧರ ರಾಥೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಅಂತರಂಗದ ನೋವಿಗೆ ಮಿಡಿಯುವ ಅಂಕಣ

ಮಾನ್ಯ ಸಂಪಾದಕರೇ,

ಸಂವಾದ ಪತ್ರಿಕೆಯಲ್ಲಿ ಬರುತ್ತಿರುವ ಡಾ॥ ಎಚ್.ಎಸ್ ಅನುಪಮಾ ಅವರ ಅಂಕಣ "ನೋಯುವ ಹಲ್ಲಿಗೆ ಹೊರಳುವ ನಾಲಿಗೆ" ಚೆನ್ನಾಗಿ ಮೂಡಿಬರುತ್ತಿದೆ. ಶೀರ್ಷಿಕೆಯೇ ಗಮನ ಸೆಳೆಯುತ್ತದೆ. ಲೇಖಕಿ ಪ್ರತಿ ತಿಂಗಳು ಭಿನ್ನ ಭಿನ್ನ ಸಮಸ್ಯೆಗಳನ್ನು, ವಿಚಾರಗಳನ್ನು ಎತ್ತಿಕೊಂಡು ವಿಶ್ಲೇಷಿಸುವ ರೀತಿ ಮನಮುಟ್ಟುವಂತಿದೆ. ತಳಸಮುದಾಯಗಳ ಶೋಷಣೆ, ವಾಸ್ತವ ಸಮಾಜದ ವಿಮರ್ಶೆ ಹಾಗೂ ಅವರ ನೋವು, ಮಿಡಿತ, ತಲ್ಲಣಗಳಿಗೆ ಪ್ರತಿಸ್ಪಂದಿಸಿ, ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಇಟ್ಟುಕೊಂಡು ಆಧುನಿಕ ನಾಗರಿಕ ವ್ಯವಸ್ಥೆಯ ತರತಮ, ಅವ್ಯವಸ್ಥೆ ಅವರ ಬಗೆಗಿನ ಅನಾದರ, ಅವಜ್ಞೆಗಳ ಬಗ್ಗೆ ಬೆಳಕು ಚೆಲ್ಲಿ ಬರೆಯುತ್ತಿರುವುದು ಶ್ಲಾಘನೀಯ ಸಂಗತಿ.

ಅದರಲ್ಲೂ ಭಾರತದ ಈಶಾನ್ಯ ಮತ್ತು ಮಧ್ಯಪೂರ್ವ ರಾಜ್ಯಗಳ "ಅಬುಜ್ಮಾರ್ ಇಲ್ಲಿ ಯಾರು ಅಮುಖ್ಯರಲ್ಲ!" ನಮ್ಮ ಕರ್ನಾಟಕದ ಮಲೆನಾಡು ಘಟ್ಟ ಪ್ರದೇಶದ ಬುಡಕಟ್ಟು ವಾಸಿಗಳ ನಂಬಿಕೆ, ಸಮಸ್ಯೆಗಳ ಕುರಿತಾದ "ನಮ್ಮೊಡನಿದ್ದು ನಮ್ಮಂತಾಗದ" ಮಡೆಸ್ನಾನವೆಂಬ ಮೌಢ್ಯಾಚರಣೆ ಕುರಿತಾದ "ಸಾಮಾಜಿಕ ನ್ಯಾಯ ಹೋರಾಟ ಮತ್ತು ತಳಜಾತಿ ಮಠಗಳು–ದಿಟವೆಂಬ ಹುಸಿಯ ನಂಬಿ" ಮುಂತಾದ ಇಲ್ಲಿನ ಅಂಕಣ ಬರಹಗಳು ಓದುಗರನ್ನು ಚಿಂತನೆಗೆ ಹಚ್ಚುತ್ತವೆ.

ಲೇಖಕಿ ತಮ್ಮ ಅಂಕಣ ಬರಹದಲ್ಲಿ ಬಳಸುವ ಹರಿತ ಹಾಗೂ ಅಷ್ಟೇ ಸರಳ ಭಾಷೆ, ಪ್ರಸ್ತುತ ಪಡಿಸುವ ಶೈಲಿ, ಬಳಸುವ ನುಡಿಗಟ್ಟುಗಳು ಗಮನ ಸೆಳೆಯುತ್ತವೆ. ತಳಸಮುದಾಯಗಳು ಅದರಲ್ಲೂ ವಿಶೇಷವಾಗಿ ಆದಿವಾಸಿ ಬುಡಕಟ್ಟು ಸಮುದಾಯಗಳ ಬಗ್ಗೆ, ಅವುಗಳ ಪ್ರಗತಿಯ ಬಗ್ಗೆ ಅಂಕಣಗಾರ್ತಿಗೆ ಇರುವ ಆಸಕ್ತಿ ಕಾಳಜಿ ಅನನ್ಯವಾದದ್ದು. ಪ್ರಗತಿಪರರು, ಸಾಮಾಜಿಕ ನ್ಯಾಯವನ್ನು ಬಯಸುವವರು, ಸಮಾಜದ ಮುಖ್ಯವಾಹಿನಿಯ ಕಲ್ಪನೆಯುಳ್ಳ ನಾಗರಿಕ ಸಮಾಜದ ಜನ ಇಲ್ಲಿನ ಬುಡಕಟ್ಟು ಸಮುದಾಯಗಳ ಸಮಸ್ಯೆಗಳಿಗೆ ಸ್ಪಂದಿಸಬೇಕಿದೆ. ಅದರಲ್ಲೂ ಈಗ ಈಶಾನ್ಯ ರಾಜ್ಯಗಳಲ್ಲಿ ಎದ್ದಿರುವ ಗಲಭೆ, ಆ ಜನತೆಯಲ್ಲಿ ಇರುವ ಅಭದ್ರತೆ, ಆತಂಕವನ್ನು ದೂರ ಮಾಡಬೇಕಿದೆ. ಲೇಖಕಿಯಂತೆ ಬುಡಕಟ್ಟು ಜನರ ಸಮಸ್ಯೆಗಳನ್ನು ಮುಂದಿಟ್ಟು ಅರಿವಿನ ಕಣ್ಣನ್ನು ತೆರಸಬೇಕಿದೆ. ಲೇಖಕರೇ ಹೇಳುವಂತೆ "ಹಸಿವೆಯನ್ನೆ ನಂಚಿಕೊಂಡು ಉಣ್ಣುವ" ಇಂತಹ ಜನರ ಬಗ್ಗೆ ಕಾಳಜಿವಹಿಸಬೇಕಿದೆ. ವಿವಿಧ ಜಾತಿಯ ಅಲೆಮಾರಿ ಜನಾಂಗದವರನ್ನು ಅಲೆಯುವಂತೆ ಮಾಡಲು ಬಿಡದೆ ಅವರಿಗೆ ಸೂಕ್ತ ವ್ಯವಸ್ಥೆ, ನೆಲೆ, ಕನಿಷ್ಠ ಸೌಲಭ್ಯ, ವಸತಿ, ಶಿಕ್ಷಣದ ಭಾಷೆಗಳನ್ನು ಅರ್ಥಮಾಡಿಸಬೇಕಿದೆ.

ನಿಜಕ್ಕೂ ಇಂತಹ ವಿಚಾರವಂತ ಲೇಖನಗಳನ್ನು ತಮ್ಮ ಆರೋಗ್ಯಪೂರ್ಣ ಚರ್ಚೆ, ವಿಚಾರವಂತ, ಸಾಮಾಜಿಕ ನ್ಯಾಯವನ್ನು ಬಯಸುವ, ಉತ್ತಮ ಪ್ರಗತಿಪರ ಚಿಂತನೆಯನ್ನು ಪ್ರಚುರಪಡಿಸುವ ತಮ್ಮಂತಹ ಪತ್ರಿಕೆಯಲ್ಲಿ ಪ್ರಕಟಿಸುತ್ತಿರುವುದಕ್ಕೆ ಪತ್ರಿಕಾ ಬಳಗಕ್ಕೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಇಂತಹ ಅಂಕಣಗಳು ಹೆಚ್ಚಾಗಲಿ, ಪತ್ರಿಕೆ ನಿರಂತರವಾಗಿ ಹೀಗೆಯೇ ಮೂಡಿ ಬರಲಿ.

ಗುಂಡೀಗೆರೆ ವಿಶ್ವನಾಥ, ಬೆಂಗಳೂರು.



ಪತ್ರಾಗಾರ

ಗೋಸಂಗಿ; ಪ್ರೌಢ ಲೇಖನ

ಮಾನ್ಯ ಸಂಪಾದಕರೇ,

ಕಳೆದ ಸಂಚಿಕೆಯ ವಡ್ಡಗೆರೆ ನಾಗರಾಜಯ್ಯನವರ ಗೋಸಂಗಿ ಕುರಿತ ಲೇಖನದ ಪ್ರಕಾರ, ಗೋಸಂಗಿ(ಗೋವು+ಸಂಗ)ಯವರ ಜನಪದ ಕಥೆಯೊಂದರಂತೆ, ಗೋಸಂಗಿ(ಶಿವ)ನೇ ಭೂಮಂಡಲದ ಸೃಷ್ಟಿಕರ್ತ. ಭೂಮಂಡಲ ಹುಟ್ಟಿದ ತರುವಾಯ ಸಕಲ ಜೀವಕೋಟಿಗಳನ್ನು ಸಲಹುವ ಸಲುವಾಗಿ ಮೊಟ್ಟ ಮೊದಲಿಗೆ ಗೋಸಂಗಿಗಳು ಹುಟ್ಟಿದ 18 ನಂತರ ಕುಲ ಜಾತಿಗಳು ಹುಟ್ಟಿದವೆಂದು ಹೇಳುತ್ತದೆ. ಆದಿಮ ಅಜ್ಜ ಶಿವನ (ದೇವಚಂದ್ರನ ರಾಜಾವಳೀ ಕಥೆ ನೋಡಿ) ಜಂಬೂ ಕುಲಸ್ಥರಾದ ಈ ಜಂಬೂದ್ವೀಪದ ಪಂಚದ್ರಾವಿಡ ಮಾದಿಗರು, ಸಿಂದ್‌ಮಾದಿಗರು, ಮಾಸ್ತೀಕರು, ದಕ್ಕಲರು, ಗೋಸಂಗಿಗಳು ಇವರೊಟ್ಟಿಗೆ ಅಲೆಮಾರಿ ಗೋವಳಿಗ ಬುಡಕಟ್ಟುಗಳಾದ ಕುರುಬ, ಕುಂಚಿಟಿಗ, ಒಕ್ಕಲಿಗ, ಮ್ಯಾಸಬೇಡ ಹಾಗೂ ಆದಿವಾಸಿಗಳಾದ ಶಾಖ್ಯರು, ಕೋಲಿಗಳು, ಸಂತಾಲರು ಮುಂತಾದ ಆದಿ ದ್ರಾವಿಡರಿಗೆಲ್ಲ ಆದಿಮೂಲ ಶಿವನೇ. ಈ ಶಿವ ಮೂಲ ವಂಶವೃಕ್ಷದ ಒಂದು ಟಿಸಿಲು ಯಾದವ ಗೋಪಾಲಕರು (ಪಾಂಡುರಂಗನ ಭಕ್ತರು).

ಆದರೆ ಆಮೇಲೇನಾಯಿತು? ಶಿವನನ್ನು ಹಿಮಾಲಯಕ್ಕೆ ಹತ್ತಿಸಿದ, ಕೃಷ್ಣನನ್ನು ಬೃಂದಾವನದಲ್ಲಿ ಮೆರೆಸಿದ ಆಗಂತುಕ ವೈದಿಕರು ಬುಡಕಟ್ಟಿನ ಬುದ್ಧನನ್ನೂ ಹೈಜಾಕ್ ಮಾಡಿಬಿಟ್ಟರು. ಇಂತಿದ್ದೂ, ಮುಸಲ್ಮಾನರು, ಕಿರಸ್ತಾನರು ಜನರನ್ನು ಮತಾಂತರಗೊಳಿಸುತ್ತಿದ್ದಾರೆಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಇದನ್ನ ನಂಬಿದ ನವ ಬ್ರಾಹ್ಮಣ ಶೂದ್ರ ಸಂತತಿ ಕೂಡ ಬಡಿದಾಡಿ ರಕ್ತ ಹರಿಸುತ್ತಿದ್ದಾರೆ. ಭಾರತಕ್ಕೆ ಬಡಿದಿರುವ ಈ ಆಂಥ್ರಾಕ್ಸ್ ಮೆದುಳು ರೋಗಕ್ಕೆ ಮದ್ದನರೆಯುವ ಶುದ್ಧ ಬುದ್ಧರು ಬೇಕು. 'ಸಕಲ ನರಕುಲವನ್ನು ಬೆಸೆಯುವ ಇಂತಹ ನೆನಪುಗಳನ್ನು ಸಂಗೋಪನೆ ಮಾಡುವ ಮತ್ತು ಆದಿಮ ಪರಂಪರೆಯ ವೈಚಾರಿಕ ಜೀವ ಜಲವನ್ನು ಶೋಧಿಸುವ ಕಡೆ ಇಂದಿನ ಸಂಶೋಧಕರು ಹೊರಳಿಕೊಳ್ಳಬೇಕಾದ ಅಗತ್ಯವಿದೆ'.

ಈ ನಿಟ್ಟಿನಲ್ಲಿ ವಡ್ಡಗೆರೆ ನಾಗರಾಜಯ್ಯನವರ 'ಗೋಸಂಗಿ ಜಂಬೂ ಗುಡಿ ಗರ್ಭದಲ್ಲಿ ಉರಿಯುವ ರಾಗದೀಪ' ಎಂಬ ಪ್ರೌಢ ಲೇಖನ ಅನುಸಂಧಾನ ಯೋಗ್ಯ.

ಪ್ರೊ. ಶಿವರಾಮಯ್ಯ, ಬೆಂಗಳೂರು.

ಚಂದಾ ವಿವರ

ಬಿಡಿ ಪ್ರತಿ ರೂ. 20

ಚಂದಾ ಅವಧಿ:	1 ವರ್ಷಕ್ಕೆ	3 ವರ್ಷಕ್ಕೆ	5 ವರ್ಷಕ್ಕೆ
ವ್ಯಕ್ತಿಗಳು :	ರೂ. 200	ರೂ. 550	ರೂ. 900
ಸಂಸ್ಥೆಗಳು :	ರೂ. 240	ರೂ. 720	ರೂ. 1200
ಹಿತೈಷಿಗಳು :	ರೂ. 500	ರೂ. 1500	ರೂ. 2500

ಆಜೀವ ಚಂದಾ ರೂ.5,000/-
ಪೋಷಕ ಚಂದಾ ರೂ.10,000/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಈ ಕೆಳಗಿನ ಖಾತೆಗೆ ಕಳುಹಿಸಬಹುದು:
A/C NAME: SAMVAADA MAGAZINE
BANK NAME: STATE BANK OF INDIA,
BRANCH: BHARATHNAGAR, BANGALURU
A/C No: 30140484351, IFS Code: SBIN0005198

ಚಂದಾದಾರರ ಗಮನಕ್ಕೆ

'ಸಂವಾದ' ಪತ್ರಿಕೆಯ ಚಂದಾ ವಿವರ, ಹೊಸದಾಗಿ ಚಂದಾರರಾಗುವವರು, ಚಂದಾ ನವೀಕರಿಸುವವರು ಹಾಗೂ ಪತ್ರಿಕೆ ಸರಬರಾಜಿನಲ್ಲಾಗುವ ಯಾವುದೇ ವ್ಯತ್ಯಯ-ದೂರುಗಳನ್ನು ಕುರಿತ ಮಾಹಿತಿಗಾಗಿ ಈ ಕೆಳಕಂಡ ಫೋನ್ ಸಂಖ್ಯೆಗಳನ್ನು ಮಾತ್ರ ಸಂಪರ್ಕಿಸಬೇಕಾಗಿ ವಿನಂತಿ.
ಮೊಬೈಲ್: 9945264687
ದೂರವಾಣಿ: 080-23480278
ಇ-ಮೇಲ್: **samvaadacirculation@gmail.com**



ಬತೇರಿ ಬೆಲೆ: ರೂ. 220/-
(ವಿಮರ್ಶಾತ್ಮಕ ಪ್ರಬಂಧಗಳು)



ಬತ್ತಳಿಕೆ ಬೆಲೆ: ರೂ. 220/-
(ವೈಚಾರಿಕ ಪ್ರಬಂಧಗಳು)



ಬೆರಗು ಬೆಲೆ: ರೂ. 185/-
(ವ್ಯಕ್ತಿ ಚಿತ್ರಗಳು)



ಬಹುಳ ಬೆಲೆ: ರೂ. 250/-
(ಕಥಾಗುಚ್ಛ)

ಹೊಸ ಪುಸ್ತಕ

ಈ ಮೇಲಿನ ನಾಲ್ಕೂ ಸಂಪುಟಗಳ ಲೇಖಕರು **ನಾಡೋಜ ಡಾ॥ ಕಮಲಾ ಹಂಪನಾ.**

ಸಪ್ನ ಬುಕ್ ಹೌಸ್ ಪ್ರಕಾಶನದಿಂದ ಪ್ರಕಟಗೊಂಡಿರುವ ನಾಡೋಜ ಡಾ॥ ಕಮಲಾ ಹಂಪನಾ ಅವರ ಸಮಗ್ರ ಸಾಹಿತ್ಯ ಸಂಪುಟ ಶ್ರೇಣಿಯಲ್ಲಿ ಈಗ ಪ್ರಕಟಗೊಂಡಿರುವ ಮೇಲಿನೆಲ್ಲಾ ಕೃತಿಗಳು ವಿಭಿನ್ನ ನೆಲೆಗಟ್ಟನ್ನು ಹೊಂದಿವೆ. ಮೊದಲನೆಯದು ಪ್ರಾಚೀನ-ಆಧುನಿಕ ಕವಿ-ಕೃತಿಗಳ ವಿಮರ್ಶೆಗಳು 'ಬತೇರಿ' ಕೃತಿಯಲ್ಲಿವೆ. ಪಂಪ, ರನ್ನ, ನಯಸೇನ, ನೇಮಿಚಂದ್ರ-ಮುಂತಾದ ಹಳೆಗನ್ನಡ ಕವಿಗಳ ಜೊತೆಗೆ ಕುಮಾರವ್ಯಾಸ ರತ್ನಾಕರವರ್ಣಿ, ಕನಕದಾಸ-ಮುಂತಾದ ನಡುಗನ್ನಡ ಕವಿಗಳನ್ನೂ ಹಾಗೂ ಆಧುನಿಕ ಸಾಹಿತ್ಯ ಕುರಿತು ಚರ್ಚಿಸಿರುವ ಲೇಖನಗಳಿವೆ. ಅಲ್ಲದೆ ಭಾಷಾ ವಿಜ್ಞಾನ, ವ್ಯಾಕರಣ, ಸಂಶೋಧನೆ, ವ್ಯಕ್ತಿಚಿತ್ರಣ, ಜೀವನ ಚರಿತ್ರೆಗಳ ಅವಲೋಕನ, ಕೆಲವು ಪುಸ್ತಕಗಳ ವಿಮರ್ಶೆ, ಪ್ರಬಂಧಗಳು, ಭಾಷಣಗಳು-ಹೀಗೆ ಹಲವು ಬಗೆಯ ಬರಹಗಳು ಈ ಸಂಕಲನದಲ್ಲಿವೆ. ಯಾವುದೇ ಪೂರ್ವಾಗ್ರಹಗಳಿರದ ಮತ್ತು ಬಹುಮುಖಿಯಾದ ಗಂಭೀರ ಸಾಹಿತ್ಯದ ಈ ಕೃತಿ, ಪ್ರಾಚೀನ-ಆಧುನಿಕ ಸಾಹಿತ್ಯ ಜಗತ್ತಿನ ಪರಿಚಯ ಬಯಸುವವರಿಗೆ ತುಂಬಾ ಉಪಯುಕ್ತವಾಗಿದೆ.

'ಬತ್ತಳಿಕೆ' ಸಂಪುಟದಲ್ಲಿ ದಲಿತ, ಅಂಬೇಡ್ಕರ್ ಅವರ ಎರಡು ಇಂಗ್ಲಿಷ್ ಕೃತಿಗಳ ಕನ್ನಡ ಅನುವಾದ ಮತ್ತು ಸಂಕೀರ್ಣ-ಹೀಗೆ ಮೂರು ತೆರನಾದ ಲೇಖನಗಳಲ್ಲಿ ವೈಚಾರಿಕತೆಯಿದೆ. ವೈವಿಧ್ಯತೆಯಿದೆ. ಈ ಇಡೀ ಸಂಪುಟದಲ್ಲಿ ದಲಿತಪರವಾದ ಸಂವೇದನೆಯಿದೆ. ಮೊದಲ ಭಾಗ 'ಬಡಭಾಗ್ನಿ'ಯಲ್ಲಿ ದಾಖಲಾಗಿರುವ ಆರು ಲೇಖನಗಳಲ್ಲಿ ಶೋಷಿತ ಸಮುದಾಯದ ವಸ್ತುನಿಷ್ಠ ವಿವೇಚನೆ ಹಾಗೂ ದಲಿತರ ಬದುಕನ್ನು ಕುರಿತು ನೇರವಾದ ಪರಿಶೀಲನೆಯಿದೆ. ದುಃಖ ದುಮ್ಮಾನಗಳನ್ನು ಹಾಸುಂಡರೂ ಅದರಲ್ಲಿಯೂ ಸುಖ ಕಂಡ ಕರ್ಮಯೋಗಿಗಳ ಸಕರಾತ್ಮಕ ನಿಲುವುಗಳನ್ನು ಎತ್ತಿಹಿಡಿಯುವ ಕಡೆಗೆ ಬೆಳಕು ಚೆಲ್ಲುತ್ತವೆ.

ಎರಡನೇ ಭಾಗ 'ಬೊಂಬಾಳೆ'ದಲ್ಲಿ ಮುವತ್ತೆರಡು ಪ್ರಬಂಧಗಳ ಸಂಕಲದಲ್ಲಿ 40 ವರುಷಗಳ ಕಾಲಾವಧಿಯ ವೈವಿಧ್ಯಮಯ ಗಂಭೀರ ಬರಹಗಳಿವೆ. ಕನ್ನಡ ನಾಡು-ನುಡಿಯ ಅಳಿವು-ಉಳಿವಿನ ಚಿಂತನೆ ನಡೆದಿದ್ದು ಕನ್ನಡಪರ ಜನಾಂದೋಲನವೊಂದೇ ಈ ಸಮಸ್ಯೆಗಳಿಗೆ ಪರಿಹಾರವೆಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಗುಜರಾತಿಗೂ ಕರ್ನಾಟಕಕ್ಕೂ ಇದ್ದ, ಇರುವ ಸಂಬಂಧವನ್ನು ಚಾರಿತ್ರಿಕ ಆಧಾರದಿಂದ ವಿಶ್ಲೇಷಿಸಿದ ಲೇಖನವೂ ಇದೆ. ಮೂಡಬಿದರೆಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಹಾಗೂ ಬೀದರಿನಲ್ಲಿ ನಡೆದ ಸಮ್ಮೇಳನದಲ್ಲಿ ಅಧಿಕಾರ ಹಸ್ತಾಂತರ ಭಾಷಣಗಳ ರೂಪಾಂತರದ ಲೇಖನಗಳಲ್ಲಿ ಲೇಖಕಿ ಸಾಹಿತಿಗಳ ಹೊಣೆ, ಎದುರಿಸಬೇಕಾದ ಸವಾಲುಗಳು, ಸಾಮಾಜಿಕ ಬದ್ಧತೆ, ಸಮಾಜಮುಖಿ ಚಿಂತನೆಗಳ ಜವಾಬ್ದಾರಿಗಳ ಬಗ್ಗೆ ಒತ್ತಿ ಹೇಳಿದ್ದಾರೆ. ಸಂಪುಟದ ಕಡೆಯಲ್ಲಿ ಪ್ರಕಟಗೊಂಡಿರುವ ಅನುಬಂಧದಲ್ಲಿನ ಬಿಡಿಬರಹಗಳ ಸಂದರ್ಭಸೂಚಿ ಮತ್ತು ಪತ್ರಿಕೆಗಳಿಗಿತ್ತ ಹೇಳಿಕೆಗಳು ಇಂದಿಗೂ ಪ್ರಸ್ತುತವೆನಿಸುತ್ತವೆ.

'ಬೆರಗು' ಸಂಪುಟದಲ್ಲಿ ಬೇರೆ ಬೇರೆ ಸಾಹಿತ್ಯಕ ಸಂಚಿಕೆಗಳಲ್ಲಿ, ಅಭಿನಂದನಾ ಗ್ರಂಥಗಳಲ್ಲಿ, ಸ್ಮರಣ ಸಂಪುಟಗಳಲ್ಲಿ ಪ್ರಕಟಗೊಂಡು ಚದುರಿಹೋಗಿದ್ದ ವ್ಯಕ್ತಿಚಿತ್ರಗಳನ್ನು ಒಂದೆಡೆ ತರಲಾಗಿದೆ. ಈ ಸಂಪುಟದಲ್ಲಿ ನಾಲ್ಕು ಭಾಗಗಳಿದ್ದು, 'ಆ ಮುಖ' ವಿಭಾಗದಲ್ಲಿ ಪ್ರತಿಭಾನ್ವಿತ ಲೇಖಕರ ಪತ್ನಿಯರ ಸಂದರ್ಶನ ಲೇಖನಗಳಿವೆ. ಭಾವುಕರೂ, ಬುದ್ಧಿಜೀವಿಗಳೂ, ತೀವ್ರ ಸಂವೇದನಾಶೀಲರೂ, ಅಂತರ್ಮುಖಿಗಳೂ ಆದ ಲೇಖಕರ ಪತ್ನಿಯರಾಗಿ ಅವರೆಂತಹ ಸನ್ನಿವೇಶಗಳನ್ನೆದುರಿಸಿದರು, ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ತಮ್ಮ ಪತಿಯರ ಸಾಹಿತ್ಯಕೃಷಿ ನಿರಂತರವಾಗಿ ಸಾಗಲು ತಾವು ಹೇಗೆ ನೆರವಾದರು ಎಂಬ ಬಗ್ಗೆ ಅವರ ಮನೋಭಾವವನ್ನು ಪರಿಚಯಿಸುವ ಲೇಖನಗಳಿವೆ. ಹೆಸರಾಂತ ಲೇಖಕರ ನಡವಳಿಕೆ, ಹವ್ಯಾಸಗಳನ್ನು ಕುರಿತು ಅವರ ಪತ್ನಿಯರಷ್ಟು ಚೆನ್ನಾಗಿ, ಆತ್ಮೀಯವಾಗಿ ಬೇರೊಬ್ಬರು ಕಟ್ಟಿಕೊಡಲಾರರು ಎಂಬ ಅಂಶವನ್ನು ಮನಗಾಣಿಸುವಂತಿರುವ ಲೇಖನಗಳು ಆಸಕ್ತಿದಾಯಕವಾಗಿವೆ.

ವಿಭಿನ್ನ ರೀತಿಯಲ್ಲಿ ಸಾಮಾಜಿಕ, ಸಾಹಿತ್ಯಕ ಸೇವೆಯಲ್ಲಿ ತೊಡಗಿಸಿಕೊಂಡವರು, ಸಾಂಸ್ಕೃತಿಕ ರಾಯಭಾರಿಗಳಾಗಿ, ವಾರಸುದಾರರಾಗಿ ಉನ್ನತ ಸಾಧನೆಗೈದವರ ಬಗೆಗಿನ ಲೇಖನಗಳು 'ಮುಡಿಮಲ್ಲಿಗೆ' ಹಾಗೂ 'ಬಂಧುರಾ' ಭಾಗಗಳಲ್ಲಿ ಪ್ರಕಟಗೊಂಡಿವೆ. ಅಲ್ಲದೇ ಶಿಕ್ಷಣ, ಕೈಗಾರಿಕೆ, ವಾಣಿಜ್ಯ, ಸಂಸ್ಕೃತಿ ಮುಂತಾದ ಹಲವು ವಲಯಗಳಲ್ಲಿ ಸಾಧನೆಗೈದ, ಜೈನ ಸಮುದಾಯದ ಉನ್ನತಿಗಾಗಿ ಶ್ರಮಿಸಿದ ಎಂ.ಎಲ್. ವರ್ಧಮಾನಯ್ಯನವರ ಜೀವನಗಾಥೆಯ ಸುದೀರ್ಘ ಚಿತ್ರಣವಿದೆ.

ಒಟ್ಟು ನಲವತ್ತು ಕಥೆಗಳಿರುವ 'ಬಹುಳ' ಸಂಕಲನದಲ್ಲಿ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಹಾಗೂ ಜಾನಪದ ಕಥೆಗಳಿವೆ. ವಿಭಿನ್ನ ಅಭಿರುಚಿಯ ಪಾತಳಿಗಳಿಗೆ ಈ ಕಥೆಗಳು ಉಸಿರಾಗಿದ್ದು ಗಾಢ ಅನುಭವವನ್ನು ಕಟ್ಟಿಕೊಡುವಲ್ಲಿ ಸಫಲವಾಗಿವೆ. ಹಲವು ಸ್ತರಗಳಲ್ಲಿ ವಿಹರಿಸುವ ಗುಣಾತ್ಮಕ ಅಂಶಗಳನ್ನೂ ಹೊಂದಿವೆ. ಇಲ್ಲಿನ ಮಕ್ಕಳ ಕಥೆಗಳು ಸರಳ ಶೈಲಿಯಲ್ಲಿ ರಚಿತಗೊಂಡಿದ್ದು, ಸಣ್ಣ ವಾಕ್ಯಗಳು ಹಾಗೂ ನಿರೂಪಣಾ ವಿಧಾನ ಮಕ್ಕಳಿಗೆ ಸಹಜವಾಗಿ ಅರ್ಥವಾಗುವಂತಿವೆ. ಮಕ್ಕಳಿಂದಲೇ ಪ್ರಶ್ನೆ ಕೇಳಿಸಿ ತಮ್ಮ ಅನುಮಾನಗಳಿಗೆ ಉತ್ತರ ಕಂಡುಕೊಳ್ಳುವ ವಿಧಾನದಿಂದಾಗಿ ಕಥೆಗಳು ಮಕ್ಕಳಿಗೆ ಮತ್ತಷ್ಟು ಆಪ್ತವಾಗುತ್ತವೆ.

ಇಲ್ಲಿನ ಹೆಚ್ಚಿನ ಕಥೆಗಳು ಮಹಿಳಾಕೇಂದ್ರಿತ ನೆಲೆಯಲ್ಲಿ ತೆರೆದುಕೊಳ್ಳುತ್ತವೆ. ಪುರುಷರ ದಾಳಿ-ದಬ್ಬಾಳಿಕೆಗಳಿಗೆ ಸಿಲುಕಿ ನಲುಗಿದರೂ, ಯಾವ ಸ್ವಾತಂತ್ರವಿಲ್ಲದೆ ನರಳುವ ಸ್ತ್ರೀ-ಈ ಎಲ್ಲಾ ಸಮಸ್ಯೆಗಳಿದ್ದರೂ ಎದ್ದು ನಿಲ್ಲುವ ಮಹಿಳಾ ಮನೋಸ್ಥೈರ್ಯದ ಧನಾತ್ಮಕ ಅಂಶವನ್ನು ಲೇಖಕರು ತಮ್ಮ ಕಥೆಗಳಲ್ಲಿ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿರುವುದು ಸ್ವಾಗತಾರ್ಹವಾದುದು.

ಕನ್ನಡದ ಮಹತ್ವದ ಬರಹಗಾರ್ತಿ ಡಾ॥ ಕಮಲಾ ಹಂಪನಾ ಅವರು ವಿವಿಧ ಕಾಲಘಟ್ಟಗಳಲ್ಲಿ ಬರೆದ ಲೇಖನಗಳು, ಕಥೆಗಳು, ಪ್ರಬಂಧಗಳು, ವ್ಯಕ್ತಿ ಚಿತ್ರಗಳು ಸೇರಿದಂತೆ ಎಲ್ಲಾ ಪ್ರಾಕಾರದ ಬರಹಗಳನ್ನು ವ್ಯವಸ್ಥಿತವಾಗಿ ವಿಷಯವಾರು ವಿಂಗಡಿಸಿ ಪ್ರಕಟಿಸಿರುವುದು ಶ್ಲಾಘನೀಯವಾದುದು. ಇದರಿಂದ ಲೇಖಕರ ಒಟ್ಟಾರೆ ಮನೋಧರ್ಮವನ್ನು ಅರಿಯಲು ಸಹಕಾರಿಯಾಗಿದೆ. ಹಾಗೆಯೇ ಇವರ ಮುಂಬರುವ ಸಂಪುಟಗಳ ಬಗ್ಗೆ ಆಸಕ್ತಿ ಹುಟ್ಟಿಸುವಂತಿವೆ.

ಮೇಲಿನ ನಾಲ್ಕೂ ಸಂಪುಟಗಳ ಪ್ರಕಾಶಕರು;
ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು-09. ದೂ:080-40114455

ಸಂಪಾದಕರೊಡನೆ ಸಂವಾದ

ಒಕ್ಕಲಿಗ-ಗೋಸಂಗಿ ದ್ರಾವಿಡ ಕುಲಬಳ್ಳಿಗಳ ಸಾಂಸ್ಕೃತಿಕ ಅನ್ವೇಷಣೆ

ಡಾ॥ ರಾಜೇಗೌಡ ಹೊಸಹಳ್ಳಿ

ಮಾನ್ಯ ಸಂಪಾದಕರೇ,

ಆಗಸ್ಟ್ 2012ರ 'ಸಂವಾದ' ಮಾಸಪತ್ರಿಕೆಯಲ್ಲಿ ಪ್ರೊ. ಕೆ.ಎಸ್.ಭಗವಾನ್ ಅವರ 'ಒಕ್ಕಲಿಗರು ಬೌದ್ಧರೆ?' ಮತ್ತು ವಡ್ಡಗೆರೆ ನಾಗರಾಜಯ್ಯ ಅವರ 'ಗೋಸಂಗಿ; ಜಂಬೂ ಗುಡಿಗರ್ಭದಲ್ಲಿ ಉರಿಯುವ ರಾಗದೀಪ!' ಎಂಬ ಎರಡು ವಿದ್ವತ್‌ಪೂರ್ಣ ಲೇಖನಗಳಿವೆ.

'ಒಕ್ಕಲಿಗ' ಮತ್ತು 'ಗೋಸಂಗಿ' ಈ ಎರಡು ಜನಸಮುದಾಯಗಳ ಸಾಂಸ್ಕೃತಿಕ ಪರಂಪರೆಯ ಗತಿಶೀಲ ದ್ರವ್ಯಾಂಶಗಳನ್ನು ಸಂಶೋಧನೆ ಮಾಡಿ ವಿಶ್ಲೇಷಿಸಿರುವ ಈ ಲೇಖನಗಳು ಎರಡು ಸಮುದಾಯಗಳ ವ್ಯಾಪ್ತಿಯ ಆಚೆಗೂ ಚಲಿಸಿ, ಸಕಲ ನೆಲಮೂಲ ಸಂಸ್ಕೃತಿಗಳ ಮೂಲಬೇರುಗಳನ್ನೂ ಶೋಧಿಸುವ ಸ್ವರೂಪವನ್ನು ಪಡೆದುಕೊಂಡಿವೆ.

ಭಗವಾನ್‌ರವರ 'ಒಕ್ಕಲಿಗರು ಬೌದ್ಧರೆ?' ಲೇಖನದಲ್ಲಿ ಒಕ್ಕಲಿಗ ಸಂಸ್ಕೃತಿನಿಷ್ಠ ಹಲವು ಆಯಾಮಗಳಿರುವುದು ಸರಿ. ಲೇಖಕರು ಈಗಾಗಲೇ ಸನಾತನ ಧರ್ಮವನ್ನು ಕೆದಕಿ ನೋಡಿದ ಪ್ರಸಿದ್ಧರೂ ಕೂಡ ಹೌದು. ಆದರೆ ಕುವೆಂಪು ಭಾವಚಿತ್ರವನ್ನು ಒಕ್ಕಲಿಗರ ಸಂಘದವರು ಯಾಕೆ ಉಪಯೋಗಿಸಬಾರದೆಂಬುದಕ್ಕೆ ನೀಡಿರುವ ವಿವರಣೆಗಳು ಜಾತಿಪರ ಎನ್ನಿಸುತ್ತವೆ. ನಿರ್ವಾಣ-ಬೋಧಿವೃಕ್ಷ(ಅರಳಿಮರ)ದ ಸೂಚನೆ ಹಿಡಿದು ಬೌದ್ಧಧಮ್ಮ ಒಕ್ಕಲಿಗರಲ್ಲಿ ಹಾಗೂ ಭಾರತದಾದ್ಯಂತ ಹರಡಿತ್ತು ಎಂಬ ಅವರ ವಾದವು ಅಷ್ಟು ಸಮಂಜಸವೆನಿಸುವುದಿಲ್ಲ. ನಿರ್ವಾಣಯ್ಯ ಎಂಬ ಹೆಸರು ಚಿಕ್ಕಮಗಳೂರು-ಹಾಸನ ಮಲೆನಾಡಿನಲ್ಲಿ ಸಾಮಾನ್ಯ. ಚಿಕ್ಕಮಗಳೂರು ಬಳಿ ನಿರ್ವಾಣಸ್ವಾಮಿ ಮಠವಿದೆ. ಮುಳ್ಳಯ್ಯ-ಸೀತಾಳಯ್ಯ ಇವರುಗಳು ಈತನ ಸಹೋದರರಂತೆ. ಕನಕಪುರದ ಬಳಿಯು ನಿರ್ವಾಣಸ್ವಾಮಿ ಮಠವಿದೆ. ಇವೆಲ್ಲವೂ ಶೈವ-ಶಾಕ್ತ ಪರಂಪರೆ ಹೇಳುತ್ತವೆ. ಬೌದ್ಧಧಮ್ಮ ಸನಾತನಿಗಳ ಅದರಲ್ಲೂ ಶಂಕರನ ಅನುಯಾಯಿಗಳ ಕೈಗೆ ಸಿಕ್ಕಿ ನುಚ್ಚುನೂರಾಗಿದ್ದು ಇತಿಹಾಸ. ಸನಾತನಿಗಳು ತಮ್ಮ ಪುರಾಣಗಳನ್ನು ಪ್ರಕ್ಷಿಪ್ತಗೊಳಿಸಿ ಮಹಾಯಾನ-ಹೀನಯಾನ ಮುಂತಾಗಿ ಧಮ್ಮವನ್ನು ತುಂಡು ತುಂಡು ಗತಿಗಾಣಿಸಿದ್ದು ದುರಂತ. ಈ ಕುಶಕ್ತಿ ಸನಾತನಿಗಳಿಗಿದೆ. ಬಸವಧರ್ಮವಾಗಲೀ, ಈಗಿನ ಶೂದ್ರಾತಿ ಶೂದ್ರ ಧರ್ಮವಾಗಲೀ ಇದಕ್ಕೆ ಹೊರತಾಗುತ್ತಿಲ್ಲ. ಚೀನಾ ಯಾತ್ರಿಕರ ಡೈರಿಗಳು ಸಹ ಬೌದ್ಧಧಮ್ಮ ಭಾರತದಲ್ಲಿ ಹರಡಿದ್ದ ದಾಖಲೆ ನೀಡುತ್ತವೆ. ವಿವೇಕಾನಂದರು, ಕುವೆಂಪು ಮತ್ತು ಅಂಬೇಡ್ಕರ್‌ಗಳು ಬುದ್ಧನ ಆಳಕ್ಕೆ ಇಳಿದದ್ದು ದಾರಿದೀಪಗಳಾಗುಳಿಯುತ್ತವೆ.

ಜಾನಪದ ದೇಶಿ ಚಿಂತನೆ ಮತ್ತು ಅಂಬೇಡ್ಕರ್ ಪ್ರಣೀತ ಸಮಾಜವಾದಿ ಚಿಂತನೆಗಳ ಸಂಕರ ಪ್ರತಿಭೆಯಾದ ಕವಿ ವಡ್ಡಗೆರೆ ನಾಗರಾಜಯ್ಯ, 'ಗೋಸಂಗಿ' ಗಳನ್ನು ಕುರಿತು ರೂಪಿಸಿರುವ 'ಗೋಸಂಗಿ; ಜಂಬೂ ಗುಡಿಗರ್ಭದಲ್ಲಿ ಉರಿಯುವ ರಾಗದೀಪ!' ಲೇಖನವು ಆದಿಮ ಸಮುದಾಯವೊಂದರ ಸಂಸ್ಕೃತಿಯ ಮೂಲಬೇರುಗಳನ್ನು ಬೆದಕುತ್ತಾ ಜಂಬೂದ್ವೀಪದ ದ್ರಾವಿಡ ಕುಲಬಳ್ಳಿಗಳ ಸಾಂಸ್ಕೃತಿಕ ಸ್ವರೂಪ, ಚಾರಿತ್ರಿಕ ಅವಸ್ಥಾಂತರ, ಮಾನವ ವಲಸೆಯ ಪ್ರಾಚೀನ ಇತಿಹಾಸ, ಆಕ್ರಮಣಶೀಲ ಆರ್ಯ ಪ್ರವೃತ್ತಿ ಮುಂತಾದ ವಸ್ತುಸಂಗತಿಗಳನ್ನು ಶೋಧಿಸುತ್ತದೆ. ಲಿಖಿತ ಪ್ರಮಾಣ ಮೂಲದ ಹಲವಾರು ಚಾರಿತ್ರಿಕ ಆಕರಗಳ ಜೊತೆಗೆ ಮೌಖಿಕರ ನಾಲಿಗೆ ಮೇಲೆ ಇಂದಿಗೂ ಜೀವಂತ ನಂಬಿಕೆಯಾಗಿ ಹರಿದುಬಂದ ಪರಂಪರೆಯ ಗುರುತುಗಳನ್ನು ಬಳಸಿಕೊಂಡು ಗೋಸಂಗಿ ಸಮುದಾಯದ ಒಳವಿವರಗಳನ್ನು ನಿರೂಪಿಸುತ್ತಲೇ ಜಂಬೂಕುಲಗಳ ಮೂಲವನ್ನು ಶೋಧಿಸಿರುವ ಬಗೆ ನಾಗರಾಜಯ್ಯನವರ ಸಂಸ್ಕೃತಿನಿಷ್ಠ ಶೋಧಕ ಪ್ರಜ್ಞೆಗೆ ಹೊಸ ಹೊಳಪನ್ನು ತಂದುಕೊಟ್ಟಿದೆ.

ಅಲೆಮಾರಿ ಗೋಸಂಗಿಗಳದು ಗೋವುಗಳ ಸಂಗದಲ್ಲಿದ್ದ ಬದುಕು. ಮಾತೃಕುಲದ ಗೋಸಂಗಿಗಳು ಅಡವಿಯೊಳಗೆ ಮಾರ್ಕ್ಸ್ ತತ್ವದ ತಳಹದಿಯೆಂಬಂತೆ ಸಂಘಜೀವಿಗಳಾಗಿದ್ದವರು. ಸ್ಥಳೀಯ ಆಳ್ವಿಕೆಯ ಬೆಳವಣಿಗೆಯಲ್ಲಿ ಮತಂಗರಾಗಿ-ಮಾದಿಗರಾಗಿ ಕಂಚಿಯಂತಹ ಸಾಂಸ್ಕೃತಿಕ ರಾಜಧಾನಿಯನ್ನು ಹೊಂದಿ ಆಳ್ವಿಕೆಯನ್ನು ಸಹ ನಡೆಸಿದವರು. ಅಶ್ವಾರೂಢರಾಗಿ ಬಂದು ಪಶುಪಾಲನೆ ಮತ್ತು ಗೋಸಂಪತ್ತನ್ನು ವಶಪಡಿಸಿಕೊಂಡು ಅವುಗಳನ್ನೇ ಚರ ಆಸ್ತಿಯಾಗಿ ರೂಢಿಸುತ್ತಾ ಬಂದ ಆರ್ಯರು 'ಗೋಸಂಗಿ'ಗಳನ್ನು ಬಗ್ಗಿಸಿ ಆಳಿದ್ದು ಇತಿಹಾಸ. ಆಕ್ರಮಣಶೀಲ ಆರ್ಯರಿಗೆ ಗೋವುಗಳು ಚರಾಸ್ತಿಯಾದರೆ; ಗಾಂವ್‌ಗಳು ಸ್ಥಿರತೆ ಪಡೆದು ಅರ್ಯರು-ಗ್ರಾಮಮುಖಂಡ ಅರ್ಥಾತ್ ಗಾಂವ್‌ಮುಖಂಡ, ಗಾಮುಂಡ-ಗಾವುಂಡ-ಗೌಂಡ-ಗೌಡರಾಗಿಯೂ ಬೆಳೆದರು.

ಸ್ಥಳೀಯ ನೆಲಕುಲಸ್ಥರನ್ನು ದಾಸರನ್ನಾಗಿಸಿಕೊಂಡು ಗೋಸಾಕಣೆಯ ಗೋಪಾಲಕ(ದನ ಕಾಯುವ)ರನ್ನಾಗಿ ಮತ್ತಿತರ ಮಲಿನ ಕೆಲಸಗಳಿಗೆ ನೂಕಿದ್ದಾರೆ. ಗೋಪಾಲಕನಾದ ಶ್ರೀಕೃಷ್ಣನು ಗೋವರ್ಧನಗಿರಿಯ ಗೋಸಂಗಿಗಳ ಕುಲನಾಯಕ. ದಾಸ್ಯದ ಬದುಕಿನ ಕಾಯಕದಲ್ಲಿ ಮಗ್ನರಾದ ಈ ಸ್ಥಳೀಯರು ಭಾರತವೆಂಬ ಜಂಬೂದ್ವೀಪದಲ್ಲಿ ಜಾಂಬವಮುನಿಯ ಕುಲವನ್ನು ಪ್ರತಿನಿಧಿಸಿದರೂ ಆರ್ಯರ ಅಡಿಯಾಳಾಗಿಬಿಟ್ಟರು. ಶ್ರೀರಾಮನ ಕುಲಕ್ಕೆ ಬಂಟರೂ ಆದರು.

ಜಂಬೂ ಕುಲಬಳ್ಳಿಗಳ ಗ್ರಾಮದೇವತೆಗಳು, ಕಂಚಿ ಮೂಲದ ಶಾಸನಗಳು, ಎಡಗೈ-ಬಲಗೈ ಪಣವ್ಯಾಜ್ಯದ

ಆರಂಜ್ಯೋತಿ ಪುರಾಣ ಗೋಸಂಗಿ-ಮಾದಿಗರಲ್ಲಿ ಬರುತ್ತದೆ. ಮಾರಮ್ಮನ ಪುರಾಣವೂ ಮಾದಿಗರಲ್ಲಿದೆ. ಸಿಂದ್ ಮಾದಿಗರು, ಮಾಷ್ಟಿಕರು, ದಕ್ಕಲಿಗರು, ಗೋಸಂಗಿಗಳು ಇವರೆಲ್ಲರಿಗೂ ಪುರಾಣ ಪ್ರಪಂಚದ ಅದ್ಭುತ ಕಾವ್ಯಗಳಿವೆ, ಆದಿಪುರಾಣಗಳಿವೆ. ಇವರೆಲ್ಲಾ ಹರ ದಂಪತಿಗಳ ಭಕ್ತರು. ಶಿವನ ನಿರ್ಗುಣ ಉಪಾಸಕರಾದ ಇವರನ್ನು ಶ್ರೀಹರಿ, ಶ್ರೀರಾಮರುಗಳು ಬಗ್ಗಿಸಿ ಜಂಬೂದ್ವೀಪವನ್ನು ಆರ್ಯಾವರ್ತವನ್ನಾಗಿ ಪರಿವರ್ತಿಸಿ ತಮ್ಮ ಮಂತ್ರದಂಡದಲ್ಲಿ ಮೂಲನಿವಾಸಿಗಳನ್ನು ದಂಡಿಸುವಾಗ ಅಸ್ಪೃಶ್ಯರಾಗಿ ಮಾರ್ಪಟ್ಟವರೇ ಗೋಸಂಗಿಗಳು. ಇಂತಹ ಹುನ್ನಾರಗಳಿಗೆ ಸಿಕ್ಕದಂತೆ ಬುದ್ಧನ, ಚಾರ್ವಾಕನ, ಅಲ್ಲಮನ, ಮಂಟೇದಯ್ಯನ, ಮಾದಯ್ಯನ, ನಿರ್ವಾಣಯ್ಯನ ಮುಂತಾದ ಮೂಲಕ್ಕೆ ತಲುಪಿದರೆ ಮಾತ್ರ ಇಲ್ಲಿನ ನೆಲದ ಕುಲಗಳಿಗೆ ಉಳಿವಿದೆ. ಈಗಿನ ಪೂಜೆ ಪುನಸ್ಕಾರ, ಜ್ಯೋತಿಷ್ಯ, ವಾಸ್ತುಶಾಸ್ತ್ರ, ಮತಮೌಢ್ಯ ಮುಂತಾದ ಹೊಡೆತದಿಂದ ತಪ್ಪಿಸಿಕೊಳ್ಳಲು ಈ ದಾರಿ ನೆರವಾಗಬಹುದೇನೋ?

> **ಅಲೆಮಾರಿ ಗೋಸಂಗಿಗಳು ಜಾಂಬವ ಪುರಾಣವನ್ನು ಪಠಿಸುವ ಆದಿಜಾಂಬವನ ಸಂತತಿಯವರು. ಜಾಂಬವನ ಬಳಿಯಲ್ಲಿದ್ದ ಶಮಂತಕಮಣಿಯನ್ನು ವಶಪಡಿಸಿಕೊಂಡ ಕೃಷ್ಣನು ಜಾಂಬವನ ಮಗಳಾದ ಜಾಂಬವತಿಯನ್ನು ಮದುವೆಯಾಗುತ್ತಾನೆ. ಹಾಗಾಗಿ ಕೃಷ್ಣನು ಗೋಸಂಗಿಗಳ ಅಳಿಯನಾಗುತ್ತಾನೆ. ಆದುದರಿಂದಲೇ ಗೋಪಿಯರು ಒಲಿದ ಕೃಷ್ಣನು ಗೋಸಂಗಿಯವನೆಂದೇ ಸಿಂದ್‌ಕಾವ್ಯ ಹೇಳುತ್ತದೆ.**

ತೀರ್ಪುಗಳು, ಪಣವ್ಯವಸ್ಥೆಯ ಕೈಫಿಯತ್ತುಗಳು ಗೋಸಂಗಿಯವರ ಕುಲಪುರಾಣ, ಆಳ್ವಿಕೆ, ಆಚರಣೆ, ಸಂಪ್ರದಾಯ, ನಂಬಿಕೆ ಮುಂತಾದ ಅನೇಕ ಸಾಂಸ್ಕೃತಿಕ ಪದರಗಳನ್ನು ಮನಗಾಣಿಸುತ್ತವೆ ನಿಜ. ಆದರೆ ಚಾಣಕ್ಯ-ಮನುಗಳ ವರ್ಣವ್ಯವಸ್ಥೆಯಲ್ಲಿ ಈ ಗೋಸಂಗಿಗಳು ಭಾರತೀಯ ಗ್ರಾಮಗಳೆಂಬ ಕತ್ತಲ ಗವಿಯೊಳಗೆ ಅಸ್ಪೃಶ್ಯರಾಗಿ ಸೇರಿಬಿಟ್ಟರು.

ವಡ್ಡಗೆರೆ ನಾಗರಾಜಯ್ಯನವರು ಸಂಚಾರಜೀವಿಗಳಾದ ಗೋಸಂಗಿಗಳ ಬಗ್ಗೆ ದೊರೆತಿರುವ ಜನಪದ ಪುರಾಣಮೂಲಗಳ ಐತಿಹ್ಯಗಳು, ಕೃಷ್ಣದೇವರಾಯನ ಕಾಲದ ಚಾರಿತ್ರಿಕ ಲಿಖಿತ ದಾಖಲೆಗಳು, ಈಚಿನ ಸಾಹಿತ್ಯ ಕೃತಿಗಳು, ಸಂಶೋಧನಾ ಪ್ರಬಂಧಗಳು ಮುಂತಾದ ಆಕರಮೂಲಗಳನ್ನು ಬಳಸಿ ಸಾಧಾರವಾಗಿ ಲೇಖನ ಮಂಡಿಸಿದ್ದಾರೆ.

ಗೋಸಂಗಿಗಳನ್ನು ಕುರಿತ ಸಮುದಾಯನಿಷ್ಠ ಸಂಸ್ಕೃತಿ ಚಿಂತನೆಯ ಈ ಲೇಖನದಲ್ಲಿ ವಿವರಿಸಲಾಗಿರುವ ಗೋಸಂಗಿಗಳು ಇಂದಿನ ಆದಿಜಾಂಬವ(ಮಾದಿಗ)ರ ಪೂರ್ವಿಕ ನೆಲೆಯವರು. ಅಂದರೆ ಎಡಗೈನವರು. ವರ್ಣವ್ಯವಸ್ಥೆಯ ಮೇಲಿನ ಕುಲದವರು ಯಜ್ಞಯಾಗಾದಿಗಳ ಹೆಸರುಗಳಲ್ಲಿ ಸಹಸ್ರಾರು ಗೋವುಗಳನ್ನು, ಕುದುರೆಗಳನ್ನು, ಆಡುಕುರಿಗಳನ್ನು ಜೀವಂತ ಕೊಂದು ತಿನ್ನುವಾಗ, ಈ ಗೋಸಂಗಿಗಳನ್ನು(ಎಡಗೈ ಮಾದಿಗರನ್ನು) ಬಲಿಕೊಟ್ಟ ಪ್ರಾಣಿಗಳ ಚರ್ಮ ಸಿಗಿಯುವುದು, ಚರ್ಮ ಹದಮಾಡುವುದು, ಚರ್ಮ ಪರಿಕರಗಳನ್ನು ತಯಾರಿಸಿಕೊಡುವುದು ಮುಂತಾದ ಬಿಟ್ಟಿ ಕೆಲಸಗಳಿಗೆ ಚೆನ್ನಾಗಿಯೇ ಬಳಸಿಕೊಂಡಿದ್ದಾರೆ. ಸತ್ತ ದನಗಳ ಮಾಂಸ ತಿನ್ನಲು ಮಾತ್ರ ಗೋಸಂಗಿಗಳಿಗೆ ಅನುಮತಿ ಕೊಟ್ಟಿದ್ದಾರೆ. ಸತ್ತ ಪ್ರಾಣಿಗಳನ್ನು ಹೊತ್ತೊಯ್ದು ಅವುಗಳ ಮಾಂಸಸೇವಿಸುವುದನ್ನು ಒಪ್ಪಿಕೊಳ್ಳಲೇ ಬೇಕಾದ ಆರ್ಥಿಕ ಹೀನ ಸ್ಥಿತಿಯನ್ನು ತಂದೊಡ್ಡಿ, ಆರ್ಯರು ಆಳ್ವಿಕೆ ನಡೆಸುತ್ತಾ ಹೋಗುವಾಗ ಹಿಂದೂ ಧರ್ಮದ ವರ್ಣವ್ಯವಸ್ಥೆಯ ಕಡೆಯ ಪಂಕ್ತಿಗೂ ಸೇರಿಸಿಕೊಂಡಿದ್ದಾರೆ. ಯಾದವ ಕುಲನಾಯಕನಾದ ಕೃಷ್ಣನು ಜಾಂಬವತಿಯನ್ನು ಮದುವೆಯಾಗಿದ್ದರೂ ಆರ್ಯರು ಕೃಷ್ಣನನ್ನು ಆರ್ಯದೇವತೆಯನ್ನಾಗಿ ಆರಾಧಿಸುತ್ತಿದ್ದಾರೆ.

ಅಲೆಮಾರಿ ಗೋಸಂಗಿಗಳು ಜಾಂಬವ ಪುರಾಣವನ್ನು ಪಠಿಸುವ ಆದಿಜಾಂಬವನ ಸಂತತಿಯವರು. ಜಾಂಬವನ ಬಳಿಯಲ್ಲಿದ್ದ ಶಮಂತಕಮಣಿಯನ್ನು ವಶಪಡಿಸಿಕೊಂಡ ಕೃಷ್ಣನು ಜಾಂಬವನ ಮಗಳಾದ ಜಾಂಬವತಿಯನ್ನು ಮದುವೆಯಾಗುತ್ತಾನೆ. ಹಾಗಾಗಿ ಕೃಷ್ಣನು ಗೋಸಂಗಿಗಳ ಅಳಿಯನಾಗುತ್ತಾನೆ. ಆದುದರಿಂದಲೇ ಗೋಪಿಯರು ಒಲಿದ ಕೃಷ್ಣನು ಗೋಸಂಗಿಯವನೆಂದೇ ಸಿಂದ್‌ಕಾವ್ಯ ಹೇಳುತ್ತದೆ. ಸಂಸ್ಕೃತಿ ಚಿಂತಕ ಕೋಟಿಗಾನಹಳ್ಳಿ ರಾಮಯ್ಯನವರ 'ಸಿಂದ್ ಮಾದಿಗರ ಸಂಸ್ಕೃತಿ' ಪುಸ್ತಕವು ಇಂತಹ ಮೌಖಿಕ ಹಾಗೂ ಲಿಖಿತ ಪುರಾವೆಗಳನ್ನು ಒದಗಿಸುವ ಮುಖ್ಯ ಕೃತಿ.

ಮೇಲೆ ಹೇಳಿದಂತೆ ಗೋಸಂಗಿಗಳನ್ನು ಮತ್ತು ಇತರ ಜಂಬೂಕುಲಗಳನ್ನು ಕಡೆ ಪಂಕ್ತಿಯಲ್ಲಿ ಈಗಲೂ ಉಳಿಸಿಕೊಳ್ಳಲು ಹಿಂದೂಧರ್ಮದ ಬ್ಯಾನರಿನಲ್ಲಿ ಹರಸಾಹಸ ಮಾಡುತ್ತಿದ್ದಾರೆ. ಉಚ್ಚಕುಲವೆನಿಸಿಕೊಂಡವರೇನೋ ಬುದ್ಧನನ್ನು, ಬಸವಣ್ಣನನ್ನು ಕಂಡೂ ಕಾಣದಂತೆ ಅನುಸರಿಸಿ ಉಪಾಯದಿಂದ ಬದುಕುವಾಗ ಆಹಾರ ಪದ್ಧತಿಯನ್ನು ಪಲ್ಲಟಗೊಳಿಸಿಕೊಂಡು ಶ್ರೇಷ್ಠತೆಯ ಕಡೆಗೆ ದಾಟಿದ್ದೇವೆನ್ನುತ್ತಾರೆ. ದುಡಿದುಣ್ಣದ ವಿಶ್ರಮ ಜನರಿಗೆ ಈ ಶ್ರೇಷ್ಠತೆಯ ನೆಪದ ಆಹಾರ ಸಾಕಾಗಬಹುದು. ದುಡಿದುಣ್ಣುವ ಶ್ರಮಜೀವಿಗಳಿಗೆ ಪರಂಪರೆಯ ಆಹಾರವೇ ಮುಖ್ಯ. ಇದನ್ನು ವಿವೇಕಾನಂದರೇ ಒಪ್ಪಿಕೊಳ್ಳುತ್ತಾರೆ. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳನ್ನು ಬದ್ರಪಡಿಸಲಾಗದ ಸನಾತನ ವರ್ಣವ್ಯವಸ್ಥೆಯನ್ನು ತ್ಯಜಿಸಿ ಬೌದ್ಧಧಮ್ಮವನ್ನು ಸ್ವೀಕರಿಸಿದ ಅಂಬೇಡ್ಕರರು, ಬೌದ್ಧಧಮ್ಮದ ಈ ಮೌಲ್ಯಗಳನ್ನು ಸಂವಿಧಾನದಲ್ಲಿ ಅಡಕಗೊಳಿಸುತ್ತಾರೆ. ಮಾನಸಿಕವಾಗಿ ಕುವೆಂಪು ಸಹ ಅವರ ಹೂವಯ್ಯನ ಮೂಲಕ ಇದೇ ಮಾಡುತ್ತಾರೆ.

ಆರಂಜ್ಯೋತಿ ಪುರಾಣ ಗೋಸಂಗಿ-ಮಾದಿಗರಲ್ಲಿ ಬರುತ್ತದೆ. ಮಾರಮ್ಮನ ಪುರಾಣವೂ ಮಾದಿಗರಲ್ಲಿದೆ. ಸಿಂದ್ ಮಾದಿಗರು, ಮಾಸ್ತಿಕರು, ದಕ್ಕಲಿಗರು, ಗೋಸಂಗಿಗಳು ಇವರೆಲ್ಲರಿಗೂ ಪುರಾಣ ಪ್ರಪಂಚದ ಅದ್ಭುತ ಕಾವ್ಯಗಳಿವೆ, ಆದಿಪುರಾಣಗಳಿವೆ. ಇವರೆಲ್ಲಾ ಹರ ದಂಪತಿಗಳ ಭಕ್ತರು. ಶಿವನ ನಿರ್ಗುಣ ಉಪಾಸಕರಾದ ಇವರನ್ನು ಶ್ರೀಹರಿ, ಶ್ರೀರಾಮರುಗಳು ಬಗ್ಗಿಸಿ ಜಂಬೂದ್ವೀಪವನ್ನು ಆರ್ಯಾವರ್ತವನ್ನಾಗಿ ಪರಿವರ್ತಿಸಿ ತಮ್ಮ ಮಂತ್ರದಂಡದಲ್ಲಿ ಮೂಲನಿವಾಸಿಗಳನ್ನು ದಂಡಿಸುವಾಗ ಅಸ್ಪೃಶ್ಯರಾಗಿ ಮಾರ್ಪಟ್ಟವರೇ ಗೋಸಂಗಿಗಳು. ಇಂತಹ ಹುನ್ನಾರಗಳಿಗೆ ಸಿಕ್ಕದಂತೆ ಬುದ್ಧನ, ಚಾರ್ವಾಕನ, ಅಲ್ಲಮನ, ಮಂಟೇದಯ್ಯನ, ಮಾದಯ್ಯನ, ನಿರ್ವಾಣಯ್ಯನ ಮುಂತಾದ ಮೂಲಕ್ಕೆ ತಲುಪಿದರೆ ಮಾತ್ರ ಇಲ್ಲಿನ ನೆಲದ ಕುಲಗಳಿಗೆ ಉಳಿವಿದೆ. ಈಗಿನ ಪೂಜೆ ಪುನಸ್ಕಾರ, ಜ್ಯೋತಿಷ್ಯ, ವಾಸ್ತುಶಾಸ್ತ್ರ, ಮತಮೌಢ್ಯ ಮುಂತಾದ ಹೊಡೆತದಿಂದ ತಪ್ಪಿಸಿಕೊಳ್ಳಲು ಈ ದಾರಿ ನೆರವಾಗಬಹುದೇನೋ? ಈ ಮಾತು ಒಕ್ಕಲಿಗರು, ಗೋಸಂಗಿಗಳು ಮುಂತಾದ ಎಲ್ಲಾ ಶ್ರಮಜೀವಿಗಳಿಗೂ ಅನ್ವಯಿಸುತ್ತದೆ. ಇದೆ ಬುದ್ಧತತ್ವದ ಭೌತವಾದ; ಮಾರ್ಕ್ಸ್ ತತ್ವದ ತಳಹದಿ. ■



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-560 091
ದೂರವಾಣಿ : 080-23480278, 9448048306

ಸಂಪಾದಕರೊಡನೆ ಸಂವಾದ

'ಹೊನ್ನಾರು' ಎಂದರೆ ಏನು? ಹೇಗೆ ಬಂತು?

ಪ್ರೊ॥ ಕೆ.ಎಸ್ ಭಗವಾನ್

ಪ್ರಿಯ ಸಂಪಾದಕರೇ,

'ಒಕ್ಕಲಿಗರು ಬೌದ್ಧರೇ?' ಎಂಬ ಲೇಖನಕ್ಕೆ ಈ ಕೆಳಗಿನ ಪೂರಕ ಸಾಮಗ್ರಿ ದೊರೆತಿದೆ.

'ಹೊನ್ನಾರು' ಪದ ಕೆಲವು ಕಡೆ 'ಹೊನ್ನೇರು' ಎಂಬ ರೂಪದಲ್ಲಿ ಸಹ ಚಾಲ್ತಿಯಲ್ಲಿದೆ. ಹುಣಸೂರು ತಾಲೂಕಿನ ನಮ್ಮ ಸುತ್ತಮುತ್ತಲ ಹಳ್ಳಿಗಳಲ್ಲಿ ಹೊನ್ನಾರು ಕಟ್ಟುವುದು ಸಂಪ್ರದಾಯ. ಇದನ್ನು ಎಲ್ಲಾ ಬೇಸಾಯಗಾರರೂ ಜಾತಿಭೇದ ಇಲ್ಲದೆ ಮಾಡುತ್ತಾರೆ. 'ಹೊನ್ನಾರಿ'ಗೆ ಕಸಾಪ ಕನ್ನಡ ನಿಘಂಟು 'ಮುಂಗಾರಿನ ಮೊಟ್ಟಮೊದಲ ಉಳುಮೆ', 'ಮೊದಲು ಕಟ್ಟುವ ಆರು'– ಎಂಬ ಅರ್ಥಗಳನ್ನು ಕೊಟ್ಟಿದೆ. 'ಹೊನ್ನಾರು' (ಹೊನ್ನು+ಆರು) ಎಂದರೆ ಅಕ್ಷರಶಃ ಅರ್ಥ 'ಚಿನ್ನದ ನೇಗಿಲು'. ಬಹುತೇಕ ಬಡವರಾಗಿರುವ ನಮ್ಮ ರೈತರು ಹೇಗೆ ತಾನೆ ಚಿನ್ನದ ನೇಗಿಲಿನಲ್ಲಿ ಉಳುಮೆ ಮಾಡಲು ಸಾಧ್ಯ? ಎಂದು ನನಗೆ ಅನ್ನಿಸುತ್ತಿತ್ತು. ಯಾವುದೇ ಶಬ್ದ ಸಾಮಾನ್ಯವಾಗಿ ವಸ್ತುಸ್ಥಿತಿಯಿಂದಲೆ ಟಂಕಣಗೊಂಡಿರುತ್ತದೆ ಎನ್ನಬಹುದು. ಕೆಲವೊಮ್ಮೆ ವಿಪರೀತ ಕಲ್ಪನೆ ಉತ್ಪ್ರೇಕ್ಷೆ ಮಾಡಿರಲಿಕ್ಕೆ ಸಾಕು.

ಹಿಂದೆ, ಪ್ರಾಚೀನ ಕಾಲದಲ್ಲಿ, ಯಾರೋ ಮಹಾರಾಜ ಚಿನ್ನದ ನೇಗಿಲಿನಲ್ಲಿ ಉತ್ತಿರಲೇಬೇಕು. ಹಾಗಾಗಿ ಈ ಮಾತು ಬಳಕೆಗೆ ಬಂದಿರಬೇಕು ಎಂದುಕೊಂಡು ಹಲವು ಆಕರಗಳನ್ನು ಹುಡುಕಿದೆ. ಜನಕ ಮಹಾರಾಜ ಹೊಲ ಉಳುಮೆ ಮಾಡಿದ್ದು ವಾಲ್ಮೀಕಿ ರಾಮಾಯಣದಲ್ಲಿ ಸಿಕ್ಕಿತು. ಅವನದು ಚಿನ್ನದ ನೇಗಿಲಲ್ಲ. ಇದರಿಂದ ನನಗೆ ಅರ್ಧ ಖುಷಿಯಾದರೂ ಪೂರ್ಣ ನಿರಾಸೆಯಾಯಿತು. ಆದರೂ ನನ್ನ ಸಂಶೋಧನೆ ನಿಲ್ಲಲಿಲ್ಲ. ಪುರಾತನ ಬೌದ್ಧ ಸಾಹಿತ್ಯದಲ್ಲಿ ಅಂದರೆ ಪಾಳಿ ಸಾಹಿತ್ಯದಲ್ಲಿ ಉಲ್ಲೇಖ ಸಿಕ್ಕರೂ ಸಿಗಬಹುದು ಎಂಬ ಊಹೆ ಮತ್ತು ಆಸೆಯಿಂದ ಅನ್ವೇಷಣೆ ಮುಂದುವರಿಸಿದೆ. ಕೊನೆಗೆ ನನ್ನ ನಿರೀಕ್ಷೆ ಮತ್ತು ಭರವಸೆಗಳು ಸುಳ್ಳಾಗಲಿಲ್ಲ. ಪೂಜ್ಯ ಆಚಾರ್ಯ ಬುದ್ಧರಕ್ಷಿತ ಅವರ ಕೃತಿ 'ಕಾಂಪ್ರಿಹೆನ್ಸಿವ್ ಕೋರ್ಸ್ ಆನ್ ಬುದ್ಧಿಸಮ್'– ಬುದ್ಧಧಮ್ಮದ ಬಗ್ಗೆ ಸಮಸ್ತ ಬೋಧೆ (ಸಂ. 1 ಪು. 64) ಎಂಬ ಗ್ರಂಥದಲ್ಲಿ ಈ ಮುಂದಿನ ಮಾಹಿತಿ ಲಭ್ಯವಾಯಿತು:

ಕಪಿಲವಸ್ತುವಿನಲ್ಲಿ " ವಿಶೇಷ ವಾರ್ಷಿಕ ಉತ್ಸವ ನಡೆಯುತ್ತಿತ್ತು. ಅದನ್ನು ಸ್ವತಃ ಮಹಾರಾಜ ಶುದ್ಧೋದನನೇ ನೆರವೇರಿಸುತ್ತಿದ್ದನು. ಇಡೀ ಕಪಿಲವಸ್ತು ನಗರ ಸಿಂಗಾರವಾಗುತ್ತಿತ್ತು. ಎಲ್ಲಾ ಕಸುಬಿನ ಜನರು ಅತ್ಯುತ್ತಮ ವೇಷಭೂಷಣ ತೊಟ್ಟುಕೊಂಡು ಬಂದು ಅರಮನೆಯ ಮೈದಾನದಲ್ಲಿ ನೆರೆಯುತ್ತಿದ್ದರು. ಇದೇ ಉಳುಮೆಯ ಜಾಗವಾಗಿತ್ತು. ಒಂದು ಸಾವಿರ ಏರುಗಳನ್ನು ಸಿದ್ಧಗೊಳಿಸಿ ನಿಲ್ಲಿಸಿರುತ್ತಿದ್ದರು. ಮಂತ್ರಿಗಳು ಮತ್ತು ಶ್ರೀಮಂತರು ಉಳಲು ಬೆಳ್ಳಿ ಗುಳದ ನೇಗಿಲುಗಳು ಇರುತ್ತಿದ್ದವು. ಚಿನ್ನದ ಗುಳದ ನೇಗಿಲನ್ನು ಮಾತ್ರ ಮಹಾರಾಜನಿಗೆ ಇರಿಸಲಾಗುತ್ತಿತ್ತು. ಮಂತ್ರಿಗಳು, ಅಧಿಕಾರಿಗಳು, ಶ್ರೀಮಂತರು, ಬೆಂಗಾವಲಿಗರು, ಮುಂತಾದವರೊಂದಿಗೆ ಅರಮನೆ ಮೈದಾನಕ್ಕೆ ಮಹಾರಾಜ ಆಗಮಿಸುತ್ತಿದ್ದನು. ಮಹಾರಾಜ ಶುದ್ಧೋದನ ತನ್ನ ಜೊತೆ ಬೋಧಿಸತ್ವ(ಕಿರಿಯ ಸಿದ್ಧಾರ್ಥ)ನನ್ನು ಕರೆದುಕೊಂಡು ಬಂದು ದೊಡ್ಡ ಜಂಬು ಮರದ ಕೆಳಗೆ ನೆಳಲಿನಲ್ಲಿ ಅವನಿಗಾಗಿ ಹಾಕಿದ್ದ ಸಣ್ಣ ಗುಡಾರದಲ್ಲಿದ್ದ ಜಮಖಾನದ ಮೇಲೆ ಕೂರಿಸುತ್ತಿದ್ದನು.

"ಈ ಉತ್ಸವದ ಆಚರಣೆಯಲ್ಲಿ ಮಹಾರಾಜ ಶುದ್ಧೋದನ ಚಿನ್ನದ ಗುಳ ಇದ್ದ ನೇಗಿಲಿನಲ್ಲಿ ಉಳುತ್ತಿದ್ದನು. ರಕ್ಷಕದಳದ ಬೆಂಗಾವಲಿನಲ್ಲಿ ಬೋಧಿಸತ್ವನನ್ನು ಬಿಡಲಾಗುತ್ತಿತ್ತು. ಈ ಉಳುವ ಶಾಸ್ತ್ರ ಪೂರ್ಣ ಭರದಲ್ಲಿ ಸಾಗುತ್ತಿದ್ದಾಗ ಈ ಭವ್ಯ ನೋಟವನ್ನು ನೋಡಲು ದಾದಿಯರು ಮತ್ತು ಅಂಗರಕ್ಷಕರು ಹೊರಬರುತ್ತಿದ್ದರು".

ಹೊನ್ನಾರು ಅಂದರೆ ಚಿನ್ನದ ನೇಗಿಲು ಎಂದು ಅರ್ಥವಾಗುತ್ತದೆ. ನೇಗಿಲು ಪೂರ್ಣ ಚಿನ್ನದ್ದಾದರೆ ಎತ್ತಲು ಸಾಧ್ಯವಾಗುವುದಿಲ್ಲ. ಅದು ತುಂಬಾ ಭಾರವಾಗಿರುತ್ತದೆ. ಕೋಲಾರದ ಚಿನ್ನದ ಗಣಿ/ಕಾರ್ಖಾನೆಯಲ್ಲಿ ಒಂದು ಚಿನ್ನದ ಇಟ್ಟಿಗೆ ಇಟ್ಟಿದ್ದಾರೆ. ಅದನ್ನು ಯಾರು ಒಂದೇ ಕೈಯಲ್ಲಿ ಎತ್ತುತ್ತಾರೋ ಅದು ಅವರಿಗೆ ಸೇರುತ್ತದೆ ಎಂಬ ಪ್ರತೀತಿ ನಮ್ಮ ಹಳ್ಳಿಯಲ್ಲಿ ಇತ್ತು. ಆದ್ದರಿಂದ ಚಿನ್ನದ ನೇಗಿಲು ಎಂದರೆ, ಮೇಲೆ ಉಲ್ಲೇಖಿಸಿದ ಮಾಹಿತಿಯಲ್ಲಿ ಇರುವಂತೆ, ಚಿನ್ನದ ಗುಳ ಎಂದು ತಿಳಿಯಬೇಕಾಗುತ್ತದೆ. ಈ ಚಿನ್ನದ ನೇಗಿಲಿನಲ್ಲಿ ಸಿದ್ಧಾರ್ಥನ ತಂದೆ ಶುದ್ಧೋದನ ಉಳುತ್ತಿದ್ದನು. ಯುವಕ ಸಿದ್ಧಾರ್ಥ ಚಿನ್ನದ ನೇಗಿಲಿನಲ್ಲಿ ಉತ್ತಿರಬೇಕು. ಆದರೆ ಅದು ನಡೆದಿರಲಾರದು. ಏಕೆಂದರೆ ಸಿದ್ಧಾರ್ಥ ರಾಜನಾಗಲೇ ಇಲ್ಲ. ಅವನು ರಾಜ್ಯತ್ಯಾಗ ಮಾಡಿ ಸನ್ಯಾಸಿಯಾದ. ಹಾಗಾಗಿ ಅವನು ಚಿನ್ನದ ನೇಗಿಲಿನಲ್ಲಿ ಉಳುಮೆ ಮಾಡಿಲ್ಲ ಎನ್ನಬೇಕಾಗಿದೆ. ಚಿನ್ನದ ನೇಗಿಲಿನಲ್ಲಿ ಉಳುವ ಹಕ್ಕು ಇದ್ದದ್ದು ರಾಜನಿಗೆ ಮಾತ್ರ.

ಆದ್ದರಿಂದ ಶುದ್ಧೋದನ ಚಿನ್ನದ ನೇಗಿಲಿನಲ್ಲಿ ಉಳುಮೆ ಮಾಡಿದ್ದರಿಂದ 'ಹೊನ್ನಾರು' ಬಳಕೆಗೆ ಬಂದು ಬೇಸಾಯಗಾರರು ಅದನ್ನು ಪ್ರತಿ ವರ್ಷ ಆಚರಿಸುತ್ತಾ ಇನ್ನೂ ಜೀವಂತವಾಗಿ ಇಟ್ಟಿದ್ದಾರೆ.

ಒಂದು ಪೂರಕ ವಿವರಣೆ

ನಮ್ಮ ಕಡೆ ಯುಗಾದಿ ಹಬ್ಬದ ದಿನ ಹೊನ್ನಾರು ಕಟ್ಟುವುದು ರೂಢಿಯಲ್ಲಿದೆ. ಹಬ್ಬದ ಊಟ ಉಂಡು ವಿಶ್ರಾಂತಿ ಪಡೆದು ಇಳಿಹೊತ್ತಿನಲ್ಲಿ ಸುಮಾರು ನಾಲ್ಕು ಗಂಟೆಗೆ ಹೊನ್ನಾರು ಕಟ್ಟುವುದು ವಾಡಿಕೆ. ಅಂದು ಉಳುಮೆಗೆ ಕಟ್ಟುವ ಜೋಡಿ ಎತ್ತುಗಳ ಇಲ್ಲವೆ ಹೋರಿಕರುಗಳ ಮೈಯನ್ನು, ರೈತರು ತಾವು ಸ್ನಾನ ಮಾಡುವುದಕ್ಕೆ ಮೊದಲೇ ಚೆನ್ನಾಗಿ ತೊಳೆಯುತ್ತಾರೆ. ಆಮೇಲೆ ಅವುಗಳ ಕೊಂಬುಗಳಿಗೆ ಎಣ್ಣೆ ಸವರಿ, ಹಣೆಗೆ ಕುಂಕುಮ ಇಡುವರು. ನೇಗಿಲಿಗೆ ಕುಂಕುಮ, ಅರಿಸಿನ, ವಿಭೂತಿ ಹಚ್ಚಿ, ಅದು ಕಕ್ಕೆ ಹೂವಿನ ಕಾಲವಾದುದರಿಂದ ಅವುಗಳನ್ನು ಪೂಜೆಗೆ ಬಳಸುವರು. ಏರು ಕಟ್ಟಿದ ಮೇಲೆ ಹೊಲದಲ್ಲಿ ಮೂರು ಅಥವಾ ಐದು ಸುತ್ತು ನೇಗಿಲು ಹಿಡಿದು ಉಳುವರು. ಆಮೇಲೆ ಆರನ್ನು ಬಿಚ್ಚಿಹಾಕುತ್ತಾರೆ. ಬೇರೆ ಬೇರೆ ಊರುಗಳಲ್ಲಿ ಈ ಹೊನ್ನಾರು ಕಟ್ಟುವ ಆಚರಣೆಯಲ್ಲಿ ಅಲ್ಪಸ್ವಲ್ಪ ಬದಲಾವಣೆ ಇಲ್ಲವೆ ವ್ಯತ್ಯಾಸ ಕಂಡುಬರಬಹುದು. ಆದರೆ ಹೊನ್ನಾರು ಕಟ್ಟುವುದು ಸಾರ್ವತ್ರಿಕ ಪದ್ಧತಿ.

ಹೊನ್ನಾರು ಉತ್ಸವವನ್ನು ಗಮನಿಸಿದರೆ ಒಕ್ಕಲಿಗರು ಮೂಲತಃ ಬೌದ್ಧರು ಎನ್ನುವುದರಲ್ಲಿ ನನಗೆ ಏನೂ ಅನುಮಾನ ಉಳಿದಿಲ್ಲ. ಎಲ್ಲಾ ಜನಾಂಗದ ಕೃಷಿಕರೂ ಹೊನ್ನಾರು ಕಟ್ಟುವುದರಿಂದ ಜನಸಾಮಾನ್ಯರಲ್ಲಿ ಬುದ್ಧಧರ್ಮ ಹರಡಿತ್ತು ಎಂಬುದು ಐತಿಹಾಸಿಕ ಸತ್ಯವೆ ಆಗಿದೆ.

ಹೊನ್ನಾರು ಈಗ ತನ್ನ ಮೂಲವಸ್ತು–ಚಿನ್ನವನ್ನು ಮರೆಸಿಬಿಟ್ಟಿದೆ. ಆರು ಕಟ್ಟಿ ಉಳುವುದರಿಂದ ಬೆಳೆ ಸಮೃದ್ಧವಾಗಿ ಬಂದು ದವಸ ಧಾನ್ಯಗಳು ಹೆಚ್ಚಿ, ಮನೆಗೆ ಎಷ್ಟು ಬೇಕೋ ಅಷ್ಟನ್ನು ಇಟ್ಟುಕೊಂಡು ಅಧಿಕವಾದುದನ್ನು ಮಾರಾಟ ಮಾಡುವುದರಿಂದ ಹಣ ಬರುತ್ತದೆ. ಆದ್ದರಿಂದ ರೈತರು ಒಡವೆ ವಸ್ತುಗಳನ್ನು ಖರೀದಿಸುತ್ತಾರೆ. ಹೀಗೆ ಹೊನ್ನನ್ನು–ಸಂಪತ್ತನ್ನು–ತರುತ್ತದೆ ಎಂಬ ಅರ್ಥದಲ್ಲಿ ಹೊನ್ನಾರು ಆಚರಣೆಯಲ್ಲಿದೆ. ಆರು ರೈತರ ಬದುಕನ್ನು ರೂಪಿಸುವ ಅತ್ಯಂತ ಮಹತ್ವದ ಸಾಧನವಾದುದರಿಂದ ಅದನ್ನು ಹಿರಿದಾಗಿ ಕಾಣುವರು. ಆದ್ದರಿಂದ ಚಿನ್ನದ ಕಲ್ಪನೆ ತೀರಾ ಸೂಕ್ತವಾಗಿ ಹೆಣೆದುಕೊಂಡಿದೆ. ಮೂಲವಸ್ತು ಬೇರೆ ಅಥವಾ ಬುಡವಾಗಿ ಧ್ವನ್ಯಾರ್ಥಗಳು ಹೂವು ಹಣ್ಣುಗಳು ಗೊಂಚಲಂತೆ ಕಾಣುತ್ತವೆ.

ಇದುವರೆಗಿನ ಮಾಹಿತಿಗಳನ್ನು ಗಮನಿಸಿದರೆ ಭಾರತೀಯ ಸಂಸ್ಕೃತಿ, ಬುದ್ಧ ಸಂಸ್ಕೃತಿ ಎಂದು ತಿಳಿಯುವುದು. ■

ಸಂಪಾದಕರೊಡನೆ ಸಂವಾದ

ಈ ಚಡ್ಡಿಗಳ ಅಂತಃಸತ್ವ ಯಾಕೆ ಇಷ್ಟೊಂದು ಅಯೋಮಯವಾಗುತ್ತಿದೆ? ಈ ರೋಧಿಸುವ ಸ್ವಯಂ ಸೇವಾ ಸಂಘಟನೆಯ ಆಶಯಗಳು ರೂಪಿತಗೊಂಡಿದ್ದು ಹಿಂದೂ ಧರ್ಮದ ರಕ್ಷಣೆಯ ಹೆಸರಿನ ರಾಜಕಾರಣಕ್ಕಾಗಿಯೇ ಹೊರತು ಸತ್ವಯುತವಾದ ಕಾಳಜಿಗಳಿಂದಲ್ಲ. ರೈಲುನಿಲ್ದಾಣದಲ್ಲಿ ಠಾಕುಠೀಕಾಗಿ ಲಾಠಿ ಹಿಡಿದು ನಾವೇ ನಿಮ್ಮ ರಕ್ಷಕರು ಎಂಬಂತೆ ಘೋಷಣೆ ಕೂಗುತ್ತಿದ್ದ ಈ ಹಿಂದೂ ರಕ್ಷಕರು ದಲಿತರ ಮೇಲೆ ಹಲ್ಲೆಗಳಾದಾಗ, ದಲಿತರಿಗೆ ಊರಿಂದ ಬಹಿಷ್ಕಾರ ಹಾಕಿದಾಗ ಒಂದು ಸಲವೂ ಅವರ ರಕ್ಷಣೆಗೆ ಹೋದವರಲ್ಲ.

ಮಹದೇವ ಬಣಕಾರ

ಪ್ರಿಯ ಸಂಪಾದಕರೇ,

ಭೋಗ ವಾಂಛೆಯ ಇಂಡಿಯಾ, ರೋಧಿಸುತ್ತಿರುವ ಭಾರತ ಇವೆರಡರಲ್ಲಿ ನಿಮಗೆ ಅತ್ಯಂತ ಪ್ರಿಯವಾದದ್ದು ಯಾವುದು ಅಂತ ಕೇಳಿದರೆ..! ಆಯ್ಕೆ ಯಾವುದಾದರೇನು ಈ ನೆಲದ ಮೆಲ್ಲುಸಿರಿನೊಳಗೆ ಸಣ್ಣಕೆ ನರಳುವ ಧ್ವನಿಯೊಂದು ಗಟ್ಟಿಯಾಗಿ ಅಳಲು ಚಡಪಡಿಸುತ್ತಿದೆ. ಆ ಉಸಿರಿನಲ್ಲಿ ಅತೃಪ್ತ ಅಸಹನೆ ಇದೆ, ನೋವಿದೆ, ಹಸಿವಿದೆ, ಅವಮಾನದ ಕುರುಹೂ ಅಲ್ಲಿದೆ. ಅದು ಕೋಪೋದ್ರಿಕ್ತವಾಗಿ ಕುದಿಯುವುದು ಯಾರ ವಿರುದ್ಧ? ರೋಧಿಸುತ್ತಿರುವ ಭಾರತದ ವಿರುದ್ಧ. ಈ ಭಾರತಾಂಬೆಯ ಮಣ್ಣಲ್ಲಿ ರಕ್ತದ ಕಲೆಗಳಿವೆ, ಆ ರಕ್ತಕ್ಕೆ ಪ್ರತಿಕಾರ ಬಯಸುವ ಶಿಸ್ತಿನ ಗುಂಪೊಂದಿದೆ, ಆ ಗುಂಪುಗಾರಿಕೆಯ ಪುಂಡಾಟಿಕೆಯೂ ಕೂಡ ದೇವರ ಆಟದಂತೆ ಇನ್ಯಾರದೋ ಕೈಯಲ್ಲಿದೆ. ಆ ಆಡಿಸುವಾತನ ಮೈ-ನರನಾಡಿಗಳಲ್ಲೆಲ್ಲ ಮನುಷ್ಯತ್ವವನ್ನು ಧಿಕ್ಕರಿಸುವ ವಿಷಬೀಜವುಣಿಸಿದ ಇವರು ರೋಧಿಸುವ ಭಾರತದ ರಕ್ಷಕರ ಪೋಸು ಕೊಟ್ಟು ವಿನಮ್ರ ಸೇವಕನ ದಿರಿಸು ತೊಟ್ಟು ಬೆಂಗಾವಲಿಗೆ ನಿಲ್ಲುತ್ತಾರೆ.

ಕಾಶ್ಮೀರದ ಹೆಣ್ಣಾದರೂ ಪರವಾಯಿಲ್ಲ-ಜಾತಿ ಬಿಟ್ಟು ಹೋಗಲಾರದವರು ಇವರು ಹಿಂದು ನಾವೆಲ್ಲ ಒಂದು ಅನ್ನುತ್ತಾರೆ, ತಿಳುವಳಿಕೆಗೆ ನಿಲುಕುವ ಮತ್ತು ಸುತ್ತ ರೂಢಿಗತವಾಗಿರುವ ಒಂದು ಮತದೊಳಗೆ ನಡೆಯುವ ಅಮಾನವೀಯ ಘಟನೆಗಳನ್ನು ಮಾನವೀಯ ಮನಸ್ಸೊಂದು ಖಂಡಿಸುತ್ತದೆ. ಪಾಕಿಸ್ತಾನದ ಮೂಲಭೂತವಾದಿಗಳ ರೋಧನೆಯಲ್ಲಿ ಅಂತಃಸತ್ವವೇ ಇಲ್ಲ ಮತ್ತು ಅವರಿಗೆ ತಮ್ಮದೇ ಆದ ಒಡಲುಸಿರಿನ ಕಾವ್ಯಗಳಿಲ್ಲ ಎಂಬುದು ಕೀಳರಿಮೆಯಾಗಿದೆ. ಪ್ರೇಮದರ್ಶನದ ಅತೀವ ಜೀವಂತಿಕೆಯ ಸೂಫಿಕಾವ್ಯ, ಜನಪದಕಾವ್ಯ, ಪ್ರೇಮಕಾವ್ಯಗಳ ಅಂತರ್ಧ್ಯಾನದ ರುಚಿಗಿಂತ ಬಹಿರಂಗದ ಬಾಹ್ಯಾಡಂಬರವೇ ಹೆಚ್ಚು ಅಪ್ಯಾಯಮಾನವಾಗಿರುವದರಿಂದ ಅಲ್ಲಿ ನಡೆಯುವ ಹಿಂಸೆಗೆ ಅಭದ್ರತೆಯ ಬದುಕು ಕಾರಣವಾಗಿರಬಹುದು.

ಹೋದವರಲ್ಲ. ನೆಮ್ಮದಿ ಕೊಡುವ ಧರ್ಮವನ್ನು ಸೇರಲು ಬಯಸಿದಾಗ ಇವರು ಅಲ್ಪಸಂಖ್ಯಾತರ ಮೇಲೆ ತಿರುಗಿ ಬೀಳುತ್ತಾರೆ. ಜನಾಂಗೀಯ ಮತ್ತು ಪ್ರತ್ಯೇಕತಾವಾದಿಗಳ ನಡುವಿನ ಹಿಂಸಾಚಾರ ಕೋಮುಬಣ್ಣದ ಸ್ವರೂಪ ಪಡೆದುಕೊಳ್ಳುತ್ತದೆ. ಇದು ತಪ್ಪೆಂದು ಖಂಡಿಸಿದರೆ ಆ ಖಂಡನೆ ನಮಗರಿವಿರುವ ಈ ನೆಲಮೂಲ ಗುಣಾವಗುಣಗಳನ್ನು ಪರಿಶೀಲಿಸಿರುತ್ತದೆ ಎಂಬುದನ್ನು ಅರಿಯಲಾರದ ಈ ಕ್ಷುದ್ರ ಜಂತುಗಳಿಗೆ ಪಕ್ಕದ ಪಾಕಿಸ್ತಾನದಂತೆ ಇಲ್ಲೂ ಅಮಾನವೀಯವಾದ ಹಿಂದುಸ್ತಾನ ಕಟ್ಟಬೇಕೆಂಬ ಹಂಬಲ. ಅಲ್ಲಿನ ಅಲ್ಪಸಂಖ್ಯಾತರು ಇಲ್ಲಿ ಬಹುಸಂಖ್ಯಾತರು-ಇಲ್ಲಿನ ಅಲ್ಪಸಂಖ್ಯಾತರು ಅಲ್ಲಿ ಬಹುಸಂಖ್ಯಾತರು ಹೀಗಿರುವಾಗ ಒಬ್ಬರನ್ನು ಒಬ್ಬರು ದುರುಗುಟ್ಟಿ ನೋಡುವವರು, ಹಿಂಸಾಚಾರ ಬೆಂಬಲಿಸುವರೆ ಹೊರತು ಮನುಷ್ಯತ್ವದ ಅಂಶವನ್ನು ಎಳ್ಳಷ್ಟು ತಾಗಲಾರದವರು. ಅನ್ಯಾಯ, ಅಕ್ರಮಣಗಳಿಗೆ ಉದಾಹರಣೆಗಳನ್ನು ಕೆದಕುತ್ತ ಹೋದಂತೆ ಇತಿಹಾಸ ಸಾಕಷ್ಟು ಪುರಾವೆ ಒದಗಿಸುತ್ತದೆ.

ಏನೀ ಚಮತ್ಕಾರ ಹುಲ್ಲೊಣಗಿ ಬೆಳೆವುದಲ??

ಚೇಷ್ಟೆಯಗುಣಗಳು ತುಂಬಿಕೊಂಡಿವೆ. ಬೂಸಾ ಸನಾತನ ಪಠ್ಯಪುಸ್ತಕದಲ್ಲಿ ಪರಧರ್ಮ ಸಹಿಷ್ಣುಗಳಿವರು. ಈ ಇವರು ಸಮರ್ಥಿಸುವ ಸಮಾಜದಲ್ಲಿ ಎಲ್ಲವೂ ಆ ದೇವರು ನಿರೂಪ ಕಳಿಸಿದಂತೆ ಆಗುತ್ತಿರುತ್ತದೆ. ಹೆಣ್ಣುಮಕ್ಕಳು ಪೂಜ್ಯನೀಯರು ಆಗಿರುತ್ತಾರೆ - ಅಲ್ಪಸಂಖ್ಯಾತರು ಇವರ ತಟ್ಟೆಗೆ ಕೈ ಹಾಕಿರುತ್ತಾರೆ. ಗ್ರಂಥಗಳಲ್ಲಿ ನೆರೆ-ಹೊರೆಯ ಗೆರೆಗಳ ಆಚಿನವರು ಯಾರೂ ಮನುಷ್ಯರಾಗಿ ಕಾಣುವುದೇ ಇಲ್ಲ. ಇವರನ್ನು, ಇವರು ಬೋಧಿಸತಕ್ಕ ನಂಬುಗೆಗಳನ್ನು ಮರುಮಾತಾಡದೇ ಒಪ್ಪಿಕೊಂಡು ಬದುಕಿದವರನ್ನು ಬಿಟ್ಟರೆ ಉಳಿದೆಲ್ಲರೂ ಈ ನೆಲದ ಮಹಾಕಾವ್ಯಗಳಲ್ಲಿ ಖಳರಾಗಿಯೇ ಕಾಣಿಸಿದ್ದಾರೆ.

ಈ ನೆಲದಲ್ಲಿ ತನ್ನತನದ ವಿರುದ್ಧ ತಾನೇ ಹೋರಾಟ ಮಾಡುವ ಮುಖಾಂತರ ಶರಣ ಸಂಸ್ಕೃತಿಯನ್ನು ಸಾಕಾರಗೊಳಿಸಿದ್ದ ಒಂದು ಸಮಾಜೋಧಾರ್ಮಿಕ ಚಳವಳಿ ಕೂಡ ನೆಲಕಚ್ಚಿದ್ದು ಈ ತಲೆಹಿಡುಕರ ಕುತಂತ್ರದಿಂದಲೇ ಅಲ್ಲವೇ..? ಲವ್ ಜಿಹಾದ್ ಎಂದು ತಾವೇ ಭ್ರಮಿಸಿಕೊಂಡು ಬೊಬ್ಬಿಡುತ್ತಾರೆ, ಕುಲೀನತ್ವಕ್ಕೆ ಧಕ್ಕೆ ಬಂದೊದಗಿದಲ್ಲಿ ಹೇಳಹೆಸರಿಲ್ಲದಂತೆ ಮರ್ಯಾದಾಹತ್ಯೆ ಸಾಕಾರಗೊಳಿಸುತ್ತಾರೆ. ದಮನಿತರಿಗೆ ಜಾತಿಶ್ರೇಷ್ಠತೆಯ ಮತ್ತು ಜಗತ್ತಿನ ಮುಖ್ಯವಾಹಿನಿಗಳು ಹಿಂದೂ-ಕ್ರಿಶ್ಚಿಯನ್ ದೇಶಗಳಿಗೇ ಇಷ್ಟವಾಗುವಂತ ವರದಿಗಳನ್ನ ಬಿತ್ತರಗೊಳಿಸುವ ಪ್ರಮಾದದಿಂದಾಗಿ ಆ ದೇಶದ ಕುರಿತಾದ ಚಿತ್ರಣ -ಇಸ್ಲಾಮನ ಅತ್ಯುಗ್ರ ಮುಖವೊಂದು- ಮಾತ್ರ ಸಾಮಾನ್ಯನ ಕಲ್ಪನೆಯಲ್ಲಿ ಅಚ್ಚಾಗುತ್ತಿದೆ.

ಆದರೆ ರೋಧಿಸುತ್ತಿರುವ ಭಾರತದ ಭಾವ ಬದುಕಿಗೆ ಸಮೃದ್ಧವಾದ grand narationಗಳಿದ್ದೂ, ಈ ಚಡ್ಡಿಗಳ ಅಂತಃಸತ್ವ ಯಾಕೆ ಇಷ್ಟೊಂದು ಅಯೋಮಯವಾಗುತ್ತಿದೆ? ಈ ರೋಧಿಸುವ ಸ್ವಯಂ ಸೇವಾ ಸಂಘಟನೆಯ ಆಶಯಗಳು ರೂಪಿತಗೊಂಡಿದ್ದು ಹಿಂದೂ ಧರ್ಮದ ರಕ್ಷಣೆಯ ಹೆಸರಿನ ರಾಜಕಾರಣಕ್ಕಾಗಿಯೇ ಹೊರತು ಸತ್ವಯುತವಾದ ಕಾಳಜಿಗಳಿಂದಲ್ಲ. ಪ್ರಗತಿಪರರ ನಿಲುವುಗಳನ್ನ ಪ್ರಶ್ನಿಸುವ ಮನೋಭಾವದಲ್ಲಿ ರೋಧನೆಯ ಆವೇಶವಿರುತ್ತದೆ ವಿನಃ ಮನುಷ್ಯನ ಮೂಲಭೂತ ಬದುಕುವ ಹಕ್ಕಿನ ಕುರಿತಾಗಿ ಇವರೆಂದೂ ಮಾತಾಡಿದವರಲ್ಲ. ರೈಲುನಿಲ್ದಾಣದಲ್ಲಿ ಠಾಕುಠೀಕಾಗಿ ಲಾಠಿ ಹಿಡಿದು ನಾವೇ ನಿಮ್ಮ ರಕ್ಷಕರು ಎಂಬಂತೆ ಘೋಷಣೆ ಕೂಗುತ್ತಿದ್ದ ಈ ಹಿಂದೂ ರಕ್ಷಕರು ದಲಿತರ ಮೇಲೆ ಹಲ್ಲೆಗಳಾದಾಗ, ದಲಿತರಿಗೆ ಊರಿಂದ ಬಹಿಷ್ಕಾರ ಹಾಕಿದಾಗ ಒಂದು ಸಲವೂ ಅವರ ರಕ್ಷಣೆಗೆ

ಆಧುನಿಕತೆಯ ಸೆಲ್ಫಿಶ್ ಭಾಷೆಯ, ಶಬ್ದಮೋಜಿನ, ಹುಸಿ ಮಾಂತ್ರಿಕ ಬರಹಗಾರರು ಪ್ರಚೋದನಾತ್ಮಕ ಶೈಲಿಯಲ್ಲಿ ತಮ್ಮ ಅಜಂಡಾವನ್ನು ಸಮರ್ಥಿಸಿಕೊಳ್ಳುತ್ತಿರುವುದನ್ನು ನೋಡಿದಾಗ, ಅಮಮ! ಮತ್ತೆ ಚಿಗುರಾಗಿ ಬೆಳೆಯುತ್ತಿರುವ ಇವರ ಕೋಮುಭಾವನೆಗೆ ಆಹಾರವಾಗಿ ಒದಗಿದವರು ಬೋಡೊಗಳು, ಬಡತನ, ನಿರುದ್ಯೋಗದಿಂದ ಬೇಸತ್ತು ವಲಸೆ ಬಂದಿರುವ ಜನಗಳು. ಭೋಗವಾಂಛೆಯ ಇಂಡಿಯಾದ ಪರಿತ್ಯಕ್ತ ಹುಡುಗ-ಹುಡುಗಿಯರು. ಕೋಮು ಘರ್ಷಣೆ, ಕೋಮು ಜ್ವಾಲೆ, ಕೋಮು ದ್ವೇಷವನ್ನೆ ಬಂಡವಾಳವಾಗಿರಿಸಿಕೊಂಡಿರುವ ಇವರ ಗುರಿ ರಾಜಕೀಯ ಆಶಯವುಳ್ಳದ್ದಾದರೂ ಇದು ಕಟ್ಟಕಡೆಗೆ ಈ ದೇಶವನ್ನು ಫ್ಯಾಸಿಸಂನತ್ತ ಎಳೆದೊಯ್ಯುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

ಪಾಕಿಸ್ತಾನದಂತೆ ಮತ್ತೊಂದು ಹಿಂದುಸ್ಥಾನ ಆದಲ್ಲಿ ಸೋಗಲಾಡಿ ಪ್ರಭುತ್ವವು ಲೋಳಲೊಟ್ಟೆಯಾಗುತ್ತದೆ. ಜೀವಪರವಾದ ಪ್ರಜಾಪ್ರಭುತ್ವದ ನಿಲುವುಗಳನ್ನುಳ್ಳ ಮೌಲ್ಯಯುತವಾದ ಸಮಾಜವನ್ನು ಧಿಕ್ಕರಿಸುವ ಫ್ಯಾಸಿಸಮ್ ಪಿಂಡಗಳು ಸಮರ್ಥಿಸುವ ರೋಧನೆಯ ಭಾರತ ನಮ್ಮದಾಗದಿರಲಿ. ■

ಸಂಪಾದಕರೊಡನೆ ಸಂವಾದ

ನರೇಂದ್ರಮೋದಿಯವರ ಕೋಮುವಾದಿ ರಾಜಕಾರಣವನ್ನು ವಿರೋಧಿಸಿ ಇನ್ನೊಂದೆಡೆ ಬಿಜೆಪಿ ಮೈತ್ರಿಕೂಟದಲ್ಲಿ ಮುಂದುವರೆಯುವುದರಲ್ಲಿ ಅರ್ಥವಿಲ್ಲ. ಮೋದಿ ಜಾರಿಗೆ ತರುತ್ತಿರುವುದು ಆರ್‌ಎಸ್‌ಎಸ್‌ನ ಕಾರ್ಯಸೂಚಿಯನ್ನು ಇದಕ್ಕಾಗಿ ವೈಯಕ್ತಿಕವಾಗಿ ಮೋದಿಯನ್ನು ದ್ವೇಷಿಸಿದರೆ ಪ್ರಯೋಜನವಿಲ್ಲ. ಇಡೀ ಸಂಘಪರಿವಾರವನ್ನೇ ದೇಶದ ರಾಜಕಾರಣದಿಂದ ದೂರವಿಡಬೇಕಾಗಿದೆ. ಈ ನಿಟ್ಟಿನಲ್ಲಿ ನಿತೀಶ್‌ಕುಮಾರ್ ಮಹತ್ವದ ಪಾತ್ರವಹಿಸಬೇಕಾಗಿದೆ. ಸಂಘಪರಿವಾರದ ಜೊತೆಗೆ ಸೇರಿ ಜಾತ್ಯತೀತನಾಗಿರಲು ಸಾಧ್ಯವಿಲ್ಲ ಎಂಬುದನ್ನು ಅವರು ಮನಗಾಣಬೇಕಾಗಿದೆ.

ಸನತ್‌ಕುಮಾರ ಬೆಳಗಲಿ

ನಿತೀಶ್‌ಕುಮಾರ್ ದಾರಿ ತಪ್ಪದಿರಲಿ

ಪ್ರಿಯ ಸಂಪಾದಕರೇ,

ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್ ಅವರ ಆಡಳಿತವನ್ನು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಹಾಡಿಹೊಗಳಿದಾಗ ಅನೇಕರಿಗೆ ಅಚ್ಚರಿಯಾಯಿತು. ಈ ಹೊಗಳಿಕೆ ಕೇಳಿ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಕೋಪದಿಂದ ಕುದಿಯತೊಡಗಿದ್ದಾರೆ ಎಂದು ಮಾಧ್ಯಮಗಳು ವಿಶ್ಲೇಷಿಸತೊಡಗಿದವು. ಇದರಿಂದ ದಿಗಿಲುಗೊಂಡ ಭಾಗವತ್ ರಾಜಕಾರಣಿಗಳಂತೆ ತಾವು ಹಾಗೆ ಹೇಳಿಲ್ಲ. ಅದೆಲ್ಲ ಮಾಧ್ಯಮಗಳ ಸೃಷ್ಟಿ ಎಂದು ಸ್ಪಷ್ಟೀಕರಣವನ್ನು ನೀಡಿದರು. ಭಾಗವತ್ ಹೇಳಿಕೆ ನೀಡಿದ ಸಂದರ್ಭದಲ್ಲೇ ಬಿಜೆಪಿ ಹಿರಿಯ ನಾಯಕ ಎಲ್.ಕೆ.ಅಡ್ವಾಣಿ ತಮ್ಮ ಬ್ಲಾಗ್‌ನಲ್ಲಿ ಲೇಖನವೊಂದನ್ನು ಬರೆದು, 'ಮುಂದಿನ ಲೋಕಸಭಾ ಚುನಾವಣೆಯ ನಂತರ ಕಾಂಗ್ರೆಸ್ಸೇತರ ಮತ್ತು ಬಿಜೆಪಿಯೇತರ ಪ್ರಧಾನಿ ದೇಶವನ್ನಾಳುತ್ತಾರೆ' ಎಂದು ವಿಶ್ಲೇಷಿಸಿದರು.



ಮೋಹನ್ ಭಾಗವತ್ ಮತ್ತು ಎಲ್.ಕೆ. ಅಡ್ವಾಣಿಯವರ ಅಭಿಪ್ರಾಯಗಳನ್ನು ಗಮನಿಸಿದಾಗ, ಸಂಘಪರಿವಾರದ ತಂತ್ರ ಅರ್ಥವಾಗುತ್ತದೆ. ನರೇಂದ್ರ ಮೋದಿಯನ್ನು ಮುಂದಿನ ಪ್ರಧಾನಿಯೆಂದು ಬಿಂಬಿಸಿದರೆ, ಎನ್‌ಡಿಎ ಮೈತ್ರಿಕೂಟದಿಂದ ಹೊರಗಡೆ ಬರುವುದಾಗಿ ನಿತೀಶ್‌ಕುಮಾರ್ ಬೆದರಿಕೆ ಹಾಕಿದ ನಂತರ ಆರ್‌ಎಸ್‌ಎಸ್ ತನ್ನ ವರಸೆಯನ್ನು ಬದಲಿಸಿತು. ಯಾವುದೇ ವ್ಯಕ್ತಿ ಪ್ರಧಾನಿಯಾಗಲಿ ಆತ ಎನ್‌ಡಿಎ ಕೂಟದ ಭಾಗವಾಗಿರಬೇಕು. ಎನ್‌ಡಿಎ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ, ತನ್ನ ಹಿಡನ್ ಅಜೆಂಡಾ ಜಾರಿಗೊಳಿಸಲು ಒತ್ತಡ ಹೇರುವುದು ಸಂಘದ ಲೆಕ್ಕಾಚಾರ.

ವಾಸ್ತವವಾಗಿ ಗಾಂಧೀಜಿ ಹತ್ಯೆ ಮಾಡಿದ ನಂತರ ಆರ್‌ಎಸ್‌ಎಸ್ ಮೂಲೆಗುಂಪಾಗಿತ್ತು. ಅತ್ತುಕರೆದು ತನ್ನ ಮೇಲಿನ ನಿಷೇಧ ಹಿಂತೆಗೆದುಕೊಳ್ಳುವಂತೆ ಮಾಡಿತು. ನಂತರ ತನಗೊಂದು ರಾಜಕೀಯ ವೇದಿಕೆ ಅಗತ್ಯವಿದೆಯೆಂದು ಅಂದುಕೊಂಡು ಜನಸಂಘವನ್ನು ಸ್ಥಾಪಿಸಿತು. ಈ ಜನಸಂಘ ಎಪ್ಪತ್ತರ ದಶಕದವರೆಗೆ ಪ್ರಾಬಲ್ಯ ಗಳಿಸಲು ಸಾಧ್ಯವಾಗಲೇ ಇಲ್ಲ. ಆದರೆ 75ರ ತುರ್ತು ಪರಿಸ್ಥಿತಿ ನಂತರ ಕಾಂಗ್ರೆಸ್ ವಿರೋಧಿ ಶಕ್ತಿಗಳು ಒಂದೆಡೆ ಸೇರಿದಾಗ ಸಂಘಪರಿವಾರ ತನ್ನ ಚದುರಂಗದಾಟ ಆರಂಭಿಸಿತು. ಜೆಪಿ ಚಳವಳಿಯಲ್ಲಿ ನುಸುಳಿಕೊಂಡು ಹೊಸ ಜಾಗಗಳಲ್ಲಿ ತನ್ನ ಬಿಡಾರವನ್ನು ವಿಸ್ತರಿಸಿಕೊಂಡಿತು. ಅದಕ್ಕಾಗಿ ತಾನೇ ಸ್ಥಾಪಿಸಿದ ಜನಸಂಘ ಎಂಬ ಪಕ್ಷವನ್ನು ಇತರ ಕಾಂಗ್ರೆಸ್ಸೇತರ ಪಕ್ಷಗಳ ಜೊತೆ ಸೇರಿಸಿ ಜನತಾ ಪಕ್ಷ ಎಂಬ ಹೊಸ ಪಕ್ಷ ಕಟ್ಟಲು ಅದು ಒಪ್ಪಿಕೊಂಡಿತು.

80ರ ದಶಕದವರೆಗೆ ರಾಜಕೀಯವಾಗಿ ಯಾರೂ ಮುಟ್ಟಿಸಿಕೊಳ್ಳದಿದ್ದ ಆರ್‌ಎಸ್‌ಎಸ್ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಲು ಅವಕಾಶ ಮಾಡಿಕೊಟ್ಟವರು ಜಯಪ್ರಕಾಶ್‌ನಾರಾಯಣ ಮತ್ತು ಲೋಹಿಯಾವಾದಿಗಳು, ಸೋಶಿಯಲಿಸ್ಟರ ಕಾಂಗ್ರೆಸ್ ವಿರೋಧಿ ರಾಜಕಾರಣದಲ್ಲಿ ಸಂಘ ಪರಿವಾರ ಅಸ್ಪೃಶ್ಯವಾಗಿರಲಿಲ್ಲ. ಸಂಘ ಪರಿವಾರದ ಫ್ಯಾಸಿಸ್ಟ್ ಕೋಮುವಾದಿ ಸಿದ್ಧಾಂತ ಏನೇ ಇರಲಿ, ಕಾಂಗ್ರೆಸ್ ವಿರೋಧಿ ಪಕ್ಷಗಳೆಲ್ಲ ಒಂದಾಗಬೇಕೆಂಬ ತತ್ವಭ್ರಷ್ಟ ರಾಜಕೀಯ ಕೊನೆಗೆ ಸಮಾಜವಾದಿಗಳನ್ನೇ ಬಲಿ ತೆಗೆದುಕೊಂಡಿತು. 80 ಮತ್ತು 90ರ ದಶಕದ ಕಾಂಗ್ರೆಸ್ ವಿರೋಧಿ ರಾಜಕಾರಣದ ಸಂಪೂರ್ಣ ಲಾಭವಾಗಿದ್ದು ಸಂಘ ಪರಿವಾರಕ್ಕೆ.

ಜನಸಂಘ, ಸೋಶಿಯಲಿಸ್ಟ್ ಪಕ್ಷ, ಸಂಸ್ಥಾ ಕಾಂಗ್ರೆಸ್ ಮತ್ತು ಸ್ವತಂತ್ರ ಪಕ್ಷಗಳು ವಿಲೀನಗೊಂಡು ಜನತಾ ಪಕ್ಷ ಅಸ್ತಿತ್ವಕ್ಕೆ ಬಂತು. 1977ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಏಕಚಕ್ರಾಧಿಪತ್ಯ ಕೊನೆಗೊಂಡು ಕೇಂದ್ರದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬಂತು. ಮೊರಾರ್ಜಿ ದೇಸಾಯಿ ದೇಶದ ಪ್ರಧಾನಿಯಾದರು. ಆಗ ವಿಲೀನಗೊಂಡ ಪಕ್ಷಗಳು ಒಂದು ಒಪ್ಪಂದಕ್ಕೆ ಬಂದಿದ್ದವು. ತಮ್ಮ ಹಿಂದಿನ ಪಕ್ಷಗಳ ಅವಶೇಷಗಳನ್ನು ಸಮಾಧಿ ಮಾಡಿ, ಏಕೋಭಾವದಿಂದ ಒಂದಾಗಬೇಕೆಂಬ ತಿಳಿವಳಿಕೆಗೆ ಬಂದಿದ್ದವು. ಆ ಪ್ರಕಾರ, ಜನಸಂಘ ವಿಸರ್ಜಿಸಲ್ಪಟ್ಟಿತು. ಆದರೆ ಆರ್‌ಎಸ್‌ಎಸ್ ತನ್ನ ಪ್ರತ್ಯೇಕ ಅಸ್ತಿತ್ವ ಉಳಿಸಿಕೊಂಡಿತು. ವಿಸರ್ಜಿತ ಜನಸಂಘದ ವಾಜಪೇಯಿ, ಅಡ್ವಾಣಿ, ಮುರಳಿಮನೋಹರ ಜೋಷಿ ಹೊಸ ಪಕ್ಷದಲ್ಲಿ ಗುರುತಿಸಿಕೊಂಡಿದ್ದರೂ ಅವರ ಅಚಲ ನಿಷ್ಠೆ ಆರ್‌ಎಸ್‌ಎಸ್‌ಗೆ ಇತ್ತು.

ಮೊರಾರ್ಜಿ ಸಂಪುಟದಲ್ಲಿ ವಾಜಪೇಯಿ, ಅಡ್ವಾಣಿ ಮುಂತಾದವರು ಮಂತ್ರಿಗಳಾದರು. ಆಗ ಅವರ ಮೂಲಕ ಆರ್‌ಎಸ್‌ಎಸ್ ತನ್ನ ಕಾರ್ಯಸೂಚಿಯನ್ನು ಜಾರಿಗೊಳಿಸಿತು. 1977ರಲ್ಲಿ ಪಠ್ಯಕ್ರಮದಲ್ಲಿ ಕೇಸರೀಕರಣ ಪ್ರಕ್ರಿಯೆ ಆರಂಭವಾಯಿತು. ಗೋಹತ್ಯೆ ನಿಷೇಧ ಮಸೂದೆ ಜಾರಿಗೆ ತರುವ ಯತ್ನ ನಡೆಯಿತು. ಆಗ ಎಡಪಂಥೀಯ ಪಕ್ಷಗಳು ಪ್ರತಿಭಟಿಸಿದಾಗ ಜನತಾ ಪಕ್ಷದಲ್ಲಿದ್ದ ಸೋಷಲಿಸ್ಟರು ನಿದ್ರೆಯಿಂದ ಎಚ್ಚೆತ್ತರು. ತಮ್ಮ ನಿಷ್ಠೆ ಜನತಾ ಪಕ್ಷಕ್ಕೆ ಇದೆಯೋ ಇಲ್ಲವೇ ಆರ್‌ಎಸ್‌ಎಸ್‌ಗೆ ಇದೆಯೋ ಎಂಬುದನ್ನು ಜನಸಂಘದವರು ಸ್ಪಷ್ಟಪಡಿಸಬೇಕು ಎಂದು ಪಟ್ಟು ಹಿಡಿದರು. ದ್ವಿಸದಸ್ಯತ್ವ ವಿರುದ್ಧ ಬಂಡೆದ್ದರು.

ಆರ್‌ಎಸ್‌ಎಸ್ ತನ್ನ ಅಪಾಯಕಾರಿ ಅಜೆಂಡಾವನ್ನು ಅತ್ಯಂತ ನಾಜೂಕಾಗಿ ಜಾರಿಗೆ ತರುತ್ತಿರುವುದರಿಂದ

(13ನೇ ಪುಟಕ್ಕೆ)

ಶ್ರೀ ಕೃಷ್ಣ



ಕವನ

ಶ್ರೀ ಕೃಷ್ಣ
ಭಗವದ್ಗೀತೆ ಮಾತ್ರ
ಬೋಧಿಸಿದ ಎಂದು
ಭಗವದ್ಗೀತೆ ಪಠಿಸುತ್ತ
ಬೋಳು ತಲೆಯ ಮೇಲಿನ
ಕೆಂಪು ಸೀರೆಯ ಸೆರಗಿನ ಹೆಂಗಸರು
ದೇವರದೀಪದ ಬತ್ತಿ ಹೊಸೆಯುತ್ತ
ದೇವಸ್ಥಾನದಲ್ಲಿ ಕಾಲ ಕಳೆದರೆ
ಕೃಷ್ಣ ಸಿಗುವನೇ?

ಮಥುರೆಯ ಸೆರೆಮನೆಯಲ್ಲಿ
ಹುಟ್ಟಿದ ಕೃಷ್ಣ ಸ್ವತಂತ್ರನಾಗಿ
ನಂದಗೋಕುಲ ಬೆಳಗುವ ಕಂದನಾದ
ಮಂತ್ರ ಮುಗ್ಧ ಕೊಳಲ ಪ್ರೇಮದ
ಕೊರಳಿಗೆ ದನಿಯಾದ

ಪ್ರಾಣಭಯದಿಂದ ಜ್ಯೋತಿಶಾಸ್ತ್ರ ನಂಬಿ
ಶಿಶುವಧೆ ನಡೆಸುತ್ತಿದ್ದ ರಾಕ್ಷಸನಂಥ
ಮಾವ ಕಂಸನ ಮೌಢ್ಯವನ್ನು ಕೊಂದು
ಅವನ ಪಾಲಿಗೆ ಮೃತ್ಯುದೇವತೆಯೇ ಆದ

ಮನಸ್ಸರಿವ ಒಬ್ಬಳೇ ಒಬ್ಬಳು ಸಖಿ
ರಾಧೆಯ ಜೀವನ ಸಂಗಾತಿಯಾದ
ರಾಜನಾದರೂ ಸೊಕ್ಕಿನಿಂದ ಬೀಗದೆ
ತನ್ನ ಸ್ನೇಹಿತ ಕುಚೇಲನಿಗೆ
ಅವನಿಗೇ ತಿಳಿಯದಂತೆ ಸಿರಿತನ ಹಂಚಿ
ಸ್ನೇಹದ ವೈಭವವನ್ನು
ಯೋಗ್ಯವಾಗಿಸಿದ

ಇಷ್ಟೆಲ್ಲಾ ಗುಣಾಢ್ಯ ಕೃಷ್ಣ
ಅರ್ಜುನನಿಗೆ ಭಗವದ್ಗೀತೆ ಬೋಧಿಸಿದ್ದು
ಕುರುಕ್ಷೇತ್ರ ಯುದ್ಧದಲ್ಲಿ
ಅವನ ರಥದ ಸಾರಥ್ಯ ವಹಿಸಿ
ರಥಿಕನ ಆತ್ಮವಿಶ್ವಾಸ
ಕುಸಿಯದೆ ಉಳಿಸುವಂಥ
ಒಂದೇ ಒಂದು ಮಹತ್ತಿನ ಕಾರಣಕ್ಕೆ.

ಈ ಕಾರಣವನ್ನು ಮರೆಯದಿದ್ದರೆ ಮಾತ್ರ
ಬೋಳಾದ ಹೆಣ್ಣಿನ ತಲೆಯಲ್ಲಿ ಕೂದಲು
ಮೊಳೆಯುತ್ತದೆ!
ಬೋಳೆಂಬುದು ಸಂಕೇತ ಮಾತ್ರ
ಹೆಣ್ಣಿನ ಸಹಜ ಭಾವನೆಗಳ ವೃಕ್ಷದ
ಕೊಂಬೆ ರೆಂಬೆಗಳನ್ನು ಕಡಿದ ಬೋಳು.

ಗೀತೆಯ ಆತ್ಮವಿಶ್ವಾಸ
ಆಕೆಯ ಎದೆಯೊಳಗೆ ಮೊಳೆತರೆ
ಶ್ರೀ ಕೃಷ್ಣನಂಥ ಸಂಗಾತಿ ರಾಧೆಯಂಥ
ಅವಳಿಗೆ ತಪ್ಪದೆ ಸಿಕ್ಕಿ
ಅವಳ ಜೊತೆ ಸೇರಿ
ಬಾಳ ಬತ್ತಿ ಹೊತ್ತಿಸುವ
ದೀಪವಾಗುತ್ತಾನೆ

ಕಹಿಯಾದರೂ ಇದು
ಸ್ವಾತಂತ್ರ್ಯದ ಸತ್ಯ.

● ಜ್ಯೋತಿ ಗುರುಪ್ರಸಾದ್

ಸಂಪಾದಕರೊಡನೆ ಸಂವಾದ

ಜನನಾಯಕರ ಲಂಪಟತನಗಳು ಸಂಸ್ಕೃತಿ ರಕ್ಷಕರಿಗೆ ಕಾಣಲಿಲ್ಲವೇ?

ಉಮಾಶಂಕರ್ ಹೆಚ್.ಡಿ

ಪ್ರಿಯ ಸಂಪಾದಕರೇ,

ಮೊನ್ನೆಯಷ್ಟೇ ಒಂದು ಪ್ರಕರಣ ನಡೆಯಿತು. ರೈಲಿನಿಂದ ಹುಡುಗಿಯೊಬ್ಬಳನ್ನು ಕೆಳಕ್ಕೆ ತಳ್ಳಿದ ಘಟನೆ. ಇದಕ್ಕಿಂತ ಕೆಲವೇ ದಿನಗಳ ಹಿಂದೆ ಇದೇ ಮಂಡ್ಯ ಜಿಲ್ಲೆಯ ಒಂದು ಹಳ್ಳಿಯಲ್ಲಿ ಸುವರ್ಣ ಎಂಬ ಹೆಣ್ಣುಮಗಳನ್ನು ಮರ್ಯಾದೆ ಹತ್ಯೆ ಮಾಡಲಾಯಿತು. ಇಂತಹ ಅದೆಷ್ಟೋ ಘಟನೆಗಳು ದಿನನಿತ್ಯ ನಡೆಯುತ್ತಲೇ ಇವೆ. ಕೆಲವು ಹೊರಬೀಳುತ್ತವೆ, ಇನ್ನೂ ಹಲವು ಒಳಗೆಯೇ ಕೊಳೆಯುತ್ತವೆ. ಇಂದು ಮಂಗಳೂರಿನ ಹೋಂಸ್ಟೇ ಮೇಲಿನ ದಾಳಿಯನ್ನು ಕುರಿತು ವಾದ ವಿವಾದಗಳು ದಿನನಿತ್ಯ ನಡೆಯುತ್ತಿವೆ. ದಾಳಿ ಮಾಡಿದ್ದಕ್ಕೆ ಹತ್ತು ಹಲವು ಕಾರಣಗಳ ಮೂಲಕ ಕೆಲವರು ಮಾಡಿದ್ದು ಸರಿ ಎಂದರೆ ಇನ್ನೂ ಕೆಲವರು ಇದು ಗೂಂಡಾ ಸಂಸ್ಕೃತಿ ಆದ್ದರಿಂದ ಇದು ತಪ್ಪು ಎಂದು ಹೇಳುತ್ತಿದ್ದಾರೆ. ಇದು ಇಷ್ಟಕ್ಕೇ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿಲ್ಲ. ಬದಲಾಗಿ ಇಲ್ಲಿ 'ಸಂಸ್ಕೃತಿ'ಯ ಪ್ರಶ್ನೆ ಪದೇ ಪದೇ ಬರುತ್ತಿದೆ. ಇದು ಬಹಳ ಮುಖ್ಯವಾಗಿ ಚರ್ಚಿತವಾಗಬೇಕಿದೆ.

ಸಂಸ್ಕೃತಿಯ ಹೆಸರನ್ನು ಮುಂದಿಟ್ಟುಕೊಂಡು ದೇಶದ ಆಗುಹೋಗುಗಳ ಬಗ್ಗೆ ಮಾತನಾಡುವವರು ಯಾವ ಮತ್ತು ಯಾರ ಸಂಸ್ಕೃತಿಯ ಆರಾಧಕರಾಗಿದ್ದಾರೆ? ಎಂಬುದು ಬಹಳ ಕಾಡಿಸುವ ಪ್ರಶ್ನೆಯಾಗಿದೆ. ಇಂದು ಮಂಗಳೂರಿನ ಮೇಲಿನ ದಾಳಿಯ ಹಿಂದೆ ಸಂಸ್ಕೃತಿಯ ಪ್ರಜ್ಞೆ ಅಡಕವಾಗಿತ್ತು ಎನ್ನುವ ಸಂಸ್ಕೃತಿವಂತರು ಹೊಡೆಯುವುದನ್ನು ಸಮರ್ಥಿಸಿಕೊಳ್ಳುವುದಾದರೂ ಹೇಗೆ? ದೇಶದ ಯುವಶಕ್ತಿ ಅಡ್ಡದಾರಿ ಹಿಡಿಯುತ್ತಿದೆ ಎನ್ನುವ ಇವರಿಗೆ ಅಡ್ಡದಾರಿ ತಪ್ಪಿಸಲು ಹೊಡೆಯುವುದು ಬಿಟ್ಟು ಬೇರೆ ಮಾರ್ಗವೇ ಇರಲಿಲ್ಲವೇ? ಅಷ್ಟಕ್ಕೂ ಈ ಹೊಡೆದವರಿಗೆ ಮತ್ತು ಅದನ್ನು ಸಂಸ್ಕೃತಿ ಹೆಸರಿನಲ್ಲಿ ಸಮರ್ಥಿಸುವವರಿಗೆ ಈ ದೇಶದ ಸಂಸ್ಕೃತಿಯ ಬಗ್ಗೆ ಅಷ್ಟು ಕಾಳಜಿ ಇದೆಯೇ? ಇದ್ದರೆ ಅದು ಯಾರ ಪರವಾದದ್ದು? ಯಾವ ನಿಲುವುಗಳಿಗೆ ಬದ್ಧವಾದದ್ದು? ಇದೂ ಕೂಡ ಮುಖ್ಯವಾಗಬೇಕು.

ಮೇಲಿನ ಚರ್ಚೆಗೆ ಒತ್ತುಕೊಡುವ ಮುಖ್ಯಉದ್ದೇಶ 2003ರಲ್ಲಿ ತಮಿಳುನಾಡಿನ ತಿರುಚಿ ಜಿಲ್ಲೆಯ ತಿಣ್ಣಿಯಾಮ್ ಎಂಬ ಹಳ್ಳಿಯಲ್ಲಿ ಒಬಿಸಿ ಸಮುದಾಯಕ್ಕೆ ಸೇರಿದ ದೇವರ್ ಜಾತಿಯವರು ದಲಿತರಿಬ್ಬರಿಗೆ ಒಣಗಿದ ಮಲ ತಿನ್ನಿಸಿದರು. ಇದಕ್ಕೂ ಹಿಂದೆ 1986 ಮತ್ತು 1994ರಲ್ಲಿ ತತ್ತೂರು ಮತ್ತು ಬೆಂಡಿಗೇರಿಯಲ್ಲಿ ಲಿಂಗಾಯತ ಭೂಮಾಲೀಕರು ಮತ್ತು ರೆಡ್ಡಿ ಭೂಮಾಲೀಕರು ದಲಿತರಿಗೆ ಮಲ ತಿನ್ನಿಸಿದರು. ಈ ಮಲ ತಿನ್ನಿಸುವುದು ಮನುಷ್ಯಕುಲದ ಅತ್ಯಂತ ಹೇಯಕೃತ್ಯ. ಇದರ ಬಗ್ಗೆಯೇ ಚಕಾರ ಎತ್ತದ ಇವರಿಗೆ ಹೋಂಸ್ಟೇನಲ್ಲಿ ಬರ್ತಡೇ ಪಾರ್ಟಿ ಆಚರಿಸುವುದು, ಪಬ್‌ನಲ್ಲಿ ಕುಡಿಯುವುದು ಅಸಂಸ್ಕೃತಿಯಾಗಿ ಕಾಣಿಸುತ್ತದೆ. ಅದೂ ಹೋಗಲಿ ಇದು ಹಳೆಯ ಘಟನೆ ಎಂದು ತಿರಸ್ಕರಿಸುವುದಾದರೆ ದಿನನಿತ್ಯ ಮ್ಯಾನ್ ಹೋಲ್‌ಗಳಲ್ಲಿ ನರಕ ಅನುಭವಿಸುತ್ತಿರುವ, ಮಲ ಸ್ವಚ್ಚಗೊಳಿಸಲೋಗಿ ಉಸಿರುಗಟ್ಟಿ ಸತ್ತವರ, ತಲೆಯ ಮೇಲೆ ಮಲ ಹೊರುತ್ತಿರುವವರ, ವ್ಯವಸ್ಥೆಯ ಹುನ್ನಾರ ಬಯಲು ಮಾಡಲು ತಲೆಯ ಮೇಲೆ ಮಲ ಸುರಿದುಕೊಂಡವರನ್ನು ಕಂಡಾಗ ಇವರ ಈ ಸಂಸ್ಕೃತಿಯ ಚಿಂತನೆ ಏನು? ಆಗ ಇವರ ಸಂಸ್ಕೃತಿ ಹಾಳಾಗಲಿಲ್ಲವೆ? ಅಥವಾ ಇದೂ ಕೂಡ ಇವರ ಶ್ರೇಷ್ಠ ಸಂಸ್ಕೃತಿಯ ಒಂದು ಭಾಗವೋ?

ಭಾರತದ ರಾಷ್ಟ್ರೀಯ ಕ್ರೈಮ್ ರೆಕಾರ್ಡ್ ಬ್ಯೂರೋದ ವಾರ್ಷಿಕ ವರದಿ ಈ ವರ್ಷ 2012 ದೇಶಾದ್ಯಂತ ಮಹಿಳೆಯರ ಮೇಲೆ 2,28,650 ಅಪರಾಧಗಳು ಎಸಗಲ್ಪಟ್ಟಿವೆ ಎಂಬ ವರದಿ ನೀಡಿದೆ. ನಗರ ಮತ್ತು ಹಳ್ಳಿ ಹಳ್ಳಿಗಳಲ್ಲಿ ನಡೆಯುವ, ನಡೆದಿರುವ ದಲಿತರ ಕೊಲೆಗಳು, ಅತ್ಯಾಚಾರ, ಅವಮಾನ, ದೌರ್ಜನ್ಯಗಳನ್ನು ಬರೆದರೆ ಒಂದು ಬೃಹತ್ ಪುಸ್ತಕವೇ ಹೊರಬರಬಹುದು. ಇವುಗಳನ್ನು ನೋಡಿ ಕೇಳಿ ಈ ಸಂಸ್ಕೃತಿವಂತರು ಸುಮ್ಮನಿರಲು ಕಾರಣವೇನು? 2011 ಆಗಸ್ಟ್ 13 ಉಲ್ಲಾಳ ಮಹಾರಾಣಿ ಪಾಮ್ಸ್‌ನ ಪಬ್ ಒಂದರ ಮೇಲೆ ನಡೆದ ದಾಳಿ, ಯುವತಿಯರ ಮೇಲಿನ ಹಲ್ಲೆಯನ್ನು ಸಂಸ್ಕೃತಿ ಹೆಸರಿನಲ್ಲಿ ಸಮರ್ಥಿಸಿಕೊಳ್ಳುವುದಾದರೆ..... 2008 ಸೆಪ್ಟೆಂಬರ್ 14 ದಕ್ಷಿಣ ಕನ್ನಡ ಜಿಲ್ಲೆಯ ಚರ್ಚ್ ಹಾಗೂ ಕ್ರೈಸ್ತ್ ಆರಾಧನಾಲಯಗಳ ಮೇಲಿನ ಸಂಘಟಿತ ದಾಳಿ, 2009 ಜನವರಿ 24 ಮಂಗಳೂರಿನ ಕಲ್ಮಠದ ಅಮ್ನೇಷಿಅ ಪಬ್ ಮೇಲಿನ ದಾಳಿ, ಯುವತಿಯರ ಮೇಲೆ ಹಲ್ಲೆ. ಕರ್ನಾಟಕದ ಹಲವು ಕಡೆ ತಮಟೆ ಬಾರಿಸದ ಕಾರಣಕ್ಕೆ ಅಸ್ಪೃಶ್ಯರ ಮೇಲಿನ ತೀವ್ರತರ ಹಲ್ಲೆಗಳು, ಒಗ್ಗಟ್ಟಿನ ಹಳ್ಳಿ ಎಂದು ಕೊಂಡಾಡುವ ಹಳ್ಳಿಗಳಲ್ಲಿ ಸಂಪ್ರದಾಯವಾದಿಗಳ ಮುಖಕ್ಕೆ ಬಡಿದಂತೆ ನಡೆಯುತ್ತಿರುವ ದಲಿತರ ಮೇಲಿನ ಬಹಿಷ್ಕಾರಗಳು, ಜಾತಿ ಮೀರಿದ ಕಾರಣಕ್ಕೆ ನಡೆಯುತ್ತಿರುವ ಮರ್ಯಾದಾ ಹತ್ಯೆ, ಅಂತರ್ಜಾತಿ ವಿವಾಹ ನೆಪವಾಗಿಟ್ಟುಕೊಂಡು ನಡೆಯುತ್ತಿರುವ ಕೊಲೆಗಳು, ಕಂಬಾಲಪಲ್ಲಿಯಂತಹ ಸಜೀವ ದಹನದ ಕೃತ್ಯಗಳು, ಮಹಾರಾಷ್ಟ್ರದ ಖೈರ್ಲಾಂಜಿಯಲ್ಲಿ ನಡೆದ ದಲಿತ ಹೆಣ್ಣು ಮಗಳ ಮೇಲಿನ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆಗಳು ಇನ್ನೂ ಮುಂತಾದ ಅಮಾನವೀಯ ಘಟನೆಗಳನ್ನು ಸಂಸ್ಕೃತಿ ಹೆಸರಿನಲ್ಲಿ ಸಮರ್ಥಿಸಿಕೊಂಡಂತೆಯೇ ಸರಿ.

ಹೋಗಲಿ ತಾವೇನೋ ಮಹಾನ್ ದೇಶಭಕ್ತರಂತೆ ಪೋಸು ಕೊಡುವ ಇವರಿಗೆ ಸದನದಲ್ಲಿ ನಡೆದ ಬ್ಲೂಫಿಂ ಕತೆ, ಪತ್ರಿಕೆಗಳಲ್ಲಿ ಜಾಹೀರಾತಿನಂತೆ ಮಂತ್ರಿಯೊಬ್ಬರ ಪ್ರೇಮ ಪ್ರಸಂಗಗಳು ಬಯಲಾದಾಗ, ಮತ್ತೊಬ್ಬರ ಹೆಡಂತಿಯ ಜೊತೆ ಅಸಹ್ಯಕರವಾಗಿ ನಡೆದುಕೊಂಡ ಚುನಾಯಿತ ಪ್ರತಿನಿಧಿಯನ್ನು ಕಂಡಾಗ, ಕೋಟಿ ಕೋಟಿ ಹಗರಣಗಳಲ್ಲಿ ಸಿಕ್ಕಿಬಿದ್ದ ಜನನಾಯಕರನ್ನು ಕಂಡಾಗ, ವಿಧಾನಸೌಧಕ್ಕೆ ಮಾಟ ಮಂತ್ರದ ಗೆರೆಗಳು ತಲುಪಿದಾಗ ಇವರ ಸಂಸ್ಕೃತಿಪ್ರಜ್ಞೆ ಎಲ್ಲಿ ಹೋಗಿತ್ತು? ಇವರು ಮತ್ತು ಇವರಿಗೆ ಬೇಕಾದವರು ಯಾವ ರೀತಿ ತಪ್ಪುಗಳನ್ನು ಮಾಡಿದರೂ ಏನೂ ಆಗುವುದಿಲ್ಲ. ಇವರು ಮಾಡುವ ಎಲ್ಲಾ ಅನೈತಿಕ ಕೆಲಸಗಳು ಈ ಸಂಸ್ಕೃತಿ ಚಿಂತಕರಿಗೆ ಸರಿಯಾಗಿ ಕಾಣುವುದರ ಹಿಂದೆ ಯಾವ ತತ್ವಗಳು ಅಡಗಿಕೊಂಡಿವೆ. ಒಂದು ವೇಳೆ ಇವರಿಗೆ ಎಲ್ಲಾ ತಪ್ಪುಗಳು ಸಮನಾಗಿ ಕಂಡರೆ ಹೋಂಸ್ಟೇಯಲ್ಲಿನ ದಾಳಿಗೆ ಮುಂದಾದಂತೆ ಇವರುಗಳ ಮೇಲಿನ ದಾಳಿಗೆ ಮುಂದಾಗಲಿಲ್ಲವೇಕೆ? ಅಂದರೆ ಇವರಿಗೆ ಬೇಕಾದವರಿಗೆ

ತಾವೇನೋ ಮಹಾನ್ ದೇಶಭಕ್ತರಂತೆ ಪೋಸು ಕೊಡುವ ಇವರಿಗೆ ಸದನದಲ್ಲಿ ನಡೆದ ಬ್ಲೂಫಿಂ ಕತೆ, ಪತ್ರಿಕೆಗಳಲ್ಲಿ ಜಾಹೀರಾತಿನಂತೆ ಮಂತ್ರಿಯೊಬ್ಬರ ಪ್ರೇಮ ಪ್ರಸಂಗಗಳು ಬಯಲಾದಾಗ, ಮತ್ತೊಬ್ಬರ ಹೆಡಂತಿಯ ಜೊತೆ ಅಸಹ್ಯಕರವಾಗಿ ನಡೆದುಕೊಂಡ ಚುನಾಯಿತ ಪ್ರತಿನಿಧಿಯನ್ನು ಕಂಡಾಗ, ಕೋಟಿ ಕೋಟಿ ಹಗರಣಗಳಲ್ಲಿ ಸಿಕ್ಕಿಬಿದ್ದ ಜನನಾಯಕರನ್ನು ಕಂಡಾಗ, ವಿಧಾನಸೌಧಕ್ಕೆ ಮಾಟ ಮಂತ್ರದ ಗೆರೆಗಳು ತಲುಪಿದಾಗ ಇವರ ಸಂಸ್ಕೃತಿಪ್ರಜ್ಞೆ ಎಲ್ಲಿ ಹೋಗಿತ್ತು?

ಒಂದು ನ್ಯಾಯ, ಬೇಡವಾದವರಿಗೆ ಮತ್ತೊಂದು ನ್ಯಾಯ. ಇದು ಯಾವ ಸಂಸ್ಕೃತಿ. ಇದನ್ನು ಸಂಸ್ಕೃತಿ ಎನ್ನುವುದಾದರೆ ಇದಕ್ಕಿಂತ ಜೀವ ವಿರೋಧಿ ಸಂಸ್ಕೃತಿ ಮತ್ತೊಂದು ಇರಲಾರದು. ನಿಜಕ್ಕು ಸಂಸ್ಕೃತಿ ಬಗ್ಗೆ ಚಿಂತಿಸುವವರು ಮೊದಲು ಈ ದೇಶದ ಮಲ ಹೊರುವವರ ಬಗ್ಗೆ ಚಿಂತಿಸಲಿ, ದಿನ ನಿತ್ಯ ಕೊಲೆಗಳಾಗುತ್ತಿರುವ, ಬದುಕು ಬರಿದಾಗುತ್ತಿರುವ ಬಡವರ ಬಗ್ಗೆ ಚಿಂತಿಸಲಿ.

ಹೆಣ್ಣುಮಕ್ಕಳು ದಿನನಿತ್ಯ ಅನುಭವಿಸುತ್ತಿರುವ ಲೈಂಗಿಕ ಶೋಷಣೆಗಳನ್ನು ವಿರೋಧಿಸದವರು ಈ ದೇಶದ ಬಗ್ಗೆ ಮಾತನಾಡುವ ಮತ್ತು ಹೆಣ್ಣನ್ನು ಮಾತೆಯನ್ನಾಗಿ ನೋಡುತ್ತೇವೆನ್ನುವ ಬೊಗಳೆ ಮಾತುಗಳನ್ನು ಬಿಡಬೇಕು. ದೇವದಾಸಿಯ ನೆಪದಲ್ಲಿ ಏನೂ ಅರಿಯದ ಹೆಣ್ಣುಮಕ್ಕಳನ್ನು ಸೂಳೆಯರಾಗಿಸುವವರ ವಿರುದ್ಧ, ಬೆತ್ತಲೆ ಪದ್ಧತಿಯನ್ನು ಪೋಷಿಸುತ್ತಿರುವವರ ವಿರುದ್ಧ, ಇವತ್ತಿಗೂ ಅಲ್ಲಲ್ಲಿ ಕಣ್ಮರೆಯಾಗುತ್ತಿರುವ ಹೆಣ್ಣುಮಕ್ಕಳ ಸ್ಥಿತಿಗತಿಯ ವಿರುದ್ಧ, ವರದಕ್ಷಿಣೆಗಾಗಿ ಕೊಲೆಗಳಾಗುತ್ತಿರುವುದರ ವಿರುದ್ಧ ಚಕಾರವೆತ್ತದ ಯಾರೇ ಆದರೂ ಹೆಣ್ಣಿನ ಸ್ಥಾನಮಾನ ಕುರಿತು ಮಾತನಾಡುವ ನೈತಿಕ ಹಕ್ಕು ಹೊಂದಿರುವುದಿಲ್ಲ ಮತ್ತು ವಸ್ತ್ರ ಸಂಹಿತೆಯನ್ನು ಜಾರಿಗೆತರುವ ಅನಿಷ್ಠ ಪದ್ಧತಿಯನ್ನು ಕೈಗೊಳ್ಳುವುದಿಲ್ಲ. ಹಿಂದೆ ರಾಷ್ಟ್ರೀಯ ಮಟ್ಟದಲ್ಲಿ ಕೈಗೊಂಡ ಒಂದು ಸಮೀಕ್ಷೆಯು ತನ್ನ ವರದಿಯಲ್ಲಿ ಪ್ರತಿ ಗಂಟೆಗೆ ಇಬ್ಬರು ದಲಿತರು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಪ್ರತಿದಿನ ಮೂರು ಮಹಿಳೆಯರ ಮೇಲೆ ಅತ್ಯಾಚಾರಗಳಾಗುತ್ತಿವೆ. ಹಾಗೆಯೇ ಪ್ರತಿದಿನ ಮೂರು ದಲಿತರ ಕಗ್ಗೊಲೆ ಮತ್ತು ಎರಡು ದಲಿತ ಮನೆಗಳು ಭಸ್ಮವಾಗುತ್ತಿವೆ ಎಂದು ಹೇಳಿದೆ. ಇವೆಲ್ಲಾ ಯಾವ ಸಂಸ್ಕೃತಿಯ ಹೆಸರಿನಲ್ಲಿ ನಡೆಯುತ್ತಿವೆ. ಇವುಗಳ ವಿರುದ್ಧ ನಾಗರಿಕರೆನಿಸಿಕೊಂಡವರು ತಮ್ಮ ಧ್ವನಿಯನ್ನು ಎತ್ತಬೇಕು. ಆದರೆ ಇವೆಲ್ಲಾ ಚರ್ಚೆಗೊಳಗಾಗದಂತೆ ತಡೆಯುವ ಉದ್ದೇಶದಿಂದ ಹೋಂಸ್ಟೇಯಂತಹ ದಾಳಿಗೆ ಕುಮ್ಮಕ್ಕು ನೀಡಲಾಗುತ್ತಿದೆ. ಇಂತಹ ನೀಚ ಸಂಸ್ಕೃತಿಯ ಬೇರುಗಳು ಭೂಮಿಯ ಬಹಳ ಆಳದವರೆಗೆ ಇಳಿದುಬಿಟ್ಟಿವೆ. ಇವುಗಳನ್ನು ಕಿತ್ತೊಗೆಯದ ಹೊರತು ಅಸ್ಪೃಶ್ಯರಾಗಲೀ, ಮಹಿಳೆಯರಾಗಲೀ ಸ್ವತಂತ್ರದಿಂದ ಬದುಕಲು ಸಾಧ್ಯವಾಗುವುದಿಲ್ಲ.

ಬಹುಶಃ ಸಂಸ್ಕೃತಿಯ ಚೌಕಟ್ಟೇ ಇಂಡಿಯಾದಲ್ಲಿ ಈ ರೀತಿ ರೂಪುಗೊಂಡಿರ ಬಹುದೆನಿಸುತ್ತದೆ. ಏಕೆಂದರೆ ಇಲ್ಲಿ ಬಹುಸಂಸ್ಕೃತಿ ಇದೆ ಎನ್ನುತ್ತಲೇ ಶ್ರೇಣೀಕೃತ ಸಾಮಾಜಿಕ ಸಾಂಸ್ಕೃತಿಕ ವ್ಯವಸ್ಥೆಯನ್ನು ಕಾಪಾಡಿಕೊಂಡುಬಂದ ದೇಶ ನಮ್ಮದು. ಇಲ್ಲಿ ಒಂದು ಸಂಸ್ಕೃತಿ ಮತ್ತೊಂದು ಸಂಸ್ಕೃತಿಯನ್ನು ತುಳಿದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಯಾವ ಸಂಸ್ಕೃತಿಗಳು ದಮನಕ್ಕೊಳಗಾದವೋ ಅವುಗಳಿಗೇ ತಮ್ಮ ಬಗ್ಗೆ ಕೀಳರಿಮೆ ಬರುವಂತೆ ಮಾಡಿ, ತಮಗೆ ಬೇಕಾದಂತೆ ಅವುಗಳನ್ನು ಮೇಲ್ ಸಂಸ್ಕೃತಿಗಳು ಬಳಸಿಕೊಳ್ಳುತ್ತಿದ್ದವು. ಇದು ಈಗಲೂ ನಡೆಯುತ್ತಿದೆ. ಹೀಗೆ ತಮ್ಮ ತೆವಲು ತೀರಿಸಿಕೊಳ್ಳುತ್ತಿದ್ದ ಮೇಲ್ ಸಂಸ್ಕೃತಿಗಳು ಬಿತ್ತಿದ ಹೆಗ್ಗುರುತಿನ ಛಾಯೆ ಈ ಮಂಗಳೂರಿನ ದಾಳಿಯಲ್ಲಿ ಅಡಗಿ ಕುಳಿತಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ತಂದ ಕಳಂಕ. ಸಂವಿಧಾನಕ್ಕೆ ಮಾಡಿದ ಅಪಮಾನ. ಇದು ಬುಡ ಸಮೇತ ಬದಲಾಗಬೇಕಾದರೆ ಈ ಮೇಲ್ ಸಂಸ್ಕೃತಿ ಎನ್ನುವ ಅಮಾನವೀಯ ಧೋರಣೆಗಳು ನಾಶವಾಗಲೇಬೇಕು. ಸಂಸ್ಕೃತಿ ವಿನಾಶ ಎನ್ನುವುದು ಅಷ್ಟು ಸುಲಭವಲ್ಲ. ಆದರೆ ಪರಿವರ್ತನೆ ಮಾಡುವುದು ಸಧ್ಯಕ್ಕಿರುವ ಮಾರ್ಗೋಪಾಯ. ಈ ಪರಿವರ್ತನೆ ಪ್ರಸ್ತುತ ನೆಲೆಗಳಿಂದಲೇ ರೂಪುಗೊಳ್ಳಬೇಕು. ಇದು ಸಮಷ್ಟಿ ಪ್ರಜ್ಞೆಯಿಂದ ಮಾತ್ರ ಸಾಧ್ಯ. ಈ ಪ್ರಜ್ಞೆ ನಿರಂತರ ಚಿಂತನೆ ಮತ್ತು ಚಳವಳಿಗಳಿಂದ ರೂಪುಗೊಳ್ಳಬೇಕಿದೆ. ಇದಕ್ಕೆ ಎಲ್ಲಾ ಪ್ರಗತಿಪರ ಚಳವಳಿಗಳು ಮತ್ತು ಹೋರಾಟಗಾರರು ಮುಂದಾಗಬೇಕು. ಈ ನಿಟ್ಟಿನಲ್ಲಿ ಯೋಚಿಸುವುದು ಅತ್ಯಗತ್ಯವೆನಿಸುತ್ತದೆ. ■

(10ನೇ ಪುಟದಿಂದ)

ನಿತೀಶ್‌ಕುಮಾರ್ ದಾರಿ ತಪ್ಪದಿರಲಿ

ರೊಚ್ಚಿಗೆದ್ದ ಹಿರಿಯ ಲೋಹಿಯಾವಾದಿ ಮಧು ಲಿಮಯೆ ಸೋಷಲಿಸ್ಟರು ಸರ್ಕಾರದಿಂದ ಹೊರಬರಬೇಕು ಎಂದು ಕರೆ ನೀಡಿದರು. ಆಗ ಜಾರ್ಜ್ ಫರ್ನಾಂಡಿಸ್ ಕೊಂಚ ಹಿಂದೇಟು ಹಾಕಿದರು. ನಂತರ ಹೊರಬರಬೇಕಾಯಿತು. ಕಾಂಗ್ರೆಸ್ಸೇತರ ರಾಜಕಾರಣದಲ್ಲಿ ಜನಸಂಘವನ್ನು ಸೇರಿಸಿಕೊಂಡು ತಪ್ಪು ಮಾಡಿದೆವು ಎಂದು ಮಧು ಲಿಮಯೆ ಪಶ್ಚಾತಾಪ ಪಟ್ಟರು. ಇದೆಲ್ಲದರ ಪರಿಣಾಮವಾಗಿ ಮೊರಾರ್ಜಿ ಸರ್ಕಾರ ಪತನಗೊಂಡಿತು. ಆಗ ಜನತಾ ಪಕ್ಷದಲ್ಲಿದ್ದ ಜನಸಂಘದ ಗುಂಪು ಹೊರಗೆ ಬಂದು ಭಾರತೀಯ ಜನತಾ ಪಕ್ಷ ಎಂಬ ಹೊಸ ಪಕ್ಷವನ್ನು ಕಟ್ಟಿಕೊಂಡಿತು.

ಕಾಂಗ್ರೆಸ್ಸೇತರ ಪಕ್ಷಗಳ ವಿಲೀನದ ಪರಿಣಾಮವಾಗಿ ಸೋಷಲಿಸ್ಟ್ ಪಕ್ಷ ನಿರ್ನಾಮವಾಯಿತು. ಆ ಪಕ್ಷದ ಅಳಿದುಳಿದ ನಾಯಕರು ಸಂಸ್ಥಾ ಕಾಂಗ್ರೆಸ್ ಜೊತೆ ಸೇರಿ ಜನತಾ ಪಕ್ಷದಲ್ಲೇ ಉಳಿದರು. ಆದರೆ ಈ ಒಟ್ಟು ರಾಜಕೀಯ ಪ್ರಕ್ರಿಯೆಯಿಂದ ಲಾಭವಾಗಿದ್ದು ಸಂಘಪರಿವಾರಕ್ಕೆ. ಜನಸಂಘದ ಕಾಲದಲ್ಲಿ ಲೋಕಸಭೆಯಲ್ಲಿ ಕೇವಲ 20 ಸದಸ್ಯರನ್ನು ಹೊಂದಿರದ ಪಕ್ಷದ ಬಲ ಒಮ್ಮಿಂದೊಮ್ಮೆಲೇ ನೂರರ ಹತ್ತಿರ ಬಂದು ತಲುಪಿತು. ಮುಂದೆ ವಾಜಪೇಯಿ ಪ್ರಧಾನಿಯಾಗಲು ದಾರಿ ಮಾಡಿಕೊಟ್ಟಿತು.

ಈಗ ಮತ್ತೆ ಅಂಥದ್ದೇ ಸನ್ನಿವೇಶ ನಿರ್ಮಾಣವಾಗಿದೆ. ಬಿಜೆಪಿ ಮುಂಚಿನ ಪ್ರಾಬಲ್ಯ ಉಳಿಸಿಕೊಂಡಿಲ್ಲ. ರಾಮಜನ್ಮಭೂಮಿಯಂತಹ ಪ್ರಶ್ನೆಗಳು ಸವಕಲು ನಾಣ್ಯಗಳಾಗಿವೆ. ಅಣ್ಣಾ ಹಜಾರೆಯನ್ನು ಬಳಸಿಕೊಂಡು ಮತ್ತೆ ಚಲಾವಣೆಗೆ ಬರುವ ಯತ್ನ ವಿಫಲಗೊಂಡಿತು. ನಂತರ ಯೋಗಗುರು ಬಾಬಾ ರಾಮದೇವ್ ಅಂಥವರನ್ನು ಮುಂದೆ ಮಾಡಿ, ತನ್ನ ಬೇಳೆ ಬೇಯಿಸಿಕೊಳ್ಳಲು ಹೊರಟಿತು. ಇಂಥ ಸಂದರ್ಭದಲ್ಲಿ ನಿತೀಶ್‌ಕುಮಾರ್ ಅವರಂತಹ ಸಮಾಜವಾದಿ ಹಿನ್ನೆಲೆಯ ರಾಜಕಾರಣಿಯ ಮುಂದಿನ ದಾರಿ ಯಾವುದು ಎಂಬುದು ಸ್ಪಷ್ಟವಾಗಬೇಕಾಗಿದೆ.

ನರೇಂದ್ರ ಮೋದಿಯವರು ಪ್ರಧಾನಿಯಾಗುವುದನ್ನು ವಿರೋಧಿಸುವ ನಿತೀಶ್‌ಕುಮಾರ್ ಅವರು ಇನ್ನೊಂದೆಡೆ ಆರ್‌ಎಸ್‌ಎಸ್ ಕೃಪಾಪೋಷಿತ ಬಾಬಾರಾಮದೇವ್ ನಿರಶನ ಪ್ರಹಸನಕ್ಕೆ ಬೆಂಬಲ ನೀಡುತ್ತಾರೆ. ಮುಂಚೆ ಭ್ರಷ್ಟಾಚಾರ ಮತ್ತು ಕಪ್ಪುಹಣದ ವಿರುದ್ಧವೆಂದು ಆರಂಭವಾದ ರಾಮದೇವ್ ಚಳವಳಿ ರಾಜಕೀಯ ನಿಲುವು ಈಗ ಸ್ಪಷ್ಟವಾಗಿದೆ. ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವನ್ನು ತೊಲಗಿಸಿ ಬಿಜೆಪಿಯನ್ನು ಅಧಿಕಾರಕ್ಕೆ ತರುವುದು ಅವರ ಉದ್ದೇಶವಾಗಿದೆ.

ಭ್ರಷ್ಟಾಚಾರದ ವಿರುದ್ಧ ಹಾರಾಡುವ ಬಾಬಾರಾಮದೇವ್ ಕರ್ನಾಟಕದ ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಮಾತನಾಡುವುದಿಲ್ಲ. ಗುಜರಾತ್‌ನಲ್ಲಿ ನಡೆದ ಅಲ್ಪಸಂಖ್ಯಾತರ ಹತ್ಯಾಕಾಂಡದ ಬಗ್ಗೆ ಆತಂಕಪಡುವುದಿಲ್ಲ. ಇತ್ತೀಚೆಗೆ ಗುಜರಾತ್‌ಗೆ ಹೋಗಿದ್ದ ಈ ಯೋಗ ಗುರು ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತ ನರೇಂದ್ರ ಮೋದಿ ಆಡಳಿತವನ್ನು ಹಾಡಿಹೊಗಳಿದರು. ಇಲ್ಲಿ ಭ್ರಷ್ಟಾಚಾರವನ್ನು ನಾನು ಕಾಣಲಿಲ್ಲ ಎಂದರು. ಇಂಥ ವ್ಯಕ್ತಿಯ ಜೊತೆಗೆ ನಿತೀಶ್‌ಕುಮಾರ್‌ರ ಸಂಯುಕ್ತ ಜನತಾದಳ ನಿರಶನದಲ್ಲಿ ಪಾಲ್ಗೊಂಡಿತು.

ಸಂಘಪರಿವಾರ ದೇಶದ ಅಧಿಕಾರಸೂತ್ರವನ್ನು ಸ್ವಾಧೀನಪಡಿಸಿಕೊಳ್ಳಲು ಬಲೆ ಬೀಸಿರುವ ಅಪಾಯಕಾರಿ ಸನ್ನಿವೇಶದಲ್ಲಿ ಜೆಪಿ ಚಳವಳಿಯಿಂದ ಬಂದಿರುವ ನಿತೀಶ್‌ಕುಮಾರ್ ತನ್ನ ಲೋಹಿಯಾವಾದಿ ಪೂರ್ವಜರು ಮಾಡಿರುವ ತಪ್ಪನ್ನು ಮಾಡಬಾರದು. ಸೋಷಲಿಸ್ಟರು ಆಗ ಮಾಡಿದ ತಪ್ಪಿನಿಂದ ಆರ್‌ಎಸ್‌ಎಸ್‌ನಂತರ ಫ್ಯಾಸಿಸ್ಟ್ ಶಕ್ತಿ ಈಗ ಭಯಾನಕ ಸ್ವರೂಪ ತಾಳಿ ನಿಂತಿದೆ. ಇಂಥ ಸನ್ನಿವೇಶದಲ್ಲಿ ಪ್ರಧಾನಿ ಸ್ಥಾನ ದೊರೆತರೂ ಸಂಘ ಪರಿವಾರದ ಖೆಡ್ಡಾಕ್ಕೆ ನಿತೀಶ್‌ಕುಮಾರ್ ಬೀಳಬಾರದು.

ನರೇಂದ್ರಮೋದಿಯವರ ಕೋಮುವಾದಿ ರಾಜಕಾರಣವನ್ನು ವಿರೋಧಿಸಿ ಇನ್ನೊಂದೆಡೆ ಬಿಜೆಪಿ ಮೈತ್ರಿಕೂಟದಲ್ಲಿ ಮುಂದುವರೆಯುವುದರಲ್ಲಿ ಅರ್ಥವಿಲ್ಲ. ಮೋದಿ ಜಾರಿಗೆ ತರುತ್ತಿರುವುದು ಆರ್‌ಎಸ್‌ಎಸ್‌ನ ಕಾರ್ಯಸೂಚಿಯನ್ನು ಇದಕ್ಕಾಗಿ ವೈಯಕ್ತಿಕವಾಗಿ ಮೋದಿಯನ್ನು ದ್ವೇಷಿಸಿದರೆ ಪ್ರಯೋಜನವಿಲ್ಲ. ಇಡೀ ಸಂಘಪರಿವಾರವನ್ನೇ ದೇಶದ ರಾಜಕಾರಣದಿಂದ ದೂರಪಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಿತೀಶ್‌ಕುಮಾರ್ ಮಹತ್ವದ ಪಾತ್ರವಹಿಸಬೇಕಾಗಿದೆ. ಸಂಘಪರಿವಾರದ ಜೊತೆಗೆ ಸೇರಿ ಜಾತ್ಯತೀತನಾಗಿರಲು ಸಾಧ್ಯವಿಲ್ಲ ಎಂಬುದನ್ನು ಅವರು ಮನಗಾಣಬೇಕಾಗಿದೆ. ■

ಸಮಾಜದ ಸೃಷ್ಟಿಯಲ್ಲಿ ಗಂಡಿನಷ್ಟೇ ಹೆಣ್ಣಿಗೆ ಪ್ರಧಾನ ಪಾತ್ರವಿದೆ ಎಂದು ನಮ್ಮ ಸಮಾಜಕ್ಕೆ ತಿಳಿದಿದ್ದರೂ ಸ್ತ್ರೀಪರವಾದ ಕಾಳಜಿ ನಮಗಿನ್ನೂ ಬಂದಿಲ್ಲವೇಕೆ ಎಂಬುದು ನಮ್ಮನ್ನು ಕಾಡುವ ಪ್ರಶ್ನೆ. ಒಂಟಿ ಹೆಂಗಸು ತನ್ನ ಬದುಕು ರೂಪಿಸಿಕೊಳ್ಳಲು ಈ ಸಮಾಜ ಬಿಡಲಿಲ್ಲವೆಂದರೆ ಮಹಿಳೆಯರು ಈ ಸಮಾಜದಲ್ಲಿ ಹುಟ್ಟುವುದೇ ಒಂದು ದೊಡ್ಡ ತಪ್ಪೆನಿಸುತ್ತದೆ.

ಇತ್ತೀಚೆಗೆ ಮಂಡ್ಯ ಜಿಲ್ಲೆಯಲ್ಲಿ ನಡೆದ ರೈಲಿನಿಂದ ನೂಕಲ್ಪಟ್ಟ ಘಟನೆಯಲ್ಲಿ 19 ವರ್ಷದ ಯುವತಿ ಆಶಾರಾಣಿಯ ಸ್ಥಿತಿ ಮಾಧ್ಯಮಗಳಲ್ಲಿ ವೀಕ್ಷಿಸಿದಾಗ ನೋವಾಯಿತು. ಆ ಯುವತಿ ಪಾರಂಪರಿಕವಾಗಿ ನಂಬಿಕೊಂಡು ಬಂದ ಮೌಲ್ಯಗಳನ್ನು ಮುರಿದು ತನ್ನ ಬದುಕು ರೂಪಿಸಿಕೊಳ್ಳುವ ಸಲುವಾಗಿ ಪಟ್ಟಣಕ್ಕೆ ಹೋಗುತ್ತಿದ್ದಳು. ಆ ಸಂದರ್ಭದಲ್ಲಿ ಯುವಕರ ಗುಂಪು ನಡೆಸಿದ ವರ್ತನೆಯಿಂದ ಅವಳು ಚಲಿಸುತ್ತಿರುವ ರೈಲಿನಿಂದ ಬಿದ್ದು, ಅದೃಷ್ಟವಶಾತ್ ಪ್ರಾಣಾಪಯದಿಂದ ಪಾರಾಗಿದ್ದಾಳೆ.

ಈ ತರಹದ ಅನೇಕ ಘಟನೆಗಳು ದಿನಂಪ್ರತಿ ನಡೆಯುತ್ತಿದ್ದರೂ ಅವು ಸಮಾಜದ ಗಮನಕ್ಕೆ ಬರುವುದು ವಿರಳ. ಗಂಡ ಹಾಗೂ ಅತ್ತೆ, ಮಾವನ ವರದಕ್ಷಿಣೆ ಕಿರುಕುಳ ತಾಳದೆ ಅನೇಕ ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗಂಡ ತೀರಿಕೊಂಡ ಮೇಲೆ ಸಮಾಜದ ಬಲಿಷ್ಠ ವರ್ಗದ ದೌರ್ಜನ್ಯಕ್ಕೆ ತುತ್ತಾಗಿ ಜೀವತೆತ್ತ ಉದಾಹರಣೆಗಳು ಬಹಳಷ್ಟಿವೆ. ಮದುವೆಯಾಗದ ಯುವತಿಯರ ಕಾಣೆ ಪ್ರಕರಣಗಳು ಭಾರತದಲ್ಲಿ ದಿನೇ ದಿನೇ ಹೆಚ್ಚುತ್ತಲೇ ಇವೆ. ಮರ್ಯಾದಾ ಹತ್ಯೆ (ಇತ್ತೀಚೆಗೆ ಮಂಡ್ಯದಲ್ಲಿ ನಡೆದ ಸುವರ್ಣಾಳ ಸಾವಿನ ಘಟನೆ) ಪ್ರಕರಣಗಳಿಗೂ ಇಲ್ಲಿ ಬರವಿಲ್ಲ. ಹೆಣ್ಣು ಮಕ್ಕಳ ಮಾರಾಟ ಪ್ರಕರಣಗಳು, ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಉಲ್ಬಣಗೊಳ್ಳುತ್ತಲೇ ಇವೆ. ಉದಾಹರಣೆಗೆ ಗುಲ್ಬರ್ಗಾ ಜಿಲ್ಲೆಯ ಹಾಗೂ ಆಂಧ್ರಪ್ರದೇಶ ರಾಜ್ಯಕ್ಕೆ ಹೊಂದಿಕೊಂಡಿರುವ ಕೊಂಚಾವರಂ ಪ್ರದೇಶದಲ್ಲಿ 2001ರಲ್ಲಿ ನಡೆದ ಮಕ್ಕಳ ಮಾರಾಟ ಮತ್ತು ಇತ್ತೀಚೆಗೆ 97 ಮಕ್ಕಳ ಸಾವಿನ ಪ್ರಕರಣಗಳು, 'ಮಂಗಳೂರಿನ ಹೋಂ ಸ್ಟೇ' ನಲ್ಲಿ ಯುವತಿಯರ ಮೇಲೆ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ನಡೆಸಿದ ದೌರ್ಜನ್ಯ ಸೇರಿದಂತೆ ಅನೇಕ ಘಟನೆಗಳಿಗೆ ಹೊಣೆಯಾರು?. ಅವರ ರಕ್ಷಣೆಗೆ ಕಾನೂನುಗಳು ಬಿಗಿಯಾಗಿದ್ದರೂ ಈ ತರಹದ ಘಟನೆಗಳು ಜರುಗುತ್ತಿರುವುದು ಕಾನೂನಿಗೆ ಸವಾಲಾಗಿ ಪರಿಣಮಿಸಿದೆ.

ಮಹಿಳೆಯರ ಹೋರಾಟ ಅವರ ಹಕ್ಕುಗಳ ರಕ್ಷಣೆಗೆ ವಿಶ್ವಸಂಸ್ಥೆ 1975ರಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲು ಕರೆನೀಡಿತು. ಕಳೆದ 35 ವರ್ಷಗಳಿಂದ ಮಹಿಳಾ ದಿನ ಆಚರಿಸಿಕೊಂಡು ಬರುತ್ತಿದ್ದರೂ ಜಾಗತೀಕ ಮಟ್ಟದಲ್ಲಿ ಮಹಿಳೆಯರ ಶೋಷಣೆ ಹೆಚ್ಚಾಗುತ್ತಿದೆಯೇ ಹೊರತು ಕಡಿಮೆಯಾಗಿಲ್ಲ.

ಪ್ರತಿಯೊಂದಕ್ಕೂ ಒಂದು ಎಲ್ಲೆಯಿರುತ್ತದೆ. ಆ ಎಲ್ಲೆ ಮೀರಿದಾಗ ಅನಾಹುತವೂ ಆಗಬಹುದು ಅಥವಾ ಬದುಕಿನ ದಿಕ್ಕೇ ಬದಲಾಗಬಹುದು. ಜಾಗತೀಕರಣದಿಂದಾಗಿ ಸೃಷ್ಟಿಯಾಗಿರುವ ಆಧುನಿಕ ಜೀವನ ಶೈಲಿಯಿಂದ 'ಲಿವ್ ಟುಗೆದರ್' ಸಂಬಂಧಗಳು ಹೆಚ್ಚಾಗಿ ಮಹಾನಗರಗಳಲ್ಲಿ ಕಂಡು ಬರುತ್ತಿವೆ. ಪಾಶ್ಚಿಮಾತ್ಯ ದೇಶಗಳಲ್ಲಿ ಈ ಬಗೆಯ ಜೀವನಶೈಲಿ ಅಂಗೀಕೃತ ಮೌಲ್ಯ. ಇದಕ್ಕೆ ಕಾರಣಗಳು ಬೇರೆಬೇರೆ.

'ಭಾರತಕ್ಕೆ ನಿಜವಾದ ಸ್ವಾತಂತ್ರ್ಯ ಲಭಿಸಿತು ಎಂದರೆ ಅದು ಒಂಟಿ ಹೆಣ್ಣು ನಡುರಾತ್ರಿಯಲ್ಲಿ ಓಡಾಡಿದಾಗ ಮಾತ್ರ' ಎಂದು ಮಹಾತ್ಮಗಾಂಧೀಜಿಯವರು ಅಭಿಪ್ರಾಯವಾಗಿತ್ತು. ಸ್ವಾತಂತ್ರ ಎಂಬುದರ ಸ್ವರೂಪ ವಾಸ್ತವವಾಗಿ ಏನು? ಈ ಪ್ರಶ್ನೆ ಕೇಳಿ ಕೊಳ್ಳುವುದು ಸುಲಭ. ಉತ್ತರಿಸುವುದು ಕಷ್ಟ.

ಸಮಾಜದ ವಿವಿಧ ವರ್ಗಗಳಲ್ಲಿ ಮಹಿಳೆಯರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಸ್ವಾತಂತ್ರವಿದೆಯಾ? ಎಂಬ ಪ್ರಶ್ನೆ ಬಂದಾಗ ಶಿಕ್ಷಣ, ಜಾತಿ, ಶ್ರೇಣೀಕರಣ, ಆರ್ಥಿಕ ಪರಿಸ್ಥಿತಿ ಸಂಬಂಧಿಸಿದಂತೆ ಅವರೆಲ್ಲ ಒಂದೇ ರೀತಿ ಇಲ್ಲ. ಅವರ ಚಿಂತನೆಗಳು, ಹೋರಾಟಗಳು, ಮಹಿಳೆಯರ ಸ್ವಾತಂತ್ರದ ಪ್ರಶ್ನೆಯನ್ನು ಪುರುಷ ವಿರೋಧಿ ನೆಲೆಯಲ್ಲಿ ಮಾತ್ರ ಗ್ರಹಿಸುತ್ತೇವೆ.

ಆ ಮೂಲಕ ಸಮಾಜದ ಅಸಮಾನತೆ ಮತ್ತು ಶೋಷಣೆಯನ್ನು ಮುಚ್ಚಿಡುತ್ತೇವೆ. ಸಮಾಜವು ಆರ್ಥಿಕ ಮತ್ತು ಸಾಮಾಜಿಕ ರಚನೆಯ ಸಮ್ಮಿಶ್ರಣವಾಗಿದೆ. ಇದರಲ್ಲಿ ಹೆಣ್ಣಿನ ಶೋಷಣೆಯ ಮೂಲ ರಚನೆಯನ್ನು ಪರಿಗಣಿಸಬೇಕು. ಸಮಾಜದಲ್ಲಿ ಶೋಷಕ ಮತ್ತು ಶೋಷಿತ ಎಂಬ ಎರಡು ನೆಲೆಯನ್ನು ಹೊಂದಿದೆ. ಸಂವಿಧಾನದ 15ನೇ ವಿಧಿ ಯಾವುದೇ ಧರ್ಮ, ಜನಾಂಗ, ಜಾತಿ, ಲಿಂಗ ಅಥವಾ ಹುಟ್ಟಿದ ಸ್ಥಳದ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡತಕ್ಕದ್ದಲ್ಲ ಎಂದು ಹೇಳಿದೆಯಾದರೂ ಸಕಾರಾತ್ಮಕ ತಾರತಮ್ಯವನ್ನು ಅಲ್ಲಗೆಳೆಯುವಂತಿಲ್ಲ.

ಶೋಷಿತರ ಗುಂಪಿನಲ್ಲಿ ಅನೇಕ ಮಹಿಳೆಯರು ತಮ್ಮ ಮಾನ ರಕ್ಷಣೆಗೆ ಅಗತ್ಯ ಕಾನೂನುಗಳ ಬಗ್ಗೆ ಹೋರಾಟ ನಡೆಸಿ ಶೇ.33 ರಷ್ಟು ಮೀಸಲಾತಿ ಗಳಿಸಲಷ್ಟೇ ಶಕ್ತರಾಗಿದ್ದಾರೆ. ಪುರಷರಷ್ಟು ಸಮಬಲ ಸಾಧಿಸಲು ಸಾಧ್ಯವಾಗಿಲ್ಲ. ದಿನನಿತ್ಯ ಒಂದಲ್ಲಾ ಒಂದು ಶೋಷಣೆಗೆ ಮಹಿಳೆಯರು ಒಳಗಾಗುತ್ತಿದ್ದಾರೆ. ಇದು ಕೇವಲ ಭಾರತದಲ್ಲಿ ಮಾತ್ರವಲ್ಲ ಇಡೀ ವಿಶ್ವದ ಎಲ್ಲಾ ರಾಷ್ಟ್ರಗಳಲ್ಲೂ ಸ್ತ್ರೀಯರಿಗೆ ಉತ್ತಮ ಸ್ಥಾನ-ಮಾನಗಳನ್ನು ನೀಡುವಲ್ಲಿ ಕಾನೂನುಗಳಿದ್ದರೂ ಸಂವಿಧಾನದಲ್ಲಿ ಮಾತ್ರ, ವಾಸ್ತವವಾಗಿ ಇದರ ಪರಿಪಾಲನೆ ಮರೀಚಿಕೆಯಾಗಿದೆ.

ಪುರುಷ ಪ್ರಧಾನ ವ್ಯವಸ್ಥೆಯೆಂದರೆ ಸ್ತ್ರೀಯರ ಮೇಲಿನ ದೌರ್ಜನ್ಯವೇ?

ಎಸ್.ಎಂ ಸೋಮನಗೌಡ

21ನೇ ಶತಮಾನದಲ್ಲೂ ಮಹಿಳೆ, ಮನೆ ಮತ್ತು ಕಚೇರಿ ಎಂಬ ನಾಲ್ಕು ಗೋಡೆಗಳ ಮಧ್ಯೆ ಬದುಕುತ್ತಿದ್ದಾಳೆ. ಇಲ್ಲಿ ಚಲಿಸುವ ವಿಧಾನ ಬೇರೆಯಾಗಿದೆಯೇ ವಿನಃ ಸ್ಥಳ, ಸ್ಥಿತಿ ಮಾತ್ರ ಯತಾವತ್ತಾಗಿದೆ.

ಪೂರ್ವಜರ ಕಾಲದಲ್ಲಿ ಮಹಿಳೆಯರನ್ನು ಬಸವಿ, ದೇವದಾಸಿ, ಹೆಸರಿನಲ್ಲಿ ಶೋಷಿಣೆಗೆ ಗುರಿಪಡಿಸಲಾಗುತ್ತಿತ್ತು. ಪ್ರಸ್ತುತ ಅದನ್ನು ನಯವಾಗಿ 'ಸೆಕ್ಸ್ ವರ್ಕರ್ಸ್' ಎಂದು ಕರೆಯಲಾಗುತ್ತಿದೆ. ಈ ರೀತಿಯ ಮಹಿಳಾ ಶೋಷಣೆಯನ್ನು ಹೊಸ ವಿಧಾನಗಳ ಮೂಲಕ ಮುಂದುವರೆಸುತ್ತಿರುವ ವರ್ಗವೇ ಮಹಿಳೆಯರ ಶೋಷಕ ವರ್ಗ. ಮಹಿಳೆಯರನ್ನು ಶೋಷಿಸುವಲ್ಲಿ ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿಯೂ ನಿಂತಿಲ್ಲ ಎಂಬುದಕ್ಕೆ ಅನೇಕ ಘಟನೆಗಳು ಸಾಕ್ಷಿಯಾಗಿವೆ.

ರಾಜಕೀಯ, ಆರ್ಥಿಕ, ಸಾಮಾಜಿಕ, ಮತ್ತು ಲಿಂಗ ಸಂಬಂಧಿ ಅಸಮಾನತೆ ಮಹಿಳೆಯರ ಶೋಷಣೆಯ ಮೂಲ. ಈ ಶತಮಾನದಲ್ಲಿ ಸ್ತ್ರೀ ಸ್ವಾವಲಂಬಿಯಾಗಿದ್ದಾಳೆ. ಅವಳು ಐಟಿ, ಬಿಟಿ, ಕಾಲ್ ಸೆಂಟರ್, ಬಿಪಿಓ ವಿದೇಶಿ ಕಂಪನಿಗಳಲ್ಲಿ ಹೆಚ್ಚು ಸಂಬಳ ಸಾರಿಗೆ ವ್ಯವಸ್ಥೆ ಇರುವ ಕಡೆ ದುಡಿಯುತ್ತಿದ್ದಾಳೆ ಎನ್ನುವುದು ಮೇಲ್ನೋಟಕ್ಕೆ ಮಾತ್ರ. ಅಲ್ಲಿಯೂ ಮಹಿಳೆಯರನ್ನು ಯಾವರೀತಿ ನಡೆಸಿಕೊಳ್ಳುತ್ತಿದ್ದಾರೆ ಎನ್ನುವುದಕ್ಕೆ ಉದಾಹರಣೆಗಳಿವೆ. ಭಾರತೀಯ ಸಂಸ್ಕೃತಿ ಪ್ರಕಾರ ಸೀರೆಯುಟ್ಟ ಮಹಿಳೆಯರು ಐಟಿ, ಬಿಟಿ, ಬಿಪಿಓ ಕಂಪನಿಗಳಿಗೆ ಕೆಲಸಕ್ಕೆ ಹೋದರೆ ಅಲ್ಲಿ ಅವರನ್ನು ನಡೆಸಿಕೊಳ್ಳುವ ರೀತಿ, ನೋಡುವ ವಿಧಾನ ವಿಭಿನ್ನವಾಗಿರುತ್ತದೆ. ಅವರಿಗೆ ಸಂಸ್ಥೆಯ ನಿಯಮಗಳ ಪ್ರಕಾರ ಸ್ತ್ರೀಯರು ಬರಬೇಕೆನ್ನುವ ಚೌಕಟ್ಟುಗಳಿವೆ.

ಖಾಸಗೀಕರಣ ಮಹಿಳೆಯರ ಮೇಲೆ ಯಾವ ರೀತಿ ಶೋಷಣೆಗೆ ಗುರಿ ಮಾಡುತ್ತಿದೆ ಎನ್ನುವುದಕ್ಕೆ ಇದು ಒಂದು ಸ್ಯಾಂಪಲ್ ಮಾತ್ರ. ಇನ್ನೂ ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳ ಅನೇಕ ಹೆಣ್ಣು ಮಕ್ಕಳು ಆರ್ಥಿಕ ಅಭದ್ರತೆ, ಕೌಟುಂಬಿಕ ಸಮಸ್ಯೆ, ಸಾಮಾಜಿಕ ಕೀಳಿರಿಮೆ ಸಹಿಸಲಾರದ ಕ್ರೂರ ಪರಿಸ್ಥಿತಿ ಎದುರಿಸುತಿದ್ದಾರೆ. ಕೆಲವರು ಎನ್‌ಜಿಓ ಗಳಲ್ಲಿ ಇನ್ನೂ ಕೆಲವರು ಗಾರ್‌ಮೆಂಟ್ಸ್, ಕಂಪ್ಯೂಟರ್ ಸೆಂಟರ್, ಜೆರಾಕ್ಸ್ ಸೆಂಟರ್, ವ್ಯಾಪಾರಿ ಮಳಿಗೆಗಳಲ್ಲಿ, ಬಟ್ಟೆ ಅಂಗಡಿಗಳಲ್ಲಿ ದುಡಿಯುತ್ತಿದ್ದಾರೆ. ಇದು ತಾತ್ಕಾಲಿಕ ಆರ್ಥಿಕ ಉಪಶಮನವಾಗಿದ್ದು. ಖಾಯಂ ಭದ್ರತೆಯಾಗಿರುವುದಿಲ್ಲ. ಮಾಲೀಕರ ಕಿರುಕುಳ ನಿಂದನೆಗಳಿಂದ ಬಳಲುತ್ತಿದ್ದಾರೆ. ಕನಿಷ್ಠ ಮಾನವೀಯವಾಗಿ ನಡೆಸಿಕೊಳ್ಳುವ ವಾತಾವರಣ ಇಲ್ಲದಂತಾಗಿದೆ.

ಶೋಷಣೆ ಮತ್ತು ತೀವ್ರ ಅವಮಾನಗಳನ್ನು ಒಡಲಲ್ಲಿ ಕಟ್ಟಿಕೊಂಡು ಪೇಟೆ, ಪಟ್ಟಣಗಳಲ್ಲಿ ತಮ್ಮ ಕಷ್ಟದ ಜೀವನ ನಡೆಸುತಿದ್ದಾರೆ. ಈ ಶತಮಾನದ ಸ್ತ್ರೀಯರನ್ನು ಉಡುಪು, ಒಡವೆ, ಕಾಸ್ಮೆಟಿಕ್, ವಸ್ತುಗಳತ್ತ ಆಕರ್ಷಿಸುತ್ತಿದೆ. ಸಿನಿಮಾಗಳಲ್ಲಿ ಮಹಿಳೆಯನ್ನು ಚಿತ್ರಿಸುವ ಪರಿಯಂತೂ ನಿಜಕ್ಕೂ ಅಸಯ್ಯವಾಗಿರುತ್ತವೆ. ತಮ್ಮ ಮಾನ ಮರ್ಯಾದೆಗೂ ಮೀರಿ ಮಹಿಳೆಯನ್ನು ನಡೆಸಿಕೊಳ್ಳುತಿದ್ದಾರೆ. ಇದು ಹೆಣ್ಣನ್ನು ಬಂಡವಾಳವಾಗಿ ಮಾಡಿಕೊಂಡು ದುಡಿಯುವ ವರ್ಗಕ್ಕೆ ಅನ್ವಯವಾಗುತ್ತದೆ.

ಒಂದುಕಡೆ ಜಾಗತೀಕರಣ, ಖಾಸಗೀಕರಣ ನೀತಿಗಳು ಮತ್ತೊಂದೆಡೆ ಧಾವಂತದ ಬದುಕು ಇವೇ ಅವರ ನೇರ ಶತ್ರುಗಳು. ಜಗತ್ತಿನ ಬಹುತೇಕ ಧರ್ಮಗಳು ಸಾಮಾಜಿಕವಾಗಿ ನೈತಿಕವಾಗಿ ಹೆಣ್ಣಿಗೆ ಕೀಳು ದರ್ಜೆ ಸ್ಥಾನ-ಮಾನಗಳನ್ನು ಕಲ್ಪಿಸುತ್ತಿವೆ. ಲೈಂಗಿಕ ಸಂಬಂಧ ವಿಚಾರದಲ್ಲಿ ಹೆಣ್ಣಿಗೆ ಕಠಿಣವಾದ ನಿಯಮಗಳನ್ನು ಹೇರುತ್ತಿವೆ ಎಂದು ಸಾಹಿತಿಗಳು ಸ್ತ್ರೀಯರ ಬಗ್ಗೆ ಬರೆದ ಪುಸ್ತಕಗಳು, ಕಾದಂಬರಿಗಳು, ಲೇಖನಗಳು ಹೇಳುವ ವಿಚಾರಗಳು ಗಂಭೀರ ಪರಣಾಮವನ್ನೇನೂ ಮಾಡಿಲ್ಲ ಎಂಬದು ನನ್ನ ವೈಯಕ್ತಿಕ ಅಭಿಪ್ರಾಯ.

ಪ್ರಸ್ತುತ ಬದುಕಿನ ಬಗ್ಗೆ ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಶಕ್ತಿ ಸ್ತ್ರೀಯರಿಗಿಲ್ಲ. ಉದ್ಯೋಗಕ್ಕೆ ಸೇರುವ ವಿಚಾರವಾಗಿ ಆಕೆಯ ಗಂಡ, ಸೋದರ, ಪೋಷಕರ ನಿರ್ಧಾರಗಳೇ ಅಂತಿಮ. ಈ ಶತಮಾನದಲ್ಲೂ ಆಕೆಯ ಚಲನ ವಲನಗಳ ಮೇಲೆ ನಿರ್ಭಂಧ ಕಡಿಮೆಯಾಗಿಲ್ಲ.

ಪ್ರಜಾಪ್ರಭುತ್ವದ ನೆಲೆವೀಡು ಸಮಾನತೆಯ ಹರಿಕಾರ ಎಂದೆಲ್ಲ ಬಿರುದಾಂಕಿತವಾಗಿರುವ ಭಾರತದಲ್ಲಿ 1966ರಲ್ಲಿ ಇಂದಿರಾ ಗಾಂಧಿ ದೇಶದ ಮೊದಲ ಮಹಿಳಾ ಪ್ರಧಾನಿಯಾದರು. 2007ರಲ್ಲಿ ನಡೆದ ರಾಷ್ಟ್ರಪತಿ ಚುನಾವಣೆಯಲ್ಲಿ ಪ್ರತಿಭಾ ಪಾಟೀಲ್ ಅವರನ್ನು ದೇಶದ ಮೊದಲ ಮಹಿಳಾ ಪ್ರಜೆಯಾಗಿ ಒಪ್ಪಿಕೊಂಡಿದ್ದೇವೆ. ಮೀರಾ ಕುಮಾರ್ ಅವರನ್ನು ಲೋಕಸಭೆಯ ಸಭಾಪತಿಯಾಗಿ ಆಯ್ಕೆ ಮಾಡುವ ಮೂಲಕ ಇತಿಹಾಸ ಸುಷ್ಟಿಯಾಗಿದೆ. ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿರುವ ಸೋನಿಯಾಗಾಂಧಿ ಅವರು ರಾಷ್ಟ್ರದ ಪರೋಕ್ಷ ಪ್ರಧಾನಿ ಎಂದು ಎಲ್ಲರಿಗೂ ತಿಳಿದ ವಿಷಯ.

ಸ್ವಾತಂತ್ರ್ಯ ಪೂರ್ವದಲ್ಲಿ ಸರೋಜಿನಿ ನಾಯ್ಡು, ಅನಿಬೆಸೆಂಟ್‌ರಂತಹ ಮಹಿಳೆಯರು ಮುಂಚೂಣಿಯಲ್ಲಿದ್ದು ಹೋರಾಡಿದವರು. ಸ್ವತಂತ್ರ ಭಾರತದಲ್ಲಿ ವಿಜಯಲಕ್ಷ್ಮಿ ಪಂಡಿತ್ ಮೊದಲ ಕೇಂದ್ರ ಮಹಿಳಾ ಸಚಿವೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಸುಚೇತನಾ ಕೃಪಲಾನಿ ರಾಜ್ಯವೊಂದರ ಮೊದಲ ಮಹಿಳಾ ಮುಖ್ಯಮಂತ್ರಿಯಾಗಿದ್ದರು, ನಂದಿನಿ ಸರಸ್ವತಿ ಓಡಿಶಾದ ಮುಖ್ಯಮಂತ್ರಿಯಾಗಿ, ಪ್ರತಿಭಾ ಪಾಟೀಲ್ ರಾಜಸ್ತಾನದ ರಾಜ್ಯಪಾಲರಾಗಿ, ಶಶಿಕಲಾ ಕಾಕೋಡ್ಕರ್ ಗೋವಾ ಮುಖ್ಯಮಂತ್ರಿಯಾಗಿ, ಸುಮಿತ್ರಾ ಸಿಂಗ್ ರಾಜಸ್ತಾನದ ಸಭಾಪತಿಯಾಗಿ, ಜಾನಕಿ ರಾಮಚಂದ್ರನ್ ರಾಜಕೀಯ ವಲಯದಲ್ಲಿ ಸೇವೆಸಲ್ಲಿಸುತ್ತಿದ್ದಾರೆ.

ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ಮಮತಾ ಬ್ಯಾನರ್ಜಿ, ಕೇಂದ್ರ ಸಚಿವರಾಗಿ ಅಂಬಿಕಾ ಸೋನಿ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿಯಾದ ಉಮಾಭಾರತಿ, ಮಾಯಾವತಿ ಸೇರಿದಂತೆ ಅನೇಕ ಮಹಿಳೆಯರು ರಾಜಕೀಯ ಸೇರಿದಂತೆ ಅನೇಕ ಕ್ಷೇತ್ರದಲ್ಲಿ ಸಾಧನೆಯಲ್ಲಿ ತೊಡಗಿಕೊಂಡಿದ್ದರೂ ಮಹಿಳೆಯರಿಗೆ ಸಮಮಟ್ಟದ ಮೀಸಲಾತಿ ಲಭ್ಯವಾಗಿಲ್ಲ ಹಾಗೂ ಅವರ ಮೇಲೆನ ದೌರ್ಜನ್ಯಗಳು ನಿಂತಿಲ್ಲವೆಂದರೆ ಸಂವಿಧಾನದಲ್ಲಿರುವ ಸಮಾನತೆಗೆ ಬೆಲೆಕೊಟ್ಟಂತಾಯಿತೆ.?

ಪುರುಷ ದೌರ್ಜನ್ಯಕ್ಕೆ ಒಳಗಾಗಿರುವ ಆಶಾರಾಣಿಯಂತಹ ಅನೇಕ ಮಹಿಳೆಯರಿಗೆ ಮಹಿಳಾ ಆಯೋಗದ ಅಧ್ಯಕ್ಷರು ಸಾಂತ್ವಾನ ಹೇಳಿದರೆ ಸಾಲದು. ಅವರಿಗೆ ಸರ್ಕಾರದಿಂದ ಸಿಗಬೇಕಾದ ಸೌಲತ್ತುಗಳು ಲಭ್ಯವಾಗುವ ಜತೆಗೆ, ಭದ್ರತೆ ಕಲ್ಪಿಸಬೇಕಿದೆ. ಮಹಿಳಾ ಶೋಷಣೆಯ ಮುಖ ಮತ್ತು ಮಾದರಿಗಳು ಬದಲಾಗುತ್ತಿರುವ ಈ ಸಂದರ್ಭದಲ್ಲಿ ಹಿಂದಿಗಿಂತ ಇಂದು ಹೆಚ್ಚು ಒಳನೋಟ, ಒಳಹಾದಿಯ ಹುಡುಕಾಟ ಅಗತ್ಯವಿದೆ. ■

ಬಡತನಕ್ಕೆ ಬಾಯಿಲ್ಲವಾಗಿ

ಡಾ॥ ಎನ್. ಜಗದೀಶ್ ಕೊಪ್ಪ

ಜಗತ್ತನ್ನು ಕಾಡುತ್ತಿರುವ ಮಹಾಮಾರಿ ಎನಿಸಿಕೊಂಡ ಕಾಯಿಲೆಗಳಲ್ಲಿ ಏಡ್ಸ್ ರೋಗ ಕೂಡ ಒಂದು. ಹೈಟಿ ದ್ವೀಪದಲ್ಲಿ 1980ರ ದಶಕದಲ್ಲಿ ಗೊರಿಲ್ಲಾ ಮುಖಾಂತರ ಮನುಷ್ಯನಿಗೆ ತಗುಲಿಕೊಂಡ, ಮದ್ದಿಲ್ಲದ ಈ ಕಾಯಿಲೆಗೆ ಬಲಿಯಾದವರ ಸಂಖ್ಯೆ ಈಗ ನಿಖರವಾದ ಅಂಕಿ ಅಂಶಗಳಿಗೂ ನಿಲುಕದ ಸಂಗತಿ. ಪಾಶ್ಚಿಮಾತ್ಯ ಜಗತ್ತು ರೂಢಿಸಿಕೊಂಡ ಭೋಗದ ಲೋಲುಪತೆಯಯಿಂದಾಗಿ, ರಕ್ತದ ಮೂಲಕ, ವಿರ್ಯಾಣು ಮೂಲಕ, ತಾಯಿಯ ಎದೆ ಹಾಲು ಮೂಲಕ ರಕ್ತ ಬಿಜಾಶೂರನಂತೆ ಹರಡಿ ಎದ್ದು ನಿಂತ ಈ ಮಹಾ ರೋಗಕ್ಕೆ ಕಡಿವಾಣವಿಲ್ಲದಂತಾಗಿದೆ. ನಿರಂತರ ಸಂಶೋಧನೆ ಮತ್ತು ಅವಿಷ್ಕಾರಗಳಿಂದ ಕೆಲವು ಔಷಧಗಳನ್ನು ಕಂಡುಕೊಂಡಿದ್ದರೂ ಸಹ ಅವುಗಳು, ಬರೆದಿಟ್ಟ ಸಾವಿನ ದಿನಾಂಕವನ್ನು ಅಲ್ಪದಿನಗಳ ಕಾಲ ಮುಂದೂಡಬಲ್ಲ ಸಾಧನಗಳಾಗಿವೆ ಅಷ್ಟೇ.

ಸೋಜಿಗದ ಸಂಗತಿಯೆಂದರೆ, ಪಾಶ್ಚಿಮಾತ್ಯ ಜಗತ್ತು ಅಂಟಿಸಿದ ಈ ಕಾಯಿಲೆಗೆ ಬಲಿಯಾದದ್ದು ಮಾತ್ರ ತೃತಿಯ ಜಗತ್ತು. ಅಂದರೆ, ಏಷ್ಯಾ ಮತ್ತು ಆಫ್ರಿಕಾ ಖಂಡದ ಜನತೆ. ಆಫ್ರಿಕಾದ ಹಲವಾರು ದೇಶಗಳಲ್ಲಿ ಛಾಲ್ತಿಯಲ್ಲಿದ್ದ ಮುಕ್ತ ಲೈಂಗಿಕ ಚಟುವಟಿಗಳು

ರೋಗದ ಕ್ಷಿಪ್ರ ಹರಡುವಿಕೆಗೆ ಪರೋಕ್ಷವಾಗಿ ಸಹಕಾರಿಯಾದವು. ವಿಶ್ವಾದ್ಯಂತ ಜನತೆ ಒಣಗಿಹೋದ ತರಗಲೆಗಳಂತೆ ಉದುರಿ ಬಿದ್ದರು. ಭಾರತವೂ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಕಾಯಿಲೆಗೆ ಮದ್ದು ಹುಡುಕುವುದಕ್ಕಿಂತ ಈ ಮಹಾಮಾರಿ ಹರಡದಂತೆ ಮುನ್ನೆಚ್ಚರಿಕೆ ವಹಿಸುವುದು ಸೂಕ್ತ ಎಂಬ ತೀರ್ಮಾನಕ್ಕೆ ಬಂದ ಆಧುನಿಕ ಜಗತ್ತು, ಇತ್ತೀಚೆಗೆ ಏಡ್ಸ್ ರೋಗ ನಿಯಂತ್ರಣದತ್ತ ಗಂಭೀರವಾಗಿ ಗಮನ ಹರಿಸಿದೆ. ಇಂತಹ ಒಂದು ಪ್ರಯತ್ನಕ್ಕೆ ಕೈ ಜೋಡಿಸಿದ್ದು, ಬಿಲ್ ಮಿಲಿಂದ ಗೇಟ್ಸ್ ಪೌಂಡೇಶನ್. ಮೈಕ್ರೋಸಾಫ್ಟ್ ಸಂಸ್ಥೆಯ ಸಂಸ್ಥಾಪಕ ಬಿಲ್ ಗೇಟ್‌ನ ಮಾನವೀಯ ಮುಖದ ಒಂದು ಭಾಗವಾಗಿರುವ ಈ ಪೌಂಡೇಶನ್ ಪ್ರತಿವರ್ಷ ಏಡ್ಸ್ ನಿಯಂತ್ರಣಕ್ಕಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಧಾನವಾಗಿ ವಿನಿಯೋಗಿಸುತ್ತಿದೆ. ಇತ್ತೀಚೆಗಿನ ವರ್ಷಗಳಲ್ಲಿ ಜಗತ್ ಪ್ರಸಿದ್ಧ ಹೂಡಿಕೆದಾರ ವಾರೆನ್ ಬಫೆಟ್ ತನ್ನ ಸಂಪಾದನೆಯ ಬಹು ಭಾಗವನ್ನು ಧಾರೆಯರೆದು ಈ ಸಂಸ್ಥೆಯ ಜೊತೆ ಕೈಜೋಡಿಸಿದ್ದಾನೆ. ಮಿಲಿಂದ ಪೌಂಡೇಶನ್ ನೀಡುತ್ತಿರುವ ಆರ್ಥಿಕ ಸಹಾಯದ ಸಿಂಹ ಪಾಲು ಭಾರತದ ಉಪಖಂಡದ ದೇಶಗಳು, ಮತ್ತು ಆಫ್ರಿಕಾದ ದೇಶಗಳಿಗೆ ಸಲ್ಲುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಮಲೇರಿಯ, ಕ್ಷಯ ರೋಗ ನಿಯಂತ್ರಣ ಮತ್ತು ಮಕ್ಕಳ ಆರೋಗ್ಯದ ಕಡೆ ಸಹ ಗಮನ ಹರಿಸಿ ಈ ಸಂಸ್ಥೆ ಹಲವಾರು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ದೆಹಲಿಯಲ್ಲಿ ಮಿಲಿಂದ ಗೇಟ್ಸ್ ಪೌಂಡೇಶನ್ ಸಂಸ್ಥೆಯ ಕಚೇರಿಯಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೂಲಕ, ಸ್ವಯಂ ಸೇವಾ ಸಂಘಟನೆಗಳನ್ನು ಬಳಸಿಕೊಂಡು ದೇಶ್ಯಾದಂತ ಈ ಸಂಸ್ಥೆ ಕಾರ್ಯನಿರತವಾಗಿದೆ. 1998ರಿಂದ ಈ ಸಂಸ್ಥೆಯ ಗೌರವ ಸಂದರ್ಶಕ ಸಲಹೆಗಾರರಾಗಿ ಕೆಲಸ ಮಾಡಿ ಅನುಭವ ಇರುವ ನಾನು ಮತ್ತು ಇತರೆ ರಂಗದ ಅನೇಕ ಮಿತ್ರರು, ಯೋಜನೆಗಳು ಗುರಿ ತಪ್ಪಿದಾಗ ಸರಿ ದಾರಿಗೆ ತರುವಲ್ಲಿ ಶ್ರಮಿಸಿದ್ದೇವೆ. (ಇದಕ್ಕೆ ಕಾರಣರಾದವರು ಈಗ ಪ್ರಧಾನಿ ಕಚೇರಿಯ ಹಿರಿಯ 19 ಮಂದಿ ಅಧಿಕಾರಿಗಳಲ್ಲಿ ಒಬ್ಬರಾಗಿರುವ ಕರ್ನಾಟಕದ ಹಿರಿಯ ಐ.ಎ.ಎಸ್. ಅಧಿಕಾರಿ ಹಾಗೂ ತುಮಕೂರಿನ ನನ್ನ ಮಿತ್ರ ಎಲ್.ಕೆ. ಅತಿಕ್ ಅಹಮ್ಮದ್)

ಭಾರತದಲ್ಲಿ ಏಡ್ಸ್ ಕಾಯಿಲೆ ಹರಡಲು ವೇಶ್ಯೆಯರು ಮತ್ತು ಲಾರಿ ಚಾಲಕರು ಎಂದು ಬಲವಾಗಿ ನಂಬಿದ್ದ ನಂಬಿಕೆಗಳನ್ನು ಅಲುಗಾಡಿಸಿ, ಅವರಿಗಿಂತ ಹೆಚ್ಚಾಗಿ ರೋಗ ಹರಡುತ್ತಿರುವುದು, ಹಳ್ಳಿಗಳಿಂದ ನಗರಗಳಿಗೆ ವಲಸೆ ಹೋಗುತ್ತಿರುವ ಕುಶಲರಲ್ಲದ ಕಾರ್ಮಿಕರು ಎಂಬುದನ್ನು ಅಧ್ಯಯನದಿಂದ ಸಾಭೀತುಪಡಿಸಲಾಗಿದೆ. ಇದಕ್ಕೆ ಆರ್ಥಿಕ

ಮತ್ತು ಸಾಮಾಜಿಕ ಕಾರಣಗಳಿರುವುದನ್ನೂ ಸಹ ಗುರುತಿಸಲಾಗಿದೆ.

ಈ ಅಧ್ಯಯನಕ್ಕೆ ಆರಿಸಿಕೊಂಡ ಸ್ಥಳವೆಂದರೆ, ಗುಜರಾತಿನ ಆಳಂಗ್ ಎಂಬ ಕಡಲ ತೀರದ ಹಡಗು ಒಡೆಯುವ ಬಂದರಿನ ಒಂದು ಪ್ರದೇಶ. ಈ ಪುಟ್ಟ ಊರಿನಲ್ಲಿ ಉತ್ತರಪ್ರದೇಶ ಮತ್ತು ಬಿಹಾರದಿಂದ ದಿನಗೂಲಿಗೆ ದುಡಿಯುವ 56 ಸಾವಿರ ಕಾರ್ಮಿಕರು ಹಡಗು ಒಡೆಯುವ ಕೆಲಸದಲ್ಲಿ ನಿರತರಾಗಿದ್ದರು. (ಇದು 2000ನೇ ಇಸವಿಯ ಅಂಕಿ ಅಂಶ, ಈಗ ಇದು ದುಪ್ಪಟದಟಾಗಿರಬಹುದು) ಇವರೆಲ್ಲರೂ ತಮ್ಮ ಕುಟುಂಬಗಳನ್ನ ಸ್ವಂತ ಊರುಗಳಲ್ಲಿ ಬಿಟ್ಟು ಬಂದು ಕಾರ್ಮಿಕರ ಶೆಡ್ಡುಗಳಲ್ಲಿ ಪ್ರಾಣಿಗಳಂತೆ ವಾಸಿಸುತಿದ್ದಾರೆ. ಕಠಿಣ ದುಡಿಮೆ, ಏಕಾಂತ, ಇವುಗಳ ನಡುವೆ ನರಳುವ ಇವರುಗಳು ಬಲುಬೇಗ ಕುಡಿತ ಮತ್ತು ವೇಶ್ಯಾವಾಟಿಕೆಗೆ ಬಲಿಯಾಗುವ ನತದೃಷ್ಟರು. ಸಮೀಕ್ಷೆಯ ಪ್ರಕಾರ ಇಲ್ಲಿನ ಶೇಕಡ 64ರಷ್ಟು ಕಾರ್ಮಿಕರು ಏಡ್ಸ್ ರೋಗಕ್ಕೆ ತಮಗೆ ಅರಿವಿಲ್ಲದಂತೆ ತುತ್ತಾಗಿದ್ದರು. ಅಲ್ಲದೇ ತಮ್ಮ ತಮ್ಮ ಊರುಗಳಿಗೆ ಹೋದಾಗ ತಾವು ಅಂಟಿಸಿಕೊಂಡ ಈ ಮಹಾಮಾರಿಯನ್ನು ತಮ್ಮ ಪತ್ನಿಯರಿಗೆ ದಾಟಿಸಿಬಂದಿದ್ದರು. ಅವರುಗಳು ಸಹ ತಮಗೆ ಅರಿವಿಲ್ಲದೆ, ಎದೆಯ ಹಾಲಿನ ಮೂಲಕ ಮಕ್ಕಳಿಗೆ ಈ ಕಾಯಿಲೆಯನ್ನು ಬಳುವಳಿಯಾಗಿ ನೀಡಿದ್ದರು. ಇದು ಆಳಂಗ್‌ನ ಒಂದು ಕಥೆ ಮಾತ್ರವಲ್ಲ, ಎಲ್ಲಾ ನಗರಗಳ ದುಡಿಯುವ, ಗ್ರಾಮೀಣ ಪ್ರದೇಶದಿಂದ ಬಂದ ಕಾರ್ಮಿಕರ ಕಥನವೂ ಹೌದು.

ಏಡ್ಸ್ ರೋಗ ನಿಯಂತ್ರಣ ಕುರಿತಂತೆ ಹಮ್ಮಿಕೊಂಡ ಕಾರ್ಯಕ್ರಮಗಳು ಭಾರತದಲ್ಲಿ ಹೆಮ್ಮೆ ಪಡುವಷ್ಟು ಸುಧಾರಣೆಯಾಗಿಲ್ಲ. ಹಣದಾಸೆಗೆ ಸೃಷ್ಟಿಯಾದ ಹಲವಾರು ಎನ್.ಜಿ.ಒ. ಗಳ ಅಸಮರ್ಪಕ ಕಾರ್ಯವೈಖರಿ ಇದಕ್ಕೆ ಮೂಲ ಕಾರಣ. ಜೊತೆಗೆ ಇದೊಂದು ಕಾಟಾಚಾರದ ಕೆಲಸ ಎಂಬ ಆಲಸ್ಯ ಬೆಳಸಿಕೊಂಡ ಸರ್ಕಾರಿ ಅಧಿಕಾರಿಗಳ ಸೋಮಾರಿತನ ಕೂಡ ಕಾರಣವಾಗಿದೆ. ರಾಷ್ಟ್ರೀಯ ಹೆದ್ದಾರಿಗಳ ಡಾಬದ ಬಳಿ ನಿಂತು ಅಲ್ಲಿಗೆ ಬರುವ ಲಾರಿ ಚಾಲಕರಿಗೆ ಉಚಿತ ಕಾಂಡೊಮ್ ಹಂಚುವುದು, ಅಥವಾ ವೇಶ್ಯಾವಾಟಿಕೆ ಪ್ರದೇಶಗಳಲ್ಲಿ ವೇಶ್ಯೆಯರಿಗೆ ಹಂಚುವುದರಿಂದ ಏಡ್ಸ್ ನಿಯಂತ್ರಣ ಸಾಧ್ಯ ಎಂಬ ಹುಂಬತನವನ್ನು ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಬೆಳಸಿಕೊಂಡಿವೆ.

(ಈ ಕುರಿತು " ಮದ್ದಿಲದ ಸಾವ ಕುರಿತು"ಎಂಬ ನನ್ನ ಸುಧೀರ್ಘ ಲೇಖನ, ಆರು ತಿಂಗಳ ಹಿಂದೆ ಸಂವಾದ ಮಾಸಪತ್ರಿಕೆಯಲ್ಲಿ ಮತ್ತು "ಆಯಾಮ" ಅಂತರ್ಜಾಲ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಆಸಕ್ತರು ಗಮನಿಸಬಹುದು)

ಏಡ್ಸ್ ರೋಗ ನಿಯಂತ್ರಣ ಕುರಿತಂತೆ ಹಮ್ಮಿಕೊಂಡ ಕಾರ್ಯಕ್ರಮಗಳು ಭಾರತದಲ್ಲಿ ಹೆಮ್ಮೆ ಪಡುವಷ್ಟು ಸುಧಾರಣೆಯಾಗಿಲ್ಲ. ಹಣದಾಸೆಗೆ ಸೃಷ್ಟಿಯಾದ ಹಲವಾರು ಎನ್.ಜಿ.ಒ. ಗಳ ಅಸಮರ್ಪಕ ಕಾರ್ಯವೈಖರಿ ಇದಕ್ಕೆ ಮೂಲ ಕಾರಣ. ಜೊತೆಗೆ ಇದೊಂದು ಕಾಟಾಚಾರದ ಕೆಲಸ ಎಂಬ ಆಲಸ್ಯ ಬೆಳಸಿಕೊಂಡ ಸರ್ಕಾರಿ ಅಧಿಕಾರಿಗಳ ಸೋಮಾರಿತನ ಕೂಡ ಕಾರಣವಾಗಿದೆ. ರಾಷ್ಟ್ರೀಯ ಹೆದ್ದಾರಿಗಳ ಡಾಬದ ಬಳಿ ನಿಂತು ಅಲ್ಲಿಗೆ ಬರುವ ಲಾರಿ ಚಾಲಕರಿಗೆ ಉಚಿತ ಕಾಂಡೊಮ್ ಹಂಚುವುದು, ಅಥವಾ ವೇಶ್ಯಾವಾಟಿಕೆ ಪ್ರದೇಶಗಳಲ್ಲಿ ವೇಶ್ಯೆಯರಿಗೆ ಹಂಚುವುದರಿಂದ ಏಡ್ಸ್ ನಿಯಂತ್ರಣ ಸಾಧ್ಯ ಎಂಬ ಹುಂಬತನವನ್ನು ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಬೆಳಸಿಕೊಂಡಿವೆ. ಅದಕ್ಕೂ ಮೀರಿ, ಅವರ ಮನವೊಲಿಸುವುದು, ಅವರ ಆರ್ಥಿಕ ಬದುಕನ್ನು ಸುಧಾರಣೆ ಮಾಡುವುದು, ಕಾರ್ಮಿಕರ ವಲಸೆ ತಡೆಗಟ್ಟುವುದು, ಹಳ್ಳಿಗಳಲ್ಲಿ ಉದ್ಯೋಗ ಸೃಷ್ಟಿಗೆ ಒತ್ತುಕೊಡುವುದು ಇವುಗಳು ಏಡ್ಸ್ ನಿಯಂತ್ರಣದಲ್ಲಿ ಪರಿಣಾಮಕಾರಿಯಾಗಬಲ್ಲವು ಎಂಬುದನ್ನು ಮನದಟ್ಟು ಮಾಡಿಕೊಡುವುದು ನಿಜಕ್ಕೂ ಸವಾಲಿನ ಕೆಲಸವಾಗಿದೆ.

ವರ್ಷದ ಹಿಂದೆ ಮಿಲಿಂದ ಗೇಟ್ಸ್ ಸಂಸ್ಥೆ, ಕಾರ್ಯಕರ್ತರಿಗಾಗಿ ಮೂರು ದಿನಗಳ ತರಬೇತಿ ಶಿಬಿರವನ್ನು ಹುಬ್ಬಳ್ಳಿಯಲ್ಲಿ ಆಯೋಜಿಸಿತ್ತು. ನಿಯಂತ್ರಣದ ಕಾರ್ಯತಂತ್ರವನ್ನು ಬದಲಿಸುವ ನಿಟ್ಟಿನಲ್ಲಿ ಈ ಶಿಬಿರವನ್ನು ಏರ್ಪಡಿಸಲಾಗಿತ್ತು. ಸಮಾಲೋಚಕನಾಗಿ ಪಾಲ್ಗೊಂಡಿದ್ದ ನಾನು ಮತ್ತು ಗೆಳೆಯರು ಸಲಹೆ ನೀಡುವ ಮೊದಲು ಕಾರ್ಯಕರ್ತರ ಸಮಸ್ಯೆಯನ್ನು ತಿಳಿಯೋಣವೆಂದು ಕಾರ್ಯಕರ್ತರ ಅಭಿಪ್ರಾಯ ಮಂಡನೆಗೆ ಅವಕಾಶ ಮಾಡಿಕೊಟ್ಟೆವು.

ಮನ ಮಿಡಿಯುವ ಎರಡು ಬರಹಗಳು

ಪಾತಿಮಾ ಎಂಬ 55 ವರ್ಷದ ಮುಸ್ಲಿಂ ವಿಧವೆಯೊಬ್ಬಳು, ದಿನಕ್ಕೆ 50ರೂ ವೇತನದ ಆಧಾರದ ಮೇಲೆ ಸ್ಥಳೀಯ ಸ್ವಯಂ ಸೇವಾ ಸಂಘಟನೆಯಲ್ಲಿ ಕಾರ್ಯನಿರ್ವಹಿಸುತಿದ್ದಳು. ಅವಳ ಕೆಲಸ ಪ್ರತಿದಿನ ಕನಿಷ್ಟ ಹತ್ತು ಮಂದಿ ವೇಶ್ಯೆಯರನ್ನು ಗುರುತಿಸಿ ಸಂಸ್ಥೆಗೆ ಕರತರಬೇಕು. ಸಂಸ್ಥೆ ಅವರಿಗೆ ಏಡ್ಸ್ ಬಗ್ಗೆ ತಿಳುವಳಿಕೆ ನೀಡಿ ಕಾಂಡೋಮ್ ಉಪಯೋಗಿಸುವಂತೆ ಮನವೊಲಿಸುತಿತ್ತು.

ಮಾತನಾಡಲು ಎದ್ದು ನಿಂತ ಆಕೆ " ಸಾಹೇಬ್ರ ರಂಡೀರು (ವೇಶ್ಯೆಯರು) ಕರ್ಕೊಬರ್ರಿ, ಕರ್ಕೊಬರ್ರಿ ಅಂತಾರ, ಯಾವ ಹೆಣ್‌ಮಗಳು ನಾನು ರಂಡಿ ಅಂತ ಮುಂದ ಬತ್ತಾಳ ನೀವೇ ಹೇಳ್ರಲಾ? ಹಾಂಗ ನೋಡಿದ್ರೆ ನಾವು ಕೂಡ ರಂಡೀರೆ ಇದ್ದೀವಿ ಸಾಹೇಬ್ರ ನಮ್ಮ ಗಂಡಂದಿರು ಸರಿ ಇದ್ರ ನಮಗೆ ಈ ಪಾಡು ಯಾಕ್ ಬತ್ತಿತು ಹೇಳ್ರಲಾ" ಎನ್ನುತ್ತಾ ತನ್ನ ಸೆರಗಿನಿಂದ ಮುಖಮುಚ್ಚಿಕೊಂಡು ಬಿಕ್ಕಳಿಸಿ ಅತ್ತುಬಿಟ್ಟಳು. ತಡೆಹಿಡಿದುಕೊಂಡಿದ್ದ ಆಕೆಯ ಸಹನೆಯೆಲ್ಲಾ ಆ ಕ್ಷಣದಲ್ಲಿ ಕಟ್ಟೆಯೊಡೆದು ಮಾತುಗಳ ರೂಪದಲ್ಲಿ ಹೊರಬಿದ್ದಿತು. ಅವಳ ನೋವು ಮತ್ತು ಆಕ್ರೋಶದಲ್ಲಿ ನಾವು ಈವರೆಗೆ ಕಾಣಲಾಗದ ಬಡತನದ ಕರಾಳ ಮುಖವೊಂದು ಅಲ್ಲಿ ಅನಾವರಣಗೊಂಡಿತ್ತು.

ಹುಬ್ಬಳಿ ಧಾರವಾಡ ಅವಳಿ ನಗರಗಳಲ್ಲಿ ಮುಸ್ಲಿಂ ಮಹಿಳೆಯರೂ ಸೇರಿದಂತೆ 30 ಸಾವಿರಕ್ಕೂ ಹೆಚ್ಚು ಬಡ ಮಹಿಳೆಯರು ತಮ್ಮ ಕುಟುಂಬದ ರಥ ಎಳೆಯಬೇಕಾದ ಹೊಣೆ ಹೊತ್ತುಕೊಂಡು ಉಳ್ಳವರ ಮನೆಯಲ್ಲಿ ಮನೆಗೆಲಸ ಮಾಡುತ್ತಾರೆ. ಸುಮಾರು ಎರಡು ಸಾವಿರ ಮಹಿಳೆಯರು ಖಾಸಾಗಿ ಹೋಟೆಲ್‌ಗಳಲ್ಲಿ ಮತ್ತು ಜೋಳದ ರೊಟ್ಟಿ ಮಾರುವ ಅಂಗಡಿಗಳಲ್ಲಿ ರೊಟ್ಟಿ ಬಡಿಯುವ ಕಾಯಕದಲ್ಲಿ ತೊಡಗಿಕೊಂಡಿದ್ದಾರೆ. ಇನ್ನುಳಿದ ಮೂರು ನಾಲ್ಕು ಸಾವಿರದಷ್ಟು ಹೆಂಗಸರು ಧಾರವಾಡ ಮತ್ತು ಹುಬ್ಬಳ್ಳಿ ಮಾರುಕಟ್ಟೆ ಪ್ರದೇಶದಲ್ಲಿ ಕಾಯಿಪಲ್ಲೆ ಮಾರುತ್ತಾರೆ. ಮನೆಗೆಲಸ ಮಾಡುತ್ತಿರುವ ಹೆಣ್ಣುಮಕ್ಕಳಲ್ಲಿ ಹಲವರು ಲೈಂಗಿಕ ಶೋಷಣೆಗೆ ಒಳಗಾಗುತಿದ್ದು, ಮಾನ ಮರ್ಯಾದೆ ದೃಷ್ಟಿಯಿಂದ ಇಲ್ಲವೇ ಅನೈತಿಕ ಸಂಬಂಧಕ್ಕೆ ಸಹಕರಿಸದಿದ್ದರೆ, ಕೆಲಸ ಕಳೆದುಕೊಳ್ಳುವ ಭಯದಿಂದ ತಾನು ಹೆತ್ತ ಮಕ್ಕಳ ತುತ್ತಿನ ಚೀಲ ತುಂಬಿಸಬೇಕಾದ ತುರ್ತು ಅಗತ್ಯದಿಂದ ಪುರುಷ ಲೋಕದ ಕ್ರೌರ್ಯಕ್ಕೆ ತಣ್ಣಗೆ ಬಲಿಯಾಗುತಿದ್ದಾರೆ. ಇದು ಪಾತಿಮಾ ಬಿಚ್ಚಿಟ್ಟ ವಾಸ್ತವದ ಬದುಕಿನ ಸತ್ಯ. ಇಂತಹ ಶೋಷಣೆಗೆ ಒಡ್ಡಿಕೊಳ್ಳಲು ಇಷ್ಟವಾಗದ ಮಹಿಳೆಯರು ಉರಿವ ಬಿಸಿಲಿನಲ್ಲಿ, ಸುರಿವ ಮಳೆಯಲ್ಲಿ ಸೊಪ್ಪು ತರಕಾರಿ ಮಾರುತ್ತಾ ತಮ್ಮ ಕಾಯವನ್ನು ಕರ್ಪೂರದಂತೆ ಕರಗಿಸುತಿದ್ದಾರೆ. ಇದು ಕೇವಲ ಹುಬ್ಬಳ್ಳಿ ಧಾರವಾಡದ ಕಥೆಯಲ್ಲ, ಈ ದೇಶದ ಯಾವುದೇ ನಗರದಲ್ಲಿ ನಡೆಯುತ್ತಿರುವ ಕಥೆ. ಈ ದುರಂತ ನಮ್ಮ ನಾಗರೀಕ ಜಗತ್ತು ತಲೆತಗ್ಗಿಸಬೇಕಾದ ಸಂಗತಿ. (ಕಳೆದ ವಾರ ಧಾರವಾಡ ಕರ್ನಾಟಕ ವಿ.ವಿ.ಯ ಪ್ರಾಧ್ಯಾಪಕನೊಬ್ಬ ಮನೆಗೆಲಸ ಮಾಡುತಿದ್ದ ವಿಧವೆ ಹೆಣ್ಣು ಮಗಳೊಬ್ಬಳನ್ನು ಒಂಭತ್ತು ತಿಂಗಳ ಕಾಲ ಪ್ರತ್ಯೇಕ ಮನೆ ಮಾಡಿ ಇರಿಸಿಕೊಂಡು ಶೋಷಿಸಿದ ಘಟನೆ ಬಹಿರಂಗಗೊಂಡು ಈಗ ಆತನ ವಿರುದ್ಧ ಮೊಕದ್ದಮೆ ದಾಖಲಾಗಿದೆ)

ಅಮಾಯಕ ಮಹಿಳೆಯರನ್ನು ಇಂತಹ ನರಕ ಸದೃಶ್ಯ ಬದುಕಿಗೆ ದೂಡಿದ, ದೂಡುತ್ತಿರುವ ಇವರ ಪತಿ ಮಹಾಶಯರ ಕಥನ ಒಂದು ರೀತಿಯಲ್ಲಿ ಶಹಜಾದೆ ಹೇಳುತಿದ್ದ ಅರೆಬಿಯನ್ ನೈಟ್ಸ್ ಕಥೆಯಂತಹದ್ದು. ಅದಕ್ಕೆ ಆದಿ-ಅಂತ್ಯವೆಂಬುದೇ ಇಲ್ಲ.

10 ವರ್ಷದ ಹಿಂದೆ ಇದೇ ಅವಳಿ ನಗರಕ್ಕೆ ಹೊಂದಿಕೊಂಡಂತೆ ಇರುವ 70ಕ್ಕೂ ಹೆಚ್ಚು ಹಳ್ಳಿಗಳ ಕಾರ್ಮಿಕರ ದಿನಗೂಲಿ ಕೇವಲ 35 ರೂಪಾಯಿ ಇತ್ತು. ಈ ಅಲ್ಪ ಹಣದಲ್ಲಿ ಅವರು ನೆಮ್ಮದಿಯ ಜೀವನ ಕೂಡ ಸಾಗಿಸುತಿದ್ದರು. ಅವರಿಗೆ ಬೇರೆ ಯಾವುದೇ ದುಶ್ಚಟಗಳು ಇರಲಿಲ್ಲ. ಮೂರು ರೂಪಾಯಿಗೆ ಒಂದು ಕೆ.ಜಿ. ರಾಗಿ, ಏಳು ರೂಪಾಯಿಗೆ ಜೋಳ, ಎಂಟರಿಂದ ಒಂಬತ್ತು ರೂಪಾಯಿಗೆ ಅಕ್ಕಿ , ಐದರಿಂದ ಹತ್ತು ರೂಪಾಯಿ ಒಳಗೆ ಕೈಚೀಲದ ತುಂಬಾ ಕಾಯಿ ಪಲ್ಲೆ ದೊರೆಯುತಿತ್ತು. ಇವರು ಕೂಲಿಗೆ ಬರುವಾಗ ಮನೆಯಿಂದ ತಂದ ರೊಟ್ಟಿ, ಪಲ್ಯ, ಬೇಸರವಾದಾಗ ಅಗಿಯಲು ಎಲೆ ಅಡಿಕೆ ತರುತಿದ್ದರು. ಇವಿಷ್ಟೇ ಅವರ ಹವ್ಯಾಸಗಳಾಗಿದ್ದವು. ದುಡಿದು ಸಂಪಾದಿಸಿದ ಹಣ ಅವರ ಕುಟುಂಬದ ನಿರ್ವಹಣೆಗೆ ಮತ್ತು ಸರಳ ಜೀವನಕ್ಕೆ ಸಾಕಾಗುತಿತ್ತು.

ಈಗಿನ ಕೂಲಿದರ, ಈ ರೀತಿ ಇದೆ. ಕೃಷಿ ಚಟುವಟಿಕೆಗೆ ಹಳ್ಳಿಗಳಲ್ಲಿ ನೂರಾಐವತ್ತು ರೂ ಇದ್ದರೆ, ನಗರಗಳಲ್ಲಿ ಮಣ್ಣು ಅಗೆತ, ಕಟ್ಟಡ ನಿರ್ಮಾಣ ಕೆಲಸಕ್ಕೆ ಇನ್ನೂರು ರೂಪಾಯಿ ಇದೆ. ಅರೆ ಕುಶಲ ಕೆಲಸಗಳಾದ ನೆಲಕ್ಕೆ ಟೈಲ್ಸ್ ಹಾಕುವುದು, ನಳ ಜೋಡಿಸುವುದು, ಕಬ್ಬಿಣ ಕಟ್ಟುವುದು ಇವುಗಳ ಸಹಾಯಕರ ಕೆಲಸಕ್ಕೆ ಇನ್ನೂರ ಐವತ್ತು ಕೂಲಿ ಸಿಗುತ್ತಿದೆ. ಸರಾಸರಿ ಒಬ್ಬನ ಕೂಲಿ ಇನ್ನೂರು ರೂ. ಎಂದು ಲೆಕ್ಕ ಹಾಕಿದರೂ ತಿಂಗಳಲ್ಲಿ ನಾಲ್ಕು ವಾರದ ರಜೆ ಮತ್ತು ಮದುವೆ, ಹಬ್ಬ ಇತ್ಯಾದಿಗೆ ಒಂದು ದಿನ ರಜೆ ಇವುಗಳನ್ನು ಕಳೆದು ಉಳಿದ 25 ದಿನಗಳಿಗೆ ಒಬ್ಬ ಕಾರ್ಮಿಕನ ಸಂಪಾದನೆ 5 ಸಾವಿರ ರೂಪಾಯಿ.

ಇವತ್ತಿನ ವ್ಯಕ್ತಿಯೊಬ್ಬನ 5 ಸಾವಿರ ರೂ.ಗಳ ಆದಾಯದಲ್ಲಿ ಅವನ ವೈಯಕ್ತಿಕ ಖರ್ಚಿನ ವಿವರ ಹೀಗಿದೆ. ಪ್ರತಿ ದಿನ ನಗರಕ್ಕೆ ಬಂದು ಹೋಗುವ ಬಸ್ ಪ್ರಯಾಣದ ವೆಚ್ಚ-20 ರೂ. ಹತ್ತು ಗುಟ್ಕಾ ಪಾಕೇಟ್‌ಗಳಿಗೆ 20 ರೂ. ಎರಡು ಚಹಾ, ಮತ್ತು ಮಿರ್ಚಿಗೆ 20 ರೂ. ಮಧ್ಯಾಹ್ನದ ಲಘು ಊಟ ಅಥವಾ ಉಪಹಾರಕ್ಕೆ 15 ರೂ. ರಾತ್ರಿಯ ಕುಡಿತಕ್ಕೆ ಕಡಿಮೆ ದರದ ವಿಸ್ಕಿಗೆ (180 ಎಂ.ಎಲ್.) 50 ರೂ. ವಿಸ್ಕಿ ಜೊತೆ

ತಿನ್ನುವ ಕುರುಕು ತಿಂಡಿಗೆ 10 ರೂ. ಆನಂತರ ಒಳಗೆ ಹೋದ ಪರಮಾತ್ಮ ಮಾತಾಡು ಕಂದಾ, ಮಾತಾಡು ಕಂದಾ ಎಂದು ರುದ್ರ ನರ್ತನ ಮಾಡಿ, ಎದೆಗೆ ಒದ್ದ ಪರಿಣಾಮ, ಅವನ ಪರಿಚಿತರಿಗೆಲ್ಲಾ ಮಲಗಿರಲಿ. ಎದ್ದಿರಲಿ ಮೊಬೈಲ್‌ನಲ್ಲಿ ಕರೆ ಮಾಡಿ ಮಾತನಾಡಿದ್ದಕ್ಕೆ ಸರಾಸರಿ ಕರೆನ್ಸಿ ವೆಚ್ಚ 20 ರೂ. ಇವುಗಳ ಒಟ್ಟು ಮೊತ್ತ ದಿನವೊಂದಕ್ಕೆ 145 ರೂಪಾಯಿ. ಅಂದರೆ, 30 ದಿನಗಳಿಗೆ 4 ಸಾವಿರದ 350 ರೂಪಾಯಿ. ಉಳಿದ 650 ರೂಪಾಯಿಗಳಲ್ಲಿ ವಾರಕ್ಕೆ ಒಂದು ಸಿನಿಮಾ ಎಂದರೂ ನಾಲ್ಕು ವಾರಕ್ಕೆ 400 ರೂ. ಹೀಗೆ ಅವನ ಒಟ್ಟು ಸಂಪಾದನೆಯಲ್ಲಿ ಖರ್ಚು ಕಳೆದು ಉಳಿಯ ಬಹುದಾದ ಹಣ ಕೇವಲ 250 ರೂಪಾಯಿ. ಈ ಹಣದಲ್ಲಿ ಕುಟುಂಬ ಹೇಗೆ ನಡೆಯಬೇಕು ನೀವೇ ನಿರ್ಧರಿಸಿ.

ನಗರ ಮತ್ತು ಹಳ್ಳಿಗಳಲ್ಲಿ ಉದ್ಯೋಗ ಸೃಷ್ಟಿಯಾಗಿದೆ, ದುಡಿಯುವ ಕೈಗಳಿಗೆ ಕೈ ತುಂಬಾ ಕೆಲಸ ಮತ್ತು ಸಂಬಳ ಸಿಕ್ಕಿದೆ ಎಂದು ಅಭಿವೃದ್ಧಿಯ ಬಗ್ಗೆ ಬೊಗಳೆ ಬಿಡುವವರ ಮಾತಿನ ಹಿಂದೆ ಇರುವ ಕಹಿ ಸತ್ಯ ಇದು. ಆಧುನಿಕ ಜಗತ್ತಿನ ಅಭಿವೃದ್ಧಿಯ ಮಂತ್ರವೆಂದರೆ, ಬಲಗೈಯಲ್ಲಿ ಹತ್ತು ರೂಪಾಯಿ ನೀಡಿ, ಎಡಗೈಯಲ್ಲಿ ಒಂಭತ್ತು ರೂಪಾಯಿ ಕಿತ್ತುಕೊಳ್ಳುವುದೇ ಆಗಿದೆ.

ಭಾರತ ಮತ್ತು ಜಗತ್ತಿನ ಹಿರಿಯಣ್ಣ ಅಮೇರಿಕಾ ಸೇರಿದಂತೆ. ಹಲವು ರಾಷ್ಟ್ರಗಳು ಆರ್ಥಿಕ ಬೆಳವಣಿಗೆಯಲ್ಲಿ ಏಕೆ ಮುಗ್ಗರಿಸುತ್ತಿವೆ, ಬಡತನ ಏಕೆ ನಿರ್ಮೂಲನವಾಗುತ್ತಿಲ್ಲ ಎಂಬ ಪ್ರಶ್ನೆಗೆ ನಾವು ರೂಪಿಸಿರುವ ಅಭಿವೃದ್ಧಿಯ ಕ್ರಮ ಎಂತಹದ್ದು ಎಂಬುದರ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಈ ರಾಜ್ಯದ ಅಬಕಾರಿ ಸಚಿವನೊಬ್ಬ ಅಬಕಾರಿ ಆದಾಯ 6 ಸಾವಿರ ಕೋಟಿಯಿಂದ 9 ಸಾವಿರ ಕೋಟಿಗೆ ಹೆಚ್ಚಿದೆ ಎಂದು ಹೆಮ್ಮೆಯಿಂದ ಹೇಳುಕೊಳ್ಳವದು ನಾಚಿಕೆಗೇಡಿನ ಸಂಗತಿ ಎಂದು ಯಾರಿಗೂ ಅನಿಸುತ್ತಿಲ್ಲ. 9 ಸಾವಿರ ಕೋಟಿ ಆದಾಯದಲ್ಲಿ ಈ ರಾಜ್ಯದ ಎಷ್ಟು ಹೆಣ್ಣು ಮಕ್ಕಳ ಕಣ್ಣೀರಿನ ಕಥೆ ಅಡಗಿದೆ ಎಂಬುದು ನಮ್ಮನ್ನಾಳುವ ಮೂರ್ಖರಿಗೆ ಗೊತ್ತಿದೆಯಾ?

ಮನು ಕುಲವನ್ನು ಉದ್ಧಾರ ಮಾಡಲಾಗದ, ಈ ನೆಲದ ಮೇಲಿನ ಮನುಷ್ಯನ ಬದುಕಿಗೆ ಘನತೆ ತರಲಾದ ಯಾವುದೇ ಆರ್ಥಿಕ ಸಿದ್ಧಾಂತಗಳಿಗೆ, ಚಿಂತನೆಗಳಿಗೆ, ವೇದ ಪುರಾಣ. ಉಪನ್ಯಾಸಗಳಿಗೆ ಬೆಂಕಿ ಹಚ್ಚಿ ನಾವೀಗ ಮನುಷ್ಯರಾಗಿ ಬದುಕುವ ಚಿಂತನೆಯ ಮಾದರಿಯನ್ನು ರೂಪಿಸಿಕೊಳ್ಳಬೇಕಾಗಿದೆ.

* * *

ಹಸಿವು ಮತ್ತು ಸಾವಿಗೆ ಧರ್ಮದ ಹಂಗೆಲ್ಲಿದೆ?

ಕರ್ನಾಟಕದ ಬುದ್ಧಿವಂತರ ನಾಡೆಂದು ಹೆಸರಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇಲಿಂದ ಮೇಲೆ ಸಂಭವಿಸುತ್ತಿರುವ ಅಮಾನುಷವಾದ ಘಟನೆಗಳು, ನಾಗರೀಕ ಜಗತ್ತು ತಲೆತಗ್ಗಿಸುವಂತೆ ಮಾಡಿವೆ. ಸಮಾಜ ಘಾತುಕ ಶಕ್ತಿಗಳು ಧರ್ಮದ ಮತ್ತು ಕನ್ನಡ ನಾಡು ನುಡಿ ರಕ್ಷಣೆಯ ಹೆಸರಿನಲ್ಲಿ ಮುಖವಾಡ ಧರಿಸಿಕೊಂಡು ವಿಜೃಂಭಿಸುತ್ತಿರುವದನ್ನ ಗಮನಿಸಿದರೆ, ಕರ್ನಾಟಕದಲ್ಲಿ ಮನುಷ್ಯರೆನಿಸಿಕೊಂಡವರು ಸರ್ಕಾರ ನಡೆಸುತ್ತಿಲ್ಲ ಬದಲಾಗಿ ಇದೊಂದು "ಜಂಗಲ್ ರಾಜ್" ಎಂದು ನಿಸ್ಸಂಕೋಚವಾಗಿ ಹೇಳಬಹುದು.

ಈ ನೆಲದ ಮೇಲಿನ ಒಂದು ಜೀವ ಅದು ಗಂಡಾಗಿರಲಿ, ಹೆಣ್ಣಾಗಿರಲಿ, ಘನತೆಯಿಂದ ಬದುಕುವುದಕ್ಕೆ ಧರ್ಮದ ಅಥವಾ ಜಾತಿಯ ಹಂಗುಗಳು ಬೇಕಾಗಿಲ್ಲ ಎಂಬ ಸುಪ್ತ ಪ್ರಜ್ಞೆಯೊಂದು ಗುಪ್ತಗಾಮಿನಿಯಂತೆ ಈ ನೆಲದ ಸಂಸ್ಕೃತಿಯಲ್ಲಿ ಹರಿದು ಬಂದಿದೆ. ಇಂತಹ ಪ್ರಜ್ಞೆ ಮತ್ತು ನಂಬಿಕೆಗಳನ್ನು ಸೂಫಿ ಸಂತರು ಸೇರಿದಂತೆ, ಅಂಬೇಡ್ಕರ್, ಲೋಹಿಯಾ, ಕುವೆಂಪು ಮುಂತಾವರು ತಮ್ಮ ಬದುಕು ಮತ್ತು ಚಿಂತನೆಗಳ ಮೂಲಕ ಮತ್ತಷ್ಟು ಗಟ್ಟಿಗೊಳಿಸಿದ್ದಾರೆ ಜೊತೆಗೆ ವಿಸ್ತರಿಸಿದ್ದಾರೆ.

ಮಂಗಳೂರು ಘಟನೆಯ ಹಿನ್ನಲೆಯಲ್ಲಿ ಏಳು ವರ್ಷಗಳ ಹಿಂದೆ ತಮಿಳುನಾಡಿನ ಧಾರ್ಮಿಕ ಶ್ರದ್ಧಾ ಕೇಂದ್ರವಾದ ದರ್ಗಾ ಮತ್ತು ಅಲ್ಲಿನ ಮುಸ್ಲಿಮ್ ಸಮುದಾಯ ಸುನಾಮಿ ಸಂತ್ರಸ್ತರ ಬಗ್ಗೆ ನಡೆದುಕೊಂಡ ಮಾನವೀಯ ನಡವಳಿಕೆ ಪದೇ ಪದೇ ನೆನಪಾಗುತ್ತಿದೆ.

ಕೇಂದ್ರಾಡಳಿತ ಪ್ರದೇಶ ಪಾಂಡಿಚೇರಿಗೆ ಸೇರಿದ ಕಾರೈಕಲ್ ಜಿಲ್ಲಾ ಕೇಂದ್ರ ಮತ್ತು ತಮಿಳುನಾಡಿನ ಜಿಲ್ಲಾ ಕೇಂದ್ರವಾದ ನಾಗಪಟ್ಟಣಂ ನಡುವಿನ ರಾಜ್ಯ ಹೆದ್ದಾರಿಯಲ್ಲಿ ಕಡಲ ತೀರಕ್ಕೆ ಹೊಂದಿಕೊಂಡಂತೆ ನಾಗೂರು ಎಂಬ ಊರಿದೆ. ಇಪ್ಪತ್ತು ಸಾವಿರ ಜನಸಂಖ್ಯೆ

ಪ್ರಸಿದ್ಧ ಸೂಫಿ ಸಂತ ಸಾಹುಲ್ ಹಮೀದ್ ದರ್ಗಾ

ಇರುವ ಈ ಊರಿನಲ್ಲಿ ಶೇಕಡ 90 ಮಂದಿ ಮುಸ್ಲಿಂ ಬಾಂಧವರು ನೆಲೆಸಿದ್ದಾರೆ. ಇವರ ಮಾತೃಭಾಷೆ ತಮಿಳು.. ಇದೇ ಊರಿನಲ್ಲಿ ಸಾಹುಲ್ ಹಮೀದ್(1490–1573) ಎಂಬ ಪ್ರಸಿದ್ಧ ಸೂಫಿ ಸಂತನ ದರ್ಗಾ ಇದ್ದು ಪ್ರತಿದಿನ ದಕ್ಷಿಣ ಭಾರತದ ರಾಜ್ಯಗಳಿಂದ ಸಾವಿರಾರು ಹಿಂದು ಮತ್ತು ಮುಸ್ಲಿಂ ಭಕ್ತರು ಇಲ್ಲಿಗೆ ಬೇಟಿ ನೀಡುತ್ತಾರೆ. ಈ ಕ್ಷೇತ್ರ ಇವತ್ತಿಗೂ ದಕ್ಷಿಣ ಭಾರತದಲ್ಲಿ ಮುಸ್ಲಿಂ ಸಮುದಾಯದ ಪುಣ್ಯಕ್ಷೇತ್ರಗಳಲ್ಲಿ ಒಂದು. ಈ ದರ್ಗಾಕ್ಕೆ ಒಂದು ಐತಿಹಾಸಿಕ ಮಹತ್ವವಿದೆ.

16ನೇ ಶತಮಾನದಲ್ಲಿ ತಮಿಳುನಾಡನ್ನು ಆಳುತಿದ್ದ ವಿಜಯನಗರ ಸಾಮ್ರಾಜ್ಯದ ಅರಸರಲ್ಲಿ ಒಬ್ಬನಾಗಿದ್ದ ಅಚ್ಯುತಪ್ಪ ನಾಯಕ ಎಂಬ ದೊರೆ ಗುಣವಾಗದ ಕಾಯಿಲೆಯಿಂದ ಬಳಲುತಿದ್ದಾಗ, ಈ ಪ್ರದೇಶಕ್ಕೆ ಬಂದ ಸೂಫಿ ಸಂತ ಪಾರಿವಾಳದ ರಕ್ತದ ಮೂಲಕ ಅರಸನ ಕಾಯಿಲೆಯನ್ನು ವಾಸಿಮಾಡಿದನಂತೆ. ಇದರಿಂದ ಸಂತೃಪ್ತನಾದ ದೊರೆ ಆ ಸಂತನಿಗೆ ಇನ್ನೂರು ಎಕರೆ ಭೂಮಿ ದಾನ ಮಾಡಿದ . ಇದೇ ಭೂಮಿಯಲ್ಲಿ ತನ್ನ ಶಿಷ್ಯರೊಂದಿಗೆ ನೆಲೆ ನಿಂತು, ಜನಸಾಮಾನ್ಯರ ದೈಹಿಕ ಮತ್ತು ಮಾನಸಿಕ ರೋಗಗಳನ್ನು ಗುಣಪಡಿಸುತ್ತಾ ಜೀವಿಸಿದ್ದ ಸಂತ ಸಾಹುಲ್ ಹಮೀದ್ 1573ರಲ್ಲಿ ನಾಗೂರಿನಲ್ಲಿ ಅಸು ನೀಗಿದಾಗ ಅವನ ಶಿಷ್ಯಂದಿರು ಗುರುವಿಗೆ ಸಮಾಧಿ ನಿರ್ಮಾಣ ಮಾಡಿ ಅಂದಿನಿಂದ ಇಂದಿನವರೆಗೂ ಅದನ್ನು ಪೂಜಿಸುತ್ತಾ ಶ್ರದ್ಧೆಯಿಂದ ನಡೆದುಕೊಂಡು ಬಂದಿದ್ದಾರೆ. ತಮಿಳು ನಾಡಿನ ಈ ಕರಾವಳಿ ಪ್ರದೇಶಗಳನ್ನು ಆಳಿದ ಟಿಪ್ಪು ಸುಲ್ತಾನ್, ಮರಾಠರು ಮತ್ತು ಬ್ರಿಟೀಷರು ಕೂಡ ಈ ಧಾರ್ಮಿಕ ಶ್ರದ್ಧಾಕೇಂದ್ರಕ್ಕೆ ನೆರವಾದ ಬಗ್ಗೆ ದಾಖಲೆಗಳಿವೆ.

ಸಂತನ ವಂಶಸ್ತರ ಮೇಲ್ವಿಚಾರಣೆಯಲ್ಲಿ ಟ್ರಸ್ಟ್ ಕೂಡ ರಚನೆಯಾಗಿದೆ.

2004ರ ಸುನಾಮಿಗೆ ತುತ್ತಾದ ತಮಿಳುನಾಡಿನ ನಾಗಪಟ್ಟಣಂ ಜಿಲ್ಲೆಯ ಬಂದರೊಂದರ ದೃಶ್ಯ

ಗುಣವಾಗದ ಕಾಯಿಲೆಗಳಿಗೆ ಈಗಲೂ ಅಲ್ಲಿ ದೇಸಿ ಪದ್ಧತಿಯ ಔಷದೋಪಚಾರ ನಡೆಯುತ್ತಿದೆ. ವಿಶೇಷವಾಗಿ ಮಾನಸಿಕ ಅಸ್ವಸ್ಥರನ್ನು ಗುಣಪಡಿಸುವ ಧಾರ್ಮಿಕ ಮತ್ತು ಔಷೋಧಚಾರ ಕ್ರಿಯೆಗಳು ಸಹ ಅಲ್ಲಿ ಜರಗುತ್ತವೆ.

ಅಧಿಕ ಸಂಖ್ಯೆಯಲ್ಲಿ ಹಿಂದೂ ಭಕ್ತರೂ ಸಹ ಆಗಮಿಸಿ, ದರ್ಗಾ ಹಿಂದಿರುವ ಬೃಹತ್ ಕಲ್ಯಾಣಿಯಲ್ಲಿ ಸ್ನಾನ ಮಾಡಿ, ಸಂತನ ಸಮಾಧಿಗೆ ಪೂಜೆ ಸಲ್ಲಿಸುವ ವಾಡಿಕೆ

ಚಾಲ್ತಿಯಲ್ಲಿದೆ.

2004ರ ಡಿಸಂಬರ 26ರಂದು ಇಂಡೋನೇಷ್ಯಾದ ಸಮುದ್ರದ ತಳದಲ್ಲಿ ಸಂಭವಿಸಿದ ಭೂಕಂಪದ ಪರಿಣಾಮ ಉಂಟಾದ್ ಸುನಾಮಿ ಅಲೆಗಳಿಗೆ ಭಾರತದ ಪೂರ್ವ ಭಾಗದ ಕಡಲತೀರದ ಪ್ರದೇಶಗಳು ತುತ್ತಾದದ್ದು ಎಲ್ಲರೂ ಬಲ್ಲ ಸಂಗತಿ. ತಮಿಳುನಾಡಿನ ಕಡಲತೀರಗಳು ಈ ಸಂದರ್ಭದಲ್ಲಿ ಅಪಾರ ಹಾನಿಗೆ ಒಳಗಾದವು. 55 ಸಾವಿರಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡರು. ಬ್ರಿಟೀಷರಿಗೂ ಮುನ್ನ ಡಚ್ಚರಿಂದ ಮತ್ತು ಪೋರ್ಚುಗೀಸರಿಂದ ಆಳಿಸಿಕೊಂಡಿದ್ದ ನಾಗಪಟ್ಟಣ, 5ನೇ ಶತಮಾನದಿಂದಲೂ ಬಂದರು ಪಟ್ಟಣವಾಗಿ ಪ್ರಸಿದ್ಧಿ ಪಡೆದಿತ್ತು. ಸುನಾಮಿ ಪಕೃತಿ ವಿಕೋಪಕ್ಕೆ ಇಡೀ ನಾಗಪಟ್ಟಣ ಜಿಲ್ಲೆ ತುತ್ತಾಗಿ 35 ಸಾವಿರ ಜನ ಪ್ರಾಣ ತೆತ್ತು, ಲಕ್ಷಾಂತರ ಮಂದಿ ತಮ್ಮ ಆಸ್ತಿಗಳನ್ನು ಕಳೆದುಕೊಂಡು ಅಕ್ಷರಶಃ ಅನಾಥರಾದರು. ಈ ಸಂದರ್ಭದಲ್ಲಿ ಭಾರತ ಸರ್ಕಾರ ವಿದೇಶಗಳ ನೆರವನ್ನು ನಿರಾಕರಿಸಿ, ಸಂತ್ರಸ್ತರ ಪರಿಹಾರಕ್ಕೆ ಯುದ್ಧೋಪಾದಿಯಲ್ಲಿ ಕಾರ್ಯಚರಣೆ ಕೈಗೆತ್ತಿಗೊಂಡಿತು.

ನಾಗಪಟ್ಟಣಂ ಜಿಲ್ಲೆಯಲ್ಲಿ ರಸ್ತೆ, ದೂರವಾಣಿ ಸಂಪರ್ಕ, ವಿದ್ಯುತ್ ಸಂಪರ್ಕ ಎಲ್ಲವೂ ಅಸ್ತವ್ಯಸ್ತಗೊಂಡಿದ್ದವು. ಎಲ್ಲಡೆ ಕೊಳೆತ ಪ್ರಾಣಿಗಳ, ಮನುಷ್ಯರ ಮೃತ ದೇಹಗಳು ಗೋಚರಿಸುತಿದ್ದವು. ಸಾಂಕ್ರಾಮಿಕ ರೋಗ ಹರಡಲು ಪ್ರಾರಂಭಿಸಿತು. ಒಂದೆಡೆ ಮೃತ ದೇಹಗಳಿಗೆ ಮುಕ್ತಿ ಕಲ್ಪಿಸಿಕೊಡಬೇಕಾದ ಸವಾಲು, ಇನ್ನೊಂದೆಡೆ ಬದುಕುಳಿದವರಿಗೆ ಸೂರು, ಅನ್ನ ನೀರು, ಆರೋಗ್ಯ ಸೌಲಭ್ಯ ಒದಗಿಸುವ ಸವಾಲು. ಇವೆಲ್ಲವುಗಳನ್ನು ಆ ಸಂದರ್ಭದಲ್ಲಿ ಅಲ್ಲಿನ ಜಿಲ್ಲಾಧಿಕಾರಿಯಾಗಿದ್ದ 36 ವರ್ಷ ವಯಸ್ಸಿನ ಐ.ಎ.ಎಸ್. ಅಧಿಕಾರಿ ರಾಧಾಕೃಷ್ಣನ್ ಅತ್ಯಂತ ಸಮರ್ಥವಾಗಿ ನಿಭಾಯಿಸಿದ ರೀತಿ ಆಶ್ಚರ್ಯಪಡುವಂತಹದ್ದು.

ನಾಗಪಟ್ಟಣಂ ಹೊರವಲಯದಲ್ಲಿ 75 ಎಕರೆಗೂ ಹೆಚ್ಚು ವಿಸ್ತೀರ್ಣವಿರುವ ಜಿಲ್ಲಾಧಿಕಾರಿಯ ಕಛೇರಿ ಆವರಣದಲ್ಲಿ ತೆಂಗಿನ ಗರಿಗಳಿಂದ ಬೃಹತ್ ಶೆಡ್ಡುಗಳನ್ನು ನಿರ್ಮಾಣ ಮಾಡಿ, ಬದುಕುಳಿದವರಿಗೆ ಆಶ್ರಯ ಕಲ್ಪಿಸಲಾಯಿತು. ಕೇಂದ್ರದಿಂದ ಮತ್ತು ದೇಶದ ವಿವಿಧ ರಾಜ್ಯಗಳಿಂದ ಬಂದ ಪಡೆಗಳನ್ನು ಮತ್ತು ಸ್ವಯಂ ಸೇವಕರನ್ನು ಮೃತದೇಹಗಳಿಗೆ ಅಂತ್ಯಸಂಸ್ಕಾರ ಮಾಡುವ ಕೆಲಸಕ್ಕೆ ನಿಯೋಜಿಸಲಾಯಿತು. ಇಂತಹ ಕೆಲಸ ಕೇವಲ ಸರ್ಕಾರ ಅಥವಾ ಸ್ವಯಂ ಸೇವಾ ಸಂಸ್ಥೆಗಳು ಇವುಗಳು ಮಾಡಿದರೆ ಸಾಲದು, ಸ್ಥಳೀಯರೂ ಇದರಲ್ಲಿ ಪಾಲ್ಗೊಳ್ಳಬೇಕೆಂದು ನಾಗೂರು ದರ್ಗಾ ಮುಸ್ಲಿಂ ಬಾಂಧವರಿಗೆ ಕರೆ ನೀಡಿತು.

ನಾಗೂರು ದರ್ಗಾದ ಈ ಕರೆಗೆ ಓಗೊಟ್ಟ ಕಾರೈಕಲ್, ಕುಂಭಕೋಣಂ, ಮಯಿಲಾಡುತೊರೈ, ತಿರುವರೂರು ಮತ್ತು ತಂಜಾವೂರು ಪ್ರದೇಶಗಳಿಂದ ಮುಸ್ಲಿಮರು ಸಾವಿರಾರು ಸಂಖ್ಯೆಯಲ್ಲಿ ಬಂದು ಕೊಳೆಯುತಿದ್ದ ಮೃತ ದೇಹಗಳಿಗೆ ಜಾತಿ, ಧರ್ಮ ನೋಡದೆ, ಅಂತ್ಯಕ್ರಿಯೆ ನಡೆಸಿದರು. ನಾಗೂರು ದರ್ಗಾ ಆವರಣದಲ್ಲಿ ಬೃಹತ್ ಪೆಂಡಾಲ್ ನಿರ್ಮಿಸಿ, ಬದುಕುಳಿದಿದ್ದ ಎಂಟು ಸಾವಿರ ಮಂದಿಗೆ 40 ದಿನಗಳ ಆಶ್ರಯ ಒದಗಿಸಿದರು. ಬೆಳಿಗ್ಗೆ ಎಂಟು ಗಂಟೆಗೆ ಚಹಾ, ಹನ್ನೊಂದು ಗಂಟೆಗೆ ಊಟ, ನಾಲ್ಕು ಗಂಟೆಗೆ ಚಹಾ ಬ್ರೆಡ್, ಸಂಜೆ ಏಳು ಗಂಟೆಗೆ ಊಟ. ಹೀಗೆ ನಿರಂತರ ನಲವತ್ತು ದಿನಗಳ ಕಾಲ, ಜಾತಿ ಅಥವಾ ಧರ್ಮದ ನೆಲೆ ನೋಡದೇ ಎಂಟು ಸಾವಿರ ಮಂದಿಯಗೆ ಆಶ್ರಯ ನೀಡಿ ಕಾಪಾಡಿದ ಗೌರವ ಈ ದರ್ಗಾಕ್ಕೆ ಸೇರಿತು. ಈ ಮಹತ್ಕಾರ್ಯಕ್ಕಾಗಿ ಮುಸ್ಲಿಂ ವರ್ತಕರು, ರೈತರು, ಪ್ರತಿದಿನ ಕ್ವಿಂಟಾಲ್‌ಗಟ್ಟಲೆ ಅಕ್ಕಿ, ತರಕಾರಿ, ಎಣ್ಣೆ, ಬೇಳೆ, ಸಾಂಬಾರ್ ಪುಡಿ, ಸಕ್ಕರೆ, ಹಾಲು, ಚಹಾ ಪುಡಿಯನ್ನು ದರ್ಗಾದ ಆವರಣಕ್ಕೆ ತಂದು ಸುರಿದು ತಮ್ಮ ಹೆಸರು ಕೂಡ ತಿಳಿಸದೆ ಹೋಗುತಿದ್ದ ರೀತಿಗೆ ಸ್ವತಃ ಸಾಕ್ಷಿಯಾದ ನಾನು ಬೆರಗಾಗಿದ್ದೀನಿ. ಅವರ ನಡವಳಿಕೆಯಲ್ಲಿ ' ನೀಡುವವನಿಗೆ ಅಹಂ, ಪಡೆದವನಿಗೆ ಕೀಳರಿಮೆ ಇರಬಾರದು" ಎಂಬ ಮನುಷ್ಯತ್ವದ ಮಹಾನ್ ಪ್ರಜ್ಞೆಯೊಂದು ಎದ್ದು ಕಾಣುತಿತ್ತು.

ಬದುಕಿದ್ದಾಗ ಜಾತಿಯನ್ನು, ಧರ್ಮವನ್ನು ಅಪ್ಪಿಕೊಂಡು ಬಡಿದಾಡುವ ಈ ನರಜನ್ಮಕ್ಕೆ ಸುನಾಮಿಯ ಒಡೆತಕ್ಕೆ ಸಿಲುಕಿ ಕಡಲತೀರದಲ್ಲಿ ಕೊಳೆಯುತ್ತಿರುವಾಗ, ಯಾವುದೋ ಇನ್ನೊಂದು ಬದುಕುಳಿದ ಜೀವ ಬೃಹತ್ ಕಂದಕ ತೋಡಿ, ಸಾಮೂಹಿಕವಾಗಿ ಹೂಳುವಾಗ, ಅಲ್ಲಿ ಧರ್ಮದ ಅಥವಾ ಜಾತಿಯ ಸೋಂಕು ಕಾಣಲಿಲ್ಲ. ಬದುಕಿದ್ದ ಜೀವಕ್ಕೆ ಮೃತಪಟ್ಟವರೆಲ್ಲರೂ ಮನುಷ್ಯರು ಎಂಬ ಪ್ರಜ್ಞೆ ಮಾತ್ರ ಇತ್ತು. ಹಸಿದ ಜೀವವೊಂದು ಅನ್ನಕ್ಕೆ ಕೈಯೊಡ್ಡಿದಾಗ ಅಲ್ಲಿ ತಾನು ಈವರೆಗೆ ಅಪ್ಪಿಕೊಂಡಿದ್ದ ಜಾತಿ ಅಥವಾ ಧರ್ಮದ ನೆನಪೇ ಆ ಕ್ಷಣದಲ್ಲಿ ಬರಲಿಲ್ಲ ಏಕೆಂದರೆ, ಪಕೃತಿಯ ವಿಕೋಪದಲ್ಲಿ ಬದುಕುಳಿದ ಜೀವಕ್ಕೆ ಜಾತಿಗಿಂತ ಧರ್ಮಕ್ಕಿಂತ ಹೊಟ್ಟೆ ತುಂಬುವ ಅನ್ನ ಮುಖ್ಯವಾಗಿತ್ತು. ಇಂತಹ ಕಟು ವಾಸ್ತವ ಸತ್ಯಗಳನ್ನು ಧರ್ಮದ ಹೆಸರಿನಲ್ಲಿ ಕತ್ತಿ ಹಿಡಿದು ಬೀದಿಯಲ್ಲಿ ಹಾರಾಡುವ ಹಲಾಲುಕೋರರಿಗೆ ತಲುಪಿಸುವ ಬಗೆ ಹೇಗೆ? ನೀವೇನಾದರೂ ಬಲ್ಲಿರಾ?

(ಇತ್ತೀಚಗೆ ಈ ದರ್ಗಾಕ್ಕೆ ಬೇಟಿ ನೀಡಿ, ಪೋಟೊ ತೆಗೆದು, ಅಲ್ಲಿನ ಮುಖ್ಯಸ್ತರೊಂದಿಗೆ ಚಹಾ ಕುಡಿದು, ಮಾತನಾಡುವಾಗ ಹಳೆಯ ಘಟನೆಗಳು ನೆನಪಾದವು) ■

ಹೊರೆ

ಬತ್ತಿದ ಎದೆಯಲಿ
ಅಪ್ಪಿದ ಮಗುವಿಗೆ ಹಾಲಿಲ್ಲ
ಬಿತ್ತಿದ ಬೀಜಕೆ
ಮೊಳೆತು ಬೆಳೆಯಲು ನೀರಿಲ್ಲ

ಬಿಸಿಲಲ್ಲೂ ಬೆವರ ಬಸಿದು
ಬೆಳೆದ ಬೆಳೆಗೆ ಬೆಲೆಯಿಲ್ಲ
ಅಲೆದಲೆದು ಬಳಲಿ
ಬೆಂಡಾದ ಜೀವಕ್ಕೆ
ಬಯಕೆ ಚಿಗುರಲಿಲ್ಲ

ಊಟವಿಲ್ಲದೆ ಪ್ರೀತಿಯಿಲ್ಲ
ಪ್ರೀತಿ ಇಲ್ಲದ ಮೇಲೆ
ನೀನೊಂದು ಜಂತು

ಮನೆಯಿದ್ದರೇನಂತೆ
ಆಕಳಿಲ್ಲದ ಗೊಂತು
ಬಡತನವೇ ಹೀಗೆ
ಬರಗಾಲವಿದ್ದಂತೆ

ಬದುಕಿದ್ದು ಸತ್ತಂತೆ
ಸತ್ತು ಸತ್ತು ಸಮಸ್ಯೆಗಳೊಳಗೆ
ಹುಟ್ಟಿ ಬಂದಂತೆ

■ ಉದಂತ ಶಿವಕುಮಾರ್

‘ಗೀತೆ’ಯ ಸತ್ಯಗಳು

ವಾಸ್ತವವಾಗಿ ‘ಮಹಾಭಾರತ’ ಯುಗವು ಮುಕ್ತ ಲೈಂಗಿಕ ಸಂಬಂಧಗಳಿಗೆ ಮಾನ್ಯತೆ ಇದ್ದ ಕಾಲವಾಗಿತ್ತು. ಕುಡಿತ ಹಾಗೂ ಪಗಡೆ ಪಂದ್ಯಗಳು ಆಗ್ಗೆ ರೂಢಿಯಲ್ಲಿದ್ದವು. ಜಾನುವಾರು ಅಪಹರಣಗಳೂ ವಿವಾಹ-ಯೋಗ್ಯ ವಯಸ್ಸಿನ ಕನ್ಯಾಪಹರಣಗಳೂ ಯಥೇಚ್ಛವಾಗಿ ನಡೆಯುತ್ತಿದ್ದವು. ನರಹತ್ಯೆಗಳು ಅದರಲ್ಲೂ ಸೋದರಹತ್ಯೆಗಳು ಸಾಮಾನ್ಯ ಸಂಗತಿಗಳಾಗಿದ್ದವು. ರಾಜ್ಯಾಧಿಕಾರವು ತಮ್ಮ ವಂಶದಿಂದ ತಪ್ಪಿಹೋಗದಂತೆ ನೋಡಿಕೊಳ್ಳಲು ಹಾಗೂ ಪಿತೃಗಳಿಗೆ ಸ್ವರ್ಗಪ್ರಾಪ್ತಿ ಲಭ್ಯವಾಗಿಸಲು ವೈವಾಹಿಕ ಸಂಬಂಧಕ್ಕೆ ಹೊರತಾದ ಪುತ್ರಪ್ರಾಪ್ತಿಯನ್ನು (ನಿಯೋಗ) ಉತ್ತೇಜಿಸಲಾಗುತ್ತಿತ್ತು. ತನ್ನನ್ನು ಹೆತ್ತವಳೂ ಪಟ್ಟದ ರಾಣಿಯೂ ಆದ ಸತ್ಯವತಿಯ ಪ್ರೇರಣೆಯಿಂದಲೇ ವ್ಯಾಸನು ರಾಜಮನೆತನಕ್ಕೆ ಸೇರಿದ ಅವಳ ಇಬ್ಬರು ಸೊಸೆಯರಾದ ಅಂಬಿಕೆ ಮತ್ತು ಅಂಬಾಲಿಕೆಯರನ್ನು ಕೂಡಿದ್ದು.

ಮೂಲ: ಡಾ॥ ವಿ ಆರ್ ನಾರ್ಲಾ
ಕನ್ನಡಕ್ಕೆ: ಪ್ರೊ॥ ಬಿ ಗಂಗಾಧರಮೂರ್ತಿ

ಗೀತೆಯ ಬಗ್ಗೆ ಸಂಪ್ರದಾಯನಿಷ್ಠ ದೃಷ್ಟಿಕೋನದಿಂದ ಹೇಳಲಾಗಿರುವ ಸಂಗತಿಗಳು ಲಘುವಾಗಿ ಪರಿಗಣಿಸಲು ಸಾಧ್ಯವೇ ಇಲ್ಲದ ಸಂದೇಹಗಳಿಂದ ತುಂಬಿವೆ. ಆದ್ದರಿಂದ ಈ ಪುಸ್ತಕಕ್ಕೆ "ಗೀತೆಯ ಮಿಥ್ಯಾಕಲ್ಪನೆಗಳು" ಎಂದು ಹೆಸರಿಡುವುದು ಹೆಚ್ಚು ಸೂಕ್ತವೆನಿಸುತ್ತದೆ. ಏಕೆಂದರೆ, ಕುರು-‘ಕ್ಷೇತ್ರ’ ಎಂಬ ಪವಿತ್ರ ಭಾವದ ಚೀಟಿ ಅಂಟಿಸಲಾಗಿರುವ ಈ ಪ್ರದೇಶದಲ್ಲಿ ನಿಜವಾಗಿಯೂ ಮಹಾಭಾರತ ಯುದ್ಧವು ನಡೆಯಿತೇ? ಹಾಗೆ ನಡೆದದ್ದೇ ಆಗಿದ್ದಲ್ಲಿ ಆಗ್ಗೆ ಭಾರತದಲ್ಲಿ ಇದ್ದಿರಬಹುದಾದ ಸಮಸ್ತ ಮಾಂಡಲಿಕರೂ, ಪ್ರಭುತ್ವಗಳೂ ಅವುಗಳ ಜೊತೆಗೆ ಕೆಲವೊಂದು ಹೊರದೇಶಗಳ ರಾಜಪ್ರಭುತ್ವಗಳೂ ಪಕ್ಷ ವಹಿಸಿ ಒಂದಲ್ಲ ಒಂದು ಪಾಳಯದಲ್ಲಿ ನಿಂತು ಕಾದಾಡಿದವೇ? ಆ ಮಹಾಯುದ್ಧದ ಕಾಲವು ಯಾವುದಾಗಿರಬಹುದು? ಅರ್ಜುನನ ಸಾರಥಿಯಾಗಿ ನೇಮಿಸಲ್ಪಟ್ಟ ಕೃಷ್ಣ ವಾಸುದೇವ ಎಂಬುವ ವ್ಯಕ್ತಿ ಇದ್ದನೇ? ತನ್ನ ಸ್ವ-ಸಾಮರ್ಥ್ಯದಿಂದ ಹಲವು ಯುದ್ಧಗಳನ್ನು ಗೆದ್ದು ಪರಾಕ್ರಮಿ ಎನಿಸಿಕೊಂಡ ಅರ್ಜುನನು ದುರ್ಯೋಧನನ ಪಾಳೆಯದಲ್ಲಿದ್ದ ಬೃಹತ್ ಸೇನಾಪಡೆಯ ಎದುರು ನಿಂತ, ಅಲ್ಪಸಂಖ್ಯೆಗೆ ಕುಸಿದಿದ್ದ, ತನ್ನ ಪಾಳಯವನ್ನು ಕಂಡು ಅಧೀರನಾಗಿ ಬಿಟ್ಟನೇ? ರಾಜ್ಯಾಧಿಪತ್ಯವನ್ನು ಕೈವಶ ಪಡಿಸಿಕೊಳ್ಳುವ ಕಾರಣಕ್ಕಾಗಿ ತನ್ನ ಬಂಧುಬಾಂಧವರನ್ನು ಕೊಲ್ಲಬೇಕಾಗಿ ಬಂದ ಸನ್ನಿವೇಶದಿಂದ ಚಿಂತಾಕ್ರಾಂತನಾಗಿ ಅಧೀರನಾದ ಎಂದೇ ಇಟ್ಟುಕೊಂಡರೂ ಹುಮ್ಮಸ್ಸು ತುಂಬುವ ಕೃಷ್ಣನ ಮಾತುಗಳು ನಡೆಯಲಿದ್ದ ಭಯಂಕರ ಮಾರಣ-ಹೋಮಕ್ಕಾಗಿ ಅವನ ಮನಸ್ಸನ್ನು ಸಿದ್ಧಗೊಳಿಸಲು ಸಾಧ್ಯವಿತ್ತೇ? ರಣರಂಗದ ಮುಂಚೂಣಿಯಲ್ಲಿ ಯುದ್ಧಸನ್ನದ್ಧರಾಗಿ ನಿಂತಿದ್ದ ಎರಡೂ ಪಕ್ಷಗಳ ಸೇನೆ ಕೃಷ್ಣ ಮತ್ತು ಅರ್ಜುನರ ನಡುವೆ ಜರುಗಿದ ಪ್ರಶ್ನೋತ್ತರ ರೂಪದ ಸಂಭಾಷಣೆಯನ್ನು ಆಲಿಸುತ್ತಾ ಆಗಿನ ಕಾಲದಲ್ಲಿ ಯುದ್ಧಕ್ಕೆ ಅತಿಸೂಕ್ತವೆನಿಸಿದ ಹಗಲು ವೇಳೆಯಲ್ಲಿ ನಿಷ್ಕ್ರಿಯರಾಗಿ ನಿಂತಿದ್ದವೇ? ಎಂಬ ಪ್ರಶ್ನೆಗಳು ಮೂಡುತ್ತವೆ.

ಕುರುಕ್ಷೇತ್ರ ರಣರಂಗದಲ್ಲಿ ಭಗವಂತನೇ ಖುದ್ದಾಗಿ ಹಾಡಿದ ಭಗವದ್ಗೀತೆ ಎನ್ನಲಾಗುವ ಈ ಗೀತೆಯು ನಮಗೆ ತಲುಪಿದ ಬಗೆಯಾದರೂ ಯಾವುದು ಎಂಬ ಮತ್ತೊಂದು ಪ್ರಮುಖ ಪ್ರಶ್ನೆಯೂ ನಮಗಿಲ್ಲಿ ಎದುರಾಗುತ್ತದೆ. ವೃದ್ಧನೂ ಕುರುಡನೂ ಆದ ಧೃತರಾಷ್ಟ್ರನು ಯುದ್ಧ ನಡೆಯುವಾಗ ರಣರಂಗದಿಂದ ಹಲವಾರು ಗಾವುದಗಳಷ್ಟು ದೂರದಲ್ಲಿದ್ದ ಹಸ್ತಿನಾಪುರದ ತನ್ನ ಅರಮನೆಯಲ್ಲಿದ್ದ. ಗೀತೆಯ ಪೂರ್ಣ ಪಠ್ಯವನ್ನು ಸಂಜಯನು ಯುದ್ಧದ ಕಡೆಯ ದಿನ ಧೃತರಾಷ್ಟ್ರನಿಗೆ ಹೇಳಿದ ಎಂಬುದಾಗಿ

'ಮಹಾಭಾರತ'ವು ತಿಳಿಸುತ್ತದೆ. ದೈವಸ್ವರೂಪಿಯಾದ ಕೃಷ್ಣನ ಬಾಯಿಂದ ಹೊರಬಿದ್ದ ಪ್ರತಿಯೊಂದು ಪದವನ್ನೂ ಸಂಜಯನು ವರದಿಯಾಗಿ ನಿರೂಪಿಸುವುದಷ್ಟೇ ಅಲ್ಲದೆ, ರಣರಂಗದಲ್ಲಿ ನೆರೆದಿದ್ದ ಸಮಸ್ತರ ಹಾವಭಾವಗಳನ್ನು ಅಷ್ಟೇ ಏಕೆ ಅವರ ಹುಬ್ಬಿನ ಚಲನೆಯನ್ನೂ ಒಳಗೊಂಡಂತೆ, ಆ ಪ್ರವಚನ ಸನ್ನಿವೇಶದ ಪ್ರತಿಯೊಂದು ವಿವರಗಳನ್ನೂ ವರದಿ ಮಾಡುತ್ತಾನೆ. ಯಾರ ಕಣ್ಣಿಗೂ ಬೀಳದಂತೆ, ಯಾವ ಶಸ್ತ್ರಾಸ್ತ್ರಗಳೂ ಮೈಸೋಕದಂತೆ ರಣರಂಗದ ಉದ್ದಗಲಕ್ಕೂ ಅವನು ತಿರುಗಾಡಬಲ್ಲ! ಅವನಿಗೆ ಹಗಲು ರಾತ್ರಿಗಳ ಮಿತಿಯಿಲ್ಲ! ಆಯಾಸದ ಪರಿವೆಯಿಲ್ಲದೆ ಇಪ್ಪತ್ತನಾಲ್ಕು ಗಂಟೆಗಳೂ ಕಾರ್ಯನಿರತನಾಗಿರಬಲ್ಲ! ರಣರಂಗದಲ್ಲಿ ತುಂಬಿ ಗಿಜಿಗುಡುತ್ತಿದ್ದ ಪ್ರತಿಯೊಬ್ಬರ ಮನದಾಳದ ಸಂಗತಿಗಳನ್ನೂ ತೆರೆದ ಪುಸ್ತಕವನ್ನು ಓದುವಂತೆ ಓದಬಲ್ಲ ಸಾಮರ್ಥ್ಯ ಅವನದು!

ಈ ಅಂಶಗಳು ಸ್ವಾಭಾವಿಕವಾಗಿಯೇ ಮತ್ತೊಂದು ಪ್ರಶ್ನೆಗೆ ದಾರಿ ಮಾಡಿಕೊಡುತ್ತವೆ. ನಂಬಲಸಾಧ್ಯವಾದ ಇವೆಲ್ಲವನ್ನೂ ಸಂಜಯನು ಆಧುನಿಕ ಕಾಲದ ವಿಜ್ಞಾನ ಮತ್ತು ತಂತ್ರಜ್ಞಾನವು ಕೂಡಾ ತಲೆ ತಗ್ಗಿಸುವ ರೀತಿಯಲ್ಲಿ ನಿರ್ವಹಿಸಿದ್ದಾದರೂ ಹೇಗೆ? ಇಂತಹ ಪ್ರಶ್ನೆಗಳನ್ನು ಕೇಳುವುದೇ ಮೂರ್ಖತನ ಎಂದು ಟೀಕೆ ಮಾಡುವುದು ಸಂಪ್ರದಾಯನಿಷ್ಠರಿಗೆ ಸ್ವಾಭಾವಿಕವೇ ಆಗಿದೆ. ಇದರಲ್ಲಿ ಸೋಜಿಗ ಪಡುವಂತಹದ್ದೇನಿಲ್ಲ. ಪೂರ್ವಕಾಲದ ಋಷಿಮುನಿಗಳು ಭೂಮಿಯ ಮೇಲಿನ ಭಗವಂತರೇ ತಾನೆ! ಯಾವ ವರವನ್ನು ಬೇಕಾದರೂ ದಯಪಾಲಿಸುವ ಸಾಮರ್ಥ್ಯ ಅವರಿಗಿತ್ತು. ಅದರಲ್ಲೂ ವ್ಯಾಸಮುನಿಗಳಿಗೆ ಎಂತಹ ವರಗಳನ್ನಾಗಲೀ ದಯಪಾಲಿಸುವ ಸರ್ವೋನ್ನತ ಶಕ್ತಿ ಇತ್ತು. ಧೃತರಾಷ್ಟ್ರ ಹುಟ್ಟು ಕುರುಡ. ಯುದ್ಧಭೂಮಿಯಲ್ಲಿ ನಡೆಯುತ್ತಿರುವುದನ್ನು ತಿಳಿದುಕೊಳ್ಳುವ ಬಯಕೆಯಿಂದ ಆಪ್ತನಾದ ಸಂಜಯನಿಗೆ ಸಮಸ್ತವನ್ನೂ ನೋಡುವ, ಕೇಳಿಸಿಕೊಳ್ಳುವ ಮತ್ತು ಅರಿಯುವ ವರವನ್ನು ನೀಡಬೇಕೆಂದು ವ್ಯಾಸನನ್ನು ಬೇಡಿಕೊಳ್ಳುತ್ತಾನೆ. ವ್ಯಾಸನು ಕೂಡಲೇ ವರವನ್ನು ದಯಪಾಲಿಸುತ್ತಾನೆ. ವಿಚಿತ್ರವೆಂದರೆ, ಈ ಪವಾಡ-ಸದೃಶ ಶಕ್ತಿಯು ಸಂಜಯನು ಕುರುಕ್ಷೇತ್ರ ಯುದ್ಧ ನಡೆಯುವ ಕಾಲಾವಧಿಯವರೆಗೆ ಬಳಸುವಷ್ಟು ಮಾತ್ರವೇ ಪರಿಮಿತವಾಗಿತ್ತು. ಯುದ್ಧಾನಂತರದ ಅವಧಿಯಲ್ಲಿ ಎಲ್ಲಿಯೂ ಎಂದೂ ಸಂಜಯ ಈ ಶಕ್ತಿಯನ್ನು ಬಳಸಿರುವ ಸೂಚನೆಗಳು ಕಂಡುಬರುವುದಿಲ್ಲ. ಈ ಶಕ್ತಿಯು ಅವನಿಗೆ ಕೈಕೊಟ್ಟ ಅಂಶವು ಕೂಡ ಒಂದು ಕಡೆ ಕಂಡುಬರುತ್ತದೆ: ಸಾತ್ಯಕಿ ಸಂಜಯನನ್ನು ಮುಗಿಸಲು ಹುಡುಕುತ್ತಿರುತ್ತಾನೆ. ಯುದ್ಧದ ಕೊನೆಯ ದಿನ ಸಂಜಯ ಅವನ ಕಣ್ಣಿಗೆ ಬೀಳುತ್ತಾನೆ. ಆದರೆ ಸಕಾಲದಲ್ಲಿ ವ್ಯಾಸನು ಮಧ್ಯಪ್ರವೇಶ ಮಾಡಿದ್ದರಿಂದ ಅವನು ಪಾರಾಗಿ ಬಿಡುತ್ತಾನೆ.

ಹಾಗೆ ನೋಡಿದರೆ, ವ್ಯಾಸನಿಂದ ಉಪಕೃತನಾದ ಧೃತರಾಷ್ಟ್ರನು ವಿವಾಹೇತರ ಸಂಬಂಧದಲ್ಲಿ ವ್ಯಾಸನಿಗೆ ಹುಟ್ಟಿದವನು. ವ್ಯಾಸನಂತಹ ಪವಿತ್ರಾತ್ಮರು ಇಂತಹ (ಇಂದು ಅಕ್ರಮ ಅಥವಾ ಅನೈತಿಕ ಎಂದು ಪರಿಗಣಿಸಲ್ಪಡುವ) ಸಂಬಂಧಗಳನ್ನಿಟ್ಟುಕೊಂಡಿದ್ದರು ಎಂಬುದನ್ನು ನಂಬಲು ಸಾಧ್ಯವಾಗುವುದಿಲ್ಲ, ಅಲ್ಲವೇ? ಆದರೆ ವ್ಯಾಸನು ಮಹಾಮುನಿ ಎನಿಸಿಕೊಂಡ ಪರಾಶರನಿಂದ ವಿವಾಹ-ಪೂರ್ವ ಕನ್ಯಾವಸ್ಥೆಯಲ್ಲಿ ಗರ್ಭವತಿಯಾದ ಸತ್ಯವತಿಯಲ್ಲಿ ಹುಟ್ಟಿದ. ಹಾಗೆಯೇ ಮುನಿಶ್ರೇಷ್ಠನೆಂದು ಕರೆಯಲಾಗುವ ವ್ಯಾಸನಿಗೆ ಕೂಡ ವಿವಾಹೇತರ ಸಂಬಂಧದಲ್ಲಿ ಹುಟ್ಟಿದ ನಾಲ್ಕು ಗಂಡು ಮಕ್ಕಳಿದ್ದವು. ಇದರಲ್ಲಿ ವಿಶೇಷವೇನಿಲ್ಲ. ಆದರೆ ಸಂಪ್ರದಾಯಶರಣರು ನಾವು ನಾಚಿಕೆಗೇಡು ಎಂದು ಪರಿಗಣಿಸಬಹುದಾದ ಇಂತಹ ಸಂಗತಿಗಳನ್ನು ಧರ್ಮದ ಸೋಗಿನಲ್ಲಿ ಮುಚ್ಚಿಹಾಕುವ ಪ್ರಯತ್ನಗಳನ್ನು ನಡೆಸಿದರು.

ವಾಸ್ತವವಾಗಿ 'ಮಹಾಭಾರತ' ಯುಗವು ಮುಕ್ತ ಲೈಂಗಿಕ ಸಂಬಂಧಗಳಿಗೆ ಮಾನ್ಯತೆ ಇದ್ದ ಕಾಲವಾಗಿತ್ತು. ಕುಡಿತ ಹಾಗೂ ಪಗಡೆ ಪಂದ್ಯಗಳು ಆಗ್ಗೆ ರೂಢಿಯಲ್ಲಿದ್ದವು. ಜಾನುವಾರು ಅಪಹರಣಗಳೂ ವಿವಾಹ-ಯೋಗ್ಯ ವಯಸ್ಸಿನ ಕನ್ಯಾಪಹರಣಗಳೂ ಯಥೇಚ್ಛವಾಗಿ ನಡೆಯುತ್ತಿದ್ದವು. ನರಹತ್ಯೆಗಳು ಅದರಲ್ಲೂ ಸೋದರಹತ್ಯೆಗಳು ಸಾಮಾನ್ಯ ಸಂಗತಿಗಳಾಗಿದ್ದವು. ರಾಜ್ಯಾಧಿಕಾರವು ತಮ್ಮ ವಂಶದಿಂದ ತಪ್ಪಿಹೋಗದಂತೆ ನೋಡಿಕೊಳ್ಳಲು ಹಾಗೂ ಪಿತೃಗಳಿಗೆ ಸ್ವರ್ಗಪ್ರಾಪ್ತಿ ಲಭ್ಯವಾಗಿಸಲು ವೈವಾಹಿಕ ಸಂಬಂಧಕ್ಕೆ ಹೊರತಾದ ಪುತ್ರಪ್ರಾಪ್ತಿಯನ್ನು (ನಿಯೋಗ) ಉತ್ತೇಜಿಸಲಾಗುತ್ತಿತ್ತು. ತನ್ನನ್ನು ಹೆತ್ತವಳೂ ಪಟ್ಟದ ರಾಣಿಯೂ ಆದ ಸತ್ಯವತಿಯ ಪ್ರೇರಣೆಯಿಂದಲೇ ವ್ಯಾಸನು ರಾಜಮನೆತನಕ್ಕೆ ಸೇರಿದ ಅವಳ ಇಬ್ಬರು ಸೊಸೆಯರಾದ ಅಂಬಿಕೆ ಮತ್ತು ಅಂಬಾಲಿಕೆಯರನ್ನು ಕೂಡಿದ್ದು. ಅವರ ವಿಷಯಲಂಪಟ ಪತಿರಾಯನು (ವಿಚಿತ್ರವೀರ್ಯ) ಭರತವಂಶವನ್ನು ಬೆಳಗಿಸಲು ಅಗತ್ಯವಾಗಿದ್ದ ಸಂತಾನ ಪ್ರಾಪ್ತಿಯನ್ನುಂಟುಮಾಡದೆ ಅಕಾಲಿಕ ಮರಣ ಹೊಂದಿದ್ದರಿಂದ ಅವಳು ಈ ಸಂಬಂಧವನ್ನು ಪ್ರೇರೇಪಿಸಿದಳು. ಹಾಗೆ ನೋಡಿದರೆ, ಸಂತಾನ ಪ್ರಾಪ್ತಿಗಾಗಿ ಬೇರೊಬ್ಬನಿಂದ ಬಸಿರಾಗುವ ಇಂತಹ ಸಂಬಂಧವು ಆ ವಂಶದಲ್ಲಾಗಲೀ ಅಥವಾ ಆ ಯುಗದಲ್ಲಾಗಲೀ ಸೀಮಿತವಾದ ಏಕೈಕ ಉದಾಹರಣೆಯಲ್ಲ.

ಸಂಪ್ರದಾಯನಿಷ್ಠರು ವ್ಯಾಸನನ್ನು ದೇವಮಾನವನೆಂದು ಚಿತ್ರಿಸಿದರೂ ಅವನು ಬೀಜಾಣು ದೋಷವಿದ್ದವನೆಂದು ತೋರುತ್ತದೆ. ಅಂಬಿಕೆಯಲ್ಲಿ ಹುಟ್ಟಿದ ಧೃತರಾಷ್ಟ್ರ ಕುರುಡನಾದರೆ ಅಂಬಾಲಿಕೆಯಲ್ಲಿ ಹುಟ್ಟಿದ ಪಾಂಡು ರಕ್ತಹೀನನೂ ರೋಗಿಷ್ಠನೂ ಆಗಿದ್ದ. ಮೂರನೆ ಪ್ರವೇಶದಲ್ಲಿ (ದಾಸಿಯಲ್ಲಿ) ಮಾತ್ರವೇ ಇವ್ಯಾವ ವಿಕಲತೆಯೂ ಇಲ್ಲದ ಆರೋಗ್ಯವಂತನೂ ಬುದ್ಧಿಶಾಲಿಯೂ ಆದ ವಿದುರನನ್ನು ಪುತ್ರನಾಗಿ ಪಡೆಯುವುದು ಸಾಧ್ಯವಾಯಿತು. ಹೀಗಿದ್ದರೂ ಅವನನ್ನು ಹೆತ್ತವಳು ಅಂಬಿಕೆಯ ಸೇವಕಿಯಾದ ಶೂದ್ರ ಹೆಂಗಸಾದ್ದರಿಂದ ವಿದುರನಿಗೆ ಸಿಂಹಾಸನವೇರುವ ಹಕ್ಕನ್ನು ನಿರಾಕರಿಸಲಾಯಿತು. ಎರಡನೇ ಬಾರಿಗೆ ವ್ಯಾಸನ ಜೊತೆ ಮಲಗುವಂತೆ ಅತ್ತೆಯು ಹೇಳಿದ್ದರೂ ಅಂಬಿಕೆಯು ಅವನನ್ನು ಕಣ್ಣೆತ್ತಿ ನೋಡುವ ಮನಸ್ಸಿಲ್ಲದೆ ಅವನನ್ನು ಕೂಡಲು ನಿರಾಕರಿಸಿ, ಬದಲಿಗೆ ತನ್ನ ದಾಸಿಯನ್ನು ಕಳಿಸಿದಳು. ಇಬ್ಬರೂ ಸುಖದ ಕ್ಷಣಗಳನ್ನು ಹಂಚಿಕೊಂಡರು. ಈ ಮೂವರು ಮಕ್ಕಳ ಜೊತೆಗೆ ಶುಕನೆಂಬ ನಾಲ್ಕನೆಯ ಮಗನ ಹುಟ್ಟಿಗೂ ವ್ಯಾಸನು ಕಾರಣನೆಂದು ಹೇಳಲಾಗಿದೆ. ಒಂದು ದಿನ ವ್ಯಾಸನು ಹೋಮಕ್ಕಾಗಿ ಬೆಂಕಿಯನ್ನು ತಯಾರಿಸಲು ಎರಡು ಕೊರಡುಗಳನ್ನು ಉಜ್ಜುತ್ತಿದ್ದನಂತೆ. ಅದರ ಬೆಳಕಿನಲ್ಲಿ ಸ್ವರ್ಗಲೋಕದ ಅಧಿಪತಿಯಾದ ದೇವೇಂದ್ರನ ಅಂತಃಪುರದಲ್ಲಿದ್ದ ದಷ್ಟಪುಷ್ಟ ಅಂಗಾಗಗಳಿಂದ ಮೋಹಕವಾಗಿ ಶೋಭಿಸುತ್ತಿದ್ದ ಸುಂದರಿಯರನ್ನು ಕಂಡನಂತೆ. ಅವನ ಲೈಂಗಿಕೋದ್ರೇಕ ಯಾವ ಹಂತವನ್ನು ತಲುಪಿತೆಂದರೆ, ಸ್ಖಲನಗೊಂಡ ವೀರ್ಯಸ್ರೋತದಿಂದ ಅವನ ಕೈಗಳಲ್ಲಿದ್ದ ಪವಿತ್ರ ಬೆಂಕಿಯ ಕೊರಡುಗಳು ತೊಯ್ದು ಹೋದವಂತೆ. ಕೆಲವೊಂದು ವಿಷಯಗಳಲ್ಲಿ ತಂದೆ ಮತ್ತು ತಾತನನ್ನು ಮೀರಿಸುವಂತಹ ಗುಣಲಕ್ಷಣಗಳಿದ್ದ ಶುಕ ಆ ಕ್ಷಣದಲ್ಲಿ ಹೀಗೆ ಜನ್ಮ ತಳೆದನಂತೆ!

ಆನಂತರದ ಪೀಳಿಗೆಯತ್ತ ಗಮನಹರಿಸಿದರೆ, ಐವರು ಪಾಂಡವರೂ ಸೇರಿದಂತೆ ಅತಿಶಯ ಕೀರ್ತಿಗೆ ಪಾತ್ರರಾದ ವೀರಾಧಿವೀರರುಗಳೆಲ್ಲಾ ವಿವಾಹೇತರ ಸಂಬಂಧಗಳಲ್ಲಿ ಹುಟ್ಟಿದವರು. ಕುಂತಿಯಲ್ಲಿ ಹುಟ್ಟಿದ ಮೊದಲ ಮೂವರಲ್ಲಿ ಪ್ರತಿಯೊಬ್ಬರೂ ಮೂವರು ವಿಭಿನ್ನ ಜನ್ಮದಾತರಿಗೆ ಹುಟ್ಟಿದವರು. ಕೊನೆಯ ಅವಳಿಗಳು ಇಬ್ಬರು ಜನ್ಮದಾತರಿಗೆ ಮಾದ್ರಿಯಲ್ಲಿ ಹುಟ್ಟಿದವರು. ಸತ್ಯವತಿಯಂತೆಯೇ ಕುಂತಿಯು ಕೂಡ ವಿವಾಹ-ಪೂರ್ವ ಕನ್ಯಾವಸ್ಥೆಯ ಲೈಂಗಿಕ ಸಂಬಂಧದಲ್ಲಿ ಕರ್ಣನಿಗೆ ಜನ್ಮ ಕೊಟ್ಟವಳು. ಆದರೆ ಸತ್ಯವತಿಯಂತೆ ಮಗುವನ್ನು ಮಡಿಲಲ್ಲಿ ಇಟ್ಟುಕೊಳ್ಳದೆ ಚೊಚ್ಚಲ-ಮಗುವಾಗಿ ಹುಟ್ಟಿದ ಕರ್ಣನನ್ನು ಜನ್ಮವಿತ್ತ ಕೂಡಲೇ ನೀರಿನಲ್ಲಿ ತೇಲಿಬಿಟ್ಟು ಕೈತೊಳೆದುಕೊಂಡವಳು. ಮಾನವರ ಮತ್ತು ದೇವಾನುದೇವತೆಗಳ ಇಂತಹ ಸ್ವೇಚ್ಛಾಚಾರದ ಲೈಂಗಿಕ ಸಂಬಂಧಗಳನ್ನು ಅತಿಮಾನವ ವಿದ್ಯಮಾನಗಳೆಂಬ ಲೇಪ ಹಚ್ಚಿ ನಿಜಾಂಶವನ್ನು ಮರೆಮಾಡುವ ಪ್ರಯತ್ನ 'ಮಹಾಭಾರತ'ದಲ್ಲಿ ಕಂಡುಬರುತ್ತದೆ.

ಲೈಂಗಿಕ ಸ್ವೇಚ್ಛಾಚಾರವು ಮಿತಿಮೀರಿದ ನೀತಿಭ್ರಷ್ಟತೆ ಎಂದು ಕರೆಯಬಹುದಾದ ಮಟ್ಟಕ್ಕೆ ಆ ಯುಗದಲ್ಲಿ ವ್ಯಾಪಕವಾಗಿ ರೂಢಿಯಲ್ಲಿತ್ತು. ಇದು ಭರತವಂಶಕ್ಕೆ ಮಾತ್ರವೇ ಸೀಮಿತವಾದ್ದಾಗಿರಲಿಲ್ಲ. ಇತರ ವಂಶಗಳಲ್ಲೂ ಈ ಸ್ವೇಚ್ಛಾಚಾರವು ರೂಢಿಯಲ್ಲಿತ್ತು ಎಂಬುದನ್ನು ಈ ಮೊದಲು ಸೂಚ್ಯವಾಗಿ ಪ್ರಸ್ತಾಪಿಸಿದ್ದೇನೆ. ಮಥುರಾ ರಾಜ್ಯದ ರಾಜನಾದ ಉಗ್ರಸೇನನ ಮಗನೂ ಕೃಷ್ಣನ ಸೋದರಳಿಯನೂ ಆದ ಕಂಸನು ಒಬ್ಬ ದಾನವನಿಂದ ಅತ್ಯುಚಾರಕ್ಕೆ ಒಳಗಾದ ರಾಣಿಯ ಹೊಟ್ಟೆಯಲ್ಲಿ ಬಿದ್ದು ಬೆಳೆದವನು. ಪಾಂಚಾಲರ ದೊರೆ ದ್ರುಪದನ ಹುಟ್ಟು ಜುಗುಪ್ಸೆ ತರುವಂತಹದ್ದಾದರೆ ಅವನ ಇಬ್ಬರು ಮಕ್ಕಳಾದ ದ್ರೌಪದಿ ಮತ್ತು ಧೃಷ್ಟದ್ಯುಮ್ನರ ಹುಟ್ಟು ಇದಕ್ಕಿಂತಲೂ ಹೆಚ್ಚು ಜುಗುಪ್ಸೆ ಹುಟ್ಟಿಸುವ ರೀತಿಯದ್ದಾಗಿದೆ. ಸಂತಾನಾಭಿಲಾಶೆಯು ಫಲಕಾರಿಯಾಗಲು ಅವನು ವ್ಯಾಸನಂತೆ

ವಿವಾಹೇತರ ಸಂಬಂಧದಲ್ಲಿ ಹುಟ್ಟಿದ ಇಬ್ಬರು ಸಹೋದರ ಋಷಿಗಳನ್ನು ತನ್ನ ಹೆಂಡತಿಯೊಂದಿಗೆ ಸಂಭೋಗಕ್ಕಿಳಿಸಲು ಕರೆತರುತ್ತಾನೆ. ಏನು ಕೇಳಿದರೂ ಕೊಡಲು ದ್ರುಪದನು ಸಿದ್ಧನಿದ್ದರೂ ಕಿರಿಯವನು ಸುತರಾಂ ಒಪ್ಪುವುದಿಲ್ಲ. ತನ್ನ ಶುಲ್ಕವಾಗಿ ಒಂದು ಸಾವಿರ ಹಸುಗಳನ್ನು ಕೊಡುವುದಾದರೆ ಮಾತ್ರ ತಾನು ಈ ಕಾರ್ಯ ನಿರ್ವಹಿಸಲು ಸಿದ್ಧನಿರುವುದಾಗಿ ಹಿರಿಯವನು ಒಪ್ಪಿಕೊಳ್ಳುತ್ತಾನೆ. ಪುತ್ರಕಾಮೇಷ್ಠಿ ಯಾಗದ ಹೋತೃವಾಗಿ ಅಂತಿಮ ಘಟ್ಟದಲ್ಲಿ ತನ್ನ ಜೊತೆ ಮಲಗುವಂತೆ ರಾಣಿಯನ್ನು ಆಹ್ವಾನಿಸುತ್ತಾನೆ. ಆದರೆ ರಜಸ್ವಲೆಯಾಗಿದ್ದ ಕಾರಣ ಒಂದೆರಡು ದಿನಗಳ ಸಮಯ ನೀಡುವಂತೆ ಅವಳು ಬೇಡಿಕೊಳ್ಳುತ್ತಾಳೆ. ಆದರೆ ಋಷಿವರ್ಯನು ಮಹೂರ್ತದ ವೇಳೆಯು ಕೈತಪ್ಪಿ ಹೋಗಲು ಬಿಡದೆ ಆಕ್ಷಣದಲ್ಲೇ ಆ ಸ್ಥಳದಲ್ಲೇ ದ್ರೌಪದಿ ಮತ್ತು ಧೃಷ್ಟದ್ಯುಮ್ನರಿಗೆ ಜನ್ಮ ನೀಡುತ್ತಾನೆ. ಈ ಇಬ್ಬರು ಯಜ್ಞಕುಂಡದಿಂದ ಪುಟ್ಟ ಕಂದಮ್ಮಗಳಾಗಿ ಉದ್ಭವಿಸಿ ಬರುವ ಬದಲು, ದ್ರೌಪದಿಯು ಮೈತುಂಬಿ ಬೆಳೆದುನಿಂತ ಯುವತಿಯಾಗಿ ಸಿಂಗರಿಸಿಕೊಂಡ ರಾಜಕುಮಾರಿಯಂತೆ ಎದ್ದು ಬಂದರೆ, ಧೃಷ್ಟದ್ಯುಮ್ನನು ಬಲಶಾಲಿ ಯುವಕನಾಗಿ, ರಾಜಕುಮಾರನಂತೆ ಕಿರೀಟಧಾರಿಯೂ ಶಸ್ತ್ರಧಾರಿಯೂ ಆಗಿ ಕವಚಕುಂಡಲ ಸಮೇತನಾಗಿ ಜನ್ಮ ತಳೆಯುತ್ತಾನೆ. ಅವಳ ಬಣ್ಣ ಕಪ್ಪು, ಅವನು ಕುರೂಪಿ. ಅವಳ ಕಡುಗಪ್ಪು ಬಣ್ಣದಿಂದಾಗಿಯೇ ಅವಳಿಗೆ 'ಕೃಷ್ಣೆ' ಎಂಬ ಅಭಿದಾನ ಪ್ರಾಪ್ತವಾಯಿತು. ಹಾಗಿದ್ದರೂ ಅವಳನ್ನು ವರಿಸಲು ಹಲವರು ಪೈಪೋಟಿ ನಡೆಸುವಂತಹ ದೇಹಕಾಂತಿ ಅವಳದಾಗಿತ್ತು. ಅವಳು ಬಹುಪತಿತ್ವದಂತೆ ಐವರು ಪಾಂಡವ ಸಹೋದರರಿಗೆ ಒಬ್ಬಳೇ ಹೆಂಡತಿಯಾಗಿ ಸೇರುತ್ತಾಳೆ.

ಸಂಪ್ರದಾಯನಿಷ್ಠರಿಗೆ ಇದೆಲ್ಲಾ ಯಜ್ಞಯಾಗಾದಿಗಳಿಂದ ದೊರೆತ ಪವಾಡಶಕ್ತಿಯಾಗಿ ಕಾಣಬಹುದು. ಆದರೆ ಸ್ವತಂತ್ರ ಯೋಚನಾಶಕ್ತಿಯನ್ನು ಪಡೆದುಕೊಂಡಿರುವ ಆಧುನಿಕ ಮಾನವನಿಗೆ ಇದೆಲ್ಲಾ ಋಷಿಮುನಿಗಳೆಂದು ಕರೆಯಲ್ಪಟ್ಟ ಆ ಕಾಲದ ವ್ಯಕ್ತಿಗಳಲ್ಲಿ ವ್ಯಾಪಕವಾಗಿ ರೂಢಿಯಲ್ಲಿದ್ದ ಅಪ್ರಾಮಾಣಿಕ ಕುಚೋದ್ಯವಾಗಿ ಕಾಣುತ್ತದೆ. ವಿವಾಹೇತರ ಸಂಬಂಧದಲ್ಲಿ ಜನ್ಮತಳೆದ ಋಷಿಯೊಬ್ಬನಿಂದ ಅದೇ ರೀತಿಯ ಸಂಬಂಧದಲ್ಲಿ ಜನಿಸಿದ ಮಕ್ಕಳನ್ನು ದೇವಲೋಕವು ದ್ರುಪದನಿಗೆ ಬಳುವಳಿಯಾಗಿ ನೀಡಿರುವ ಸಾಧ್ಯತೆಯ ಚಿತ್ರಣ ಮೇಲಿನ ಉದಾಹರಣೆಯಲ್ಲಿ ಎದ್ದು ಕಾಣುತ್ತದೆ.

ಆ ಯುಗವು ಸ್ವೇಚ್ಛಾಚಾರದ ಲೈಂಗಿಕ ಸಂಬಂಧಗಳ ಯುಗವಾಗಿತ್ತು ಎನ್ನುವುದು ವಿವಾದಾತೀತ ಸಂಗತಿ. ಇಂತಹ ಸಂಗತಿಗಳು ರಾಜಮನೆತನಗಳಿಗಷ್ಟೇ ಸೀಮಿತವಾಗಿರಲಿಲ್ಲ. ಆ ಯುಗದಲ್ಲಿ ಬಿಲ್ವಿದ್ಯೆಗೆ ಪ್ರಖ್ಯಾತರಾಗಿದ್ದ ದ್ರೋಣಾಚಾರ್ಯ ಮತ್ತು ಕೃಪಾಚಾರ್ಯರಂತಹ ಬ್ರಾಹ್ಮಣರು ಕೂಡ ವಿವಾಹೇತರ ಸಂಬಂಧದಲ್ಲಿ ಜನಿಸಿದವರೇ. ಸಂಶಯಾಸ್ಪದವಾಗಿರುವ ಅವರ ಹುಟ್ಟಿನ ವಿವರಗಳನ್ನು ಯಥಾಪ್ರಕಾರ ಪಾವಿತ್ರ್ಯತೆ ಎಂಬ ಹೊಗೆ ಕವಿಸಿದಂತೆ ಪರದೆಯ ಹಿಂದಕ್ಕೆ ಸರಿಸಿಬಿಟ್ಟಿದ್ದಾರೆ. ಅತ್ಯಂತ ಹೀನಮಟ್ಟದಲ್ಲಿ ನಡೆಸಲಾಗುತ್ತಿದ್ದ ಅತಿರೇಕದ ಸಂಭೋಗ-ಕ್ರಿಯೆಗಳು ಪ್ರಮುಖ ವೈದಿಕ ಯಜ್ಞಯಾಗಾದಿಗಳ ಭಾಗವಾಗಿದ್ದವು ಎಂಬ ನಗ್ನಸತ್ಯವನ್ನು ಸತ್ಯ-ಶೋಧಕನು ತಳ್ಳಿಹಾಕಲು ಸಾಧ್ಯವೇ?

ಅತಿರೇಕದ ಇಂತಹ ಅಸಹ್ಯಕರ ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಲು ಸಾಕಷ್ಟು ಸಮರ್ಥನೀಯ ಕಾರಣಗಳಿವೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಏಕೆಂದರೆ, ಸಂಪ್ರದಾಯನಿಷ್ಠರು 'ಮಹಾಭಾರತ'ವನ್ನು ಪಂಚಮ ವೇದ ಎಂದು ಹಗಲಿರುಳು ಹಾಡಿ ಹೊಗಳುತ್ತಾರೆ. ಅವರ ಪ್ರಕಾರ ಅದು ವಿಶ್ವಸಾಹಿತ್ಯದಲ್ಲೇ ಅತಿ ದೊಡ್ಡದಾದ ಮಹಾಕಾವ್ಯ; ಸಮಸ್ತ ವಿಷಯಗಳ ಬೃಹತ್ ಜ್ಞಾನಭಂಡಾರ; ಇತಿಹಾಸ, ರಾಜಕಾರಣ, ಸಮಾಜಶಾಸ್ತ್ರ, ತತ್ವಜ್ಞಾನ, ಧರ್ಮ, ನೀತಿ, ಇತ್ಯಾದಿ ಎಲ್ಲವುಗಳ ಅಸೀಮ ಕೋಶಾಗಾರ. ಮನುಷ್ಯನು ತಿಳಿದುಕೊಳ್ಳಬೇಕಾದ ಸಮಸ್ತವೂ ಅದರಲ್ಲಿದೆ. ಅದನ್ನು ಮೀರಿದ ಯಾವ ಜ್ಞಾನವೂ ಇಲ್ಲ ಎನ್ನುತ್ತಾರೆ. ಈ ಎಲ್ಲ ಬೊಗಳೆಯನ್ನು ಖಂಡಿಸುವಾಗ 'ಮಹಾಭಾರತ'ವು ವ್ಯಾಸನ ದುಷ್ಕೃತನಗಳ ಬೃಹತ್ ಅರ್ಥಕೋಶವೂ ಆಗಿದೆ ಎಂಬುದನ್ನು ಹೇಳಲೇಬೇಕು.






ಇರಲಿ. ರಣರಂಗದಲ್ಲಿ ಎರಡು ಸೇನೆಗಳ ನಡುವೆ ಜಾಗಮಾಡಿಕೊಂಡು ಅರ್ಜುನನು ರಥವನ್ನು ಪ್ರವಚನ ವೇದಿಕೆಯಂತೆ ನಿಲ್ಲಿಸಿಕೊಂಡಿರುವ ಸಂದರ್ಭದಲ್ಲಿ ಕೃಷ್ಣನು ಗೀತೆಯ ರೂಪದಲ್ಲಿ ಅವನಿಗೆ ನೀಡಿದ ಪ್ರವಚನದತ್ತ ಈಗ ಗಮನ ಹರಿಸೋಣ. ಸಂಜಯನು ಒಂದು ಸಂಜೆ ಧೃತರಾಷ್ಟ್ರನೆದುರು ಕುಳಿತು ಕಣ್ಣಿಗೆ ಕಟ್ಟುವಂತೆ ರಣರಂಗದಲ್ಲಿ ನಡೆದ ಪ್ರತಿಯೊಂದನ್ನೂ, ಯುದ್ಧಭೂಮಿಯಲ್ಲಿ ಸುದ್ದಿ ಸಂಗ್ರಹಿಸುವ ಆಧುನಿಕ ಕಾಲದ ಮಾಧ್ಯಮ ವರದಿಗಾರನಂತೆ, ಮುಂದಿನ ಪೀಳಿಗೆಗಾಗಿಯೋ ಎಂಬಂತೆ ಮೌಖಿಕವಾಗಿ ವರದಿ ಮಾಡುವ ಚಿತ್ರಣವನ್ನು 'ಮಹಾಭಾರತ'ವು ನೀಡುತ್ತದೆ. ಇದು ಆಧುನಿಕ ಜಗತ್ತಿನ ವಿಜ್ಞಾನ ಮತ್ತು ತಂತ್ರಜ್ಞಾನದ ಅದ್ಭುತದಂತೆ ಕಂಡರೆ ಆಶ್ಚರ್ಯವಿಲ್ಲ. ಆದರೆ ಈ ಅದ್ಭುತವನ್ನು ವ್ಯಾಸನು ಬಹಳ ಚಾಕಚಕ್ಯತೆಯಿಂದ ನಿರ್ವಹಿಸಿದ್ದಾನೆ ಎಂದು ಹೇಳಲೇಬೇಕು. ನಾಲ್ಕು ವೇದಗಳ ಸಂಪಾದನೆಯ ಕಾರ್ಯವನ್ನು ನಿರ್ವಹಿಸುವ, 'ಮಹಾಭಾರತ'ವನ್ನೂ ಹದಿನೆಂಟು ಪುರಾಣಗಳನ್ನೂ 'ಬ್ರಹ್ಮಸೂತ್ರ'ವನ್ನೂ ರಚಿಸುವ ಸಾಮರ್ಥ್ಯವಿದ್ದವನು ವ್ಯಾಸ. ಅಂತಹ ಅಗಾಧ ಸಾಮರ್ಥ್ಯವಿದ್ದ ಅವನಿಗೆ ಮಹತ್ತು ಮತ್ತು ಬೃಹತ್ತುಗಳೆರಡರಲ್ಲೂ ಅದ್ವಿತೀಯವೆನಿಸಿದ 'ಮಹಾಭಾರತ'ವೆಂಬ ಆನೆಗೆ ಪುಟ್ಟ ಬಾಲದಂತಿರುವ ಗೀತೆಯೆಂಬ ಶ್ಲೋಕಗಳ ಸಂಕಲನವನ್ನು ಅಳವಡಿಸುವುದು ಕಷ್ಟದ ಕೆಲಸವೇನಾಗಿರಲಿಲ್ಲ. ಕುರುಕ್ಷೇತ್ರ ಯುದ್ಧವು ಮುಗಿದ ಹಲವಾರು ವರ್ಷಗಳ ನಂತರ ಅದನ್ನು 'ಮಹಾಭಾರತ'ದಲ್ಲಿ ಮಕ್ಕಳಾಟದಷ್ಟು ಸುಲಭವಾಗಿ ಮಾಡಿ ಮುಗಿಸಿದ. ಮಹಾನ್ 'ಮಹಾಭಾರತ' ಕಾವ್ಯದ ಜೊತೆಯಲ್ಲೇ ಗೀತೆಯನ್ನು ತನ್ನ ಮಗನ ಜೊತೆಗೆ ನಾಲ್ವರು ಶಿಷ್ಯರಿಗೂ ಅವನು ಬೋಧಿಸುತ್ತಾನೆ. ಅವರಲ್ಲಿ ಒಬ್ಬನಾದ ವೈಶಂಪಾಯನನು ತನ್ನ ಗುರುವಿನಂತೆಯೇ ಅಗಾಧ ಸಾಮರ್ಥ್ಯವುಳ್ಳವನು. ಅರ್ಜುನನ ಮುಮ್ಮಗನಾದ ಜನಮೇಜಯನು ನಾಗಾಗಳ ಸರ್ವನಾಶಕ್ಕಾಗಿ ಬೃಹತ್ ಸರ್ಪಯಾಗವನ್ನು ಕೈಗೊಂಡಾಗ (ಪ್ರತಿಯೊಂದಕ್ಕೂ ಯಜ್ಞಯಾಗಾದಿಗಳು ಅವ್ಯಾಹತವಾಗಿ ನಡೆಯುತ್ತಿದ್ದ ಆ ಕಾಲದಲ್ಲಿ ಪುರೋಹಿತರು ಯಥೇಚ್ಛವಾಗಿ ದಾನ, ದಕ್ಷಿಣೆ, ಬಂಗಾರ ಮತ್ತು ಹಸುಗಳನ್ನಷ್ಟೇ ಅಲ್ಲದೆ ಸೇವಕಿಯರನ್ನು ಪಡೆಯುತ್ತಿದ್ದರು- ಲೇ.) ವೈಶಂಪಾಯನನು ಸಮಾವೇಶದಲ್ಲಿ ನೆರೆದಿದ್ದವರಿಗೆ ಇಡಿಯಾಗಿ ಮಹಾಭಾರತ ಕಾವ್ಯವನ್ನೂ ಗೀತೆಯನ್ನೂ ವಾಚನ ಮಾಡುತ್ತಾನೆ. ಆ ವಿಶೇಷ ಸಂದರ್ಭದಲ್ಲಿ ಉಪಸ್ಥಿತನಿದ್ದ ಸೌತಿ ಉಗ್ರಶ್ರವಸನು ಆನಂತರ ನೈಮಿಶಾರಣ್ಯದಲ್ಲಿ ನಡೆದ ಹನ್ನೆರಡು-ವರ್ಷಗಳ ಯಜ್ಞದಲ್ಲಿ ಹಾಜರಿದ್ದ ಶೌನಕ ಮತ್ತು ಹಲವಾರು ಋಷಿಗಳ ಬೇಡಿಕೆಯಂತೆ ಅದನ್ನು ಆದಿಯಿಂದ ಅಂತ್ಯಭಾಗದವರೆಗೆ ವಾಚನ ಮಾಡುತ್ತಾನೆ. ಸೌತಿಯ ನಂತರ ಈ ಜವಾಬ್ದಾರಿಯನ್ನು ಯಾರು ನಿರ್ವಹಿಸಿದರು ಎಂಬ ಮಾಹಿತಿಯು ಯಾವ ಮೂಲಗಳಿಂದಲೂ ಲಭ್ಯವಾಗುವುದಿಲ್ಲ.

ಅದು ಹೇಗಾದರೂ ಇರಲಿ, ಕೃಷ್ಣನು ಮೊಟ್ಟ ಮೊದಲಿಗೆ ಗೀತೆಯನ್ನು ಬೋಧಿಸಿದ ಕಾಲಕ್ಕೂ ಸೌತಿಯು ಅದರ ವಾಚನ ಮಾಡಿದ ಕಾಲಕ್ಕೂ ಕನಿಷ್ಠ ಒಂದು ಶತಮಾನದ ಅಂತರವಾದರೂ ಇದೆ. ಕಾಲಮಾನದ ಈ ಅಂಶವನ್ನು ನಾವು ನೆನಪಿನಲ್ಲಿಡಬೇಕು. ಏಕೆಂದರೆ, ಕುರುಕ್ಷೇತ್ರ ಯುದ್ಧದ ನಂತರ ಯುಧಿಷ್ಠಿರನು ಮೂವತ್ತಾರು ವರ್ಷಗಳ ಕಾಲ ರಾಜ್ಯಭಾರ ನಡೆಸಿದ; ಅವನ ನಂತರ ಸಿಂಹಾಸನವನ್ನೇರಿದ ಪರೀಕ್ಷಿತ್ ರಾಜನು ಅರವತ್ತು ವರ್ಷಗಳ ಕಾಲ ಆಳ್ವಿಕೆ ನಡೆಸಿದ. ತನ್ನ ತಂದೆ ಪರೀಕ್ಷಿತ್ ರಾಜನನ್ನು ಹತ್ಯೆ ಮಾಡಿದ್ದರ ಸೇಡಿನ ಕ್ರಮವಾಗಿ ಅವನು ನಾಗಾಗಳ ನರಮೇಧವನ್ನು ಯಾವಾಗ ಕೈಗೊಂಡ ಎಂಬ ಬಗ್ಗೆ ಖಚಿತವಾದ ಯಾವೊಂದು ಮಾಹಿತಿಯೂ ಲಭ್ಯವಿಲ್ಲ. ಹಾಗೆಯೇ ಶೌನಕನು ಯಾವಾಗ ನೈಮಿಶಾರಣ್ಯದಲ್ಲಿ ಯಜ್ಞವನ್ನು ಪ್ರಾರಂಭಿಸಿದ ಎಂಬ ಬಗ್ಗೆಯೂ ಖಚಿತವಾದ ಮಾಹಿತಿಯು ಲಭ್ಯವಿಲ್ಲ. ಕೃಷ್ಣನು ಗೀತೆಯನ್ನು ಬೋಧಿಸಿದ ಕಾಲ ಹಾಗೂ ಸೌತಿಯು ಅದರ ವಾಚನ ಮಾಡಿದ ಕಾಲದ ನಡುವೆ

ಏನಿಲ್ಲವೆಂದರೂ ಒಂದು ಶತಮಾನದ ಅಂತರವಿದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಹಾಗೆಯೇ ಸೌತಿಯು ಬದುಕಿದ್ದ ಕಾಲಕ್ಕೂ ಗೀತೆಯು ಅಂತಿಮವಾಗಿ ಅಕ್ಷರ ರೂಪವನ್ನು ಪಡೆದುಕೊಳ್ಳುವ ಕಾಲಕ್ಕೂ ಒಂದಲ್ಲ, ಹಲವಾರು ಶತಮಾನಗಳ ಅಂತರವಿದೆ.

ಸಂಪ್ರದಾಯನಿಷ್ಠರ ಲೆಕ್ಕಾಚಾರಕ್ಕೆ ಮಾನ್ಯತೆ ಕೊಡುವುದೇ ಆದರೆ ಈ ಅಂತರವನ್ನು ಶತಮಾನಗಳಲ್ಲಿ ಅಳೆಯುವುದಕ್ಕಿಂತ ಸಹಸ್ರಮಾನಗಳಲ್ಲಿ ಅಳೆಯಬೇಕಾಗುತ್ತದೆ. ಅಗಾಧ ಕಾಲಮಾನದ ಅಂತರವಿರುವ ಸಂದರ್ಭದಲ್ಲಿ ಕೃಷ್ಣನು ಬೋಧಿಸಿದ ಎನ್ನಲಾಗುವ ಗೀತೆಯ ಅದರ ಮೂಲ ಗಾತ್ರವನ್ನಾಗಲೀ, ಸ್ವರೂಪವನ್ನಾಗಲೀ ಅಥವಾ ಮೂಲ ಸಂದೇಶವನ್ನಾಗಲೀ ಉಳಿಸಿಕೊಂಡಿದೆ ಎಂದು ಹೇಳಲು ಸಾಧ್ಯವೇ? ಎಂಬ ಪ್ರಶ್ನೆ ಇದೆ. ತೋಂಡಿ ಸಂಪ್ರದಾಯದಲ್ಲಿದ್ದ ಗೀತೆಯು ಅಕ್ಷರ ರೂಪಕ್ಕಿಳಿಯಲು ತೆಗೆದುಕೊಂಡ ಕಾಲಮಾನದ ಅಂತರಕ್ಕಿಂತಲೂ ಹೆಚ್ಚಿನ ಕಾಲಮಾನದ ಅಂತರವನ್ನು ವೇದಗಳು ಅಕ್ಷರ ರೂಪಕ್ಕಿಳಿಯಲು ತೆಗೆದುಕೊಂಡವು ಎಂದೂ ಗೀತೆಯಲ್ಲಿನ ಉಚ್ಚಾರಣೆಯ ಅತಿಸೂಕ್ಷ್ಮತೆಗಳ ಪರಿಶುದ್ಧತೆಯನ್ನು ಮೂಲದಂತೆಯೇ ಈಗಲೂ ಉಳಿಸಿಕೊಂಡು ಬರಲಾಗಿದೆ ಎಂದೂ ಸಂಪ್ರದಾಯನಿಷ್ಠರು ವಾದ ಮಂಡಿಸುವ ಸಾಧ್ಯತೆ ಇದೆ. ಆದರೆ ಗೀತೆಗೂ ವೇದಗ್ರಂಥಗಳಿಗೂ ವ್ಯತ್ಯಾಸವಿದೆ. ಅವೆರಡೂ ಒಂದೇ ಎಂದು ಹೇಳುವಂತಿಲ್ಲ. ಜೊತೆಗೆ ಗೀತೆಯ ಗ್ರಂಥ ಪ್ರಾಮಾಣ್ಯವು ಸರ್ವಮಾನ್ಯವೆಂದು ಎಂದೂ ಅಂಗೀಕೃತವಾಗಿಲ್ಲ. ಹಾಗೆ ನೋಡಿದರೆ, ಕ್ರಿ.ಶ. ಎಂಟನೆ ಶತಮಾನದಲ್ಲಿ ಜೀವಿಸಿದ್ದ ಆದಿ ಶಂಕರಾಚಾರ್ಯನು ಬೌದ್ಧಧರ್ಮವನ್ನು ಬುಡಮೇಲು ಮಾಡುವ ತನ್ನ ಕಾರ್ಯಾಚರಣೆಯ ಭಾಗವಾಗಿ ಗೀತೆಗೆ ಭಾಷ್ಯವನ್ನು ಬರೆಯುವ ಮುಂಚಿನ ಕಾಲಘಟ್ಟದಲ್ಲಿ ಯಾರೂ ಅದನ್ನು ಗಂಭೀರವಾಗಿ ಪರಿಗಣಿಸಿಯೇ ಇರಲಿಲ್ಲ ಎಂಬ ಅಂಶ ನಿಚ್ಚಳವಾಗಿ ಎದ್ದು ಕಾಣುತ್ತದೆ. ಬೇರೆಯವರ ಮಾತು ಹಾಗಿರಲಿ, ಆನಂತರದಲ್ಲಿ ಬಂದ ಆರ್ಯ ಸಮಾಜ, ಬ್ರಹ್ಮ ಸಮಾಜಗಳು ಕೂಡ ಗೀತೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲಿಲ್ಲ. ಆದ್ದರಿಂದ ವೇದಗ್ರಂಥಗಳ ಪರಿಶುದ್ಧತೆಗೂ ಗೀತೆಯ ಪರಿಶುದ್ಧತೆಗೂ ತಾಳೆ ಹಾಕುವುದು ಅಪ್ರಸ್ತುತವೆನಿಸುತ್ತದೆ.

ಗೀತೆಯನ್ನು (ಕೃಷ್ಣನಿಂದ ಅರ್ಜುನನಿಗೆ) ಬೋಧಿಸಲಾಯಿತು ಎಂದು ನಂಬಿಸಲಾದ ಅಸಂಭವನೀಯ ಸನ್ನಿವೇಶ, ಮತ್ತು ಪೀಳಿಗೆಯಿಂದ ಪೀಳಿಗೆಗೆ ವಿಶ್ವಾಸನೀಯವಲ್ಲದ ರೀತಿಯಲ್ಲಿ ಅದನ್ನು ಹಸ್ತಾಂತರ ಮಾಡಿದ ಬಗೆ– ವೈಚಾರಿಕವಾಗಿ ಯೋಚಿಸುವ ಮನಸ್ಸುಗಳಿಗೆ ಇವು ಮಿಥ್ಯಾಕಲ್ಪನೆಗಳು.

ಅರ್ಧ ಶತಮಾನಕ್ಕೂ ಹಿಂದಿನಿಂದಲೂ, ನನ್ನ ಕಾಲೇಜು ದಿನಗಳಿಂದಲೂ, ಗೀತೆಯ ಮೇಲೆ ಬಂದಿರುವ ಅಸಂಖ್ಯಾತ ಭಾಷ್ಯಗಳನ್ನು ಅಧ್ಯಯನ ಮಾಡುತ್ತ ಬಂದಿದ್ದೇನೆ. ಅದರ ಕರ್ತೃ, ಕಾಲ ಮತ್ತು ಅದು ರಚಿತಗೊಂಡ ತಾಣ, ಪೀಳಿಗೆಯಿಂದ ಪೀಳಿಗೆಗೆ ಅದನ್ನು ದಾಟಿಸಿದ್ದು, ಸರ್ವಕಾಲಕ್ಕೂ ಸರ್ವರಿಗೂ ಪ್ರಸ್ತುತವೆನಿಸುವ ಅತ್ಯುತ್ಕೃಷ್ಟ ತತ್ವಜ್ಞಾನವನ್ನು ಅದರಲ್ಲಿ ಸಾರಸಂಗ್ರಹ ರೂಪವಾಗಿ ಅಳವಡಿಸಲಾಗಿದೆ ಎಂದು ಕೊಚ್ಚಿಕೊಳ್ಳುವ ಪರಂಪರೆ– ಒಂದು ಮಾತಿನಲ್ಲಿ ಹೇಳುವುದಾದರೆ, ಉದ್ದೇಶಪೂರ್ವಕವಾಗಿ ಅದರ ಬಗ್ಗೆ ಇವೆಲ್ಲವನ್ನೂ ಪ್ರಚಾರ ಮಾಡಿದ್ದು ಒಂದು ಮಿಥ್ಯೆ ಎನ್ನಬಹುದು.

ಊಹಾಪೋಹಗಳು ಎಂಬುದಕ್ಕೆ ಸಾಕಷ್ಟು ಆಧಾರಗಳನ್ನು ಒದಗಿಸುತ್ತವೆ. ಊಹಾಪೋಹಗಳನ್ನು ಕುರಿತು ಅಲೆಗ್ಸಾಂಡರ್ ಪೋಪ್ ಕವಿಯ ಈ ಮಾತುಗಳು ಗೀತೆಗೂ ಅನ್ವಯಿಸುತ್ತವೆ:

ಊಹಾಪೋಹಗಳು ಹಕ್ಕಿಗಳಾಗಿ ರೆಕ್ಕೆ ಬಿಚ್ಚಿ
ಎಲ್ಲೆಂದರಲ್ಲಿ ಹಾರತೊಡಗಿದವು
ಹಾರಿದಂತೆಲ್ಲ ಒಂದೊಂದು ಹೊಸ ಪುಕ್ಕವನು
ಅಂಟಿಸಿಕೊಂಡು ಮತ್ತೂ ಹಾರಿದವು

ಹೇಳಿಕೆ ಕೇಳಿಕೆಗಳು ಕತೆಯಾಗಿ ಹಾರಿದಲ್ಲೆಲ್ಲಾ ಹರಿದವು
ಬಾಯಿಂದ ಬಾಯಿಗೆ ಹರಿದಂತೆಲ್ಲ
ಒಬ್ಬೊಬ್ಬರೂ ತಮ್ಮದೊಂದಿಷ್ಟಿಷ್ಟನ್ನು ಸೇರಿಸಿದರು:
ಅವರಿಷ್ಟು ಇವರಿಷ್ಟು ಸೇರಿಸಿ ಬೆಟ್ಟವಾಯಿತು ಪುಟ್ಟ ಮಾತು.

ಅರ್ಧ ಶತಮಾನಕ್ಕೂ ಹಿಂದಿನಿಂದಲೂ, ನನ್ನ ಕಾಲೇಜು ದಿನಗಳಿಂದಲೂ, ಗೀತೆಯ ಮೇಲೆ ಬಂದಿರುವ ಅಸಂಖ್ಯಾತ ಭಾಷ್ಯಗಳನ್ನು ಅಧ್ಯಯನ ಮಾಡುತ್ತ ಬಂದಿದ್ದೇನೆ. ಅದರ ಕರ್ತೃ, ಕಾಲ ಮತ್ತು ಅದು ರಚಿತಗೊಂಡ ತಾಣ, ಪೀಳಿಗೆಯಿಂದ ಪೀಳಿಗೆಗೆ ಅದನ್ನು ದಾಟಿಸಿದ್ದು, ಸರ್ವಕಾಲಕ್ಕೂ ಸರ್ವರಿಗೂ ಪ್ರಸ್ತುತವೆನಿಸುವ ಅತ್ಯುತ್ಕೃಷ್ಟ ತತ್ವಜ್ಞಾನವನ್ನು ಅದರಲ್ಲಿ ಸಾರಸಂಗ್ರಹ ರೂಪವಾಗಿ ಅಳವಡಿಸಲಾಗಿದೆ ಎಂದು ಕೊಚ್ಚಿಕೊಳ್ಳುವ ಪರಂಪರೆ– ಒಂದು ಮಾತಿನಲ್ಲಿ ಹೇಳುವುದಾದರೆ, ಉದ್ದೇಶಪೂರ್ವಕವಾಗಿ ಅದರ ಬಗ್ಗೆ ಇವೆಲ್ಲವನ್ನೂ ಪ್ರಚಾರ ಮಾಡಿದ್ದು ಒಂದು ಮಿಥ್ಯೆ ಎನ್ನಬಹುದು. ಆದ್ದರಿಂದ ನನ್ನ ಪುಸ್ತಕಕ್ಕೆ "ಗೀತೆಯ ಮಿಥ್ಯಾಕಲ್ಪನೆ" ಎಂದು ಏಕೆ ಹೆಸರಿಡಬಾರದು ಅಂದುಕೊಂಡೆ. ಆದರೆ ಪುಸ್ತಕದ ಶೀರ್ಷಿಕೆಯು ಆಕ್ರಮಣಕಾರಿಯಂತೆ ನೇರ ಎರಗುವಂತಿದ್ದರೆ ಗೀತೆಯನ್ನು ಭಗವಂತನ ವಾಣಿ ಎಂದು ತಲೆಯ ಮೇಲೆ ಹೊತ್ತುಕೊಂಡು ಮೆರೆಯುವ ಜನ ಅದರ ಬಳಿಗೂ ಸುಳಿಯದೆ ನನ್ನ ಮೇಲೆ ಮಿಥ್ಯಾರೋಪ ಹೊರಿಸಲು ತುದಿಗಾಲಿನಲ್ಲಿ ನಿಂತಿರುತ್ತಾರೆ. ಹಾಗಾಗದಿರಲೆಂಬ ಕಾರಣಕ್ಕಾಗಿಯೇ ಪ್ರಚೋದನಕಾರಿ ಶೀರ್ಷಿಕೆಗೆ ಬದಲಾಗಿ ಸೌಮ್ಯರೂಪದ ಹೆಸರನ್ನಿಟ್ಟಿದ್ದೇನೆ. ಇದೇನೇ ಇರಲಿ, ಈ ನನ್ನ ಪುಸ್ತಕವನ್ನು ಓದಿದ ಎಲ್ಲರೂ ಬದಲಾಗಿ ಬಿಡುತ್ತಾರೆ ಎಂಬ ಭ್ರಮೆ ನನಗಿಲ್ಲ. ಆದರೆ ಅವರಲ್ಲಿ ಕೆಲವರಾದರೂ ಗೀತೆಯ ಬಗೆಗಿರುವ ಅತಿಶಯ ಸಮರ್ಥನೆಯ ಪೊಳ್ಳುತನವನ್ನು ಗುರುತಿಸುವಂತಾದರೆ ನನ್ನ ಪ್ರಯತ್ನವು ವಿಫಲವಾಗಲಿಲ್ಲ ಎಂದುಕೊಳ್ಳುತ್ತೇನೆ.

(ಪ್ರಕಟನೆಗೆ ಸಿದ್ಧವಾಗುತ್ತಿರುವ ಡಾ. ವಿ ಆರ್ ನಾರ್ಲಾ ಅವರ ಗೀತೆ: ಸತ್ಯ ಸಂಗತಿಗಳೇನು? ಗ್ರಂಥದ ಪೀಠಿಕೆ) ■

ಲೇಖಕರಿಗೆ ಸೂಚನೆ

ಲೇಖಕರು ತಮ್ಮ ಲೇಖನದ ಮೂಲ ಪ್ರತಿಯನ್ನು ಮಾತ್ರ ಕಳುಹಿಸಬೇಕು. ಈ ಹಿಂದೆಯೇ ತಿಳಿಸಿದ್ದರೂ ಕೆಲ ಲೇಖಕರು ಝೆರಾಕ್ಸ್ ಪ್ರತಿಗಳನ್ನು ಈಗಲೂ ಕಳುಹಿಸುತ್ತಿದ್ದಾರೆ. ಅವುಗಳನ್ನು ಪರಿಗಣಿಸುವುದಿಲ್ಲ. ಬೇರೆ ಪತ್ರಿಕೆಗಳಿಗೆ ಕಳುಹಿಸಿದ ಲೇಖನವನ್ನು 'ಸಂವಾದ'ಕ್ಕೂ ಕಳುಹಿಸಿದ್ದಲ್ಲಿ ಆ ಬಗ್ಗೆ ತಿಳಿಸಬೇಕು. 'ಸಂಪಾದಕರೊಂದಿಗೆ ಸಂವಾದ'ಕ್ಕೆ ಬರೆಯುವ ಬರಹಗಳು ಕನಿಷ್ಠ ಒಂದು ಸಾವಿರ ಪದಗಳ ಮಿತಿಯಲ್ಲಿರಬೇಕು. ಉಳಿದ ಲೇಖನಗಳು ಎರಡು ಸಾವಿರ ಪದಗಳ ಆಸುಪಾಸಿನಲ್ಲಿರಬೇಕು. ದೀರ್ಘವಾದ ಲೇಖನಗಳನ್ನು ಯಾವ ಕಾರಣಕ್ಕೂ ಪ್ರಕಟಿಸುವುದಿಲ್ಲ. ಲೇಖನಗಳನ್ನು ಇ–ಮೈಲ್ ಮೂಲಕ ಕಳುಹಿಸುವವರು 'ನುಡಿ' ತಂತ್ರಾಂಶದಲ್ಲಿ ಟೈಪ್ ಮಾಡಿಸಿ **Page Maker** ಅಥವಾ **Word File** ನಲ್ಲಿ ಮಾತ್ರ ಇ–ಮೈಲ್ ಮಾಡಬೇಕು ಹಾಗೂ ಲೇಖನದೊಂದಿಗೇ ತಮ್ಮ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಕಳುಹಿಸಬೇಕು.–ಸಂ.

ಜ್ಞಾನದ ಸ್ಫೋಟವೊಂದು ಆಗಿ ವಿಜ್ಞಾನದ ಭವಿಷ್ಯ ಕಂಡುಕೊಂಡೆವಲ್ಲ ಅಲ್ಲಿಂದ ಇಲ್ಲಿವರೆಗಿನ ಪರಿಕ್ರಮವನ್ನು ಅವಲೋಕಿಸಿದರೆ ನಾವು ಯಾವ ಭವಿಷ್ಯವನ್ನು ಅನುಭವಿಸುತ್ತಿದ್ದೇವೆ ಮತ್ತು ಮುಂದಿನ ಯಾವ ಬಗೆಯ ಭವಿಷ್ಯಕ್ಕೆ ದಾರಿಮಾಡಿಕೊಟ್ಟಿದ್ದೇವೆ ಎಂಬುದು ಒಂದು ಬಿಗ್ ಬ್ಯಾಂಗ್ ಪ್ರಶ್ನೆಯಾಗಿಯೆ ಉಳಿಯುತ್ತದೆ. ಹೌದಾ, ನಾವು ಭವಿಷ್ಯವನ್ನು ದೂರಗಾಮಿಯಾಗಿ ಉಳಿಸಿದ್ದೇವಾ, ಅಥವಾ ಮೊಟಕುಗೊಳಿಸಿದ್ದೇವಾ. ಆ ಭವಿಷ್ಯ ಜನರ ಹಸ್ತದಲ್ಲಿದೆಯೆ ಅಥವಾ ಅದನ್ನು ಪ್ರಕೃತಿಗೆ ಬಿಟ್ಟುಕೊಟ್ಟಿದ್ದೇವಾ?

ವಿಜ್ಞಾನ ಮಾನವನ ಬದುಕಿನ ಸಾಧ್ಯತೆಗಳನ್ನು ಗುಣಾತ್ಮಕವಾಗಿ ಸಾಧಿಸಿಕೊಟ್ಟಿತೆ ಅಥವಾ ಅವನನ್ನು ಆಸೆಗಳ ಅಮಲಿನಲ್ಲಿ ಕೂರಿಸಿದೆಯೆ. ಆ ಎಲ್ಲ ಸಾಧ್ಯತೆಗಳು ಮನುಷ್ಯನಿಗಾಗಿಯೆ ಆದವು ಎಂದು ನಂಬಬಹುದೆ? ವಿಜ್ಞಾನ ಈಗ ಮನುಷ್ಯನ ಹತ್ತಿರ ಇಲ್ಲ, ಅದು ಅವನಿಂದ ಜಾರಿಕೊಂಡು ಹೋಗಿದೆ ಎನ್ನಬಹುದೆ? ನನಗೆ ಈ ಕೊನೆಯ ಬಹುಜನರಿಗೆ ಅಂತರಂಗದ ವಿಷಯವಾಗಿ ಉಳಿದಿಲ್ಲ. ಅದು ಅದರ ಪ್ರಾರಬ್ಧವನ್ನು ತೀರ್ಮಾನಿಸುವ ಸಂಗತಿಯೂ ಹೌದು. ಯಾವಾಗ ವಿಜ್ಞಾನ ಸೀಮಿತ ವಸ್ತು ವಿನ್ಯಾಸಕ್ಕೆ ಒಳಗಾಯಿತೊ ಆಗ ಅದರ ಭವಿಷ್ಯ ಬಹಳ ಮಿತವಾಯಿತು. ಆ ಕಷ್ಟವನ್ನು ಈಗ ವಿಜ್ಞಾನ ಅನುಭವಿಸುತ್ತಿರಬಹುದೆ?

ಹಾಗಿದ್ದಲ್ಲಿ ವಿಜ್ಞಾನ ಅಂತರಂಗದ ವಿಷಯವಾಗುವುದು ಸಾಧ್ಯವೆ? ಹೇಗೆ? ಹದಿನೆಂಟನೆಯ ಶತಮಾನದ ವಿಜ್ಞಾನವಿಕಾಸ ಈ ಅಂತರಂಗವನ್ನು ಕಂಡುಕೊಳ್ಳಲಾಗದ ಒಂದು ಮಿತವಾದ ಶೋಧ ಎನ್ನಬಹುದೆ? ಇದೊಂದು ಕೇವಲ ಸ್ಫೋಟಮಾತ್ರ ಎನ್ನಬಹುದೆ? ಬಹುತೇಕ ವಿಶ್ಲೇಷಣೆ ಹಾಗೆಯೆ ಹೇಳುತ್ತಿದೆ. ಅದರ ಹುಟ್ಟು ಚಾರಿತ್ರಿಕವಾಗದೆ ಕೆಲವು ಬಂಡವಾಳಿಗರ ಅತ್ಯಪೇಕ್ಷೆಯಾಗಿ ಹೊರಬಂದುದೂ ಇದಕ್ಕೆ ಕಾರಣ ಇರಬಹುದು. ಅದು ಹುಟ್ಟಿದ ಭೌಗೋಳಿಕ/ಸಾಮಾಜಿಕ ಪರಿಸರ ಮತ್ತು ಪರಿಸ್ಥಿತಿ ಕೂಡ ಅದು ಅಲ್ಪಾಯುಷಿಯಾಗಲು ಕಾರಣವಿರಬಹುದು. ಯೂರೋಕೇಂದ್ರಿತ

ಇನ್ನೊಂದು ದಾರಿ

ವಿಜ್ಞಾನ ಮತ್ತು ಅದರ ಪ್ರತಿಫಲನವಾದ ಆಧುನಿಕತೆಗಳು ಬರುಬರುತ್ತ ತಳಬಿಟ್ಟದ್ದು ಜನರಲ್ಲಿ ನಿರಾಸೆಯನ್ನು ಮೂಡಿಸಿತು. ಅದರೊಳಗೆ ಜನ ಉಳಿಯದೆ ಹೊಸಬಗೆಯ ಪ್ರಭುತ್ವ ಸ್ಥಾಪಿತವಾದುದು ಆತಂಕಕಾರಿ ಅನಿಸಿತು. ಇದು ಪ್ರಗತಿ ಅಲ್ಲ, ನೆಗೆತ. ಅದರ ಎತ್ತರಕ್ಕೆ ನೆಗೆದವನು ಅನುಕೂಲಿಯಾಗುತ್ತನೆ. ಹಾಗಲ್ಲದವನು ಅದರ ಆಸೆಯ ಬೆನ್ನುಹತ್ತಿ ನಿರಂತರಫಲಾಪೇಕ್ಷಿಯಾಗಿ ಹಪಹಪಿಸುತ್ತಾನೆ. ಕೊಳ್ಳುವವನನ್ನು ಹುಡುಕುವ ಅಭಿವೃದ್ಧಿ ಎಲ್ಲ ದೇಶಗಳ ಸೃಜನಶೀಲತೆಯನ್ನು ಪ್ರೋತ್ಸಾಹಿಸುವುದಿಲ್ಲ. ಬದಲಾಗಿ ಹತ್ತಿಕ್ಕುತ್ತದೆ. ಎಲ್ಲ ದೇಶಗಳಲ್ಲಿಯೂ ಸಮಾನ ಸೃಜನೆ ಮತ್ತು ಸಮಾನ ಉತ್ಪಾದನೆ ಸಾಧ್ಯವಾದರೆ ಕೊಳ್ಳುವವನು ಹೊರದೇಶದ ಮಾಲುಗಳ ಕಡೆ ಯಾಕೆ ನೋಡುತ್ತಾನೆ?

ಡಾ॥ ಹಿ ಶಿ ರಾಮಚಂದ್ರೇಗೌಡ

ಮಾತೇ ಸತ್ಯವಾಗಿ ವಿಜ್ಞಾನದ ಬಹುದೊಡ್ಡ ಸಾಧ್ಯತೆ ಇನ್ನೂ ಸಿಗದೆ ಉಳಿದಿದೆ ಎನಿಸುತ್ತಿದೆ. ಅದು ಚಂದ್ರ, ಸೂರ್ಯ, ಮಂಗಳ ಅಥವ ಮತ್ತೊಂದು ಗ್ರಹಕ್ಕೆ ಹಾರುವ ವಿಷಯ ಎಂದು ನಾನು ಹೇಳಲಾರೆ. ಖಂಡಿತ ಆ ಒಂದು ಆಸೆ ಪ್ರತಿಯೊಬ್ಬ ಮನಷ್ಯನಲ್ಲಿಯೂ ಇದೆ. ಹಿಂದೊಮ್ಮೆ ಕನಸು, ಕಥೆ, ಪುರಾಣಗಳಲ್ಲಿ ಕಂಡುದು ವಾಸ್ತವವೇ ಆಗುವುದಾದರೆ ಮನುಷ್ಯ ಭಾವಪರವಶನಾಗುತ್ತಾನೆ. ಕಳೆದುಕೊಂಡ ಕನಸು, ಕಥೆ, ಪುರಾಣಗಳನ್ನು ಬೇರೆಲ್ಲಿ ಕಟ್ಟಿಕೊಳ್ಳುತ್ತಾನೆ ಎಂಬ ಪ್ರಶ್ನೆ ಭಯಂಕರವಾದುದೆ. ಅವನ್ನೆಲ್ಲ ಕಳೆದುಕೊಡ ಮನುಷ್ಯ ಪೂರಾ ಬರಡನಾದರೆ, ವಿಜ್ಞಾನದ ಕಡೆಗೆ ಧಾಳಿ ಇಟ್ಟರೆ, ಆ ಲೋಡಿನ ಶಕ್ತಿಯನ್ನು ವಿಜ್ಞಾನ ತಡೆದುಕೊಳ್ಳಬಲ್ಲುದೆ ಎಂದುನೋಡಬೇಕು. ಆಗ ನಿಜವಾದ ವಿಜ್ಞಾನದ ಶಕ್ತಿ ಅರ್ಥವಾಗುತ್ತದೆ.

ಈಗ ವಿಜ್ಞಾನವನ್ನು ಹುಡುಕುತ್ತಿರುವವರೆಲ್ಲ ಇದೇ ರಭಸದಲ್ಲಿದ್ದಾರೆ. ಅದು ಎಷ್ಟು ಸರಳ ಆಗಿದೆ ಅಂದರೆ ಅದೊಂದು ಹೊರಗಿನ ಸೌಲಭ್ಯ ಎನ್ನುವಂತಾಗಿದೆ. ವಿಜ್ಞಾನ ಸಮುದಾಯಗಳ ದುರಪೇಕ್ಷೆಯನ್ನು ತುಂಬಿಕೊಡಲಷ್ಟೆ ಅದಕ್ಕೆ ಸಾಧ್ಯವಾದುದು ಇದೇ ಕಾರಣಕ್ಕೆ ಇರಬಹುದು. ಏಷ್ಯಾಖಂಡದ ಕೆಲವು ದೇಶಗಳು ಈ ಅಪೇಕ್ಷೆಯ ಪಾಲುದಾರರಾಗಿರುವುದು ನಿಜವಾದರೂ ಅವುಗಳದು ಕಡ ಪಡೆದ ವಿಜ್ಞಾನಸೌಲಭ್ಯ ಎಂದೆನಿಸುತ್ತದೆ.

ಈಗ ವಿಜ್ಞಾನ ಎಂಬುದು ಸಾಮಗ್ರಿಯಾಗಿರುವುದು ನಿಜ. ವಿಜ್ಞಾನದ ಉದ್ದೇಶ ಸಮಾಜೋದ್ಧಾರವಾದರೂ ಅದು ಆ ಕೆಲಸವನ್ನು ಮಾಡಲಾಗಿಲ್ಲ. ಅದರ ಭಾವನೆಗಳನ್ನು, ಬದುಕನ್ನು ಹಂಚಿಕೊಳ್ಳಲು ಬಹುಜನರಿಗೆ ಸಾಧ್ಯವಾಗಿಲ್ಲ. ವಿಜ್ಞಾನ ಜನರಿಂದ ಜನರಿಗಾಗಿ ಹುಟ್ಟುವ ಸಾಮಾಜಿಕ ಪ್ರಕ್ರಿಯೆ. ಅದನ್ನು ಪ್ರತಿನಿಧಿಸುವ, ಪ್ರತಿಪಾದಿಸುವ ಅಥವಾ ಕಾರಣೀಭೂತನಾದ ಒಬ್ಬ ವ್ಯಕ್ತಿ ಇರುತ್ತಾನೆ. ಇದ್ದೇ ಇರುತ್ತಾನೆ ಎಂಬುದು ಸತ್ಯವಾದರೂ ಅವನು ಏಕ ಅಥವ ಏಕೈಕ ವ್ಯಕ್ತಿ ಅಲ್ಲ. ನಿಜವಾದ ವಿಜ್ಞಾನ ಯಾವೊಬ್ಬ ವ್ಯಕ್ತಿಯನ್ನೂ, ದೇಶವನ್ನೂ ಉದ್ದೇಶಿಸಿರುವುದಿಲ್ಲ. ಅದು ಜನರನ್ನಷ್ಟೇ ಉದ್ದೇಶಿರುತ್ತದೆ. ಹದಿನೆಂಟನೆಯ

ಶತಮಾನದ ಹಿಂದಕ್ಕೆ ನೋಡಿದರೆ ಅಥವ ಅನಭಿವೃದ್ಧಿ ದೇಶಗಳೆಂದು ಕರೆಸಿಕೊಳ್ಳುತ್ತಿರುವ ದೇಶಗಳ ಪರಿಸ್ಥಿತಿಯನ್ನು ನೋಡಿದರೆ ಇದು ಅರ್ಥವಾಗುತ್ತದೆ. ಅಲ್ಲಿ ವಿಜ್ಞಾನವೆ ಇರಲಿಲ್ಲ ಅಥವ ಇಲ್ಲ ಎಂದು ಹೇಳುವುದು ಹುಚ್ಚುತನವಾಗುತ್ತದೆ. ಅಂಥ ಮಾತುಗಳು ಯಾರಿಂದ ಮತ್ತು ಯಾವಕಡೆಯಿಂದ ಉಗಮವಾಗುತ್ತವೆ ಎಂಬುದನ್ನೂ ನೋಡಬೇಕಾಗುತ್ತದೆ.

ಹುಟ್ಟುತ್ತಲೆ ವಿಜ್ಞಾನ ಅಪಹರಣಕ್ಕೆ ಒಳಗಾಯಿತು. ಅದು ಬಂಡವಾಳದ ಬಂಧಿಯಾಯಿತು. ವಿಜ್ಞಾನಶೋಧ ಅಪಾರ ಮಾನಸಿಕ ಶ್ರಮ, ಶ್ರದ್ಧೆ, ತ್ಯಾಗ ಮತ್ತು ಮೂಲಧನದ ಅಪೇಕ್ಷೆಯನ್ನು ಬಯಸುತ್ತದೆ. ಅದು ಕೇವಲ ಹಣ ಬಂಡವಾಳವಲ್ಲ. ವ್ಯಕ್ತಿಯ ಶ್ರಮ ಮತ್ತು ಶ್ರದ್ಧೆಯಾಗಿರುತ್ತದೆ. ವಿಜ್ಞಾನ ಬಂಡವಾಳ ಅಪೇಕ್ಷಿಯಲ್ಲ, ಅದು ಬಂಡವಾಳಿಗನ ಕೈಸೇರಿದಾಗ ಬಂಧಿಯಾಗುತ್ತದೆ. ಅವನ ವೈಯಕ್ತಿಕ ಅಪೇಕ್ಷೆ ಮತ್ತು ದುರಾಸೆಗೆ ತನ್ನನ್ನು ಮಾರಿಕೊಳ್ಳಬೇಕಾಗಿ ಬರುತ್ತದೆ. ಹಾಗೆ ಅದು ಕೈಗಾರಿಕಾ ಬಂಡವಾಳಿಗರಿಗೆ ಮಾರಾಟವಾಯಿತು. ಆದರೆ ಕೈಗಾರಿಕಾಕರಣವೆ ಬಂಡವಾಳವಾದ



ಆಗಬೇಕಿಲ್ಲ. ಜನತಾಸಮಾಜ, ಜನತಾಸರಕಾರಗಳ ಸಂದರ್ಭದಲ್ಲಿ ಅದು ಜನಪರವೆ ಆಗಿರುತ್ತದೆ. ಅಂತ ಜನಪರವಾಗುವ ಯೋಗ ಸ್ಫೋಟಕ ವಿಜ್ಞಾನಕ್ಕೆ ಸಾಧ್ಯವಾಗಲಿಲ್ಲ. ಅದು ಬಂಡವಾಳಿಗನ ಮೂಲಕ ಜನತೆಯ ಕಡೆಗೆ ಚಲಿಸಬೇಕಾಯಿತು. ಪರಿಸ್ಥಿತಿ: ಲಾಭ, ವಾಂಛೆ, ಪ್ರತಿಷ್ಠೆ, ಮೂಲಭೂತವಾದಗಳು ಒಂದು ಕಡೆಗೆ ಫೇರಾಯಿಸಿ ಜನತೆಯನ್ನು ಕಟ್ಟುಬದ್ಧವಾಗಿ ನಿಯಂತ್ರಿಸುವ ಹೊಸ ಪ್ರಭುತ್ವ ಸೃಷ್ಟಿಯಾಯಿತು. ಇದು ಅಪ್ರಜ್ಞಾಪೂರ್ವಕವಾಗಿ, ಅಜ್ಞಾನದಿಂದ, ಆಕಸ್ಮಿಕತೆಯಿಂದ ಜನತೆಯನ್ನು ನಿಯಂತ್ರಿಸುವ ಪುರಾತನ ಕ್ರೌರ್ಯಕಿಂತ ಹೊಸರೂಪದ ಪ್ರಜ್ಞಾಪೂರ್ವಕ ಹಾಗೂ ಉದ್ದೇಶಪೂರ್ವಕ ಜನ ಶೋಷಣೆಗೆ ದಾರಿಮಾಡಿಕೊಟ್ಟಿತು.

ಕೈಗಾರಿಕಾಕರಣದ ಜೊತೆಗೆ ಕಾರ್ಮಿಕ ಸಂಘಟನೆಗಳು, ಆಧುನಿಕತೆಯ ಜೊತೆಗೆ ದೇಶೀ ಪ್ರವೃತ್ತಿಗಳು ಈ ವಿದ್ಯಮಾನಕ್ಕೆ ಪ್ರತಿಕ್ರಿಯೆಯಾದವು. ಕಾರ್ಮಿಕಸಿದ್ಧಾಂತ ಈ ಯುಗದ ಒಂದು ಯುಗಧರ್ಮವೆ ಆಯಿತು. ಅದು ಒಂದು ಪ್ರಜ್ಞಾಪೂರ್ವಕ ಪ್ರತಿಭಟನೆ ಮತ್ತು ಪ್ರಜ್ಞಾಪೂರ್ವಕ ರಾಜಕೀಯ ಸಿದ್ಧಾಂತವಾಯಿತು. ಜೊತೆಜೊತೆಗೆ ಸಾಮಾಜಿಕ ಅಭಿವೃದ್ಧಿಯ ಒಂದು ತತ್ವಪ್ರಣಾಳಿಕೆಯೂ ಆಯಿತು. ನಿಜವಾಗಿ ಮತ್ತು ನೇರವಾಗಿ ವಿಜ್ಞಾನಶೋಧದಿಂದ ಆಗಬೇಕಾದ ಈ ಬದಲಾವಣೆ ವಿಜ್ಞಾನ ಬಂಡವಾಳಿಗನ ಸೆರೆಸಿಕ್ಕು ಸಂಕುಚಿತಗೊಂಡುದರಿಂದ ಅದರ ಫಸಲನ್ನು ಬೇರೊಂದು ಕಡೆಯಿಂದ ಶೋಧಿಸಲು ನಡೆದ ಪ್ರಯತ್ನವಿದು. ಈ ಸಿದ್ಧಾಂತ ಎಷ್ಟು ಕರು ಮರಿಗಳನ್ನು ಹಾಕಿತೆಂದರೆ ಜಗತ್ತಿನ ಬಹುತೇಕ ಬಡವರು ತಮ್ಮೊಳಗೊಂದು ಚಿಮ್ಮುವ ಶಕ್ತಿ ಇದೆ ಎಂಬ ಅಂತರಂಗ ಶೋಧ ಮಾಡಿಕೊಂಡರು. ಮನುಷ್ಯನನ್ನು ಸಾಂಘಿಕ ಜೀವನಕ್ಕೆ ಒಗ್ಗೂಡಿಸಿದ್ದ ಧರ್ಮಸಿದ್ಧಾಂತಗಳಿಂದ ಅದು ಸಾಧ್ಯವಾಗಿರಲಿಲ್ಲ. ವ್ಯಕ್ತಿತ್ವವನ್ನು ಕಡೆಗಣಿಸಿದ, ವ್ಯಕ್ತಿತ್ವನಿರಸನ ಮಾಡಿಕೊಳುವ ಅವಿಕಾಸ ಚಿಂತನೆಯಿಂದಾಗಿ ಅವು ಮನುಷ್ಯನನ್ನು ಸೊರಗಿಸಿದ್ದವು.

ಬಂಡವಾಳಿಕೈಗಾರಿಕೀಕರಣದಿಂದಾಗಿ ಮಾನವ ಇತಿಹಾಸದಲ್ಲಿ ಪ್ರಥಮಬಾರಿಗೆ ಮನುಷ್ಯ ತಾನೊಬ್ಬನಿದ್ದೇನೆ, ತನಗೊಂದು ಅಸ್ತಿತ್ವವಿದೆ ಮತ್ತು ತನಗೊಂದು ಬೆಳವಣಿಗೆ ಇದೆ ಎಂಬುದನ್ನು ಸಮಾಜದ ಒಟ್ಟಿಗೇ ಕಂಡುಕೊಳ್ಳುವಂತಾಯಿತು.

ಸೈದ್ಧಾಂತಿಕ ನೆಲೆಯೂ ಅಲ್ಲದ, ಪ್ರಭುತ್ವವನ್ನು ನೇರವಾಗಿ ವಿರೋಧಿಸುವುದರ ಅಗತ್ಯತೆಯನ್ನೂ ಅರಿಯದ ಆದರೆ ವಿಜ್ಞಾನ ಮತ್ತು ಆಧುನಿಕತೆಗಳು ಬಹಳ ಹೊರೆಯಾಗುತ್ತಿವೆ ಎಂದು ಸ್ವಂತದಲ್ಲಿ ಮಿಡುಕಿದ ಮನೋಧರ್ಮವೆ ದೇಸಿ ಪ್ರವೃತ್ತಿ. ಇದೊಂದು ವ್ಯಕ್ತಿಸ್ವಾತಂತ್ರಕ್ಕಾಗಿ ತೆವಳುವ ಕೂಸು, ಹೋರಾಡುವ ಯುವತ್ವ ಅಲ್ಲ. ಆದ್ದರಿಂದಲೆ ಆ ಘಟ್ಟದಲ್ಲಿ ಕಾರ್ಮಿಕಚಳವಳಿಗೆ ಬಂದ ಯೌವನ ಇದಕ್ಕೆ ಬರಲೇ ಇಲ್ಲ. ಎಲ್ಲೋ ಇದು ಪ್ರಭುತ್ವ ಮತ್ತು ಬಂಡವಾಳಿಯ ಮನಸ್ಸಿನಿಂದ ತಪ್ಪಿಸಿಕೊಂಡು ಹೊರಗೆ ಚಿಮ್ಮಲು ಪ್ರಯತ್ನಿಸಲೆ ಇಲ್ಲ ಅನಿಸುತ್ತದೆ. ಈಗ ಕೂಡ ಇದು ಶತಮಾನದ ಕೂಸು. ಆದರೆ ಇದರೊಳಗೆ ಸಹಜವಿಜ್ಞಾನದ ಮನಸ್ಸು ಮಿಡಿಯುತ್ತಿದೆ. ಅದು ಬಂಡವಾಳವಾದ ಅಥವ ಕಾರ್ಮಿಕವಾದ ಸ್ವರೂಪಿಯೂ ಅಲ್ಲ. ಅಭಿವೃದ್ಧಿ ಸಿದ್ಧಾಂತದ ಬೆನ್ನು ಹತ್ತದೆ ಜೀವವಿಕಾಸದ ಪ್ರಗತಿಯ ಹಾದಿಯನ್ನು ಮೂಸುತ್ತಾ, ಮೆಲುಕುಹಾಕುತ್ತಾ ಬಂದ. ಎಲ್ಲಿ

ಅಭಿವೃದ್ಧಿವಾದ, ವಾದಿಗಳ ನಿರಾಸೆಗೆ ಸಮಾಧಾನಕರವಾದ ಬದುಕುವ ನೆಲೆಯೊಂದು ನಮ್ಮ ಮಧ್ಯೆಯೆ ಇದೆ ಎಂದು ಕಾಣಿಸಿದ್ದು ಈ ಚಿಂತನ. ವಿಜ್ಞಾನ ಮತ್ತು ಆಧುನಿಕತೆಗಳು ನಮ್ಮ ಮೇಲೆ ಉರುಳಿಸಿದ ಬಂಡೆಗಳು. ಅವುಗಳನ್ನು ಹತ್ತಿಹೋದವರು ಒಂದು ದಡ ಕಂಡರು, ಅವುಗಳ ಅಡಿಗೆ ಸಿಕ್ಕು ನರಳಿದವರು ಮತ್ತೊಂದು ದಡ ಕಂಡರು. ಮಗ್ಗುಲಾದವರು ಬದುಕುಳಿದಿದ್ದಾರಲ್ಲ ಅಲ್ಲಿ ಸಹಜ ಜೀವನಶೋಧ ಇದೆ ಎಂದು ಕಂಡುಕೊಳ್ಳುವ ಮರುಚಿಂತನೆ ಇದು. ಯಾವುದನ್ನೂ ಹೊರಮಾಡಿಕೊಳ್ಳದ ಜೀವನಕ್ರಮವಿದು. ಅಲ್ಪಾಯುಷಿಗಳಾದ ಬಂಡವಾಳವಾದ, ಸಮತಾವಾದ ಅಥವ ಸಮಾಜವಾದದ ಹೊರಗೆ ನಿರಂತರ ನೆಮ್ಮದಿಯನ್ನು ಕಾಣುವ ಜೀವವಿಕಾಸವಿದು.

ವಿಜ್ಞಾನದ ಪ್ರವೇಶದೊಂದಿಗೆ ವಸ್ತು, ವಿಷಯಗಳನ್ನು ವಿಭಜಿಸಿನೋಡುವ, ಅದರ ಘಟಕಗಳನ್ನು ವಿಶ್ಲೇಷಿಸುವ ಮತ್ತು ಅವು ಕೂಡಿದರೆ ಆಗುವ ಪರಿಣಾಮಗಳ ಬಗ್ಗೆ ತಿಳಿಯುವ ಮನೋಧರ್ಮ ಉಂಟಾಯಿತು. ಈಗಾಗಲೆ ಈ ಮನೋಧರ್ಮ ವಿವಕ್ಷೆಯಲ್ಲಿ ಇತ್ತಾದರೂ ಅದರ ಪ್ರಯೋಗವೇನಿದ್ದರೂ ಕಲ್ಪಿತವಸ್ತು, ವಿಷಯಗಳಿಗೆ ಸೀಮಿತವಾಗಿತ್ತು.

ಅದು ಭೌತಿಕ ಜಗತ್ತಿಗೆ ಏನನೂ ಕೊಡಲು ಆಗದ ಭಾವಿಸಿಕೊಂಡ ಬಸಿರು. ವಿಜ್ಞಾನದ ವಿಷಯವಾದರೂ ವಸ್ತು, ವಿಷಯಗಳ ಮರುಜೊಡಣೆ ಮತ್ತು ಮರುಚಿಂತನೆಗೆ ಕಾರಣವಾಗಿ ಹೊಸ ಹೊಸ ವಸ್ತು ವಿಷಯಗಳ ರೂಪೀಕರಣಕ್ಕೆ ಕಾರಣವಾಯಿತು. ಇದರಿಂದ ಅಖಂಡತೆಯ ಬಗ್ಗೆ ಇಟ್ಟುಕೊಂಡಿದ್ದ ಪುರಾತನ ಚಿಂತನೆ ಪ್ರಶ್ನಿತವಾಯಿತು. ಧಾರ್ಮಿಕರಿಗಂತೂ ಇದರ ಪ್ರವೇಶ ಕಷ್ಟವಾಗತೊಡಗಿತು. ಸೃಷ್ಟಿ, ಸ್ಥಿತಿ, ಲಯಗಳ ಬಗ್ಗೆ ತಮ್ಮದೆ ಗಟ್ಟಿಯಾದ ನಂಬುಗೆ ಇಟ್ಟುಕೊಂಡಿದ್ದ ಅವರಿಗೆ ವಿಜ್ಞಾನದ ಪ್ರವೇಶ ಅವರ ಅಸ್ತಿತ್ವವನ್ನು ಪ್ರಶ್ನಿಸುವಂತಾಯಿತು. ಅವರು ಅಖಂಡವನ್ನು ಊಹಿಸಿಕೊಂಡಿದ್ದರು, ವಿಶ್ಲೇಷಿಸಿಕೊಂಡಿರಲಿಲ್ಲ. ಕಾರಣವಾಗಿ ಭೌತಿಕ ವಿಷಯ ಚಿಂತನೆಯಲ್ಲಾದ ವಿಘಟನ, ವಿಶ್ಲೇಷಣ, ಮರುಜೋಡಣಾ ಚಿಂತನೆ ಅವರನ್ನು ಚಿಂತೆಗೀಡುಮಾಡಿತು. ಅವರು ವಿಜ್ಞಾನವನ್ನು ದೇವರು, ಧರ್ಮ ಮತ್ತು ಅಖಂಡ ಪ್ರಕೃತಿಯ ಮೇಲಿನ ಹಾವಳಿ ಎಂದು ಘೋಷಿಸಿದರು. ಇವರೂ ಕೈಗಾರಿಕಾ ಸಂಸ್ಕೃತಿಯಿಂದ ಹತಾಶೆಗೊಂಡವರ ಜೊತೆಗೆ ಸೇರಿಕೊಡರು. ಆದರೆ ಇಂಥವರು ದೇಸಿ ಬಗ್ಗೆ ಮಾತನಾಡತೊಡಗಿದ್ದು ಅಪಾಯಕಾರಿಯಾಯಿತು.

ವಿಜ್ಞಾನ ಮತ್ತು ಅದರ ಪ್ರತಿಫಲನವಾದ ಆಧುನಿಕತೆಗಳು ಬರುಬರುತ್ತ ತಳಬಿಟ್ಟದ್ದು ಜನರಲ್ಲಿ ನಿರಾಸೆಯನ್ನು ಮೂಡಿಸಿತು. ಅದರೊಳಗೆ ಜನ ಉಳಿಯದೆ ಹೊಸಬಗೆಯ ಪ್ರಭುತ್ವ ಸ್ಥಾಪಿತವಾದುದು ಆತಂಕಕಾರಿ ಅನಿಸಿತು. ಇದು ಪ್ರಗತಿ ಅಲ್ಲ, ನೆಗೆತ. ಅದರ ಎತ್ತರಕ್ಕೆ ನೆಗೆದವನು ಅನುಕೂಲಿಯಾಗುತ್ತನೆ, ಹಾಗಲ್ಲದವನು ಅದರ ಆಸೆಯ ಬೆನ್ನುಹತ್ತಿ ನಿರಂತರಫಲಾಪೇಕ್ಷಿಯಾಗಿ ಹಪಹಪಿಸುತ್ತಾನೆ. ಅಭಿವೃದ್ಧಿ ಹೊಂದಿದ ದೇಶಗಳು, ಅಭಿವೃದ್ಧಿಶೀಲ ದೇಶಗಳು ಮತ್ತು ಹಿಂದುಳಿದ ದೇಶಗಳು ಎಂಬ ಬೆಳವಣಿಗೆಯ ವಿಭಜನಾ ಕ್ರಮವೆ ತಾರತಮ್ಯ ರೀತಿಯದು. ಈ ತಾರತಮ್ಯ ಹೋಗಿ ಎಲ್ಲ ದೇಶಗಳೂ ಅಭಿವೃದ್ಧಿ ದೇಶಗಳಾಗುವುದು ಸಾಧ್ಯವೆ ಇಲ್ಲ. ಯಾಕಂದರೆ ಈ ಅಭಿವೃದ್ಧಿ ಇನ್ನೊಂದು ದೇಶದ ಶೋಷಣೆಯ ಮೂಲಕವೆ ಆಗುವ ಪ್ರಕ್ರಿಯೆ. ಕೊಳ್ಳುವವನನ್ನು ಹುಡುಕುವ ಅಭಿವೃದ್ಧಿ ಎಲ್ಲ ದೇಶಗಳ ಸೃಜನಶೀಲತೆಯನ್ನು ಪ್ರೋತ್ಸಾಹಿಸುವುದಿಲ್ಲ. ಬದಲಾಗಿ ಹತ್ತಿಕ್ಕುತ್ತದೆ. ಎಲ್ಲ ದೇಶಗಳಲ್ಲಿಯೂ ಸಮಾನ ಸೃಜನೆ ಮತ್ತು ಸಮಾನ ಉತ್ಪಾದನೆ ಸಾಧ್ಯವಾದರೆ ಕೊಳ್ಳುವವನು ಹೊರದೇಶದ ಮಾಲುಗಳ ಕಡೆ ಯಾಕೆ ನೋಡುತ್ತಾನೆ?

ಇಂಥ ಫಿನಿಷ್ ಗೂಡ್ಸ್ ಆಧಾರಿತ ಅಭಿವೃದ್ಧಿ ಪರಿಕಲ್ಪನೆ ಸಮಾನತೆಯನ್ನು ನಿರಾಕರಿಸುತ್ತದೆ. ಅದೊಂದು ದೊಡ್ಡ ಸುಳ್ಳು ಎನ್ನುತ್ತದೆ. ಆಗ ಬಡವ, ಬಡತನ ವೈಯಕ್ತಿಕ ಅಪರಾಧ ಅಥವ ಧಾರ್ಮಿಕ ಭಾಷೆಯಲ್ಲಿ ಹೇಳುವುದಾದರೆ ಅದು ಅವರವರ ಕರ್ಮ ಎಂದೆ ಘೋಷಿಸುತ್ತದೆ. ಯಾರ ಸಂಪಾದನೆಯಿಂದ ಬಡತನ ನಿವಾರಣೆ ಮಾಡುತ್ತೀರಿ? ಓಡುವವನ ಮೇಲೆ ಹೆಳವನನ್ನು ಕೂರಿಸುತ್ತಿದ್ದೀರಿ ಎನ್ನುತ್ತದೆ. ಆಗ ಸಮತಾವಾದ ಅನ್ ಸೈಂಟಿಫಿಕ್ ಮತ್ತು



ಪ್ರಕೃತಿ ವಿರೋಧವಾಗಿ ಕಾಣುತ್ತದೆ. ಸಮತಾವಾದ ಇಲ್ಲ, ನೀವು ಹುಟ್ಟಿಸಿಕೊಂಡಿದ್ದೀರಿ. ಅದು ಇಲ್ಲ ನೀವು ಕಟ್ಟಿಕೊಂಡಿದ್ದೀರಿ. ಅದು ನೆಲೆ ಇಲ್ಲದ ಅಸ್ಮಿತೆ. ಉಳ್ಳವರನ್ನು, ಪ್ರತಿಭಾವಂತರನ್ನು, ದುಡಿಯುವವರನ್ನು ಹತ್ತಿಕ್ಕಲು ನೀವು ಬಳಸುತ್ತಿರುವ ಅಸ್ತ್ರಗಳು. ನಿಮ್ಮ ದುಡಿಮೆಯ ಪರಿಕಲ್ಪನೆ ಬರಡಾಗಿದೆ. ಅದು ದೈಹಿಕ ದುಡಿಮೆಯನ್ನು ಮಾತ್ರ ಕುರಿತಿದೆ. ಅದರಲ್ಲೂ ಮೇಲುಸ್ತರದ ದುಡಿಮೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದೀರಿ. ಅದು ಕ್ರಿಯೆಯಾಗುವ ಬಹುತೇಕ ಸಾಧ್ಯತೆಗಳು ನಿಮ್ಮ ಗಮನಕ್ಕೆ ಬಂದಿಲ್ಲ. ಬಡವನನ್ನು ಬಡವನನ್ನಾಗಿಯೆ ಉಳಿಸುವ, ಅವನ ಚೈತನ್ಯವನ್ನು ಪ್ರಚೋದಿಸದ ಕೇವಲ ಕೂಲಿಸಿದ್ಧಾಂತ ನಿಮ್ಮದು ಎಂದು ಈ ಅತ್ಯಾಧುನಿಕ, ಇಪ್ಪತ್ತೊಂದನೆಯ ಶತಮಾನ ಹೇಳುತ್ತಿದೆ.

ಇನ್ನು ಬಡವ ಬದುಕಿರುವುದಿಲ್ಲ. ಅವನು ಇರುತ್ತಾನೆ ಎಂದರೆ ಬಡವನಾಗಿರುವುದಿಲ್ಲ, ಇನ್ನೇನೊ ಆಗಿರುತ್ತಾನೆ. ಆ ಇನ್ನೇನೊ ಎಂಬುದು ನಿಧಾನವಾಗಿ ಸ್ಪಷ್ಟವಾಗುತ್ತಾ ಹೋಗುತ್ತದೆ. ಅಂಥ ಪ್ರಕ್ರಿಯೆ ಈ ಹೊತ್ತು ಜಗತ್ತಿನಾದ್ಯಂತ ನಡೆಯುತ್ತಿದೆ. ಆದ್ದರಿಂದಲೆ ಬಡವ ಶ್ರೀಮಂತರ ಜೊತೆಗೆ ಗೆಲ್ಲಲಾರದ ಪೈಪೋಟಿಗೆ ತೊಡಗಿದ್ದಾನೆ. ಅದು ಕನಸನ್ನು ಹಿಡಿಯುವ ಕೆಲಸವೊ ಅಥವ ಭ್ರಮೆಯನ್ನು ಬೆನ್ನಟ್ಟುವ ಶ್ರಮವೊ ಹೇಳಲಾಗದು. ಇಪ್ಪತ್ತನೆಯ ಶತಮಾನವಷ್ಟೆ ಅವನನ್ನು ಉದ್ದೇಶಿಸಿತ್ತು. ಅದು ಅವನ ಪರವಾದ ರಾಜಕಾರಣವೂ ಆಗಿತ್ತು. ಇನ್ನು ಅಂಥ ರಾಜಕಾರಣ ಬರುವ ಸಾಧ್ಯತೆಗಳು ಕಡಿಮೆ. ಈ ಹೊತ್ತಿನ ರಾಜಕಾರಣಿಗಳ ಕೈಯಲ್ಲಿ ರಾಜಕಾರಣ ಇಲ್ಲ. ಅವರು ರಾಜಕಾರಣಕ್ಕೆ ಬಳಸಿಕೊಳುತ್ತಿರುವ ದಾಳಗಳಷ್ಟೆ. ಜನ ಓಟು ಹಾಕುತ್ತಾರೆ, ರಾಜಕಾರಣಿಗಳು ರಾಜಕಾರಣ ನಡಸುತ್ತಾರೆ ಎಂಬುದೆಲ್ಲ ನಮ್ಮ ಅನಿಸಿಕೆ ಮಾತ್ರ. ನಮಗೆ ಹತ್ತಿರದಿಂದ ಗೊತ್ತಿರುವಂತೆ ಮತದಾನ ಎನ್ನುವುದು ಅಸಲಿ ಚಟುವಟಿಕೆಯೆ ಅಲ್ಲ. ಅದನ್ನು ಹಲವು ಶಕ್ತಿಗಳು ನಡೆಸಿಕೊಡುತ್ತವೆ. ನೀವು ರಾಜಕಾರಣದ ಆಟ ಆಡಿಕೊಳ್ಳಿ ನಾವು ದೇಶದ ವ್ಯಾಪಾರ, ವ್ಯವಹಾರ ನೋಡಿಕೊಳ್ಳುತ್ತೇವೆ. ಅದರಲ್ಲಿ ನಿಮ್ಮ ಹಸ್ತಕ್ಷೇಪ ಬೇಡ ಎಂದು ಕಾರ್ಪೊರೇಟ್ ಸಂಸ್ಥೆಗಳು ಹೇಳಿದರೆ ಅಲ್ಲಿ ನಿಜವಾದ ರಾಜಕಾರಣ ಇಲ್ಲ ಎಂದೆ ಅರ್ಥ. ನಿಜದಲ್ಲಿ, ಬಡತನವನ್ನು ಉದ್ದೇಶಿಸಿದ ರಾಜಕಾರಣವಷ್ಟೆ ಅಸಲಿ ರಾಜಕಾರಣ. ಉಳಿದಂತೆ ಅದು ಯಾವುದಾದರೊಂದು ಬಗೆಯ ಪ್ರಭುತ್ವ ಆಗಿರುತ್ತದೆ.

ಹೀಗೆ ಜನೋದ್ದೇಶಿತ ರಾಜಕಾರಣವೂ ಅಡ್ಡದಾರಿ ಹಿಡಿದು ಪ್ರಭುತ್ವದ ತೆಕ್ಕೆಗೆ ಜಾರುತ್ತಿದೆ. ಅದೇ ಹಾದಿಹಿಡಿದ ವಿಜ್ಞಾನ ಮತ್ತು ಅದರ ಫಲಶೃತಿಯಾದ ಆಧುನಿಕತೆಯು ನವಒಡೆಯರ ಹಸ್ತಕ್ಕೆ ಬದ್ದಿವೆ. ಈಗ ಕುಮಾರವ್ಯಾಸನ ಪದ್ಯವೊಂದು ನೆನಪಿಗೆ ಬರುತ್ತಿದೆ ಅರಸು ರಾಕ್ಷಸ ಮಂತ್ರಿ ಮೊರೆವ ಹುಲಿ ಅಧಿಕಾರಿಗಳು ಹದ್ದಿನ ನೆರವಿ ....ಈಗ ಜನಗಳ ಕೈಲಿ ಏನು ಉಳಿದಿದೆ?

ಯಾಹೊತ್ತೂ ಹಲಾಹಲದ ಜೊತೆಗೆ ಅಮೃತವೂ ಹುಟ್ಟುವುದು ಪ್ರಕೃತಿನಿಯಮ. ಹಾಗೆಯೆ ಸೃಷ್ಟಿ ಲಯ ಒಟ್ಟೊಟ್ಟಿಗೆ ಜನ್ಮ ತಳೆಯುತ್ತವಂತೆ. ಅವುಗಳ ಕಾಲ ಬಂದಾಗ ಪ್ರವೃತ್ತವಾಗುತ್ತವೆಯಂತೆ. ಪ್ರಕೃತಿ ನಿಯಮದಲ್ಲಿಯೆ ಸೃಷ್ಟಿ ಮತ್ತು ನಿಯಂತ್ರಣ ಶಕ್ತಿಗಳಿರುತ್ತವೆ ಎಂಬುದು ಸಾಬಿತಾಗಿ ಹೋಗಿದೆ. ಮನುಷ್ಯನ ಸಂದರ್ಭವನ್ನೆ ತೆಗೆದುಕೊಂಡರೆ ಅವನಿಗೆ ಕಾಯಿಲೆಗಳೂ ಇವೆ. ಜೊತೆಯಲ್ಲಿ ಅದರ ನಿಯಂತ್ರಣ ಶಕ್ತಿಗಳಾದ ಔಷಧಗಳೂ ಇವೆ. ನಾವು ಈಗ ಪ್ರಸ್ತಾಪಿಸಿದ ಸ್ಫೋಟ ವಿಜ್ಞಾನದ ಉದಯದ ಜೊತೆಗೆ ಅದನ್ನು ನಿಯಂತ್ರಿಸುವ ಶಕ್ತಿಗಳ ಉದಯವೂ ಆಗಿದೆ. ಸರಳಾರ್ಥದಲ್ಲಿ ಅವುಗಳನ್ನು ಪರ್ಯಾಯಗಳೆಂದು ಕರೆಯಲಾಗಿದೆ. ವೈರುಧ್ಯ ಚಿಂತನೆಯ ಭಾಷೆಯಲ್ಲಿ ಸೃಷ್ಟಿ/ಪ್ರತಿಸೃಷ್ಟಿ ಎನ್ನಬಹುದು. ಸಾಮಾನ್ಯರ ಭಾಷೆಯಲ್ಲಿ ದಾರಿಬದಲಿಸುವುದು ಎನ್ನುತ್ತಾರೆ. ಪ್ರಪಂಚ ನಡೆಯುವುದೇ ಹಾಗೆ.

ಸ್ಫೋಟವಿಜ್ಞಾನಕ್ಕೊಂದು ಸಾವಧಾನವಿಜ್ಞಾನ, ಅರಾಜಕರಾಜಕೀಯಕ್ಕೊಂದು ಸೃಜನಶೀಲರಾಜಕೀಯ ಇವತ್ತಿನ ಅವಶ್ಯಕತೆಯಾಗಿದೆ. ಸ್ಫೋಟವಿಜ್ಞಾನಕ್ಕೆ ಮೊದಲು ಅಂತರ್ ಸಂಬಂಧಿಯಾದ ಅಖಂಡಜ್ಞಾನ ಪದ್ಧತಿಯೊಂದಿತ್ತು. ಸ್ಫೋಟವಿಜ್ಞಾನ ಅದರ ಮಗ್ಗುಲು ಮುರಿಯಲು ಎಲ್ಲ

ಅಮೆರಿಕದ ಹಸ್ತದಲ್ಲಿ ಮಾನವ ಚಾಲನೆರಹಿತ ಡ್ರೋಣ್ ಯುದ್ಧವಿಮಾನವಿದ್ದು ವಿರೋಧಿಗಳ ಕೈಯಲ್ಲಿ ಅಂಥದೇನೂ ಇಲ್ಲದ ಪರಿಸ್ಥಿತಿ ಇರುವುದಿಲ್ಲ. ರಿಲಯನ್ಸ್ ಒಡೆಯನ ಹತ್ತಿರ ಇಪ್ಪತ್ತೇಳು ಅಂತಸ್ತಿನ ಮನೆ ಇದ್ದು ಇನ್ನೊಂದು ಕಡೆ ಗುಡಿಸಿಲಿನವನ ಸ್ಥಿತಿ ಇರುವುದಿಲ್ಲ. ಸಹಜ ಸೃಷ್ಟಿ ಮತ್ತು ಪೈಪೋಟಿಗೆ ಅವಕಾಶವನ್ನೆ ಕೊಡದೆ ಶೋಷಣೆ ಆಧಾರಿತ ಬೆಳವಣಿಗೆಯನ್ನು ಅಭಿವೃದ್ಧಿ ಎಂದು ಕರೆಯುವುದು ಅವೈಜ್ಞಾನಿಕವಾಗುತ್ತದೆಯೆ ಹೊರತು ಪ್ರಗತಿ ಎನಿಸಿಕೊಳ್ಳುವುದಿಲ್ಲ.

ಪ್ರಯತ್ನ ಮಾಡಿತು. ಆದರೆ ಅದು ಸಾವಧಾನ ವಿಜ್ಞಾನದ ಪರಿಕಲ್ಪನೆಯ ಸ್ವರೂಪದಲ್ಲಿ ಚಿಗುರೊಡೆಯಿತು. ಸ್ಫೋಟವಿಜ್ಞಾನದ ಹುಟ್ಟು, ಅಬ್ಬರ ಮತ್ತು ಅವಾಂತರದ ಸಂದರ್ಭದಲ್ಲಿ ಅದು ಎರಡು ಪ್ರವೃತ್ತಿಗಳಲ್ಲಿ ಕಾಣಿಸಿಕೊಂಡಿದೆ. ಒಂದು, ಸ್ಫೋಟವಿಜ್ಞಾನದ ಅವಾಂತರಕ್ಕೆ ಪ್ರತಿಭಟನೆ. ಎರಡು, ಜನರ ಮಧ್ಯೆಯೆ ಇದ್ದ ತಳ/ಕೆಳ ಜ್ಞಾನಪದ್ಧತಿಗಳ ಹುಡುಕಾಟ ಮತ್ತು ಅವುಗಳ ಬಗ್ಗೆ ಮರುಚಿಂತನೆ. ಮೊದಲ ಹಂತದ ಪ್ರತಿಭಟನೆ ಆಧುನಿಕ ಎನ್ನುವ ಸೌಲಭ್ಯಗಳ ಬಗ್ಗೆ ತಿರಸ್ಕಾರ, ಅನಾದರ, ಮೂದಲಿಕೆ. ಇದರ ಪ್ರತಿಫಲ ಮಾತ್ರ ಫಲಪ್ರದವಾದುದಲ್ಲ. ಇದು ಒಂದುರೀತಿಯ ಪಲಾಯನ ಮತ್ತು ಸೋಲಿನಲ್ಲಿ ಅಂತ್ಯವಾಗುತ್ತದೆ. ದೈತ್ಯ ಸ್ಫೋಟವಿಜ್ಞಾನದ ಹೊರಗೆ ಮನರಂಜನೆ, ನೋವುಪರಿಹಾರಕ ಚಟುವಟಿಕೆ, ಅಲೆಮಾರಿತನ ಅನುಭವಿಸುವಿಕೆ ಹಾಗೂ ಹತಾಶರಾಗುವ ಮಾರ್ಗ ಕಂಡುಕೊಳ್ಳಲಾಯಿತು. ಎರಡನೆಯ ಹಂತದ ಪ್ರತಿಭಟನೆ ದುಡಿಯುವವರಿಗೆ ಸರಿಯಾದ ಅನುಕೂಲಗಳನ್ನು ಕಲ್ಪಿಸಲು ಹೋರಾಡುವುದು. ಅತಿದುಡಿಮೆ, ಮಾನಸಿಕ ಒತ್ತಡ, ದುಡಿಮೆಯ ದುರ್ಬಳಕೆ ಮತ್ತು ಹಿಂಸೆಯ ಬಗ್ಗೆ ಅಸಮಧಾನ, ಅಸಹನೆ ಮತ್ತು ಕ್ರೋಧವನ್ನು ವ್ಯಕ್ತಪಡಿಸುವುದು. ನಿಜವಾದ ಗುಣಾತ್ಮಕ ಪ್ರತಿಭಟನೆ ಎಂದರೆ ಕೈಗಾರಿಕೆಯ ಉತ್ಪಾದನೆ ಕಾರ್ಮಿಕರಿಗೆ ಮತ್ತು ಕಾರ್ಮಿಕರಾಜ್ಯಕ್ಕೆ ಸೇರಿದ್ದು ಎನ್ನುವುದು. ಮಾರ್ಕ್ಸ್ ಸಿದ್ಧಾಂತದ ಮೊದಲೂ ಇಂಥ ಪ್ರವೃತ್ತಿ ಇಂಗ್ಲೆಂಡ್‌ನಲ್ಲಿ ಕಾಣಿಸಿಕೊಂಡಿದೆ. ಇದಕ್ಕೆ ಎಷ್ಟರ ಮಟ್ಟಿನ ತಾತ್ವಿಕತೆ ಇತ್ತು ಎನ್ನುವುದು ಬೇರೆಮಾತು. ಇದೊಂದು ಪ್ರತಿಸೃಷ್ಟಿಗೆ ಕಾರಣವಾದ ನಡೆವಳಿಕೆ. ಖಾಸಗಿ ಬಂಡವಾಳ ಒಡೆತನ ವಿರೋಧಿಯಾದ ಈ ಪ್ರವೃತ್ತಿ ಕಾರ್ಮಿಕ ಬಂಡವಾಳವಾದವನ್ನೆ ಸೃಷ್ಟಿಸಿತು ಒಂದು ಸಮತಲದ, ಸಮಾಧಾನದ ಹಾಗೂ ಸರ್ವರ ಹಿತದ ಪ್ರಗತಿಯ ಚಿಂತನೆ ಇದರಿಂದ ದೂರವೆ ಉಳಿಯಿತು.

ಸಾವಧಾನ ವಿಜ್ಞಾನವೆ ಈ ಹೊತ್ತಿನ ಎಲ್ಲರ ಸದಾವಕಾಶದ ಸ್ಥಿತಿ ಎಂದು ನನಗೆ ಅನಿಸಿದೆ. ಇದನ್ನು ಸಮುದಾಯ ಅಂತರ್ಗತ ವಿಜ್ಞಾನ ಎಂದು ಕರೆಯುವುದುಂಟು. ಅಗತ್ಯತೆ ಸೃಷ್ಟಿಯ ತಾಯಿ ಎಂಬ ಸಾರ್ವತ್ರಿಕ ನಿಯಮದಂತೆ ಮನುಷ್ಯ ತನ್ನ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುತ್ತಾ ಹೋಗುತ್ತಾನೆ. ಅದು ಹಂಚಿಕೆಯ ವಿಜ್ಞಾನ. ಆಧುನಿಕ ವಿಜ್ಞಾನದಂತೆ ಶೇಖರಣೆ ಮತ್ತು ಧೂರ್ತತನ ಪ್ರಚೋದಕ ಜ್ಞಾನವಲ್ಲ/ಅದು ಪ್ರಚೋದನ ರಹಿತ ಎಂದೇನೂ ಅಲ್ಲ. ಆದರೆ ಅದು ಏಕಮುಖ ಹಾಗೂ ಏಕಪಕ್ಷೀಯವಾಗಿರುವುದಿಲ್ಲ. ಒಂದು ಸಮುದಾಯಕ್ಕೆ ಕತ್ತಿ ಗುರಾಣಿಗಳು ಇದ್ದಲ್ಲಿ, ಅಂಥವನ್ನು ಹೊಂದುವ ಅವಕಾಶ ಮತ್ತೊಂದು ಗುಂಪಿಗೂ ಇರುತ್ತದೆ. ಶೀರ್ಮಾನ ಎರಡು ಕಡೆಯವರ ಭಾಗವಹಿಸುವಿಕೆಯಿಂದಲೆ ನಡೆಯಬೇಕಾಗುತ್ತದೆ. ಅಮೆರಿಕದ ಹಸ್ತದಲ್ಲಿ ಮಾನವ ಚಾಲನೆರಹಿತ ಡ್ರೋಣ್ ಯುದ್ಧವಿಮಾನವಿದ್ದು ವಿರೋಧಿಗಳ ಕೈಯಲ್ಲಿ ಅಂಥದೇನೂ ಇಲ್ಲದ ಪರಿಸ್ಥಿತಿ ಇರುವುದಿಲ್ಲ. ರಿಲಯನ್ಸ್ ಒಡೆಯನ ಹತ್ತಿರ ಇಪ್ಪತ್ತೇಳು ಅಂತಸ್ತಿನ ಮನೆ ಇದ್ದು ಇನ್ನೊಂದು ಕಡೆ ಗುಡಿಸಿಲಿನವನ ಸ್ಥಿತಿ ಇರುವುದಿಲ್ಲ. ಸಹಜ ಸೃಷ್ಟಿ ಮತ್ತು ಪೈಪೋಟಿಗೆ ಅವಕಾಶವನ್ನೆ ಕೊಡದೆ ಶೋಷಣೆ ಆಧಾರಿತ ಬೆಳವಣಿಗೆಯನ್ನು ಅಭಿವೃದ್ಧಿ ಎಂದು ಕರೆಯುವುದು ಅವೈಜ್ಞಾನಿಕವಾಗುತ್ತದೆಯೆ ಹೊರತು ಪ್ರಗತಿ ಎನಿಸಿಕೊಳ್ಳುವುದಿಲ್ಲ. ನಮಗೆ ಎಲ್ಲರೊಳಗೆ ಇರುವ ಪ್ರಗತಿ ಪ್ರಚೋದಿತವಾಗಬೇಕೆ ವಿನಹ ಕೆಲವರ ನೆಗೆತ ಅಲ್ಲ.

ಈ ಸಾವಧಾನವಿಜ್ಞಾನ ಹಿಂದೆ ಎಲ್ಲ ಜನರ ಜೀವನ ಪದ್ಧತಿಯಾಗಿತ್ತು. ಆಧುನಿಕ ವಿಜ್ಞಾನದ ಸಂದರ್ಭದಲ್ಲಿ ಅದು ಹಿಂದೆಬಿದ್ದು ಪಾರಂಪರಿಕವಿಜ್ಞಾನ, ಜನಪದ ವಿಜ್ಞಾನ, ಅಥವ ಜನಸಾಮಾನ್ಯರವಿಜ್ಞಾನ ಎಂದು ಕರೆಸಿಕೊಂಡಿತು. ಇದು ಓಡುವವನ ಎದುರು ನಡೆಯುವವನು ಅಸಹಜ ಎನ್ನುವಂತಾಯಿತು. ಸಾವಧಾನ ಅಥವ ಜನಪದಜ್ಞಾನ–ವಿಜ್ಞಾನ ಅಖಂಡ ವಿಜ್ಞಾನ. ಇದನ್ನು ಅವಿಭಜಿತ ವಿಜ್ಞಾನ ಎಂದೂ ಕರೆಯಲಾಗಿದೆ. ಆಧುನಿಕವಿಜ್ಞಾನ ಖಂಡವಿಜ್ಞಾನ. ಅದು ಜ್ಞಾನವನ್ನೂ, ಮನುಷ್ಯನನ್ನೂ ಬೇರೆಬೇರೆಯಾಗಿಯೆ ನೋಡುತ್ತದೆ. ಅದರ ವಿಶಿಷ್ಟ ಸಾಧನೆ ಲಾಭವನ್ನು ಕುರಿತದ್ದಾಗಿದೆ. ಲಾಭದ ಮೂಲಕ ಅಭಿವೃದ್ಧಿ ಎಂದರೆ ನಷ್ಟಕ್ಕೊಳಗಾದವನೂ ಇರಲೇಬೇಕಲ್ಲವೆ? ಅವನು ಯಾರ ಮನುಷ್ಯ? ಅಂದರೆ ಆಧುನಿಕವಿಜ್ಞಾನ ಅಖಂಡ ಸ್ವರೂಪಿಯಲ್ಲ. ಅದು ಅಖಂಡ ಜನತೆಯನ್ನು ಉದ್ದೇಶಿಸುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಈಗ ನಾವು ಸಾವಧಾನ ವಿಜ್ಞಾನ ಅಥವ ಜಾನಪದವನ್ನು ಕೈಗೆತ್ತಿಕೊಳ್ಳಬೇಕಾಗಿದೆ. ವಿಘಟನಪೂರ್ವ ಸಮಾಜವೆ ಜನಪದಸಮಾಜ. ಅಲ್ಲಿ ಸಮಾಜವಿಜ್ಞಾನ ಮತ್ತು ನೈಸರ್ಗಿಕವಿಜ್ಞಾನ ಬೇರೆಬೇರೆಯಾಗಿರಲಿಲ್ಲ. ಒಬ್ಬ ರೈತನೊಳಗೆ ರೈತಸಮಾಜವೂ ರೈತವಿಜ್ಞಾನಿಯೂ ಅಡಕವಾಗಿದ್ದರು. ಒಬ್ಬ ಕುಶಲಕರ್ಮಿಯಲ್ಲಿ ಒಬ್ಬ ತಂತ್ರಜ್ಞಾನಿ ಮತ್ತು ಒಬ್ಬ ತಂತ್ರಸಾಮಾಜಿಕ ಕೂಡಿಯೆ ಇದ್ದರು. ಇಂಥ ಜಾನಪದದ ಮೂಲಸೆಲೆ ಮತ್ತು ನೆಲೆ ಸಾವಧಾನವಿಜ್ಞಾನದ ಹುಡುಕಾಟವೆ ಆಗಿತ್ತು. ಸ್ಫೋಟವಿಜ್ಞಾನದ ಸಂದರ್ಭದಲ್ಲಿ ಹಿಂದೆ ಸರಿದಂತೆ ಕಂಡರೂ ಬೇರೆಬೇರೆ ದೇಶಗಳಲ್ಲಿ ಬೇರೆಬೇರೆ ಅವತಾರಗಳಲ್ಲಿ ಜಾನಪದ ಹೆಸರಿನಲ್ಲಿ ಅದು ಹುಟ್ಟಿಕೊಂಡಿದೆ. ಎಲ್ಲಿ ಸ್ಫೋಟವಿಜ್ಞಾನ ಹುಟ್ಟಿತೊ ಅದೇ ಇಂಗ್ಲೆಂಡಿನಲ್ಲಿ 'ಫೋಕ್ ಲೋರ್' ಎಂಬ ಹೆಸರಿನಲ್ಲಿ ಕಾಣಿಸಿಕೊಂಡರೆ, ಜರ್ಮನಿಯಲ್ಲಿ 'ವಾಲ್ಕುಸ್ಕುಂಡೆ' ಎಂಬ ಹೆಸರಿನಿಂದ ಜನ್ಮತಳೆಯಿತು. ಇದನ್ನು ಜನಪದವಿಜ್ಞಾನ, ಪಾರಂಪರಿಕವಿಜ್ಞಾನ ಎಂದು ಆಗ ಗುರುತಿಸಲಾಯಿತು. ನಿಸರ್ಗ ಮತ್ತು ಸಮಾಜ ಎರಡನ್ನೂ ಒಳಗೊಂಡ ಅಖಂಡಜ್ಞಾನ ಎಂದು ಅದನ್ನು ಸ್ಪಷ್ಟಮಾಡಿಕೊಳ್ಳಲಾಯಿತು. ಜಗತ್ತಿನ ತಜ್ಞರು ಇದನ್ನು ಗಮನಿಸಿದರು. ಯೂರೋಕೇಂದ್ರ ಚಿಂತನೆಯನ್ನು ಅನುಸರಿಸಿದವರು ಇದನ್ನು ಪಾರಂಪರಿಕವಿಜ್ಞಾನ ಎಂದು ಕರೆದರೆ ಹಿಂದುಳಿದ ದೇಶಗಳವರು ಇದು ದೇಶಬದ್ಧಜ್ಞಾನವಾದುದರಿಂದ ದೇಸಿ ಎಂದು ಕರೆದುಕೊಂಡರು. ಅಂಥ ನಮ್ಮೆಲ್ಲರನ್ನು ಕೂಡಿಸಿಕೊಳ್ಳುವ ಸಾವಧಾನವಿಜ್ಞಾನವನ್ನು ಅರ್ಥಾತ್ ಜಾನಪದವನ್ನು ಕೈಗೆತ್ತಿಕೊಳ್ಳಬಹುದೆ? ■



ಐಕ್ಯೈಕ ಸಮುದಾಯ: ಒಂದು ಭಾವನಾತ್ಮಕ ಘೋಷಣೆ

ಮೂಲ: ಡಾ. ಅಸ್ಗರ್‌ಅಲಿ ಎಂಜಿನಿಯರ್
ಕನ್ನಡಕ್ಕೆ: ಹಸನ್ ನಯೀಂ ಸುರಕೋಡ

ಮುಸ್ಲಿಮರು ಹೆಚ್ಚಾಗಿ ಭಾವುಕರಾಗುವ ಪ್ರವೃತ್ತಿಯವರಾಗಿದ್ದಾರೆ. ಇಸ್ಲಾಂ ಮೇಲೆ ಹಿಂದೆಂದಿಗಿಂತಲೂ ಹೆಚ್ಚಾಗಿ ಹಲ್ಲೆಗಳಾಗುತ್ತಿವೆ. ಅದು ಮುಸ್ಲಿಮರು ಕೌಶಲ್ಯಯುತವಾಗಿ ಹಾಗೂ ಬೌದ್ಧಿಕವಾಗಿ ಪ್ರತಿಕ್ರಿಯಿಸುವುದಕ್ಕಿಂತ ಹೆಚ್ಚಾಗಿ ಭಾವನಾತ್ಮಕವಾಗಿ ಪ್ರತಿಕ್ರಿಯಿಸುವಂತೆ ಮಾಡುತ್ತದೆ. ಈ ಹಲ್ಲೆಗಳಿಗೆ ಪ್ರತಿಕ್ರಿಯಿಸಲು ಅಪಾರ ಪ್ರಬುದ್ಧತೆ ಹಾಗೂ ರಾಜಕೀಯ ಚಾಣಾಕ್ಷತೆ ಅನಿವಾರ್ಯವಾಗುತ್ತದೆ. ನಮ್ಮ ಭಾವುಕ ಪ್ರತಿಕ್ರಿಯೆಗಳು ಹಾಗೂ ಬೀದಿ ಪ್ರತಿಭಟನೆಗಳು, ಇನ್ನೂ ಕೆಟ್ಟದ್ದೆಂದರೆ ಭಯೋತ್ಪಾದಕ ಹಾಗೂ ಹಿಂಸಾತ್ಮಕ ಪ್ರತಿಭಟನೆ ನಮ್ಮ ವೈರಿಗಳಿಗೇ ಹೆಚ್ಚು ಲಾಭದಾಯಕವಾಗುತ್ತವೆ ಹಾಗೂ ಇಸ್ಲಾಂ ಮೇಲೆ ಮತ್ತಷ್ಟು ಹಲ್ಲೆಗಳಾಗುತ್ತವೆ.



ಕಳೆದ ಹದಿನಾಲ್ಕು ನೂರು ವರ್ಷಗಳಿಂದ ನಾವು ಒಬ್ಬನೇ ಅಲ್ಲಾಹ್, ಒಬ್ಬನೇ ಪ್ರವಾದಿ ಹಾಗೂ ಒಂದೇ ಕುರ್‌ಆನ್; ಎಲ್ಲ ಮುಸ್ಲಿಮರು ಒಂದಾಗಿ ಒಂದೇ ಉಮ್ಮ(ಸಮುದಾಯ) ಆಗಬೇಕೆನ್ನುವ ಘೋಷಣೆಯನ್ನು ಕೇಳುತ್ತ ಬಂದಿದ್ದೇವೆ. ಜೊತೆಗೆ ಇನ್ನೂ ಕುತೂಹಲಕರ ಸಂಗತಿ ಎಂದರೆ ನಮ್ಮ ಉಲಮಾಗಳು 'ನನ್ನ ಸಮುದಾಯ 72 ಪಂಗಡಗಳಾಗಿ ವಿಭಜಿತವಾಗುವುದು ಹಾಗೂ ಅದರಲ್ಲೊಂದು ಮಾತ್ರ ನಜಿ ಆಗಬಲ್ಲದು, ಅಂದರೆ ವಿಮೋಚನೆಗೊಳ್ಳಬಲ್ಲದು., ಉಳಿದವು ನರಕಕ್ಕೆ ತಳ್ಳಲ್ಪಡುವವು' ಎನ್ನುವ ಪ್ರವಾದಿಯ ಹದೀಸ್‌ನ್ನು ನಿರೂಪಿಸುತ್ತಾರೆ. ಹೀಗೆ ನಾವು ನಮ್ಮನ್ನೇ ಅಲ್ಲಗಳೆಯುತ್ತೇವೆ. ಒಂದೆಡೆ ನಾವು ಒಗ್ಗಟ್ಟನ್ನು ಬಯಸುತ್ತೇವೆ ಹಾಗೂ ಇನ್ನೊಂದೆಡೆ ಉಮ್ಮಾಅನ್ನು ಪರಸ್ಪರ ವಿರೋಧಿಯಾದ 72 ಪಂಗಡಗಳನ್ನಾಗಿ ಒಡೆಯುತ್ತಿದ್ದೇವೆ.

ವಾಸ್ತವ ಸಂಗತಿಯೇನೆಂದರೆ ಹಿಜ್ರಿ ಎರಡನೆಯ ಶತಮಾನದ ಅಂತ್ಯಕ್ಕೆ ಬಗ್ದಾದಿ ಅಲ್‌ಫರ್ಕ್ ಬಯಾನ್ ಅಲ್‌ಫರ್ಕ್ (ವಿಭಿನ್ನ ಪಂಗಡಗಳ ನಡುವಣ ವ್ಯತ್ಯಾಸ) ಎನ್ನುವ ಪುಸ್ತಕ ಬರೆದಿದ್ದರು. ಅಷ್ಟೊತ್ತಿಗೆ ಮುಸ್ಲಿಮರಲ್ಲಿ ನೂರಕ್ಕೂ ಹೆಚ್ಚು ಪಂಗಡಗಳ ವಿವರ ನೀಡಿದ್ದರು. ವಾಸ್ತವದಲ್ಲಿ ಭಾವನಾತ್ಮಕ ಘೋಷಣೆಗಳು ಏಕತೆಯನ್ನು ಎಂದೂ ತರಲಾರವು ಹಾಗೂ ಇಂತಹ ಘೋಷಣೆಗಳನ್ನು ಕೂಗಿದಷ್ಟೂ ನಾವು ವಿಭಜಿತರಾಗುತ್ತೇವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ನಿಜಕ್ಕೂ ಮುಸ್ಲಿಮರಲ್ಲಿ ರಾಜಕೀಯ, ಸಾಮಾಜಿಕ-ಸಾಂಸ್ಕೃತಿಕ ಭಿನ್ನತೆಗಳು-ಪ್ರವಾದಿಯ ಮರಣಾನಂತರ ಸ್ವಲ್ಪ ಸಮಯದಲ್ಲೇ ಕಾಣಿಸಿಕೊಂಡವು.

ದಿಗ್ವಿಜಯಗಳು, ಅವು ಏನೇ ಆಗಿದ್ದರೂ, ಸನ್ನಿವೇಶವನ್ನು ಹೆಚ್ಚು

ಸಂಕೀರ್ಣಗೊಳಿಸಿದವು. ಪಂಗಡಗಳು ಕ್ರಮಬದ್ಧಗೊಳ್ಳಲು ಹಾಗೂ ಭಿನ್ನತೆಗಳು ದೈವಶಾಸ್ತ್ರೀಯ ಸಂರಚನೆಯ ರೂಪ ತಾಳಲು ಸಾಕಷ್ಟು ಸಮಯ ಹಿಡಿದಿದ್ದರೂ ದಿಗ್ವಿಜಯಗಳ ಮೂಲಕ ಬಂದಿದ್ದ ಹೆಚ್ಚಿನ ಅಧಿಕಾರ, ಸಂಪತ್ತು ಹಾಗೂ ವಿದೇಶೀ ಪ್ರಭಾವ ಭಿನ್ನತೆಗಳನ್ನು ಆಳವಾಗಿಸಿದವು. ಈ ಭಿನ್ನತೆಗಳನ್ನು ಅರ್ಥೈಸಿಕೊಳ್ಳಲು ಹಾಗೂ ವಿಶ್ಲೇಷಿಸಲು ದೈವಶಾಸ್ತ್ರಕ್ಕೂ ಆಚೆ ಹೋಗಬೇಕಾಗುತ್ತದೆ ಹಾಗೂ ಆಳವಾದ ಕಾರಣಗಳನ್ನು ಅರಿತುಕೊಳ್ಳಲೆತ್ನಿಸಬೇಕಾಗುತ್ತದೆ.

ಎಲ್ಲಕ್ಕೂ ಮೊದಲು ನಾವು ಅರಿತುಕೊಂಡಿದ್ದಕಿಂತ ಹೆಚ್ಚು ಆಳವಾಗಿ ಬೇರು ಬಿಟ್ಟ ಅಂದಿನ ಅರಬ್ ಸಮಾಜದಲ್ಲಿ ಇಸ್ಲಾಮಿನ ಸಂದೇಶ ಮೂಲಭೂತ ಬದಲಾವಣೆ ತಂದಿತು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಅದು ಧಾರ್ಮಿಕ, ನೈತಿಕ, ಸಾಮಾಜಿಕ ಹಾಗೂ ರಾಜಕೀಯ ಸಂರಚನೆಗಳನ್ನು ಸಂಪೂರ್ಣವಾಗಿ ಬದಲಾಯಿಸಿತು. ಅರಬ್ ಸಮಾಜ ಮತ್ತೆಂದೂ ಮೊದಲಿನಂತಾಗಲಿಲ್ಲ. ಆದಾಗ್ಯೂ ಬದಲಾವಣೆ ಅದೆಷ್ಟು ಶೀಘ್ರವಾಗಿತ್ತೆಂದರೆ ಅರಬರಿಗೆ ಅದನ್ನು ಅರಗಿಸಿಕೊಳ್ಳುವುದಕ್ಕೆ ಸಾಧ್ಯವೇ ಆಗಲಿಲ್ಲ. ಪ್ರವಾದಿ ರಂಗದಿಂದ ನಿರ್ಗಮಿಸಿದ್ದಕ್ಕಿಂತ ಹೆಚ್ಚಿನ ದುರಂತದ ಸಂಗತಿ ಇನ್ನೇನಾಗಬಹುದಿತ್ತು? ಅವರು ಶ್ರೇಷ್ಠ ಮಾರ್ಗದರ್ಶಕರಾಗಿದ್ದರು. ಎಲ್ಲ ಮುಸಲ್ಮಾನರೂ ಆದರದೊಂದಿಗೆ ಅವರ ಮಾತನ್ನು ಆಲಿಸುತ್ತಿದ್ದರು.

ಶೈಶವಾವಸ್ಥೆಯಲ್ಲಿದ್ದ ಮುಸ್ಲಿಂ ಸಮಾಜಕ್ಕೆ ಹೆಚ್ಚು ಪ್ರಯೋಜನಕಾರಿ ಆಗಬಹುದಾಗಿದ್ದ ಆಳದ ಇಸ್ಲಾಮೀ ಕ್ರಾಂತಿಯ ಲಾಭಗಳನ್ನು ಮನವರಿಕೆ ಮಾಡಿಕೊಳ್ಳಲು ಮುಸ್ಲಿಮರು ವಿಭಿನ್ನ ಕಾರಣಗಳಿಗಾಗಿ ಒಳಹೊಕ್ಕು ನೋಡುವುದಕ್ಕೆ ಬದಲಾಗಿ ಹೊರಗೇ ಕಣ್ಣು ನೆಟ್ಟರು. ಕುರ್‌ಆನ್‌ನ ಅತ್ಯಂತ ಮೂಲಭೂತ ಸಂದೇಶ ನೈತಿಕವಾಗಿತ್ತು, ಸಮಾಜದಲ್ಲಿ ನ್ಯಾಯ ಹಾಗೂ ಸಮಾನತೆಯನ್ನು ನೆಲೆಸುವುದಾಗಿತ್ತು. ಕುರ್‌ಆನ್ ಪದೇ ಪದೇ ಈಮಾನ್ ಜೊತೆಗೆ ಆಮಾಲ ಸಹೀಹ್ (ಅಲ್ಲಾಹ್, ಅವನ ಪ್ರವಾದಿಗಳು, ತೀರ್ಪು ಹಾಗೂ ಪ್ರತಿಫಲ ಪ್ರದಾನದ ದಿನದಲ್ಲಿ ನಂಬಿಕೆ ಅಥವ ಶ್ರದ್ಧೆ)ಯ ಮಹತ್ವವನ್ನು ಒತ್ತಿ ಹೇಳಿತು.

ಎರಡನೆಯದಾಗಿ ಕುರ್‌ಆನ್ ಮನುಷ್ಯನ ಘನತೆ ಹಾಗೂ ಮನಸ್ಸಾಕ್ಷಿಯ ಸ್ವಾತಂತ್ರ್ಯಕ್ಕೆ ಸೂಕ್ತ ಒತ್ತಿನೊಂದಿಗೆ ನ್ಯಾಯಸಮ್ಮತ ಮತ್ತು ಸಮಾನತೆಯ ಸಮಾಜದ ಹೊಸ ಆವೃತ್ತಿಯನ್ನು ನೀಡಿತು. ಅದು ಒಂದು ಹೊಸ ಮಧ್ಯ ಮಾರ್ಗವನ್ನು ಹುಡುಕಿತ್ತು. ಅದರ ಪ್ರಕಾರ ಅರಬ್ ಸಮಾಜದಲ್ಲಿ ಅಲ್ಲಿಯವರೆಗೆ ಅಪರಿಚಿತವಾಗಿದ್ದ ಮನಸ್ಸಾಕ್ಷಿಯ ಸ್ವಾತಂತ್ರ್ಯದೊಂದಿಗೆ ಉಮ್ಮ ಹಾಗೂ ವ್ಯಕ್ತಿ ಎರಡೂ ಮಹತ್ವದ್ದಾಗಿದ್ದವು. ಅರಬರು ಅತ್ಯಂತ ಸಂಪ್ರದಾಯಬದ್ಧರಾಗಿದ್ದರು, ತಮ್ಮ ತಮ್ಮ ಸಂಸ್ಕೃತಿಗಳಲ್ಲಿ ಆಳವಾಗಿ ಬೇರು ಹೊಂದಿದ್ದರು.

ಇಸ್ಲಾಂ ಬುಡಕಟ್ಟಿಗೆ ಬದಲಾಗಿ ಆಳದಲ್ಲಿ ಮಾನವೀಯ ಹಾಗೂ ವೈಶ್ವಿಕವಾದ ಹೊಸ ಸಂಸ್ಕೃತಿಯನ್ನು ಹುಟ್ಟುಹಾಕಲೆತ್ನಿಸಿತು. ಮುಸ್ಲಿಮರೇ ಜಾಹಿಲಿಯ ಸಂಸ್ಕೃತಿ, ಅಂದರೆ ಅಜ್ಞಾನ ಯುಗದ ಸಂಸ್ಕೃತಿ, ಎಂದು ಕರೆಯುತ್ತಿದ್ದ ಇಸ್ಲಾಂ ಪೂರ್ವದ ಸಂಪ್ರದಾಯಗಳಿಂದ ವಿಮೋಚನೆ ಪಡೆಯುವುದು ಅಷ್ಟು ಸುಲಭವಾಗಿರಲಿಲ್ಲ. ಆದಾಗ್ಯೂ ಅದರ ಪ್ರಭಾವ ಎಷ್ಟು ಆಳವಾಗಿತ್ತೆಂದರೆ ಬರಿ ಇಸ್ಲಾಂ ಧರ್ಮದ ಸ್ವೀಕೃತಿ ಸಮಗ್ರ ಸಾಮಾಜಿಕ ಪರಿವರ್ತನೆಗೆ ಅನಿವಾರ್ಯವಾಗಿದ್ದ ಆಳವಾದ ಬದಲಾವಣೆ ತರಲಿಲ್ಲ.

ಕುರ್‌ಆನ್ ಅರಬ್ಬಿ ಭಾಷೆಗೆ ಹೊಸದೊಂದು ನೈತಿಕ ಹಾಗೂ ಸಾಹಿತ್ಯಕ ಎರಡೂ ವಿಧದ ಪದವಿನ್ಯಾಸ ನೀಡಿತು. ಅದನ್ನು ಗಮನಿಸಿದ ಅರಬ್ಬಿ ಭಾಷೆಯ ಮಹಾನ್ ಸೃಜನಶೀಲ ಕವಿಗಳಿಗೆ ದಂಗು ಬಡಿದಂತಾಯಿತು. ಅದಕ್ಕೆ ಸರಿಸಾಟಿಯಾಗುವುದು ತಮ್ಮಿಂದ ಸಾಧ್ಯವಿಲ್ಲವೆನಿಸಿತು. ಆದರೆ ಈ ಪದವಿನ್ಯಾಸ ಸೃಜನಶೀಲ ಸೌಂದರ್ಯದಿಂದ ತುಂಬಿ ತುಳುಕುತ್ತಿತ್ತಷ್ಟೇ ಅಲ್ಲ ನೈತಿಕವಾಗಿ ಅತ್ಯುತ್ಕೃಷ್ಟವಾಗಿತ್ತು. ಕಾರಣ ಕುರ್‌ಆನ್‌ನ ಕನಸು ಒಂದು ಹೊಸ ಸಮಾಜ ಹಾಗೂ ಅಕ್ಷರಶಃ ಹೊಸ ಮನುಷ್ಯನನ್ನು ಸೃಷ್ಟಿಸುವುದಾಗಿತ್ತು. ಅದನ್ನು ಕುರ್‌ಆನ್ ಮೋಮಿನ್, ಅಂದರೆ ಶ್ರದ್ಧಾವಂತ ಮನುಷ್ಯ, ಎಂದು ಕರೆಯಿತು. ಅವನು ಹೊಸ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ಕಾರ್ಯತತ್ಪರನಾಗುವಂತಹವನು. ಇಕಬಾಲ್ ಹೇಳುವಂತೆ 'ಮೋಮಿನ್ ಹೈ ತೊ ನಯಾ ಜಹಾಂ ಪೈದಾ ಕರ್ (ನೀನೊಬ್ಬ ಶ್ರದ್ಧಾವಂತ ಮನುಷ್ಯನಾಗಿದ್ದರೆ ಹೊಸ ಲೋಕ ನಿರ್ಮಿಸು, ಹಳೆಯದರಲ್ಲಿ ಬದುಕದಿರು).

ಶ್ರದ್ಧೆಯ ಈ ಹೊಸ ಮನುಷ್ಯ ಏಕತೆ, ಮನುಷ್ಯ ಘನತೆ, ಮನಸ್ಸಾಕ್ಷಿಯ ಸ್ವಾತಂತ್ರ್ಯ, ಬಹುತ್ವ, ಸತ್ಯ, ಅನುಕಂಪೆ, ಸಮಾನತೆ, ನ್ಯಾಯ ಹಾಗೂ ಅಪಾರ ಧೈರ್ಯ ಮೊದಲಾದ ಕುರ್‌ಆನ್‌ನ ಎಲ್ಲ ಮೌಲ್ಯಗಳನ್ನು ಸ್ವೀಕರಿಸಬಹುದಿತ್ತಷ್ಟೇ ಅಲ್ಲ ಪ್ರವಾದಿಯ ಕೆಲವೇ ಸಂಗಾತಿಗಳನ್ನು ಹೊರತುಪಡಿಸಿದಂತೆ ಈ ಹೊಸ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಲು ಹಾಗೂ ಈ ಹೊಸ ಇಸ್ಲಾಮೀ ಕನಸನ್ನು ನನಸಾಗಿಸಲು ಕಟಿಬದ್ಧನಾದ ವ್ಯಕ್ತಿಯೇ ಇಲ್ಲದಂತಾಯಿತು.

ಇನ್ನೂ ಕೆಟ್ಟದ್ದೆಂದರೆ ದಿಗ್ವಿಜಯಗಳು ಈ ಪ್ರಕ್ರಿಯೆಯನ್ನು ಇನ್ನಷ್ಟು ಹೊಲಬುಗೆಡಿಸಿದ್ದು. ಕಾರಣ ಸ್ವಭಾವದಲ್ಲಿ ಬಹುತೇಕ ಪಾಳೆಯಗಾರೀ ಹಾಗೂ ನಿರಂಕುಶವಾಗಿದ್ದ ಹೊಸ ಪರಕೀಯ ಮೌಲ್ಯಗಳು ಇಡೀ ಪ್ರಕ್ರಿಯೆಗೆ ಸಾಕಷ್ಟು ಹಾನಿ ಮಾಡಿದ್ದವು. ಈಗ ಕುರ್‌ಆನ್‌ನ ನೈತಿಕ ಕನಸನ್ನು ನನಸಾಗಿಸುವುದಕ್ಕೆ ಬದಲಾಗಿ ರಾಜ್ಯಾಧಿಕಾರ ಹಾಗೂ ಹೊಸದಾಗಿ ಗಳಿಸಿದ್ದ ಸಂಪತ್ತು ಮತ್ತು ವೈಭವವನ್ನು ಹಂಚಿಕೊಳ್ಳುವುದಕ್ಕೇ ಒತ್ತು ನೀಡಲಾಯಿತು. ಹೊಸ ಕನಸಿನ ಸಮಾಜ ಅಸ್ತಿತ್ವಕ್ಕೆ ಬರಬೇಕಿದ್ದ ಪ್ರಕ್ರಿಯೆ ಬಲವಾದ ಆಘಾತ ಅನುಭವಿಸಿತು. ಬರೀ ಲೌಕಿಕ ವ್ಯವಹಾರಗಳು ಹಾಗೂ ಅಧಿಕಾರಕ್ಕಾಗಿ ಕಚ್ಚಾಟದಲ್ಲಿ ತನ್ಮಯರಾದವರು ಒಂದೆಡೆಯಾದರೆ ಕೇವಲ ಆಧ್ಯಾತ್ಮಿಕ ವಿಷಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಹೆಚ್ಚು ಕಡಿಮೆ ವಿರಕ್ತರಾಗಿಬಿಟ್ಟದ್ದವರು ಇನ್ನೊಂದೆಡೆ ಹೀಗೆ ಇಸ್ಲಾಮೀ ಸಮಾಜದ ಧ್ರುವೀಕರಣವಾಗತೊಡಗಿತು.

ಮತ್ತೊಂದು ಆಘಾತ ಆಗಿದ್ದು ಉಮ್ಮೆಯ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದಾಗ. ಅದು ಸ್ವಭಾವತಃ ಅತ್ಯಂತ ದಮನಕಾರಿ ಹಾಗೂ ನಿರಂಕುಶವಾಗಿತ್ತು. ಇಸ್ಲಾಮೀ ಮೌಲ್ಯಗಳು ಹಾಗೂ ಕಾಣ್ಕೆಯಿಂದ ಸ್ಫೂರ್ತಿ ಪಡೆಯುವುದಕ್ಕೆ ಬದಲಾಗಿ ರೋಮನ್ ಮಾದರಿಯನ್ನಾಧರಿಸಿ ಸ್ಥಾಪನೆಗೊಂಡಿತ್ತು. ತಮಗೆ ಸಹಜವೆನ್ನುವಂತೆ ಉಮ್ಮೆಯರು ಇಸ್ಲಾಂ ಪೂರ್ವದ ಇಸ್ಲಾಮೀ ಜಾಹಿಲಿಯಾ ಸಂಸ್ಕೃತಿಯಲ್ಲಿ ಎರಕ ಹೊಯ್ಯಲ್ಪಟ್ಟವರು. ತಮ್ಮ ಕಾವ್ಯಕ್ಕೆ ಒತ್ತು ಕೊಡುವುದರ ಮೂಲಕ ಅವರು ಇಸ್ಲಾಂ ಪೂರ್ವದ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಲೆತ್ನಿಸಿದರು. ಇಸ್ಲಾಂ ಪೂರ್ವದ

ಸಂಸ್ಕೃತಿಯನ್ನಾಧರಿಸಿ ಕಿತಾಬ್ ಅಲ್‌ಫಿನಾ ಗ್ರಂಥವನ್ನು ಬರೆಯಲಾಯಿತು. ಅದು ಅಪಾರ ಜನಪ್ರಿಯತೆ ಗಳಿಸಿತು.

ಈ ಜಾಹಿಲಿಯಾ ಸಂಸ್ಕೃತಿಯ ಮೂಲಭೂತ ಮೌಲ್ಯಗಳಲ್ಲಿ ಉನ್ನತ ನೈತಿಕ ಮೌಲ್ಯಗಳಿಗೆ ಅವಕಾಶವೇ ಇದ್ದಿರಲಿಲ್ಲ. ಅದಕ್ಕೆ ಬದಲಾಗಿ ಬರೀ ಲೌಕಿಕ ಸುಖವೇ ಸರ್ವಸ್ವವಾಗಿತ್ತು. ಅಷ್ಟಕ್ಕೂ ಅದು ಶ್ರೀಮಂತ ಅರಬ್ ಪರಂಪರೆಯಾಗಿತ್ತು, ಅದರ ಪುನರುಜ್ಜೀವನ ಒಂದು ನ್ಯಾಯಸಮ್ಮತವಾದ ವಿದ್ಯಮಾನವಾಗಿತ್ತು. ಆದಾಗ್ಯೂ ಅದರ ದೋಷವೇನಿತ್ತು ಎನ್ನುವ ಕುರಿತು ವಾದಿಸಲೂಬಹುದು. ಈ ವಾದದಲ್ಲಿ ಅಂತೂ ಒಂದಷ್ಟು ಹುರುಳಿದೆ. ಏನೇ ಆಗಲಿ ಒಂದು ಬಲಾಢ್ಯ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದಿತ್ತು. ತನ್ನದೇ ರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಹೆಮ್ಮೆ ಪಡುವುದು ಹಾಗೂ ತನ್ನದೇ ರಾಷ್ಟ್ರೀಯ, ಬುಡಕಟ್ಟು ಬೇರುಗಳನ್ನು ಶೋಧಿಸುವುದು ಅದಕ್ಕೆ ಅನಿವಾರ್ಯವಾಗಿತ್ತು.

ಆದರೆ ಇಸ್ಲಾಮೀ ಸಮಾಜದ ನಮ್ಮ ಪ್ರಸ್ತುತ ಕಾಳಜಿಗೆ ಸಂಬಂಧಿಸಿದಂತೆ ನಾವು ಅದನ್ನು ಬೇರೊಂದು ದೃಷ್ಟಿಕೋನದಿಂದಲೇ ಅವಲೋಕಿಸಬೇಕಿದೆ. ಈ ಪುನರುಜ್ಜೀವನದ ದುರಂತವೆಂದರೆ ಯಾವ ಥರದ ಸಮಾಜವನ್ನು ಇಸ್ಲಾಂ ಕಟ್ಟ ಬಯಸಿತ್ತು ಎನ್ನುವುದರ ಪರಿವೆ ಇಲ್ಲದೆ ಸುಖ ಹಾಗೂ ಅಧಿಕಾರ ಪಡೆದು ಐಷಾರಾಮದ ಬದುಕನ್ನು ಸಾಗಿಸುವ ಪ್ರವೃತ್ತಿಯನ್ನು ಇಸ್ಲಾಂ ಪೂರ್ವದ ಸಂಸ್ಕೃತಿ ಬಲಪಡಿಸಿತ್ತು. ಎರಡನೆಯದು ಹಾಗೂ ಹೆಚ್ಚು ಅಪಾಯಕಾರಿಯಾದದ್ದು ಇಸ್ಲಾಂ ಪೂರ್ವದ ಭಾಷೆ ಮತ್ತು ಪದ ವಿನ್ಯಾಸ ಒಂದು

ಶೋಕಿಯಾಗಿದ್ದುದು. ಕುರ್‌ಆನ್‌ನ ಪದಗಳನ್ನು ಹಾಗೂ ಅವುಗಳ ಅರ್ಥವನ್ನು ಸಹ ಇಸ್ಲಾಂ ಪೂರ್ವದ ಕಾವ್ಯದಲ್ಲಿ ಅವುಗಳ ಪ್ರಯೋಗದ ಬೆಳಕಿನಲ್ಲೇ ಶೋಧಿಸಲೆತ್ನಿಸಲಾಯಿತು.

ವಾಸ್ತವದಲ್ಲಿ ಕುರ್‌ಆನ್ ತನ್ನದೇ ಆದ ಅರ್ಥ ಶ್ರೀಮಂತಿಕೆಯ ಹೊಸ ಭಾಷೆಯನ್ನು ಸೃಷ್ಟಿಸಿತ್ತು. ಹೊಸ ಸಮಾಜ ಕಟ್ಟುವ ನಿಟ್ಟಿನಲ್ಲಿ ಹೊಸ ಮೌಲ್ಯಗಳನ್ನು ಹುಟ್ಟು ಹಾಕುವುದಕ್ಕಾಗಿ ಅದರ ಪದ ವಿನ್ಯಾಸ ನೈತಿಕವೂ ಕ್ರಾಂತಿಕಾರಿಯೂ ಆಗಿತ್ತು. ಈಗ ದುರಂತವೆಂದರೆ ಇಸ್ಲಾಂ ಪೂರ್ವದ ಕಾವ್ಯ ಕುರ್‌ಆನ್‌ನ ಅರ್ಥವನ್ನು ತಿಳಿದುಕೊಳ್ಳುವುದಕ್ಕೆ ಆಧಾರವಾಗಿ ಬಿಟ್ಟಿತು. ಇಸ್ಲಾಂ ಪೂರ್ವದ ಕಾವ್ಯವೇ ಕುರ್‌ಆನ್‌ನ ಅರ್ಥವನ್ನು ತಿಳಿದುಕೊಳ್ಳುವುದಕ್ಕೆ ಆಧಾರವಾದದ್ದು ಒಂದು ಭಯಂಕರ ವಿಪತ್ತಾಗಿ ಪರಿಣಮಿಸಿತು ಎಂದು ನಾನು ಭಾವಿಸುತ್ತೇನೆ. ಕೆಲ ಮಟ್ಟಿಗೆ ಅದು ಪ್ರಾಯ: ಅನಿವಾರ್ಯವಾಗಿತ್ತು. ಆದರೆ ಅದರ ಪರಿಣಾಮಗಳು ಕುರ್‌ಆನ್‌ನ ಕನಸಿಗೆ ಎಷ್ಟು ತೀವ್ರವಾದ ಆಘಾತ ಉಂಟು ಮಾಡಬಹುದೆನ್ನುವುದರ ಪರಿವೆಯೇ ಇದ್ದಿರಲಿಲ್ಲ.

ಮೂರನೆಯ ಸಂಗತಿಯೆಂದರೆ ದೈವಶಾಸ್ತ್ರೀಯ ಚರ್ಚೆಗಳ ಸ್ವರೂಪವಾಗಿತ್ತು. ಇಸ್ಲಾಮೀ ಕ್ರಾಂತಿಯ ನೈತಿಕ ಬುನಾದಿಯೇ ದುರ್ಬಲಗೊಳ್ಳತೊಡಗಿದಾಗ ಈ ಚರ್ಚೆಗಳು ದೈವಶಾಸ್ತ್ರಜ್ಞರ ಆಕ್ರೋಶದ ಅಗ್ನಿಗೆ ತುಪ್ಪ ಹೊಯ್ದವು. ಮನುಷ್ಯ ಸ್ವತಂತ್ರವಾಗಿ ಕ್ರಿಯಾಶಾಲಿಯೆ ಇಲ್ಲಾ ದೈವದ ಕೈಗೊಂಬೆಯೆ ಎನ್ನುವ ಕುರಿತ ಚರ್ಚೆಗಳು ಸರ್ವೋಚ್ಚವಾಗಿ ಬಿಟ್ಟವು. ಇವುಗಳಲ್ಲೇ ಆಳುವ ವರ್ಗದ ಸತ್ವ ಪರೀಕ್ಷೆ ಆಗಬೇಕಿತ್ತು. ಮನುಷ್ಯ ದೈವ ನಿರ್ಧಾರಿತ ಆಗಿದ್ದರೆ ಉಮೈಯಾ ಸಾಮ್ರಾಜ್ಯ ಸಹ ದೈವಸಂಕಲ್ಪಿತವಾಗಿದ್ದು ಅದರ ದಮನಕಾರಿ ಹಾಗೂ ಶೋಷಕ ಮೂಲ ಸ್ವರೂಪ ಪ್ರಶ್ನಾತೀತವಾಗಿ ಬಿಡುತ್ತಿತ್ತು. ಎಷ್ಟೇ ಆಗಲಿ ಅದು ದೈವೇಚ್ಛೆಯಾಗಿರುತ್ತಿತ್ತು.

ನಾನು ಸೂಚಿಸಿರುವಂತೆ, ಮನಸ್ಸಾಕ್ಷಿಯ ಮೇಲೆ ಕುರ್‌ಆನ್ ಅದೆಷ್ಟು ಒತ್ತು ನೀಡಿದೆಯೆಂದರೆ ಶೈತಾನನಿಗೂ ಆ ಸ್ವಾತಂತ್ರ್ಯ ನೀಡಲಾಗಿದ್ದು ಅವನು ಆದಮನೆದುರು ಮಣಿಯದಿರುವುದನ್ನು ಆಯ್ಕೆ ಮಾಡಿಕೊಳ್ಳಲು ಅನುಮತಿ ನೀಡಲಾಯಿತು. ಹೀಗಾಗಿ ಮನುಷ್ಯ ಜೀವಿ ದೈವೇಚ್ಛೆಯಂತೆ ವರ್ತಿಸುವ ಕೈಗೊಂಬೆ ಮಾತ್ರವಾದ. ತಮ್ಮ ರಾಜಕೀಯ ಒಲವುಗಳ ಪ್ರಕಾರ ದೈವಶಾಸ್ತ್ರಜ್ಞರು ಧ್ರುವೀಕರಣಗೊಂಡರು. ಉಮೈಯಾ ಶಕ್ತಿಯನ್ನು ಪ್ರಶ್ನಿಸಬಯಸದವರು ಈ ದೈವಶಾಸ್ತ್ರೀಯ ನಿಯಮದ ಆಶ್ರಯ ಪಡೆದರು, ರಾಜಕೀಯ ಕ್ರಿಯಾಶೀಲತೆಯಿಂದ ದೂರವುಳಿದರು ಹಾಗೂ ಕೆಲವರಂತೂ ಆಳುವ ವರ್ಗಗಳ ಅಂಗವಾಗಿ ಲಾಭ ಗಿಟ್ಟಿಸಿಕೊಳ್ಳಲೆತ್ನಿಸಿದರು.

ಅಂದರೆ ಇದರ ಅರ್ಥ ಆಳುವ ವ್ಯವಸ್ಥೆಯ ಅಂಗವಾಗಲು ನಿರಾಕರಿಸಿ ಇಸ್ಲಾಮೀ ಮೌಲ್ಯಗಳು ಹಾಗೂ ಕನಸನ್ನು ಕಾರ್ಯ ರೂಪಕ್ಕೆ ತರುವ ನಿಟ್ಟಿನಲ್ಲಿ ಅಪಾರ ಕೆಚ್ಚು ಹಾಗೂ ನೈತಿಕ ಪ್ರಾಮಾಣಿಕತೆಯುಳ್ಳ ಉಲಮಾಗಳಿದ್ದಿರಲಿಲ್ಲವೆಂದು ಹೇಳಿದಂತಾಗಲಾರದು. ಆದರೆ ಈ ಮಧ್ಯ ಇಂತಹವರು ಕೆಲವರೇ ಇದ್ದರು, ವಿರಳವಾಗಿದ್ದರು.

ನಾಲ್ಕನೆಯದಾಗಿ ಉಮೈಯ ಶಕ್ತಿಗೆ ಸವಾಲು ಹಾಕಲು ಅಬ್ಬಾಸಿಯರು, ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅರಬ್ ಪಾರಮ್ಯದಿಂದಾಗಿ ಅಂಚಿಗೆ ದೂಡಲ್ಪಟ್ಟಿದ್ದ ಅಸಂತೃಪ್ತ ಇರಾನಿಯರ ಕುಮ್ಮಕ್ಕಿನೊಂದಿಗೆ ಭೂಗತ ಚಳವಳಿ ಹುಟ್ಟು ಹಾಕಿದರು. ಅವರು ಇಸ್ಲಾಂ ಅಂಗೀಕರಿಸಿದ್ದರಾದರೂ ಎಂದೂ ರಾಜಕೀಯ ಹಾಗೂ ಸಾಂಸ್ಕೃತಿಕ ಪ್ರಕ್ರಿಯೆಗಳ ಅಂಗವಾಗಲಿಲ್ಲ. ಪರ್ಶಿಯನ್‌ರು ತಮಗೆ ರಾಜಕೀಯ ಪ್ರಕ್ರಿಯೆಯಲ್ಲಿ ಗಣನೀಯ ಪಾಲು ನೀಡುವುದಾಗಿ ಮಾತು ಕೊಟ್ಟ ಅಬ್ಬಾಸಿಯರನ್ನು ಬೆಂಬಲಿಸಲು ಸಂತೋಷದಿಂದ ಒಪ್ಪಿಕೊಂಡರು. ಅಬು ಮುಸ್ಲಿಂ ಖೊರಾಸಾನಿ ಅಬ್ಬಾಸಿಯರ ಪರ ಸೈನಿಕ ಹಾಗೂ ಜನ ಬೆಂಬಲ ರೂಪಿಸಿದ.

ಪರ್ಶಿಯನ್‌ರಿಗೆ ತಮ್ಮದೇ ಆದ ಹೆಮ್ಮೆಯ ಸಾಂಸ್ಕೃತಿಕ ಹಾಗೂ ರಾಜಕೀಯ ಪರಂಪರೆಯಿತ್ತು. ಅರಬರು ಕ್ರೂರ ಹಾಗೂ ಅಸಂಸ್ಕೃತ ಬದೂಗಳೆಂದು ಅಪಾರ ಅಸಹನೆ ಇತ್ತು. ಅಬ್ಬಾಸಿಯರು ಅಧಿಕಾರ ಗ್ರಹಿಸಿಕೊಂಡ ನಂತರ ಉಮೈಯರು ಪದಚ್ಯುತರಾಗುತ್ತಲೇ ಹಲವಾರು ಪರ್ಶಿಯನ್ ಮಡದಿಯರು ತಮ್ಮ ಅರಬ್ ಗಂಡಂದಿರನ್ನು ಕೊಲೆ ಮಾಡಿದರು. ಆದರೆ ಇದು ಬಹಳ ಕಾಲ ಮುಂದುವರಿಯಲಿಲ್ಲ. ಅಬ್ಬಾಸಿಯರು ಸಹ ಅರಬ್‌ರೇ ಆಗಿದ್ದರು. ಅವರು ಅರಬೇತರರೊಂದಿಗೆ ರಾಜಕೀಯ ಅಧಿಕಾರ, ಕನಿಷ್ಠ ಪಕ್ಷ ಆಂಶಿಕವಾಗಿ ಹಂಚಿಕೊಳ್ಳಲು ಸಿದ್ಧರಿರಲಿಲ್ಲ.

ಹೀಗೆ ಅವರ ಮೊಟ್ಟ ಮೊದಲ ಕೆಲಸ ಅತ್ಯಂತ ಜಾಗರೂಕವಾಗಿ ಅಬ್ಬಾಸಿ ಶಕ್ತಿಗೆ ರಾಜಕೀಯ ಬುನಾದಿ ಹಾಕಿದ್ದ ಅಬು ಮುಸ್ಲಿಂ ಖೊರಾಸಾನಿಯನ್ನು ಮುಗಿಸಿ ಬಿಡುವುದಾಗಿತ್ತು. ಆದರೆ ಪರ್ಶಿಯನ್‌ರ ಬೆಂಬಲಕ್ಕಾಗಿ ಬೇರೆ ವಿಧದಲ್ಲಿ ಅವರಿಗೆ ಪ್ರತಿಫಲ ನೀಡುವಷ್ಟರ ಮಟ್ಟಿಗೆ ಅಬ್ಬಾಸಿಯರು ಚಾಣಾಕ್ಷರಾಗಿದ್ದರು. ಅವರಿಗೆ ಭಾಗೀದಾರಿಕೆಯ ಭಾವನೆ ಬರಲೆಂದು ಹಲವಾರು ಪರ್ಶಿಯನ್ ಬುದ್ಧಿಜೀವಿಗಳನ್ನು ಮಹತ್ವದ ಹುದ್ದೆಗಳಿಗೆ ನೇಮಕ ಮಾಡಲಾಯಿತು. ರಾಜಕೀಯವಾಗಿ ಅಲ್ಲದಿದ್ದರೂ ಬೌದ್ಧಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅವರು ಪ್ರಭಾವಿಯೆನಿಸಿಕೊಂಡರು.

ಇದರದೇ ಆದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಣಾಮಗಳೂ ಆದವು. ಇಸ್ಲಾಮನ್ನು ಅವಲೋಕಿಸುವುದರಲ್ಲೇ ಅಪಾರವಾದ ಸಾಮಾಜಿಕ ಹಾಗೂ ಬೌದ್ಧಿಕ ಬದಲಾವಣೆಗಳಾವು. ಅಬ್ಬಾಸಿಯರ ಕುಮ್ಮಕ್ಕಿನೊಂದಿಗೆ ಮುಅತಜಿಲ ಆಂದೋಲನ ಹುರಿಗಟ್ಟಿತು ಕುರ್‌ಆನ್ ಮನುಷ್ಯನಿಂದ ರಚಿಸಲ್ಪಟ್ಟಿದ್ದೋ ಇಲ್ಲಾ ಅಪೌರುಷೇಯವೋ ಎನ್ನುವ ಕುರಿತ ವಿವಾದಗಳು ಹೊರಹೊಮ್ಮಿದವು. ಇಂತಹ ಬೌದ್ಧಿಕ ವಿಷಯಗಳಿಗೆ ಸಂಬಂಧಿಸಿದಂತೆ ಮುಸ್ಲಿಮರು ಹಿಂದೆಂದೂ ವಿಭಜಿತರಾಗಿರಲಿಲ್ಲ. ಉಮೈಯರು ಮನುಷ್ಯ ಸಂಕಲ್ಪ ಕುರಿತ ವಿವಾದವನ್ನು ಪ್ರೋತ್ಸಾಹಿಸಿದರೆ ಅಬ್ಬಾಸಿಯರು ಕುರ್‌ಆನ್‌ನ ರಚನೆ ಇಲ್ಲಾ ಅಪೌರುಷೇಯತೆ ಕುರಿತ ವಿವಾದಕ್ಕೆ ಕುಮ್ಮಕ್ಕು ನೀಡಿದರು.

ಎರಡೂ ವಿವಾದಗಳಿಗೆ ತತ್ವಶಾಸ್ತ್ರೀಯ ಅಥವಾ ಬೌದ್ಧಿಕ ಮಹತ್ವ ಇದ್ದಿರಬಹುದು ಅಥವಾ ಇದ್ದಿರಲಿಲಕ್ಕಿಲ್ಲ. ಆದರೆ ಮೂಲಭೂತ ಸಾಮಾಜಿಕ ಹಾಗೂ ರಾಜಕೀಯ ಸಮಸ್ಯೆಗಳಿಂದ ಗಮನ ಬೇರೆಡೆ ಹರಿಯಲು ಸಹಕಾರಿಯಾದವು. ದೈವಶಾಸ್ತ್ರಜ್ಞರು ಈ ವಿಷಯವಾಗಿ ಚರ್ಚಿಸಿದರು, ಧ್ರುವೀಕರಣಗೊಂಡರು. ಅಷ್ಟೇ ಅಲ್ಲ, ಅಬ್ಬಾಸಿಯರು ತತ್ವಶಾಸ್ತ್ರ ಕುರಿತ ಗ್ರೀಕ್, ಪರ್ಶಿಯನ್ ಹಾಗೂ ಭಾರತೀಯ ಮೂಲದ ಗ್ರಂಥಗಳಿಂದ ಅರಬ್ಬಿ ಭಾಷೆಯ ಅನುವಾದಗಳಿಗೆ ಪ್ರೋತ್ಸಾಹ ನೀಡಿದರು. ಬೈತ್ ಅಲ್‌ಹಕೀಂ (ಜ್ಞಾನ ಸದನ) ಅಪಾರ ಬೌದ್ಧಿಕ ಮಂಥನ ಹಾಗೂ ಅರಿವಿನ ಕೇಂದ್ರವಾಯಿತು. ಅರಬರು ವಿಜ್ಞಾನ, ಗಣಿತ , ತಂತ್ರಜ್ಞಾನ ಹಾಗೂ ಹಲವಾರು ಇತರ ವಿಜ್ಞಾನಗಳಲ್ಲಿ ಮುಂಚೂಣಿಗೆ ಬರತೊಡಗಿದರು.

ವಾಸ್ತವದಲ್ಲಿ ಅದು ಜಗತ್ತಿಗೆ ಅರಬರು ಹಾಗೂ ಅರಬೇತರ ಮುಸ್ಲಿಂ ಚಿಂತಕರು, ತತ್ವಜ್ಞಾನಿಗಳು ಹಾಗೂ ಬುದ್ಧಿಜೀವಿಗಳು, ಹೆಚ್ಚಾಗಿ ಪರ್ಶಿಯನ್‌ರು ನೀಡಿದ ಅಮೂಲ್ಯ ಕೊಡುಗೆಯಾಗಿತ್ತು. ಅದು ನಿಸ್ಸಂದೇಹವಾಗಿ ಅನನ್ಯ ಬೌದ್ಧಿಕ ಚಿಂತನ ಮಂಥನವಾಗಿತ್ತು. ಆದರೆ ಅದು ಮುಸ್ಲಿಂ ಉಮ್ಮದಲ್ಲಿ ಮತ್ತಷ್ಟು ಬಿರುಕುಂಟು ಮಾಡಿತು. ಹೊಸ ಪಂಗಡಗಳು ಹುಟ್ಟಿಕೊಂಡವು, ವಿಶೇಷವಾಗಿ ಬಾತಿನಿಯರು ಎಂದೂ ಕರೆಯಲ್ಪಡುವ ಇಸ್ಮಾಯಿಲಿ ಹಾಗೂ ಕರಾಮಿಯ ಪಂಗಡಗಳು. ಈ ಬಾತಿನಿಯರು ನೈಜ ಅರ್ಥಗಳಾದ ಧ್ವನ್ಯಾರ್ಥಗಳೊಂದಿಗೆ ಕುರ್‌ಆನ್‌ನ ವಿವರಣೆ ಹಾಗೂ ಮೂಲ ಪುರುಷರಿಗಲ್ಲದ ಆದರೆ ಜನಸಾಮಾನ್ಯರಿಗಾಗಿ ಇರುವ ಜಾಹಿರಿ (ವಾಚ್ಯ) ಅರ್ಥಗಳ ವಿವರಣೆಯಲ್ಲಿ ನಂಬಿಕೆಯುಳ್ಳವರು.

ಇಸ್ಮಾಲಿಯರು ಮುಂದೆ ಹಲವಾರು ಪಂಗಡಗಳು ಹಾಗೂ ಉಪಪಂಗಡಗಳಾಗಿ ವಿಭಜಿತರಾದರು. ಇಸ್ಮಾಯಿಲಿಯರ ಒಂದು ಉಪಪಂಗಡವಾದ ಕರಾಮಿಯರು ಇನ್ನೊಂದು ಅತಿರೇಕವಾಗಿದ್ದರು. ಅವರು ಶರಿಯಾ ಕಾನೂನುಗಳ ಆಚರಣೆಯ ಬಹಿಷ್ಕಾರವನ್ನು ನಂಬಿದ್ದರು. ಕಾರಣ ಕುರ್‌ಆನ್‌ನ ಧ್ವನ್ಯಾರ್ಥ (ತವೀಲ್ ಎಂದೂ ಕರೆಯಲಾಗುವ)ವನ್ನು ಅನುಸರಿಸುವವರು ಶರಿಯಾ ಆಚರಣೆಯ ಗೊಡವೆಗೆ ಹೋಗಬೇಕಿಲ್ಲ. ಜೊತೆಗೆ, ಕರಾಮಿಯರ ಆದ್ಯತೆ ಒಬ್ಬ ದಾಯಿ (ಸಂಚಾಲಕ)ಯ ನೇತೃತ್ವದಲ್ಲಿ ಕಮ್ಯುನಿಸ್ಟ್ ಮಾದರಿಯ ಬದುಕಿಗೆ ಇತ್ತು.

ದಾಯಿಯು ನಡೆಸುತ್ತಿದ್ದ ಸಾಮುದಾಯಿಕ ಪಾಕಶಾಲೆಗಾಗಿ ಪಂಗಡದ ಎಲ್ಲ ಸದಸ್ಯರೂ ತಮ್ಮೆಲ್ಲ ಸಂಪಾದನೆಯನ್ನು ಅವನಿಗೆ ಸಲ್ಲಿಸಬೇಕಿತ್ತು. ಖಡ್ಗ, ಬಾಣ ಮುಂತಾದ ಅಸ್ತ್ರಗಳ ವಿಷಯದಲ್ಲಿ ಮಾತ್ರ ಖಾಸಗಿ ಒಡೆತನಕ್ಕೆ ಅನುಮತಿ ನೀಡಲಾಗುತ್ತಿತ್ತು. ಕರಾಮಿತಾರು ಬಹ್ರೇನ್‌ನಲ್ಲಿ ಮುವತ್ತು ವರ್ಷಗಳ ಕಾಲ ತಮ್ಮ ಪ್ರಭುತ್ವ ಮುಂದುವರಿಸುವಲ್ಲಿ ಯಶಸ್ವಿಯಾದರು. ಜರ್ಮನಿಯಲ್ಲಿ ಜಾಕಿರ್ ಹುಸೇನ್‌ರಿಂದ ಪರಿಷ್ಕೃತ ಆವೃತ್ತಿಯ ಸಂಪಾದಿತ ಹಾಗೂ ಪ್ರಕಟಿತಗೊಂಡಿದ್ದ 'ಸಫರ್‌ನಾಮಾ'ದ ಲೇಖಕ

ನಾಸಿರ್ ಖುಸ್ರೊ ಬಹ್ರೇನ್‌ನ ಕರಾಮಿತಾ ರಾಜ್ಯದ ವಿಸ್ತೃತ ವಿವರಣೆ ನೀಡಿದ್ದಾನೆ. ಸಾಮುದಾಯಿಕ ಪತ್ತಿತ್ವ ಮುರಿತಾದ ಅವರ ಮೇಲಿನ ಇಲ್ಲ ಸಲ್ಲದ ಆರೋಪಗಳನ್ನು ಅವನು ಅಲ್ಲಗಳೆದಿದ್ದಾನೆ. ಗಮನಾರ್ಹ ಸಂಗತಿ ಎಂದರೆ ಅಬ್ಬಾಸಿಯರಿಂದ ಮರಣ ದಂಡನೆಗೆ ಗುರಿಯಾದ ಮನ್ಸೂರ್ ಹಲ್ಲಾಜ್ ಸಹ ಕರಾಮಿತಾ ಆಂದೋಲನಕ್ಕೆ ಸೇರಿದ್ದನು. ಅಬ್ಬಾಸಿಯರನ್ನು ಪದಚ್ಯುತಗೊಳಿಸುವುದಕ್ಕಾಗಿ ಕರಾಮಿತಾರೊಂದಿಗೆ ಸಂಚು ರೂಪಿಸಿದ್ದಕ್ಕಾಗಿ ಅವನನ್ನು ಗಲ್ಲಿಗೇರಿಸಲಾಯಿತೆ ವಿನಾ ಅವನ 'ಅನಲ್ ಹಕ್' ಅಹಂ ಬ್ರಹ್ಮಾಸ್ಮಿ) ಎನ್ನುವ ಘೋಷಣೆಗಾಗಿ ಅಲ್ಲವೆಂದು ಕೆಲವು ವಿದ್ವಾಂಸರು ವಾದಿಸುತ್ತಾರೆ.

ಕರಾಮಿತಾರು ಇಜಿಪ್ತ್‌ನಲ್ಲೂ ಫಾತಿಮಿಯರ ಎದುರಾಳಿಗಳಾದರು. ತಾಹಿರ್ ಕರಾಮತಿ ಕಾಬಾದಿಂದ ಹಜರ್ ಅಲ್‌ಅಸ್ವಾದ್‌ಅನ್ನು ವಶಪಡಿಸಿಕೊಂಡು ಮುವ್ವತ್ತು ವರ್ಷಗಳ ಕಾಲ ತನ್ನ ಬಳಿ ಇರಿಸಿಕೊಂಡು ಸಿರಿಯಾದಲ್ಲಿ ತನ್ನ ಸಾಮ್ರಾಜ್ಯ ಸ್ಥಾಪಿಸಿದನು. ಫಾತಿಮಿಯರು ಅದರ ಬಿಡುಗಡೆಗಾಗಿ ಅವನ ಮನವೊಲಿಸಲು ಸಾಕಷ್ಟು ಕಷ್ಟಪಟ್ಟರು. ಅವರು ಅದನ್ನು ಕಾಬಾದಲ್ಲಿ ಪುನರ್‌ಸ್ಥಾಪಿಸಿ ಇಡೀ ಇಸ್ಲಾಮೀ ಜಗತ್ತಿನ ಆತಂಕವನ್ನು ದೂರ ಮಾಡಿದರು.

ಅಷ್ಟೇ ಅಲ್ಲ, ಸುನ್ನಿ ಇಸ್ಲಾಮಿನಲ್ಲೂ ಸ್ಪಷ್ಟವಾದ ಧ್ರುವೀಕರಣವಾಯಿತು. ಆಗ ಜಗತ್ತಿನ ಅತಿ ದೊಡ್ಡ ಬೌದ್ಧಿಕ ಹಾಗೂ ತತ್ವಶಾಸ್ತ್ರೀಯ ಕೇಂದ್ರವಾಗಿ ಹೆಸರು ಮಾಡಿದ್ದ ಬಾಗ್ದಾದ್‌ಗೆ ಜಗತ್ತಿನ ಎಲ್ಲ ತತ್ವಶಾಸ್ತ್ರೀಯ ಸಂಪತ್ತಿನ ಆಮದಿನಿಂದಾಗಿ ಹುಟ್ಟಿಕೊಂಡಿದ್ದ ಹೊಸ ಪ್ರವೃತ್ತಿಗಳಿಗೆ ಪ್ರತಿಕ್ರಿಯೆಯಾಗಿ ಮುಖ್ಯ ವಾಹಿನಿಯ ದೈವಶಾಸ್ತ್ರಜ್ಞರ ಪ್ರವೃತ್ತಿಗಳ ತೀವ್ರ ಪ್ರತಿಕ್ರಿಯೆಗಳು ಹೊರಹೊಮ್ಮಿದವು. ಅವರು ತತ್ವಶಾಸ್ತ್ರದ ಅಸ್ತ್ರವನ್ನು ಬಳಸಿ 'ಇಲ್ಮ್ ಅಲ್‌ಕಲಾಂ' (ಗತಿತಾರ್ಕಿಕ ಜ್ಞಾನ) ಎಂದು ಕರೆಯಲ್ಪಟ್ಟ ಜ್ಞಾನಶಾಖೆಯನ್ನು ವಿಕಸಿತಗೊಳಿಸಿದರು.

ಅವರು ಇಲ್ಮ್ ಅಲ್‌ಕಲಾಮಿನ ಮೂಲಕ ತತ್ವಶಾಸ್ತ್ರಜ್ಞರ ಎಲ್ಲ ವಾದಗಳನ್ನು ಅಲ್ಲಗಳೆಯಲಾರಂಭಿಸಿದರು. ಅಲ್-ಗಜಾಲಿ ಹಾಗೂ ಇಬ್ನ್ ರಶ್ದ್‌ರ ನಡುವಣ ಸುಪ್ರಸಿದ್ಧ ವಾಗ್ವಾದ ಸುಪರಿಚಿತವಾಗಿದೆ. ಅಲ್-ಗಜಾಲಿ ತಹಫುತ್ ಅಲ್-ಫಲ್ಸಫಿಯಾ(ತತ್ವಜ್ಞಾನಿಗಳ ತಲ್ಲಣಗಳು) ಎನ್ನುವ ಗ್ರಂಥ ರಚಿಸಿದ. ಅದಕ್ಕೆ ಇಬ್ನ್ ರಶ್ದ್ ತಹಫುತ್ ತಹಫುತ್ ಅಲ್‌ಫಲ್ಸಫಿಯಾ (ತತ್ವಶಾಸ್ತ್ರಜ್ಞರ ತಲ್ಲಣಗಳ ತಲ್ಲಣ) ಎನ್ನುವ ಗ್ರಂಥ ರಚಿಸಿ ಪ್ರತಿಕ್ರಿಯಿಸಿದ. ಅಶ್‌ಆರಿ ಎನ್ನುವ ಇನ್ನೊಬ್ಬ ದೈವಶಾಸ್ತ್ರಜ್ಞ ಎಲ್ಲ ದೈವಶಾಸ್ತ್ರೀಯ ವಿಷಯಗಳಿಗೆ ಸಂಬಂಧಿಸಿದಂತೆ ಅತಿರೇಕದ ನಿಲುವನ್ನು ತಳೆದ. ಸಹಜವಾಗಿ ಬೌದ್ಧಿಕ ವಲಯದಲ್ಲಿ ಅಷ್ಟಾಗಿ ಅನುಯಾಯಿಗಳನ್ನು ಹೊಂದಿರದ ತತ್ವಜ್ಞಾನಿಗಳಿಗೆ ತದ್ವಿರುದ್ಧವಾಗಿ ಅಶ್‌ಆರಿಯಂಥ ದೈವಶಾಸ್ತ್ರಜ್ಞರಿಗೆ ಅಪಾರ ಜನ ಬೆಂಬಲವಿತ್ತು. ಹಾಗಾಗಿ ಅವರು ಮಹಾನ್ ದೈವಶಾಸ್ತ್ರೀಯ ನಾಯಕರಾಗಿ ಮಿಂಚಿದರು.

ಗಜಾಲಿಯೇ 'ಇಹ್ಯಯಾ ಅಲ್-ಉಲೂಂ' (ಸಾಂಪ್ರದಾಯಿಕ ದೈವಶಾಸ್ತ್ರದ ಪುನರುಜ್ಜೀವನಕ್ಕಾಗಿ ಜ್ಞಾನಕ್ಕೆ ಕಾಯಕಲ್ಪ) ಎನ್ನುವ ಶ್ರೇಷ್ಠ ಕೃತಿ ರಚಿಸಿದ. ಅದು ಇಸ್ಲಾಮೀ ಜಗತ್ತಿನಲ್ಲಿ ಅಶಅರಿ ದೈವಶಾಸ್ತ್ರೀಯ ಶ್ರೇಷ್ಠ ಕೃತಿ ಎನಿಸಿಕೊಂಡಿತು. ಅದನ್ನು ಎಲ್ಲ ಸಾಂಪ್ರದಾಯಿಕ ವಿದ್ವಾಂಸರು ಆಕರವಾಗಿ ಬಳಸಿಕೊಳ್ಳುತ್ತಿದ್ದಾರೆ. ಗಜಾಲಿಯ ಈ ಕೃತಿಯ ನಂತರವೇ ಇಸ್ಲಾಮೀ ಜಗತ್ತಿನಲ್ಲಿ ಇಜ್ತಿಹಾದ್‌ನ ಎಲ್ಲ ಬಾಗಿಲುಗಳು ಮುಚ್ಚಿ ಬಿಟ್ಟವೆಂದು ಕೆಲ ವಿದ್ವಾಂಸರು ವಾದಿಸುತ್ತಾರೆ. ಆದರೆ ಇದು ಅತಿಸರಳೀಕೃತ ಹೇಳಿಕೆಯಾಗಿ ತೋರುತ್ತಿದೆ. ಅದಕ್ಕೆ ತುಂಬ ಸಂಕೀರ್ಣವಾದ ಕಾರಣಗಳಿವೆ. ಬಾಗ್ದಾದ್‌ನ ಪತನ, ಪ್ರಸಿದ್ಧ ಇತಿಹಾಸಕಾರ ಟಾಯ್ನಬಿ ವೈಶ್ವಿಕ ಇಸ್ಲಾಮೀ ರಾಜ್ಯ ಎಂದು ಕರೆದಿದ್ದ ಕೇಂದ್ರೀಯ ಇಸ್ಲಾಮೀ ಅಬ್ಬಾಸಿ ರಾಜ್ಯದ ಅವಸಾನ ಹಾಗೂ ದುರ್ಬಲ ಪ್ರಾಂತೀಯ ರಾಜ್ಯಗಳ ವಿಕಾಸ ಆ ಪೈಕಿ ಕೆಲವು ಕಾರಣಗಳು.



ಇಲ್ಲಿ ಗಮನಿಸಬೇಕಾದದ್ದೆಂದರೆ ಇಸ್ಲಾಮೀ ಜಗತ್ತಿನ ವಿಭಜನೆಯನ್ನು ಕೆಡಿಸುವುದಕ್ಕಾಗಿ ಸ್ವಲ್ಪ ಎಚ್ಚರ ವಹಿಸಿದ್ದರೆ ಈ ಧ್ರುವೀಕರಣವನ್ನು ತಡೆಯಬಹುದಿತ್ತು. ಸಾಂಪ್ರದಾಯಿಕ ದೈವಶಾಸ್ತ್ರಜ್ಞರು ಹಾಗೂ ಉಲಮಾಗಳು ಬೌದ್ಧಿಕ ಹಾಗೂ ತತ್ವಶಾಸ್ತ್ರೀಯ ಆಂದೋಲನಕ್ಕೆ ತೀವ್ರ ತೀವ್ರವಾಗಿ ಪ್ರತಿಕ್ರಿಯಿಸಿದರು: ಕೆಲವು ತತ್ವಜ್ಞಾನಿಗಳು ಸಹ ಇನ್ನೊಂದೆಡೆ ಅತಿರೇಕದ ಹಂತಕ್ಕೆ ಹೋದರು. ಈಗಾಗಲೇ ಚರ್ಚಿಸಿರುವಂತೆ ಕರಾಮಿತಾರು ಶರಿಯಾವನ್ನು ನಿಷೇಧಿಸುವುದರ ಮೂಲಕವಂತೂ ಎಲ್ಲರಲ್ಲೂ ಆತಂಕ ಮೂಡಿಸಿದರು. ಮೊದಲು ಪಶ್ಚಿಮ ಆಫ್ರಿಕಾದಲ್ಲಿ ಹಾಗೂ ನಂತರ ಇಜಿಪ್ತ್‌ನಲ್ಲಿ ಫಾತಿಮಿ ಸಾಮ್ರಾಜ್ಯವನ್ನು ಸ್ಥಾಪಿಸಿದ ಇಸ್ಮಾಯಿಲಿಯರು ಜಾಹಿರಿ ಹಾಗೂ ಬಾತಿನಿಯೆನ್ನುವುದರ ನಡುವೆ ಸಮತೋಲನ ಕಾಯ್ದುಕೊಳ್ಳುವಲ್ಲಿ ಸೂಕ್ತ ಎಚ್ಚರ ವಹಿಸಿದರು. ಆದರೆ ಅಬ್ಬಾಸಿಯರೊಂದಿಗಿನ ಅವರ ರಾಜಕೀಯ ವೈರ ದೈವಶಾಸ್ತ್ರೀಯ ರಂಗದಲ್ಲೂ ಕಡಿಮೆ ವಿಭಜಕವಾಗಿ ಪರಿಣಮಿಸಲಿಲ್ಲ. ಮುಖ್ಯವಾಹಿನಿಯ ದೈವಶಾಸ್ತ್ರಜ್ಞರು ಅವರ ವಿರುದ್ಧ ಆಧಾರರಹಿತ ಆಪಾದನೆಗಳನ್ನು ಮಾಡಿದರು. ವಾಸ್ತವದಲ್ಲಿ ಫಾತಿಮಿಯರೇ ಹಜರ್ ಅಲ್-ಅಸವದ್ (ಕಾಬಾದ ಗೋಡೆಯ ಒಂದು ಪವಿತ್ರ ಶಿಲೆ)ಅನ್ನು ಕಾಬಾಕ್ಕೆ ಮರಳಿಸಲು ಕರಾಮತಿಯರಿಗೆ ದುಂಬಾಲು ಬಿದ್ದಿದ್ದರು.

ಇನ್ನೂ ಒಂದು ವಿಭಜನೆ ಆಗಿತ್ತು: ತತ್ವಜ್ಞಾನಿಗಳು ಹಾಗೂ ಬುದ್ಧಿಜೀವಿಗಳು ಬೌದ್ಧಿಕ ಪ್ರಯತ್ನಗಳ ಮೂಲಕ ಸತ್ಯ ಶೋಧನೆಗೆ ಯತ್ನಿಸಿದರೆ ಸೂಫಿಗಳು ಕೇವಲ ಆಧ್ಯಾತ್ಮಿಕ ದೃಷ್ಟಿಕೋನಗಳು ಹಾಗೂ ಅನುಭವಗಳಿಗೆ ಒತ್ತು ನೀಡಿದರು. ಇದರಲ್ಲಿ ಕುರ್‌ಆನ್‌ನ ಮಧ್ಯ ಮಾರ್ಗ ಮರೆತು ಹೋಯಿತು. ಕುರ್‌ಆನ್ ತುಂಬ ವ್ಯಾಪಕವಾಗಿದ್ದ ಅನನ್ಯ ಮಾರ್ಗವೊಂದನ್ನು ವಿಕಸಿತಗೊಳಿಸಿತ್ತು. ಅದು ಆಧ್ಯಾತ್ಮಿಕ, ಬೌದ್ಧಿಕ, ನೈತಿಕ ಹಾಗೂ ಭೌತಿಕ ಹೀಗೆ ಬದುಕಿನ ಮಹತ್ವದ ಕ್ಷೇತ್ರಗಳನ್ನಾಧರಿಸಿದ್ದ ಮಾರ್ಗವಾಗಿತ್ತು.

ಅದು ಎಲ್ಲ ಆಸ್ತಿಕರಿಗೆ ಈ ಲೋಕದಲ್ಲಿ ಬದುಕಲು, ಅದರ ಭೌತಿಕ ಸಮೃದ್ಧಿಗೆ ಕೊಡುಗೆ ನೀಡಲು, ಅಲ್ಲಾಹನ ಸೃಷ್ಟಿ ಕುರಿತು ಆಳವಾಗಿ ಚಿಂತನೆ ಮಾಡಲು, ತನ್ನ ಭೌತಿಕ ಸಾಧನೆಗಳ ಬಗ್ಗೆ ಎಂದೂ ದುರಭಿಮಾನಪಡದಂತೆ ತನ್ನ ಕರ್ತಾರನ ಜೊತೆಗಿನ ಆಧ್ಯಾತ್ಮಿಕ ಸಂಬಂಧಗಳನ್ನು ಶ್ರೀಮಂತಗೊಳಿಸಿಕೊಳ್ಳಲು, ಜಗತ್ತಿನಲ್ಲಿ ವ್ಯವಸ್ಥೆ ಹಾಗೂ ಸಮತೋಲನ ಕಾಯ್ದುಕೊಳ್ಳುವುದಕ್ಕಾಗಿ ಉನ್ನತ ನೈತಿಕ ಮಾನದಂಡಗಳನ್ನು ಉಳಿಸಿಕೊಳ್ಳಲು ಹಾಗೂ ತಮ್ಮ ದುಷ್ಕೃತ್ಯಗಳಿಂದಾಗಿ ಜನ ಹೇಗೆ ಕಷ್ಟ ಅನುಭವಿಸಿದ್ದರೆನ್ನುವುದನ್ನು ಇತಿಹಾಸದಿಂದ ಕಲಿಯಲು ಕರೆ ನೀಡುತ್ತದೆ. ಕುರ್‌ಆನ್‌ನ ಭಾಷೆ ಈ ಆಯಾಮಗಳನ್ನೊಳಗೊಂಡ ಹೊಸ ಕೊಡುಗೆಯಾಗಿತ್ತು.

ಅದೇನೇ ಇರಲಿ ದೈವಶಾಸ್ತ್ರೀಯ ಚರ್ಚೆಗಳು ಹಾಗೂ ಇಸ್ಲಾಂ ಪೂರ್ವದ ಪದವಿನ್ಯಾಸದ ಬೆಳಕಿನಲ್ಲಿ ಕುರ್‌ಆನ್‌ಅನ್ನು ಅರ್ಥೈಸಿಕೊಳ್ಳುವ ಪ್ರಯತ್ನಗಳು ಈ ಅನನ್ಯತೆಯನ್ನು ಹೆಚ್ಚಾಗಿ ನಾಶಪಡಿಸಿದವು. ಇನ್ನೂ ಕೆಟ್ಟದ್ದೆಂದರೆ ಕುರ್‌ಆನ್‌ನ ಬಹುತೇಕ ಭಾಷ್ಯಕಾರರು ಇಸ್ಲಾಂ ಪೂರ್ವದ ಪದ ಪ್ರಯೋಗಗಳನ್ನು ಅವಲಂಬಿಸಿದ್ದು, ಅಷ್ಟೇ ಅಲ್ಲ, ಸಂಪೂರ್ಣವಾಗಿ ಕುರ್‌ಆನ್‌ನ ಆಶಯವನ್ನು ನಾಶಪಡಿಸಿದ ಜುಡಾಯಿಕ್ ಹಾಗೂ ಕ್ರಿಶ್ಚಿಯನ್ ಮೂಲದ ಮಿಥ್‌ಗಳು ಹಾಗೂ ಪುರಾಣಗಳನ್ನವಲಂಬಿಸಿದ್ದು. ಕುರ್‌ಆನ್‌ನ ಭಾಷ್ಯಗಳು ಒಂದು ಪೌರಾಣಿಕ ಅರಣ್ಯವಾಗಿಬಿಟ್ಟವು.

ಇಮಾಂ ಫಖ್ರುದ್ದೀನ್‌ರಂತಹ ಭಾಷ್ಯಕಾರರು ಕುರ್‌ಆನ್ ಮೇಲೆ ಭಾಷ್ಯ ಬರೆಯಲು ಅರಿಸ್ಟಾಟಲ್‌ನ ಡಿಡಕ್ಟಿವ್ ತರ್ಕವನ್ನು ಬಳಸಿದರು. ಇದೆಲ್ಲ ಅರ್ಥಹೀನ ದೈವಶಾಸ್ತ್ರೀಯ ಚರ್ಚೆಗಳನ್ನು ಹುಟ್ಟು ಹಾಕಿತು. ಇಂತಹ ಚರ್ಚೆಗಳು ಹೆಚ್ಚಾದಂತೆಲ್ಲ ದೈವಶಾಸ್ತ್ರ ಹೆಚ್ಚು ಸಂಕೀರ್ಣವಾಗುತ್ತ, ಜನ ಸಾಮಾನ್ಯರ ಅರಿವಿಗೆ ನಿಲುಕದಾಯಿತು.

ನ್ಯಾಯಶಾಸ್ತ್ರ ಪರಿಣಿತರಿಗೆ ಕುರ್‌ಆನ್ ಹೆಚ್ಚಾಗಿ ಕಾನೂನು ವಾದ ವಿವಾದಗಳು ಹಾಗೂ ಕೈ ಎತ್ತಿ ಇಲ್ಲಾ ಮಸಾಹ್ (ಹಸ್ತಲಾಘವ)ಮಾಡುವುದರ ಮೂಲಕ ಅಭಿವಂದಿಸುವುದೋ ಇತ್ಯಾದಿ ವಿಷಯಗಳ ಕುರಿತ ಅರ್ಥಹೀನ ಚರ್ಚೆಗಳ ಆಕರವೇ ಆಗಿಬಿಟ್ಟಿತು. ಫಿಕಹ್ ಉನ್ನತ ಸ್ತರದ ನೈತಿಕತೆಯ ಆಕರವಾಗುವುದರ ಬದಲಾಗಿ ಅತ್ಯಂತ ಕ್ಷುಲ್ಲಕ ಹಾಗೂ ಹಾಸ್ಯಾಸ್ಪದ ವಿಷಯಗಳಿಗೆ ಸಂಬಂಧಿಸಿದಂತೆ ಮುಸಲ್ಮಾನರ ವಿಭಜನೆಗೆ ದಾರಿ ಮಾಡಿ ಕೊಟ್ಟಿತು.

ಹೀಗೆ ನಾವು ಈಗ ಇತಿಹಾಸದುದ್ದಕ್ಕೂ ಮುಸ್ಲಿಮರಲ್ಲಿ ಸೂಕ್ಷ್ಮ ವಿಭಜನೆಗಳುಂಟಾಗಿರುವ ನಾನಾ

(33ನೇ ಪುಟಕ್ಕೆ)

ರೈತ ಮತ್ತು ಆದಿವಾಸಿ ಚಳವಳಿಗಳ ಸಿಂಹಾವಲೋಕನ; ಮಾಹಿತಿಗಳು ಭರಪೂರ

ಪುಸ್ತಕ ಅವಲೋಕನ



ರೈತ ಮತ್ತು ಆದಿವಾಸಿ ಚಳವಳಿ (ಸ್ವಾತಂತ್ರ್ಯ ಪೂರ್ವ)
ಲೇ: ಡಾ|| ಸಿ ಚಂದ್ರಪ್ಪ
ಪು: **170**, ಬೆಲೆ: ರೂ. **150/-**
ಪ್ರ: ಮನೋಜ್ ಪಬ್ಲಿಕೇಷನ್, ಬೆಂಗಳೂರು

ಡಾ|| ಕಾವಲಮ್ಮ ಆರ್

ಚಳವಳಿಯೇ ಚರಿತ್ರೆ ಎಂಬ ಮಾತೊಂದಿದೆ. ಆದರೆ ಚಳವಳಿಗಳು ನಿಂತ ನೀರಾಗದೆ ಸದಾ ಹೊಸ ಹೊಸ ರೂಪ ಮತ್ತು ಶಕ್ತಿಯನ್ನು ಪಡೆದುಕೊಳ್ಳುತ್ತಾ ಪರಿವರ್ತನಾಶೀಲತೆಗೆ ಒಳಗಾಗಿರುವುದು ಕಂಡುಬರುತ್ತದೆ. ಕೃಷಿ ವಸಾಹತುಶಾಹಿ ಭಾರತದ ಆರ್ಥಿಕತೆಯ ಬೆನ್ನುಮೂಳೆಯಾಗಿದ್ದ ಕಾರಣ, ಕೃಷಿಯಲ್ಲಿ ನಿರತವಾಗಿದ್ದ ರೈತ ಅಂದು ಉದ್ಭವವಾಗುತ್ತಿದ್ದ ಆಧುನಿಕ ರಾಷ್ಟ್ರದ ಅತ್ಯಂತ ಪ್ರಮುಖವಾದ ಅಂಶವಾಗಿ ಪರಿಣಮಿಸಿದ್ದು ಸಹಜವೇ ಆಗಿದೆ. ಆದರೆ, ಸಾಮ್ರಾಜ್ಯಶಾಹಿಯ ಕ್ರೂರ ವ್ಯವಸ್ಥೆಗೆ ಸಿಕ್ಕಿದ ರೈತರು, ಕೃಷಿ ಪದ್ಧತಿಯಲ್ಲಾದ ಬದಲಾವಣೆ, ಕೃಷಿ ವಾಣಿಜ್ಯೀಕರಣ, ಶೋಷಣೆಯಿಂದ ಕೂಡಿದ ಕಂದಾಯ ಪದ್ಧತಿ, ನೀರಾವರಿಯನ್ನು ಕಡೆಗಣಿಸಿದ ವಸಾಹತುಶಾಹಿ ಪ್ರಭುತ್ವದ ಬೇಜವಾಬ್ದಾರಿತನ ಮುಂತಾದ ಕಾರಣಗಳಿಂದಾಗಿ, ಇವುಗಳ ವಿರುದ್ಧ ನಡೆದ ಹೋರಾಟಗಳನ್ನು ಡಾ.ಸಿ.ಚಂದ್ರಪ್ಪನವರು "ರೈತ ಮತ್ತು ಆದಿವಾಸಿ ಚಳವಳಿ" ಎಂಬ ತಮ್ಮ ಕೃತಿಯಲ್ಲಿ ಚಾರಿತ್ರಿಕ ಮತ್ತು ವೈಜ್ಞಾನಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

ಪ್ರಸ್ತುತ ಕೃತಿಯು ಹನ್ನೆರಡು ಅಧ್ಯಾಯಗಳನ್ನು ಒಳಗೊಂಡಿದೆ. ರೈತ ಚಳವಳಿ (ಪು. 1-9) ಎಂಬ ಮೊದಲ ಅಧ್ಯಾಯದಲ್ಲಿ ರೈತರು ಆರಂಭಿಸಿದ ಹೋರಾಟಗಳನ್ನು ಐತಿಹಾಸಿಕ ವಿಧಾನದಲ್ಲಿ ವಿಶ್ಲೇಷಿಸುತ್ತಾ, ಇತಿಹಾಸ ರಚನೆಯಲ್ಲಿನ ಪ್ರಮುಖ ದೋಷಗಳನ್ನು ಎತ್ತಿ ಹಿಡಿಯುವ ಪ್ರಯತ್ನ ಮಾಡಿದ್ದಾರೆ. ರೈತ ಮತ್ತು ಭೂಮಾಲೀಕರ ಸಂಬಂಧವನ್ನಾಧರಿಸಿದ ವ್ಯತ್ಯಾಸಗಳನ್ನು ಗುರ್ತಿಸುವಿಕೆಯಲ್ಲಿ ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಚರ್ಚಿಸಿದ್ದಾರೆ. ಜೊತೆಗೆ ಭಾರತದಲ್ಲಿದ್ದ Agrarian class formation ವಿವಿಧ ಹಂತಗಳ ಬಗ್ಗೆ ಸ್ಥೂಲ ಪರಿಚಯವನ್ನೂ ನೀಡಿದ್ದಾರೆ.

ಭಾರತದಲ್ಲಿ ಏಳಿಗೆಗೆ ಬಂದ ಸಾಮ್ರಾಟರ ರಾಜ್ಯ ವಿಸ್ತರಣಾ ನೀತಿಯಿಂದಾಗಿ ಸಾಮಂತ, ಅಧೀನ, ಪಾಳೇಗಾರ, ನಾಡಪ್ರಭು, ಅಧಿಕಾರಿ ಎಂಬ ರಾಜಪ್ರಭುತ್ವ ಪೋಷಿತ ಶ್ರೇಣೀಕೃತ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು. ಹೆಚ್ಚಾದ ಭೂ-ದಾನಗಳಿಂದ ಕೃಷಿ ಉತ್ಪಾದನಾ ಚಟುವಟಿಕೆಗಳು ವಿಸ್ತಾರಗೊಳ್ಳುತ್ತಾ ಹೋದಂತೆ, ಭೂಮಾಲೀಕತ್ವದ ಜೊತೆಗೆ ಬಂಡವಾಳಶಾಹಿ ಧೋರಣೆಗಳೂ ಬೆಳೆಯುತ್ತಾ ಹೋಗುತ್ತವೆ. ಇದರಿಂದ ಊಳಿಗಮಾನ್ಯ ವ್ಯವಸಾಯದ ಹುಟ್ಟಿಗೆ ಬಹುತೇಕ ಕಾರಣವಾಗುತ್ತಾ ಹೋಗುತ್ತದೆ. ಭಾರತದ ಚರಿತ್ರೆಗೆ ಸಂಬಂಧಿಸಿದಂತೆ ಊಳಿಗಮಾನ್ಯ ವ್ಯವಸ್ಥೆಯನ್ನು ಕುರಿತು ಡಿ.ಡಿ.ಕೊಸಾಂಬಿ, ಆರ್.ಎಸ್.ಶರ್ಮ, ಇರ್ಫಾನ್ ಹಬೀಬ್, ವಿಜಯ ಕುಮಾರ ಠಾಕೂರ್, ಹರ್ಮನ್ ಕುಲ್ಕೆ, ನೂರುಲ್ ಹಸನ್ ಮುಂತಾದ ಅನೇಕ ವಿದ್ವಾಂಸರ ಚರ್ಚೆಗಳನ್ನ ಊಳಿಗಮಾನ್ಯ ಭೂವ್ಯವಸ್ಥೆ ಮತ್ತು ಅಸ್ತಿತ್ವ ಎಂಬ(ಪುಟ:10-22) ಎರಡನೇ ಅಧ್ಯಾಯದಲ್ಲಿ ಕೂಲಂಕಶವಾಗಿ ವಿಶ್ಲೇಷಿಸುವುದರೊಂದಿಗೆ ಅನೇಕ ಹೊಸಬಗೆಯ ವಿಚಾರಗಳನ್ನು ನಮ್ಮ ವಿವೇಚನೆಗೆ ತೆರೆದಿಟ್ಟಿದ್ದಾರೆ.

ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು ಕೇವಲ ರಾಜಕೀಯ ವಲಯಕ್ಕೆ ಮಾತ್ರವಲ್ಲದೆ, ಕೃಷಿಯ ಮೇಲೂ ಮಹತ್ವದ ಪರಿಣಾಮಗಳನ್ನು ಬೀರಿತು. ಅವರು ಜಾರಿಗೆ ತಂದ ಹೊಸ ವ್ಯಾಪಾರಿ ವ್ಯವಸ್ಥೆಯಿಂದ ವಿಸ್ತರಿಸಿದ ಮಾರುಕಟ್ಟೆ ಕೃಷಿಯ ವ್ಯಾಪಾರೀಕರಣಕ್ಕೆ ದಾರಿ ಮಾಡಿಕೊಟ್ಟಿತು. ಜೊತೆಗೆ ಔದ್ಯಮಿಕ ಕ್ರಾಂತಿಯ ಫಲವಾಗಿ, ಕಚ್ಚಾವಸ್ತು ಮತ್ತು ಆಹಾರ ಧಾನ್ಯಗಳ ಬೇಡಿಕೆ ಹೆಚ್ಚಿತು. ಇದರಿಂದ ಭಾರತದ ಕೃಷಿ ವ್ಯವಸ್ಥೆ ಪರ್ಯಾವಸಾನಗೊಂಡು ಬ್ರಿಟನ್ನಿನ ಕೈಗಾರಿಕೆಗಳಿಗೆ ಭಾರತ ಕೇವಲ ಕಚ್ಚಾವಸ್ತುವನ್ನು ಒದಗಿಸುವ ರಾಷ್ಟ್ರವಾಗಿ ಮಾರ್ಪಡುವ ಬಗ್ಗೆ ತಿಲಕ್ ರವರು "ಕೇಸರಿ ಪತ್ರಿಕೆಯಲ್ಲಿ" ಚರ್ಚಿಸುತ್ತಾರೆ, 'ನಿಜವಾಗಿಯೂ ಭಾರತವನ್ನು ಯೂರೋಪಿಯನ್ನರಿಗೆ ಮಾತ್ರವೇ ಮೇಯುವುದಕ್ಕಾಗಿ ಮೀಸಲಟ್ಟಿರುವ ಹುಲ್ಲುಗಾವಲಿನಂತೆ"(ಪುಟ-25) ಎಂದು ಬರೆಯುತ್ತಾರೆ. ಅಂದರೆ ಬ್ರಿಟಿಷರು ಅನುಸರಿಸಿದ ಅನೇಕ ವ್ಯಾಪಾರಿ ಮತ್ತು ಕೃಷಿ ನೀತಿಗಳು ಮುಂದೆ ವರ್ಗ-ಸಂಘರ್ಷಕ್ಕೆ ಎಡೆಮಾಡಿಕೊಟ್ಟ ಬಗ್ಗೆ ಲೇಖಕರು ವಿಶ್ಲೇಷಿಸುತ್ತಾ ತಮ್ಮ ಮಾರ್ಕ್ಸ್ ಸಿದ್ಧಾಂತವನ್ನ ಮತ್ತೊಮ್ಮೆ ಒರೆಹಚ್ಚಿ ನೋಡುತ್ತಾರೆ.

ಸ್ವಾತಂತ್ರ ಪೂರ್ವದ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಭೂ ನಿಯಂತ್ರಣ ಹೇಗಿತ್ತೆಂದು ಹೇಳುವುದು ಕಷ್ಟ. ಭಾರತದ ಬೇರೆ ಬೇರೆ ಭಾಗಗಳಿಗೆ ಹೋಲಿಸಿದರೆ ಮೈಸೂರು ಸಂಸ್ಥಾನದಲ್ಲಿ ಅತಿ ದೊಡ್ಡ ಜಮೀನ್ದಾರರು ಇದ್ದಂತೆ ಕಂಡು ಬರುವುದಿಲ್ಲ. ಆದರೆ ಇಲ್ಲಿ ಲೇಖಕರು ಮೈಸೂರು ಸಂಸ್ಥಾನದಲ್ಲಿ 'ಪ್ರಜಾಮಿತ್ರ ಮಂಡಳಿ' ಮತ್ತು ನ್ಯಾಯ ವಿಧೇಯಕ ಸಭೆಗಳು ರಾಜರ ಮತ್ತು ವಸಾಹತುಶಾಹಿಗಳ ರಕ್ಷಣೆಗಾಗಿ ರಚಿಸಿಕೊಂಡಿದ್ದ ತಡೆಗೋಡೆಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವೆಂದೂ, ಇದಕ್ಕೆ ಆಡಳಿತಾತ್ಮಕ ಉದ್ದೇಶಗಳಿದ್ದವೆಂಬುದು ಸಾಮಾನ್ಯ ಅಭಿಪ್ರಾಯವಾಗಿದೆ. ವಸಾಹತುಶಾಹಿಯ ಕ್ರೂರ ಕಪಿ ಮುಷ್ಠಿಯಿಂದಾಗಿ ರೈತರು ಬಡವರಾಗುತ್ತಾ ಹೋದ ಕಾರಣವೇ ಹತ್ತೊಂಭತ್ತನೆಯ ಶತಮಾನದ ಉದ್ದಕ್ಕೂ ಅವರು ದಂಗೆಯೇಳುವ ಪ್ರವೃತ್ತಿಯನ್ನು ಪ್ರಚೋದಿಸಿದಂತೆ ಕಾಣುತ್ತದೆ.

ಕರ್ನಾಟಕದ ಈ ಸಂದರ್ಭದಲ್ಲಿ ವಸಾಹತುಶಾಹಿಯ ಮುನ್ನುಗ್ಗುವಿಕೆಯ ವಿರುದ್ಧ ದಂಗೆ ಎದ್ದ ಕೊಡಗಿನ ಕಲ್ಯಾಣಸ್ವಾಮಿ ಮತ್ತು ಅಪರಂಪರಸ್ವಾಮಿಯವರು ವಸಾಹತುಶಾಹಿ ಶಕ್ತಿಗೆ ಒಂದು ಪೆಟ್ಟುಕೊಟ್ಟಿದ್ದನ್ನ ಇಲ್ಲಿ ನೆನೆಯಬಹುದು. ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ಮತ್ತು ರಾಜಕೀಯ ಯಜಮಾನಿಕೆಯು ಜಾತಿ ಚಳವಳಿಯ ಸ್ವರೂಪವನ್ನು, ಮದ್ರಾಸು ಬ್ರಾಹ್ಮಣರ ಮತ್ತು ಮೈಸೂರು ಬ್ರಾಹ್ಮಣರ ನಡುವೆ ಸಂಘಟಿಸಿದ ವರ್ಗಪೈಪೋಟಿ "ಮಣ್ಣಿನ ಮಕ್ಕಳ ಸಿದ್ಧಾಂತ"ದೊಂದಿಗೆ ಪರ್ಯಾವಸಾನಗೊಂಡ ಬಗ್ಗೆ ಲೇಖಕರು ತೀಕ್ಷ್ಣವಾಗಿ ಚರ್ಚಿಸಿದ್ದಾರೆ (ಪು. 35-37).

ಈ ಕೃತಿಯ ಪ್ರಮುಖ ಭಾಗವಾದ ರೈತ ಮತ್ತು ಆದಿವಾಸಿಗಳು ನಡೆಸಿದ ಚಳವಳಿಯನ್ನ ಗಂಭೀರ ಅಧ್ಯಯನಕ್ಕೆ ಒಳಪಡಿಸುವ ಮೂಲಕ ನಿರ್ಲಕ್ಷ್ಯಕ್ಕೆ ಗುರಿಯಾದ ಆದಿವಾಸಿ ಹೋರಾಟಗಳಿಗೆ ಜೀವ ತುಂಬುವ ಪ್ರಯತ್ನ ಮಾಡಿದ್ದಾರೆ. ಇದುವರೆಗೂ ಹೋರಾಟಗಳನ್ನು ಸಮಗ್ರ ಅಧ್ಯಯನಯಕ್ಕೆ ಒಳಪಡಿಸುವ ಪ್ರಯತ್ನವನ್ನು ಯಾರೂ ಮಾಡಿರಲಿಲ್ಲ. ಆ

ಆದಿವಾಸಿ ಮತ್ತು ರೈತರ ಹೋರಾಟಗಳಲ್ಲಿ ಕೆಲವು ವ್ಯತ್ಯಾಸಗಳನ್ನು ಗುರ್ತಿಸಲು ಸಾಧ್ಯವಿದೆ. ಆದಿವಾಸಿಗಳು ಹೆಚ್ಚಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಹೋರಾಟ ನೆಡೆಸಿದರೆ ರೈತಚಳವಳಿ ಆರ್ಥಿಕ ಹಿನ್ನೆಲೆಯನ್ನು ಹೊಂದಿದೆ.

ಕೊರತೆಯನ್ನು ಸ್ವಲ್ಪ ಮಟ್ಟಿಗೆ ನೀಗುವ ಪ್ರಯತ್ನವನ್ನು ಲೇಖಕರು ಇಲ್ಲಿ ಮಾಡಿದ್ದಾರೆ. ರೈತ ಮತ್ತು ಆದಿವಾಸಿ ಹೋರಾಟಗಳು ಸ್ವಾಭಾವಿಕ ಮತ್ತು ಅಂತರ್ಗತವಾಗಿದ್ದು, ಆರ್ಥಿಕ ಮತ್ತು ಸಾಮಾಜಿಕ ಹಕ್ಕಿಗಾಗಿ ನಡೆದವುಗಳಾಗಿವೆ ಹಾಗೂ ಯಾವುದೇ ರಾಜಿಗೆ ಒಳಗಾಗದೆ ಕೆಲವೊಮ್ಮೆ ಗೆಲುವು ಮತ್ತೊಮ್ಮೆ ಪ್ರಭುತ್ವದ ತಂತ್ರದ ಸೋಲಿಗೆ ಒಳಗಾಗಿರುವುದನ್ನು ಕಾಣಬಹುದಾಗಿದೆ. ವಿಪರ್ಯಾಸವೆಂದರೆ ಈ ಸಮುದಾಯಗಳಿಂದ ಬಿಟ್ಟಿಯಾಗಿ ದುಡಿಸಿಕೊಳ್ಳುತ್ತಿದ್ದ ನಮ್ಮವರೇ ಬಂಡವಾಳ ಶಾಹಿಯೊಂದಿಗೆ ಕೈಜೋಡಿಸಿ, ಸಾಮಾನ್ಯರ ಬದುಕುವ ಹಕ್ಕನ್ನು ಕಸಿದುಕೊಳ್ಳುವ ಹುನ್ನಾರುಗಳ ವಿರುದ್ಧ ಸೆಟೆದುನಿಂತ ಆದಿವಾಸಿಗಳ ಬಗ್ಗೆ ಕೇಳಿಬರುವ ಜನಪದ ಕಥನ ಕಾವ್ಯಗಳನ್ನ ಲೇಖಕರು ಪಾರಮರ್ಶಿಸಿರುವುದು ಇಲ್ಲಿ ಸಂತೋಷದ ವಿಷಯ (ಪುಟ–66). ಆದಿವಾಸಿಗಳ ಹೃದಯಾಂತರಾಳದ ನೋವಿನ ದಳ್ಳುರಿ ಪ್ರಭುತ್ವವನ್ನು ಸ್ಫೋಟಿಸಿವೆ. ಭಾರತದದ್ಯಾಂತ ನಡೆದ ಪಣಿ, ಖಾಸಿ, ಸಂತಾಲ, ಮುಂಡ, ನಾಗ, ವಾರ್ಲಿ ಮುಂತಾದ ಆದಿವಾಸಿಗಳ ದಂಗೆಗಳ ಬಗ್ಗೆ ಲೇಖಕರು ಸಾಕಷ್ಟು ಮಾಹಿತಿಯನ್ನು (ಪು. 64–97) ಒದಗಿಸಿದ್ದಾರೆ.

ಭಾರತದಲ್ಲಿ ನೆಡೆದ ರೈತ ಚಳವಳಿಗಳು ಇದಕ್ಕೆ ಹೊರತೇನಲ್ಲ. ಆದರೆ ಆದಿವಾಸಿ ಮತ್ತು ರೈತರ ಹೋರಾಟಗಳಲ್ಲಿ ಕೆಲವು ವ್ಯತ್ಯಾಸಗಳನ್ನು ಗುರ್ತಿಸಲು ಸಾಧ್ಯವಿದೆ. ಆದಿವಾಸಿಗಳು ಹೆಚ್ಚಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಹೋರಾಟ ನೆಡೆಸಿದರೆ ರೈತಚಳವಳಿ ಆರ್ಥಿಕ ಹಿನ್ನೆಲೆಯನ್ನು ಹೊಂದಿದೆ. ಭಾರತದಲ್ಲಿ ಬ್ರಿಟಿಷರ ಆಡಳಿತದಿಂದ ಕೃಷಿ ಕ್ಷೇತ್ರದಲ್ಲಿ ಆದ ಬದಲಾವಣೆ, ಅವರು ಹೇಳಿದ ಬೆಳೆಯನ್ನೆ ಬೆಳೆದು, ಕೇಳಿದ ಬೆಲೆಗೆ ಮಾರಾಟ ಮಾಡಬೇಕಾದ ದುಸ್ಥರ ಸ್ಥಿತಿ ರೈತರು ತಲುಪಿದಾಗ ಈ ಹೋರಾಟಗಳು ಸಂಭವಿಸುವ ಅನಿವಾರ್ಯತೆಯ ಬಗ್ಗೆ ಕೃತಿಯಲ್ಲಿ ವಿವರವಾದ ಚರ್ಚೆ ಇದೆ. (ಪು. 98–160). ಸಮಾಜದ ಪ್ರಬಲ ವರ್ಗದ ನಿರಂತರ ದಾಳಿಯಿಂದ ರೈತಾಪಿ ಜನರ ಜೀವನ ಕ್ರಮ, ಭೂಮಿ ಹಿಡುವಳಿ ಸ್ಥಾನ–ಪಲ್ಲಟಗೊಂಡ ಬಗ್ಗೆ ಚಾರಿತ್ರಿಕ ಹಿನ್ನೆಲೆಯಲ್ಲಿ ಈ ಸಂಘರ್ಷಗಳನ್ನು ಸಮರ್ಥವಾಗಿ ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ.

12ನೇ ಶತಮಾನದ ವಚನ ಚಳವಳಿಯ ಸಂದರ್ಭದಲ್ಲಿ ರೈತ ಮುದ್ದಯ್ಯನು ರಾಜನು ಹಾಕಿದ ಹೆಚ್ಚಿನ ಕರಭಾರವನ್ನು ಪ್ರತಿಭಟಿಸಿದ ಉದಾಹರಣೆಯಿಂದ ಆರಂಭಿಸಿ 1951ರಲ್ಲಿ ನಡೆದ ತೆಲಂಗಾಣ ಚಳವಳಿಯ ವರೆವಿಗೂ ವಿವರಗಳು ಈ ಕೃತಿಯಲ್ಲಿ ನಮಗೆ ದೊರೆಯುತ್ತವೆ.

ಕರ್ನಾಟಕದ ಸಂದರ್ಭದಲ್ಲಿ ಚಿಕ್ಕದೇವರಾಜನ ಕಾಲದಿಂದ ಹಿಡಿದು ಮುಖ್ಯವಾಗಿ ಟಿಪ್ಪುವಿನ ಕಾಲದ 'ದೊಂಡಿಯಾ ವಾಘ'ನ ದಂಗೆ, 3ನೇ ಕೃಷ್ಣರಾಜ ಒಡೆಯರ ಕಾಲದ ನಗರ ದಂಗೆ, ಕೊಡಗು ಮತ್ತು ಇತರೆ ದಂಗೆಗಳಲ್ಲದೆ, ಸ್ವತಂತ್ರ ಚಳವಳಿಯ ಸಂದರ್ಭದ ಈಸೂರು ಮತ್ತು ಅಂಕೋಲ ರೈತರ ಹೋರಾಟದ ವಿವರಗಳನ್ನೂ ಸಹ ಚರ್ಚಿಸಿರುವುದು ನಮಗೆ ಮುಖ್ಯವಾದ ಮಾಹಿತಿಗಳಾಗಿವೆ.

ಹೀಗೆ ಕೃತಿಯು ಮಾಹಿತಿ ದೃಷ್ಟಿಯಿಂದ ಮಹತ್ವ ಪೂರ್ಣದ್ದಾಗಿ, ಮಾನವ ಚರಿತ್ರೆಯೆಲ್ಲವೂ ವರ್ಗಸಂಘರ್ಷದ ಚರಿತ್ರೆಯೇ ಎಂಬ ಅವರ ಘೋಷಣೆ – 'ಹೋರಾಟವೆಂಬುದು ಮಾನವನ ಅಂತರ್‌ಗತ ಪ್ರಕ್ರಿಯೆ' ಎಂಬ ಅಂಶವನ್ನೆ ಎತ್ತಿಹಿಡಿಯುತ್ತದೆ. ಆದರೆ ಕೃತಿಯಲ್ಲಿ ಕೆಲವು ಸಣ್ಣ ಪುಟ್ಟ ದೋಷಗಳೂ ಇವೆ ಎನ್ನುವುದನ್ನು ಮರೆಯುವಂತಿಲ್ಲ. ಮೊದಲನೆಯದಾಗಿ ಕೃತಿಯ ಶೀರ್ಷಿಕೆ "ರೈತ ಮತ್ತು ಆದಿವಾಸಿ" ಎಂದಿದೆ. ಆದರೆ ಲೇಖಕರು ಮೊದಲು ಆದಿವಾಸಿಗಳ ಆನಂತರ ರೈತರ ಚಳವಳಿ ಬಗ್ಗೆ ವಿವರಿಸಿದ್ದಾರೆ. ವಿಷಯದ ನಿರೂಪಣೆಯಲ್ಲಿ ಭಾಷೆಯ ಬಿಗಿ ಹಿಡಿತವಿಲ್ಲ. ಅಲ್ಲದೆ ವಿಷಯ ಸಂಯೋಜನೆ ಮತ್ತು ಕಾಲಾನುಕ್ರಮಣಿಕೆಯಲ್ಲಿ ಸಾಕಷ್ಟು ಏರುಪೇರುಗಳಿರುವುದು ಲೇಖಕರು ಅವಸರ ಪಟ್ಟಂತೆ ಭಾಸವಾಗುತ್ತದೆ. ಉಳಿದಂತೆ ಈ ಕೃತಿಯು ತನ್ನ ಉತ್ಕೃಷ್ಟ ಚಾರಿತ್ರಿಕ ದೃಷ್ಟಿಯನ್ನು ಒಳಗೊಂಡು ಓದುಗರಿಗೆ ಮತ್ತು ಸಂಶೋಧಕರಿಗೆ ಉತ್ತಮ ಆಕರ ಗ್ರಂಥವಾಗುವುದರಲ್ಲಿ ಸಂಶಯವಿಲ್ಲ ■

(31ನೇ ಪುಟದಿಂದ)

ಒಂದು ಭಾವನಾತ್ಮಕ ಘೋಷಣೆ

ತಲುಪಿದ್ದೇವೆ. ಈಗಾಗಲೇ ವಿವರಿಸಿದಂತೆ ಈ ವಿಭಜನೆಗಳು ರಾಜಕೀಯ, ದೈವಶಾಸ್ತ್ರೀಯ ಹಾಗೂ ಬೌದ್ಧಿಕವಾಗಿದ್ದವು. ಈ ಭಿನ್ನತೆಗಳನ್ನು ಇಲ್ಲವಾಗಿಸುವುದು ಒಂದು ಭಾರಿ ಸವಾಲಾಗಿದೆ. ಮುಸ್ಲಿಂ ಜಗತ್ತಿನ ಪ್ರಸಕ್ತ ರಾಜಕೀಯ ಪರಿಸರ ಈ ಭಿನ್ನತೆಗಳನ್ನು ಇನ್ನೂ ಹೆಚ್ಚಿಸಬಹುದು. ಆದ್ದರಿಂದ ಒಂದೇ ಉಮ್ಮಹೊಳ್ಳು ಘೋಷಣೆಯಾಗಿ ಬಿಟ್ಟಿದೆ. ಇನ್ನೂ ಕೆಟ್ಟದ್ದೆಂದರೆ ಒಗ್ಗೂಡಿಸುವ ಪ್ರತಿಯೊಂದು ಪ್ರಯತ್ನ ಇನ್ನೂ ಹೆಚ್ಚಿನ ವಿಭಜನೆಯಲ್ಲಿ ಕೊನೆಗೊಳ್ಳುತ್ತದೆ.

ತಮ್ಮ ರಾಜಕೀಯ ಹಿತಾಸಕ್ತಿಗಳಿಗನುಗುಣವಾಗಿ ಅರಬ್ ಜಗತ್ತೇ ವಿಭಜಿತಗೊಂಡಿದೆ. ಅಷ್ಟೇ ಏಕೆ ಅರಬ್ ಹಾಗೂ ಅರಬೇತರ ವಿಭಜನೆಗಳೂ ಇವೆ. ಇಸ್ರೇಲ್ ಹಾಗೂ ಅಮೆರಿಕದಿಂದ ಎದುರಾಗುವ ಗಂಭೀರ ರಾಜಕೀಯ ಸವಾಲುಗಳ ಸಂದರ್ಭದಲ್ಲೂ ಅವರು ಒಗ್ಗೂಡಲಾರರು. ಈ ವಾಸ್ತವವನ್ನು ಅಲಕ್ಷಿಸಕೂಡದು. ಸಾಮನ್ಯ ಕಾರ್ಯ ತಂತ್ರ ಹೆಣೆಯಲು ವಾಸ್ತವವಾದಿಯಾಗಬೇಕು. ಯಾವುದೇ ವಿಧದ ವಾಗಾಡಂಬರದಲ್ಲಿ ಕೊಚ್ಚಿಕೊಂಡು ಹೋಗುವಂತಾಗಬಾರದು.

ಮುಸ್ಲಿಮರು ಹೆಚ್ಚಾಗಿ ಭಾವುಕರಾಗುವ ಪ್ರವೃತ್ತಿಯವರಾಗಿದ್ದಾರೆ. ಹೆಚ್ಚು ಹೆಚ್ಚು

ವಿಭಜನಕಾರಿ ಶಕ್ತಿಗಳು ಕಾರ್ಯ ಪ್ರವೃತ್ತವಾಗುತ್ತವೆ, ಹೆಚ್ಚು ಅಭದ್ರವಾಗಿದ್ದೇವೆಂದು ಅವರಿಗೆ ಅನಿಸತೊಡಗುತ್ತದೆ, ಹೆಚ್ಚು ಭಾವುಕವಾಗಿ ಅವರು ಪ್ರತಿಕ್ರಿಯಸತೊಡಗುತ್ತಾರೆ. ಇಸ್ಲಾಂ ಮೇಲೆ ಹಿಂದೆಂದಿ ಗಿಂತಲೂ ಹೆಚ್ಚಾಗಿ ಹಲ್ಲೆಗಳಾಗುತ್ತಿವೆ. ಅದು ಮುಸ್ಲಿಮರು ಕೌಶಲ್ಯಯು ತವಾಗಿ ಹಾಗೂ ಬೌದ್ಧಿಕವಾಗಿ ಪ್ರತಿಕ್ರಿಯಿಸುವುದಕ್ಕಿಂತ ಹೆಚ್ಚಾಗಿ ಭಾವನಾತ್ಮಕವಾಗಿ ಪ್ರತಿಕ್ರಿಯಿಸುವಂತೆ ಮಾಡುತ್ತದೆ. ಈ ಹಲ್ಲೆಗಳಿಗೆ ಪ್ರತಿಕ್ರಿಯಸಲು ಅಪಾರ ಪ್ರಬುದ್ಧತೆ ಹಾಗೂ ರಾಜಕೀಯ ಚಾಣಾಕ್ಷತೆ ಅನಿವಾರ್ಯವಾಗುತ್ತದೆ. ನಮ್ಮ ಭಾವುಕ ಪ್ರತಿಕ್ರಿಯೆಗಳು ಹಾಗೂ ಬೀದಿ ಪ್ರತಿಭಟನೆಗಳು, ಇನ್ನೂ ಕೆಟ್ಟದ್ದೆಂದರೆ ಭಯೋತ್ಪಾದಕ ಹಾಗೂ ಹಿಂಸಾತ್ಮಕ ಪ್ರತಿಭಟನೆ ನಮ್ಮ ವೈರಿಗಳಿಗೇ ಹೆಚ್ಚು ಲಾಭದಾಯಕವಾಗುತ್ತವೆ ಹಾಗೂ ಇಸ್ಲಾಂ ಮೇಲೆ ಮತ್ತಷ್ಟು ಹಲ್ಲೆಗಳಾಗುತ್ತವೆ.

ನಮ್ಮ ಭಿನ್ನತೆಗಳನ್ನು ನೀಗಿ ಉಮ್ಮದ ಬಲವಾದ ಒಗ್ಗಟ್ಟನ್ನು ಸಾಧಿಸುವುದು ಸಾಧ್ಯವಾಗಲಿಕ್ಕಿಲ್ಲ. ಆದರೆ ಇಸ್ಲಾಮಿನ ಶಾಂತಿಯುತ ಹಾಗೂ ಘನತೆಯ ಬಿಂಬವನ್ನು ಸ್ಪುಟಗೊಳ್ಳಲು ಪೂರಕವಾಗುವಂತೆ ನಿರ್ಭಾವುಕವಾಗಿ ಹಾಗೂ ಬೌದ್ಧಿಕವಾಗಿ ಪ್ರತಿಕ್ರಿಯಿಸುವ ತಂತ್ರಗಳನ್ನಂತೂ ರೂಪಿಸುವುದು ನಿಶ್ಚಿತವಾಗಿ ಸಾಧ್ಯವಿದೆ. ಅದು ಜಗತ್ತಿನಲ್ಲಿ ಇಸ್ಲಾಂ ಹಾಗೂ ಮುಸ್ಲಿಮರ ಬಗ್ಗೆ ಗಮನಾರ್ಹವಾಗಿ ಗೌರವ ಹೆಚ್ಚಿಸಬಲ್ಲದು. ■

ಬ್ರಾಹ್ಮಣ್ಯವೇ ಕಮ್ಯುನಿಸ್ಟರ ವಿಫಲತೆಗೆ ಕಾರಣ

ಮೂಲ ಸಂದರ್ಶನ: **ಆರ್.ಕೆ ಬಿಜುರಾಜ್**

ಅನು: **ಡಾ॥ ಎಚ್.ಎಸ್ ಅನುಪಮಾ**

'ಖೈರ್ಲಾಂಜಿ' ಖ್ಯಾತಿಯ ಚಿಂತಕ, ಮಾನವಹಕ್ಕು ಹೋರಾಟಗಾರ ಆನಂದ್ ತೇಲ್ತುಂಬ್ಡೆ ಅವರನ್ನು ಆರ್.ಕೆ. ಬಿಜುರಾಜ್ ಇಂಟರ್ನೆಟ್ ಮೂಲಕ ಸಂದರ್ಶಿಸಿದಾಗ ಪ್ರಸ್ತುತ ದಲಿತ ರಾಜಕೀಯ ಪರಿಸ್ಥಿತಿ, ದಲಿತ್ ಪ್ಯಾಂಥರ್ ಚಳವಳಿ, ಕಮ್ಯುನಿಸ್ಟರು, ಮಾಯಾವತಿ ಹಾಗೂ ಇತ್ತೀಚಿನ ಕೋರ್ಟ್ ತೀರ್ಪುಗಳ ಬಗ್ಗೆ ಪ್ರಶ್ನಿಸಿದ್ದು ಅದಕ್ಕೆ ಅವರು ನೀಡಿದ ಉತ್ತರಗಳನ್ನು ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗಿತ್ತು. ಉಳಿದ ಭಾಗವನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ನೀವು ಯಾವುದೇ ಪಕ್ಷ ಅಥವಾ ಸಂಘಟನೆಯ ಸದಸ್ಯರೇ?

ನನ್ನ ವಿದ್ಯಾರ್ಥಿ ದಿನಗಳಿಂದಲೂ ಅಂಚಿನ ಸಮುದಾಯಗಳ ಕುರಿತು ಕೆಲಸ ಮಾಡುವ ಒಂದಲ್ಲ ಒಂದು ಸಂಘಟನೆಯ ಜೊತೆಗೆ, ಉದಾ: ಸ್ಲಂವಾಸಿಗಳ, ಅಸಂಘಟಿತ ಕಾರ್ಮಿಕರ ಕುರಿತು ಕೆಲಸ ಮಾಡುವ ಸಂಘಟನೆಗಳ ಜೊತೆ ಗುರುತಿಸಿಕೊಂಡಿದ್ದೇನೆ. ಈಗಲೂ ಅಂಥ ಹಲವು ಸಂಘಟನೆಗಳ ಸದಸ್ಯನಾಗಿದ್ದೇನೆ. ಆದರೆ ನಾನು ಯಾವುದೇ ಪಕ್ಷದ ಸದಸ್ಯನಲ್ಲ. ಮುಂಬಯಿಯ ಮಾನವಹಕ್ಕು ಹೋರಾಟ ಸಂಘಟನೆಯಾದ 'ಕಮಿಟಿ ಫಾರ್ ದಿ ಪ್ರೊಟೆಕ್ಷನ್ ಆಫ್ ಡೆಮಾಕ್ರೆಟಿಕ್ ರೈಟ್ಸ್'ನ ಸದಸ್ಯನಾಗಿದ್ದೇನೆ.

ನಿಮಗೆ ಅಖಿಲ ಭಾರತ ಮಟ್ಟದಲ್ಲಿ ಜಾತಿವಿರೋಧಿ ಅಥವಾ ಮಾನವಹಕ್ಕು ಹೋರಾಟ ಮಾಡುವ ಸಂಘಟನೆಯ ಕೊರತೆ ಇದೆ ಎನಿಸುವುದೇ? ಹಾಗಿದ್ದರೆ ಅದಕ್ಕೇನು ಪರಿಹಾರ ಸೂಚಿಸುತ್ತೀರಿ?

ಹೌದು. ಈ ಸಮಸ್ಯೆಗಳ ಗಹನತೆ ನೋಡಿದ ಮೇಲೆ ಜಾತಿವಿರೋಧಿ ಚಳವಳಿ ಮತ್ತು ಮಾನವಹಕ್ಕು ಹೋರಾಟ ನಡೆಸಲು ಅಖಿಲ ಭಾರತ ಮಟ್ಟದ ಸಂಘಟನೆಯೊಂದು ಇರಬೇಕೆನಿಸಿದೆ. ಈಗ ಹಲವಾರು ಸಂಘಟನೆಗಳು ತಮ್ಮ ಮಿತಿಯಲ್ಲಿ ಸ್ವಲ್ಪಸ್ವಲ್ಪ ಕೆಲಸ ಮಾಡುವುದನ್ನು ಅಲ್ಲಗಳೆಯುತ್ತಿಲ್ಲ. ಆದರೆ ಅದು ಉತ್ಸಾಹ-ಶಕ್ತಿಗಳು ಅನಗತ್ಯ ಸೋರಿಹೋಗುವಂತೆ ಮಾಡುತ್ತದೆ. ರಚನಾತ್ಮಕವಾಗಿ ಅವುಗಳ ಸಮನ್ವಯ ಸಾಧ್ಯವಿದೆ. ಜಾತಿವಿರೋಧಿ ಚಳವಳಿ ಸಿದ್ಧಾಂತದಿಂದ ಹಿಡಿದು ಹೋರಾಟದವರೆಗೆ ಹಲವು ಸ್ತರಗಳ ಪ್ರಯತ್ನ ನಡೆಸಬೇಕಾಗಿದೆ. ಇವನ್ನೆಲ್ಲ ತುಂಡುತುಂಡಾಗಿ ಬೇರೆಬೇರೆ ಸಂಘಟನೆಗಳು ಮಾಡಲು ಸಾಧ್ಯವೆ? ನನ್ನ ಪ್ರಕಾರ ಯಾವುದಾದರೂ ಸಂಘಟನೆ ಈ ನಿರ್ವಾತವನ್ನು ತುಂಬಬೇಕು. ಬರೀ ಸಂಘಟನೆಯೊಂದು ಹುಟ್ಟಿದರೆ ಪರಿಹಾರ ಸಿಗುವುದಿಲ್ಲ, ಅದು ಸರಿಯಾದ ತಾತ್ವಿಕ ದೃಷ್ಟಿಕೋನ ಹೊಂದಿದ್ದು ರಾಷ್ಟ್ರೀಯ ಮಟ್ಟದಲ್ಲಿ ಇಂಥ ಜಾತಿವಿರೋಧಿ ಹೋರಾಟಗಳನ್ನು ಸಮನ್ವಯಗೊಳಿಸುವ ಶಕ್ತಿ ಪಡೆದಿರಬೇಕು.

ಭಾಗ ೨
ಸಂದರ್ಶನ

ನ್ಯಾಷನಲ್ ಬಹುಜನ್ ಪಾರ್ಟಿ ಅಥವಾ ಪ್ರಕಾಶ್ ಅಂಬೇಡ್ಕರ್ ಶುರುಮಾಡಿದ ಭಾರಿಪ ಬಹುಜನ್ ಮಹಾಸಂಘವನ್ನು ನೀವು ಹೇಗೆ ಪರಿಗಣಿಸುತ್ತೀರಿ?

ಈ ಮೊದಲು ಹಲವಾರು ಬರಹ-ಭಾಷಣಗಳ ಮೂಲಕ ಬಹುಜನ ಸಮಾಜ ಪಕ್ಷದ ಬಗೆಗೆ ನನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದೇನೆ. ತನ್ನ ಚುನಾವಣಾ ಯಶಸ್ಸಿನ ಓನ್ನಲೆಯಲ್ಲಿ ಬಿಎಸ್‌ಪಿ ಖಂಡಿತ ಪ್ರಕಾಶಿಸುತ್ತಿದೆ. ಆದರೆ ಅದರ ಚುನಾವಣಾ ಯಶಸ್ಸು ಮುಖ್ಯವಾಗಿ ಅದರ ತಂತ್ರಗಾರಿಕೆಯಲ್ಲಿದೆ. ಚುನಾವಣಾ ರಾಜಕೀಯದಲ್ಲಿ ಪಳಗಿದ ಹಳೆಯ ಹುಲಿಗಳಿಗೂ ಪಾಠ ಹೇಳಿಕೊಡುವಂತಿದೆ ಅದು. ಆದರೆ ಬಿಎಸ್‌ಪಿಯ ಯಶಸ್ಸು ಅದು ಹೇಳಿಕೊಳ್ಳುವಂತೆ 'ಬಹುಜನ್' ಫಾರ್ಮುಲಾದದ್ದಲ್ಲ. ಅಥವಾ ಅದನ್ನು ದಲಿತರ ಪಕ್ಷ ಎಂದು ಪರಿಗಣಿಸುವಂತೆಯೂ ಇಲ್ಲ. ದಲಿತ ನಾಯಕತ್ವವನ್ನು ಹೊಂದಿದ ಮಾತ್ರಕ್ಕೆ ಅದು ದಲಿತರ ಪಕ್ಷ ಆಗುವುದಿಲ್ಲ. ಈ ರೀತಿ ಹಣೆಪಟ್ಟಿ ಹಂಚಿಕೊಂಡ ಪಕ್ಷಗಳ ಬಗ್ಗೆ ಜನ ಮರುಚಿಂತನೆ ನಡೆಸುವ ಅಗತ್ಯವಿದೆ. ಬಿಎಸ್‌ಪಿ ಜನರನ್ನು ವೋಟ್ ಬ್ಯಾಂಕ್ ಎಂದು ಪರಿಗಣಿಸುವ ಯಾವುದೇ ರಾಜಕೀಯ ಪಕ್ಷದಂತಹ ಇನ್ನೊಂದು ಪಕ್ಷ. ಬಿಎಸ್‌ಪಿ ದಲಿತರನ್ನು ತನ್ನ ಬಗಲಲ್ಲಿಟ್ಟುಕೊಂಡು ಆ ಆಧಾರದ ಮೇಲೆ ಉಳಿದವರ ಬಳಿ ಚುನಾವಣಾ ಚೌಕಾಶಿ ನಡೆಸಿತು ಅಷ್ಟೇ. ಅದಕ್ಕಿಂತ ಹೆಚ್ಚೇನೂ 'ದಲಿತತ್ವ', 'ದಲಿತಪರತೆ' ಆ ಪಕ್ಷದಲ್ಲಿ ಕಾಣುವುದಿಲ್ಲ. ಮೊದಲೆಲ್ಲ 'ಬಹುಜನ'ರ ಪಕ್ಷ ಎನ್ನುತ್ತಿದ್ದರು. ಈಗ 'ಸರ್ವಜನ'ರ ಪಕ್ಷ ಎನ್ನುತ್ತಿದ್ದಾರೆ. ಅದು ದಲಿತರ ಏಳ್ಗೆಗಾಗಿ ವಿಶೇಷ ಕೆಲಸವೇನೂ ಮಾಡಿಲ್ಲ. ಉತ್ತರಪ್ರದೇಶದ ದಲಿತರು ಈ ಮೊದಲು ಯಾವ ದುಸ್ಥಿತಿಯಲ್ಲಿದ್ದರೋ ಈಗಲೂ ಹಾಗೆಯೇ ಇದ್ದಾರೆ. ದಲಿತರ ವಿರುದ್ಧ ದೌರ್ಜನ್ಯ ಎಸಗುವಲ್ಲಿ ಈಗಲೂ ಆ ರಾಜ್ಯ ಪ್ರಥಮ ಸ್ಥಾನದಲ್ಲಿದೆ. ಪ್ರತಿದಿನ ಜಾತಿ ದೌರ್ಜನ್ಯದ ಹೊಸಹೊಸ ಪ್ರಕರಣಗಳು ಸಂಭವಿಸುತ್ತಿವೆ. ದಲಿತರೂ ಈಗ ಆ ಪಕ್ಷದ ಬಗೆಗೆ ಭ್ರಮನಿರಸನ ಹೊಂದುತ್ತಿದ್ದಾರೆ. ಆದರೆ ಅದು ಹೊಂದಿರುವ ಹಣಬಲ ಮತ್ತು ಜನಬಲವನ್ನು ಗಮನಿಸಿದರೆ ಎಲ್ಲವೂ ಒಮ್ಮೆಲೇ ಬದಲಾಗುವುದಿಲ್ಲ ಎನಿಸುತ್ತದೆ. ಆದರೆ ಇದೇ ರೀತಿ ಹೆಚ್ಚುದಿನ ಮುಂದುವರೆಸಲು ಸಾಧ್ಯವಿಲ್ಲ.

ಪ್ರಕಾಶ್ ಅಂಬೇಡ್ಕರ್ ಅವರ 'ಭಾರಿಪ ಬಹುಜನ ಮಹಾಸಂಘ' ಉಳಿದೆಲ್ಲ ಬಹುಜನ ಪಕ್ಷಗಳನ್ನು ಒಳಗೊಳ್ಳಬಹುದು. ಅಕೋಲಾ ಮಾದರಿ ಯಶಸ್ಸಿನಲ್ಲಿ ಅದರ ಪಾಲಿದ್ದರೂ ಹೆಚ್ಚುದಿನ ಬಾಳಲಿಲ್ಲ. ತಮ್ಮ ನಾಮಬಲದ ದೆಸೆಯಿಂದ ಪ್ರಕಾಶ್ ಅಂಬೇಡ್ಕರ್ ಜನರ ಗಮನ ಸೆಳೆದಿದ್ದರು, ಆದರೆ ಜನರ ನಿರೀಕ್ಷೆಗೆ ತಕ್ಕಂತೆ ಹೆಜ್ಜೆ ಹಾಕುವುದು ಅಸಾಧ್ಯವಾಯಿತು. ಅವರು ಮಹಾರಾಷ್ಟ್ರದ ಘಟಾನುಘಟಿ ಶರದ್ ಪವಾರ್ ಜೊತೆ ಸೆಣಸಬೇಕಾಗಿತ್ತು. ಪವಾರ್ ತಮ್ಮ ಕೈಗೊಂಬೆಯಾಗಿದ್ದ ರಾಮದಾಸ್ ಅಠಾವಲೆಯನ್ನು ಅಸ್ತ್ರವನ್ನಾಗಿ ಬಳಸಿ ಇವರನ್ನು ಹಣಿಯಲು ಪ್ರಯತ್ನಿಸಿದರು ನಿಜ. ಅವರು ಸರಿಯಾಗಿ ತಮ್ಮ ಕಾರ್ಯ ನಿರ್ವಹಿಸಿದ್ದರೂ ಸಾಕಾಗಿತ್ತು, ಆದರೆ ಅದರಲ್ಲೂ ಸೋತರು. ಹೀಗಾಗಿ ಮಹಾರಾಷ್ಟ್ರದಲ್ಲೇ ತಮ್ಮ ವರ್ಚಸ್ಸು ಕಳೆದುಕೊಂಡ ಅವರು ರಾಷ್ಟ್ರಮಟ್ಟದಲ್ಲಿ ಇನ್ನೇನು ಮಾಡುವುದೂ ಕಷ್ಟ.

ಅಂಬೇಡ್ಕರರ ವಿಚಾರಧಾರೆಯನ್ನು ಅರ್ಥಮಾಡಿಕೊಳ್ಳಲು ವಿಫಲವಾದ ಮೇಲೆ ಒಡೆಯುವಿಕೆ ರಿಪಬ್ಲಿಕನ್ ಪಕ್ಷಕ್ಕೆ ಅನಿವಾರ್ಯವಾಗಿತ್ತು. ಅಂಬೇಡ್ಕರ್ ಭಾರತದಲ್ಲೇ ಮೊತ್ತಮೊದಲ ಬಾರಿಗೆ ಎಡಪಕ್ಷವೊಂದನ್ನು 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ' ಎಂಬ ಹೆಸರಲ್ಲಿ ಕಟ್ಟಿ ಪ್ರಯೋಗ ನೋಡಿದರು. ಅದನ್ನು ಕಾರ್ಮಿಕರ ಪಕ್ಷ ಎಂದು ಕರೆಯಲಾಗಿತ್ತು. ಕ್ರಿಪ್ಸ್ ಸಂಧಾನದ ವರದಿಯಲ್ಲಿ ಶೋಷಿತವರ್ಗಕ್ಕೆ ಸೂಕ್ತ ಪ್ರಾತಿನಿಧ್ಯ ನೀಡದೇ ನಿರ್ಲಕ್ಷಿಸಲಾಗಿದೆ ಎಂದು ಅವರಿಗೆ ಅನಿಸಿದಾಗ ಷೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್ ರಚಿಸಲಾಯಿತು. ನಂತರ ಕಮ್ಯುನಿಸ್ಟ್ ಅಲ್ಲದ ಎಡಪಕ್ಷಗಳನ್ನೆಲ್ಲ ಸೇರಿಸಿ ಒಂದು ಪಕ್ಷ ಕಟ್ಟಬೇಕೆಂದು ಹೊರಟು ರಚಿತವಾಗಿದ್ದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ. ಅವರು ಆ ನಿಟ್ಟಿನಲ್ಲಿ ಪ್ರಯತ್ನ ನಡೆಸಿದರೂ ಯಶಸ್ಸಾಗಲಿಲ್ಲ. ಅವರ ಬೆಂಬಲಿಗರು ಅವರ ಇಚ್ಛೆಗೆ ವಿರುದ್ಧವಾಗಿ 1957ರಲ್ಲಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಕಟ್ಟಿದರು. ಆದರೆ ಅದು ಕೇವಲ ಪರಿಶಿಷ್ಟ ಜಾತಿಯವರ ಪಕ್ಷವಾಗಿ ಉಳಿಯಿತು. ಅಂಬೇಡ್ಕರರ ರಾಜಕೀಯ ವರ್ಗಾಧಾರಿತ ರಾಜಕೀಯವಾಗಿತ್ತು ಎನ್ನುವುದನ್ನು ಅಂಬೇಡ್ಕರ್‌ವಾದಿಗಳೂ ಅರ್ಥಮಾಡಿಕೊಂಡಿಲ್ಲವೆನ್ನುವುದನ್ನು ನೋಡುವಾಗ ಬೇಸರವೆನಿಸುತ್ತದೆ. ತಮ್ಮ ಜೀವಮಾನದುದ್ದಕ್ಕೂ ಜಾತಿ ವಿರುದ್ಧ ಯುದ್ಧ ಸಾರಿದ ಅಂಬೇಡ್ಕರ್ ಜಾತಿಯನ್ನು

ರಾಜಕೀಯಕ್ಕೆ ದಾಳವಾಗಿ ಬಳಸ್ಸಿಕೊಳ್ಳಲಿಲ್ಲ. ಆದರೆ ದುರದೃಷ್ಟವಶಾತ್ ಅವರ ಬೆಂಬಲಿಗರು ಅವರನ್ನು ಜಾತಿರಾಜಕಾರಣದ ಹರಿಕಾರನೆಂದು ಬಿಂಬಿಸಿ ದುರ್ಬಲಗೊಳಿಸಿದ್ದಾರೆ. ಅಂಬೇಡ್ಕರ್‌ವಾದಿಗಳು ಮೊದಲು ಅಂಬೇಡ್ಕರರನ್ನು ಅರಿತುಕೊಳ್ಳಬೇಕು. ಏಕೆಂದರೆ ಅಂಬೇಡ್ಕರರ ಆರ್‌ಪಿಐ ಅದು ಜಾತಿಯನ್ನು ವಿಭಜಕ ಶಕ್ತಿಯೆಂದೇ ಗುರುತಿಸಿತ್ತು. ಆದರೆ ಮಹಾರಾಷ್ಟ್ರದಲ್ಲಿ ಆ ಪಕ್ಷದ ಇಂದಿನ ನಾಯಕರು ಉಪಜಾತಿಗಳ ಆಧಾರದ ಮೇಲೆ ಅದನ್ನು ಒಡೆದಿದ್ದಾರೆ.

ದಲಿತ ಚಳವಳಿ ಗಾಂಧಿ ತಾತ್ವಿಕತೆಯಿಂದ ಏನನ್ನೂ ಪಡೆಯಬೇಕಾದದ್ದಿಲ್ಲವೆ? ಗಾಂಧಿ ದಲಿತವಿರೋಧಿಯಾಗಿದ್ದರೆ?

ಈ ವಿಚಾರದ ಕುರಿತು ವಿಫಲ ವಿಶ್ಲೇಷಣೆ ಮಾಡಬಯಸುವುದಿಲ್ಲ ನಾನು. ತಮ್ಮ ಸಬಲೀಕರಣದ ಹಾದಿಯಲ್ಲಿ ದಲಿತರು ಗಾಂಧಿಯಿಂದ ಪಡೆಯಬಹುದಾದದ್ದು ಏನೂ ಇಲ್ಲವೆಂದೇ ನಾನು ಭಾವಿಸುತ್ತೇನೆ. ಗಾಂಧಿ ದಲಿತರಿಗೆ ವಿರುದ್ಧವಾಗಿದ್ದರೆ ಎಂಬೆಲ್ಲ ಊಹೆಗೆ ನಾನು ಇಳಿಯಬಯಸುವುದಿಲ್ಲ. ಅವರು ದಲಿತವಿರೋಧಿಯಾಗಿರಲಿಲ್ಲ ಎಂದು ನನಗನಿಸುತ್ತದೆ. ತಾವೇ ಒಪ್ಪಿಕೊಂಡಂತೆ ಅವರು ಸನಾತನ ಹಿಂದೂವೇ ಆಗಿದ್ದರು. ಆದರೆ ಅವರ ಇಮೇಜ್ ಅನ್ನು ವ್ಯವಸ್ಥಿತವಾಗಿ ಜನರನ್ನು ಸೆಳೆದುಕೊಳ್ಳಲು ಬಳಸಿಕೊಳ್ಳಲಾಯ್ತು. ಗಾಂಧಿ ಉಳಿದದ್ದೆಲ್ಲಕ್ಕಿಂತ ಮಿಗಿಲಾಗಿ ಒಬ್ಬ ಚಾಣಾಕ್ಷ ತಂತ್ರಗಾರ. ತಮ್ಮ ತಂತ್ರಗಳನ್ನು ನೈತಿಕತೆಯ ಸುರುಳಿ ಸುತ್ತಿ ಜನರನ್ನು ಸೆಳೆಯಲು ಬಳಸಿಕೊಳ್ಳುತ್ತಿದ್ದರು. ಇಷ್ಟು ಹೇಳಿದ ಮೇಲೆ, ಜಾತಿಪದ್ಧತಿ ಕೈಬಿಡುವಂತೆ ಸಮಾಜವನ್ನು ಸಿದ್ಧಗೊಳಿಸಲು ಅವರು ಮಾಡಿದ ಪ್ರಯತ್ನಗಳನ್ನು ಅಲ್ಲಗಳೆಯಲಾಗದು. ಅವರನ್ನು ನೈತಿಕತೆಯ ದೃಷ್ಟಿಕೋನದಿಂದ ಅಲ್ಲ, ವರ್ಗಸಂಘರ್ಷದ ದೃಷ್ಟಿಯಿಂದ ನಾನು ನೋಡಬಯಸುತ್ತೇನೆ.



ಅಂಬೇಡ್ಕರ್ ಕುರಿತು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲಿಲ್ಲ ಎನ್ನುವ ಗಂಭೀರ ಆರೋಪವಿದೆಯಲ್ಲ?

ಈ ಪ್ರಶ್ನೆ ಎತ್ತುವವರು ಸ್ವಾತಂತ್ರ್ಯ ಚಳವಳಿಯ ಉದ್ದೇಶ ಏನಾಗಿತ್ತು ಮತ್ತು ಜಾತಿವಿರೋಧಿ ಚಳವಳಿಯ ಉದ್ದೇಶ ಏನಾಗಿತ್ತು ಎನ್ನುವುದರ ಕುರಿತು ಸ್ಪಷ್ಟತೆ ಹೊಂದಬೇಕು. ಸ್ವಾತಂತ್ರ್ಯ ಚಳವಳಿಯ ಉದ್ದೇಶ ವಸಾಹತುಶಾಹಿ ಆಡಳಿತವನ್ನು ಕೊನೆಗೊಳಿಸಿ ಆ ಸ್ಥಾನದಲ್ಲಿ ದೇಶೀ ಗಣ್ಯರನ್ನು ಕೂರಿಸುವುದು. ಆದರೆ ಜಾತಿವಿರೋಧಿ ಚಳವಳಿಯ ಉದ್ದೇಶ ಆರನೇ ಒಂದು ಭಾಗದಷ್ಟಿರುವ ಜನಸಮೂಹಕ್ಕೆ ಮೂಲಭೂತ ಹಕ್ಕುಗಳನ್ನು ದೊರಕಿಸಿಕೊಡುವುದು. ಯಾವುದು ಉತ್ತಮ ಮತ್ತು ಸೂಕ್ತವಾಗಿದೆ? ಅಂಬೇಡ್ಕರ್ ಎಂದೂ ದೇಶದ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿರಲಿಲ್ಲ, ಕೃತಘ್ನ ರಾಷ್ಟ್ರ ನೆನಪಿಸಿಕೊಳ್ಳದಿದ್ದರೇನು, ಸಾಮ್ರಾಜ್ಯಶಾಹಿಗಳು ಈ ದೇಶವನ್ನು ಹೇಗೆ ಲೂಟಿ ಹೊಡೆಯುತ್ತಿದ್ದಾರೆಂದು ವಿದ್ಯಾರ್ಥಿ ದೆಸೆಯಲ್ಲೇ ತೋರಿಸಿದವರು ಅವರು. ಮೂಲಭೂತವಾಗಿ ಕಾಂಗ್ರೆಸ್ ಸಾಮ್ರಾಜ್ಯಶಾಹಿಗೆ ವಿರೋಧಿಯೇ ಎಂಬ ಬಗ್ಗೆಯೇ ಅವರಿಗೆ ಅನುಮಾನಗಳಿದ್ದವು. ಅವರ ಪ್ರಕಾರ ದೇಶವಾಸಿಗಳಿಂದ ನಡೆಸಲ್ಪಟ್ಟ ಸ್ವಾತಂತ್ರ್ಯ ಚಳವಳಿಯ ಉದ್ದೇಶ ದೇಶೀ ಗಣ್ಯರಿಗೆ – ಎಂದರೆ ಜಮೀನ್ದಾರರು ಹಾಗೂ ಬಂಡವಾಳಶಾಹಿಗಳಿಗೆ ಅಧಿಕಾರ ದೊರಕಿಸಿಕೊಡುವುದೇ ಆಗಿತ್ತು. ಕೊನೆಗೆ ಆಗಿದ್ದೂ ಅದೇ. ಹಿಂತಿರುಗಿ ನೋಡಿದಾಗಲಾದರೂ ಅಂದಿನ ಬಹುಸಂಖ್ಯಾತ ಸಮುದಾಯಕ್ಕೆ ಸ್ವಾತಂತ್ರ್ಯ ಎಂದರೆ ಏನಾಗಿತ್ತು ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಮನುಷ್ಯರಿಗಿಂತ ಕೀಳಾಗಿ ಕಾಣಲ್ಪಡುತ್ತಿದ್ದ ಜನರಿಗೆ ಮಾನವ ಹಕ್ಕು ಕೊಡಿಸುವಲ್ಲಿ ಹೋರಾಟ ಮಾಡಿದ್ದು ಸರಿಯಾಯಿತೆಂದೇ ನನ್ನ ಭಾವನೆ. ಕಮ್ಯುನಿಸ್ಟರ ಜೊತೆಗಿನ ವಾಗ್ವಾದದಲ್ಲಿ ಅವರು ಯಾವಾಗಲೂ ಒತ್ತುನೀಡುತ್ತಿದ್ದುದು ಜಾತಿಯನ್ನು ಎದುರಿಸದ ಹೊರತು ವರ್ಗ ಐಕ್ಯತೆ ಸಾಧ್ಯವಾಗುವುದಿಲ್ಲ ಎನ್ನುವ ವಿಷಯದ ಬಗೆಗೇ. ಕಾಲ ಅವರ ಅಭಿಪ್ರಾಯ ಸರಿ ಎನ್ನುವುದನ್ನು ಸಿದ್ಧಗೊಳಿಸಿ ತೋರಿಸಿದೆ. ಸ್ವಾತಂತ್ರ್ಯ ಚಳವಳಿಯ ಬಗೆಗೆ ಅವರಿಗಿದ್ದದ್ದು ಸರಳ ತಕರಾರು: ಚಳವಳಿಕಾರರು ದೇಶದ ಸ್ವಾತಂತ್ರ್ಯ ಬಯಸುವವರಾದರೆ ದೇಶವಾಸಿಗಳಾದ ದಲಿತರ ಸ್ವಾತಂತ್ರ್ಯದ ಬಗ್ಗೆಯೂ ಗಮನ ಹರಿಸಬೇಕು ಎಂದು. ಕಳೆದ ಆರು ದಶಕಗಳಲ್ಲಿ ಸಂಭವಿಸಿರುವುದನ್ನು ನೋಡಿದರೆ ಅವರ ವಾದ ತಪ್ಪು ಎಂದು ಹೇಳಲು ಸಾಧ್ಯವೆ? ಈಗ ಬಂದಿರುವುದು ಹಣದ ಥೈಲಿಗೆ ದೇಶವನ್ನು ಕೊಳ್ಳೆಹೊಡೆಯುವ ಸ್ವಾತಂತ್ರ್ಯ ಅಷ್ಟೇ.

ಜಾತಿವಿರೋಧಿ ಚಳವಳಿಗಳಲ್ಲಿ ರಾಷ್ಟ್ರೀಯತೆ, ಭಾಷೆ ಮತ್ತು ಸಂಸ್ಕೃತಿಗೆ ಏನಾದರೂ ಸ್ಥಾನವಿದೆಯೆ? ತಮ್ಮ ಬಿಡುಗಡೆಗೆ ದಲಿತರು ಹಳೆಯ ಸಂಸ್ಕೃತಿಗೆ ವಾಪಸಾಗಬೇಕೆಂದು ನಿಮಗನಿಸುತ್ತದೆಯೆ?

ಇವೆಲ್ಲ ಪ್ರಾಥಮಿಕ ವಿಷಯಗಳಲ್ಲ. ಉಳಿದ ಎಲ್ಲ ವಿಷಯಗಳಿಗಿಂತ ಜಾತಿ ಮತ್ತು ದಲಿತರು ಎಂಬ ವಿಷಯಗಳ ವಿರೋಧಾಭಾಸ ಗುರುತಿಸಬೇಕು. ಮೊದಲು ಜಾತೀಯತೆ ಮತ್ತು ದಲಿತರ ವಿಷಯ ಬಗೆಹರಿಯಬೇಕು. ದಲಿತ ಸಂಸ್ಕೃತಿಯನ್ನು ನಾನು ನಿಂದಿಸುತ್ತಿಲ್ಲ. ಆದರೆ ಅದನ್ನು ಎತ್ತಿಹಿಡಿಯಲೇಬೇಕಾದಷ್ಟು ಉಚ್ಚವಾಗಿದ್ದು ಏನೂ ಇಲ್ಲ. ಅಂಬೇಡ್ಕರ್ ತಮ್ಮ ಜೀವಿತಾವಧಿಯಲ್ಲೇ ಇದನ್ನೆಲ್ಲ ಪರಿಹರಿಸಿಕೊಂಡಿದ್ದರು. ತಮ್ಮ ಬೆಂಬಲಿಗರಿಗೆ ಸಂಪ್ರದಾಯ, ಆಚರಣೆಗಳನ್ನು ಬಿಟ್ಟುಬಿಡುವಂತೆ ಸಲಹೆ ನೀಡಿದ್ದರು. ನಾನು ಆಧುನಿಕ ಅಂಬೇಡ್ಕರರನ್ನು ಬೋಗಸ್ ದಲಿತ ಸಾಂಸ್ಕೃತಿಕ ವಕ್ತಾರರಿಗಿಂತ ಹೆಚ್ಚು ಹೃತ್ಪೂರ್ವಕವಾಗಿ ಗೌರವಿಸುತ್ತೇನೆ. ದಲಿತ ಎನ್ನುವುದು ಇಡೀ ಭಾರತದ ವಾಸ್ತವ, ಅದನ್ನು ಮೊದಲು ಬಗೆಹರಿಸಿಕೊಳ್ಳಬೇಕು ಮತ್ತು ಈ ಯಾವ ವಿಷಯಗಳ ಬಗ್ಗೆಯೂ ಗೊಂದಲಗೊಳ್ಳಬಾರದು. ಈ ವಿವಾದಗಳೆಲ್ಲ ಬಗೆಹರಿದ ಮೇಲೆ ಅದರ ಕಡೆ ಗಮನ ಹರಿಸಬಹುದು, ಈಗಲ್ಲ.

ಕಮ್ಯುನಿಸ್ಟರು ಮತ್ತು ಭಾರತದ ಎಡಪಂಥೀಯರ ಕುರಿತ ನಿಮ್ಮ ಅಭಿಪ್ರಾಯಗಳೇನು?

ಕಮ್ಯುನಿಸ್ಟರು ಶಕ್ತಿಯುತವಾದ ಸಿದ್ಧಾಂತ ಹೊಂದಿದ್ದರು. ಸಾಮಾಜಿಕ ವಿಶ್ಲೇಷಣೆಗೆ ಅತ್ಯಾಧುನಿಕ ಉಪಕರಣವಿದ್ದರೂ ಅದನ್ನು ಬಳಸಿಕೊಳ್ಳುವಲ್ಲಿ ಹೀನಾಯವಾಗಿ ಸೋತರು. ನಮ್ಮ ಮೊದಲ ಕಮ್ಯುನಿಸ್ಟರ ಬ್ರಾಹ್ಮಣ್ಯದ ಧೋರಣೆ ಇದಕ್ಕೆ ಕಾರಣವಾಗಿರಬಹುದು. ಅದು ಬರೆದ ಅಕ್ಷರಗಳನ್ನು ಯಥಾವತ್ತಾಗಿ ನಂಬುವಂಥದ್ದು. ಅಕ್ಷರಗಳಲ್ಲಿ ವರ್ಣಿಸಿದ್ದಕ್ಕಿಂತ ಭಾರತದ ಸಾಮಾಜಿಕ ವಾಸ್ತವ ಬೇರೆಯೇ ಆಗಿದೆಯೆನ್ನುವುದನ್ನು ಗುರುತಿಸುವಲ್ಲಿ ಅವರು ವಿಫಲವಾದರು. ಅವರು ಜಾತಿಯೆನ್ನುವುದು ವರ್ಗಕ್ಕಿಂತ ಭಿನ್ನವಾದ, ಅಳಿದುಹೋಗುತ್ತಿರುವ ಊಳಿಗಮಾನ್ಯ ವ್ಯವಸ್ಥೆಯ ಪಳೆಯುಳಿಕೆಯೆಂದು ಗುರುತಿಸುವಲ್ಲಿ ವಿಫಲವಾದರು. ಇದು ದುರದೃಷ್ಟವಶಾತ್ ಜಾತಿ ಮತ್ತು ವರ್ಗ ಎಂಬ ದ್ವಂದ್ವವನ್ನು ಸೃಷ್ಟಿಸಿತು. ಈಗ ಅದರ ಜೊತೆಗೆ ಹೇಗೆ ವ್ಯವಹರಿಸಬೇಕೆಂದು ಯಾರಿಗೂ ತಿಳಿಯುತ್ತಿಲ್ಲ. ವಸ್ತುಸ್ಥಿತಿ ಏನೆಂದರೆ ಜಾತಿ ಎನ್ನುವುದು ಮೊದಲೂ, ಈಗಲೂ ಬದುಕಿನ ಎಲ್ಲ ಸ್ತರಗಳಿಗೂ ವ್ಯಾಪಿಸಿದ ಭಾರತೀಯ ಸಾಮಾಜಿಕ ಬದುಕಿನ ಅವಿಭಾಜ್ಯ ಅಂಗ. ಆದ್ದರಿಂದ ಅದನ್ನು ವರ್ಗವಿಶ್ಲೇಷಣೆಯಲ್ಲಿ ಸೇರಿಸಿಕೊಳ್ಳಲೇಬೇಕು. ಇದನ್ನು ಕಮ್ಯುನಿಸ್ಟರು ಸೃಜನಾತ್ಮಕವಾಗಿ ಮಾಡಿದ್ದರೆ ಭಾರತದ ಚರಿತ್ರೆಯೇ ಬದಲಾಗಿ ಹೋಗುತ್ತಿತ್ತು. ಬಹಳ ಹಿಂದೆಯೇ ಕ್ರಾಂತಿ ಸಾಧ್ಯವಾಗಿರುತ್ತಿತ್ತು.

ದುರದೃಷ್ಟವೆಂದರೆ ಎಡಪಂಥವು ಇನ್ನೂ ತನ್ನ ಸವಕಲು ವಾದಕ್ಕೇ ಅಂಟಿ ಕುಳಿತಿದೆ. 10 ವರ್ಷದ ನಂತರ ಅದು ಶತಮಾನೋತ್ಸವ ಆಚರಿಸುತ್ತಿದೆ. ಕೊನೆಯ ಪಕ್ಷ ಅವುಗಳಿಗೆ ಕಮ್ಯುನಿಸ್ಟ್ ಪಕ್ಷ ಕ್ರಾಂತಿ ಮಾಡಲು ಬದುಕಿರಬೇಕೇ ಹೊರತು ಶತಮಾನೋತ್ಸವ ಆಚರಿಸಲು ಅಲ್ಲ ಎಂಬ ಅರಿವಾಗಬೇಕು. ಮುಖ್ಯವಾಹಿನಿ ಎಡಪಂಥೀಯರು ಚುನಾವಣೆಯೆಂಬ ಹುದಲದಲ್ಲಿ ಸಿಲುಕಿಕೊಂಡಿದ್ದಾರೆ. ಕ್ರಾಂತಿಕಾರಿ ಎಡಪಂಥೀಯತೆಯಲ್ಲಿ ಸ್ವಲ್ಪ ಭರವಸೆಯಿದೆ, ಆದರೆ ಅವು ಮಿಲಿಟರಿ ವಿಧಾನಗಳನ್ನೇ ಅತಿಯಾಗಿ ಅವಲಂಬಿಸಿರುವುದು ಗಾಬರಿ ಹುಟ್ಟಿಸುವಂತಿದೆ. ಈಗ ಅವರಿರುವ ಸನ್ನಿವೇಶದಲ್ಲಿ ಹಾಗಿರುವುದು ಅನಿವಾರ್ಯವಿರಬಹುದು, ಆದರೆ ಅವರು ಜನಸಮುದಾಯವನ್ನು ಕ್ರಾಂತಿಗಾಗಿ ಸಿದ್ಧಗೊಳಿಸುವತ್ತ ಹೆಚ್ಚು ಗಮನಹರಿಸಬೇಕಿದೆ.

ಕಮ್ಯುನಿಸ್ಟರು ಜಾತಿಪ್ರಶ್ನೆಯನ್ನು ಪರಿಗಣಿಸುತ್ತಿಲ್ಲ. ಜಾತಿ ಪರಿಗಣಿಸಿದರೆ ವರ್ಗ ಸಂಘರ್ಷದ ಒಂದು ಭಾಗವಾಗಿ ಜಾತಿ ತಂತಾನೇ ನಾಶವಾಗುತ್ತಿತ್ತು. ಅದೇ ರೀತಿ ಜಾತಿವಿರೋಧಿ ಚಳವಳಿಗಳು ವರ್ಗವನ್ನು ಪರಿಗಣಿಸುತ್ತಿಲ್ಲ. ಇದರ ಬಗ್ಗೆ ಏನು ಹೇಳುತ್ತೀರಿ? ಜಾತಿ ಮತ್ತು ವರ್ಗದ ಕುರಿತು ನಿಮ್ಮ ಅಭಿಪ್ರಾಯಗಳೇನು?

ಎರಡೂ ಕಡೆಯವರು ಮಾಡುತ್ತಿರುವ ಅತಿ ದೊಡ್ಡ ತಪ್ಪು ಇದು. ಸ್ವಲ್ಪ ಆತ್ಮವಿಮರ್ಶೆ ಮಾಡಿಕೊಂಡಿದ್ದರೆ ಅವರಿದನ್ನು ಗುರುತಿಸಬಹುದಿತ್ತು, ಆದರೆ ಹಾಗೆ ಮಾಡಲಿಲ್ಲ. ಅವರ ಪೂರ್ವಗ್ರಹಗಳು ಎಷ್ಟು ಆಳವಾಗಿ ಬೇರೂರಿವೆ ಎಂದು ಇದರಲ್ಲೇ ಗೊತ್ತಾಗುತ್ತದೆ. ನನಗೊಂದು ಪ್ರಾಕ್ಟಿಕಲ್ ಆದ ಹೊರಬರುವ ದಾರಿ ಹೊಳೆಯುತ್ತಿದೆ. ಕಮ್ಯುನಿಸ್ಟರು ಸರಿಯಾದ ವರ್ಗ ವಿಶ್ಲೇಷಣೆ ಮಾಡಲು ಮತ್ತು ವರ್ಗಸಂಘರ್ಷದಲ್ಲಿ ಜಾತಿವಿರೋಧಿ ಚಳವಳಿಯನ್ನು ಅಂತರ್ಗತಗೊಳಿಸಲು ಸೋತು, ಬೇರೆಯೇ ಆಗಿ ದಲಿತ ಚಳವಳಿ ನಡೆಯಬೇಕಾದ ಅನಿವಾರ್ಯತೆ ಸೃಷ್ಟಿಸಿದರು ಎನ್ನುವುದನ್ನು ಒಪ್ಪಿಕೊಳ್ಳುತ್ತಲೇ ಕಳೆದ ಆರು ದಶಕಗಳ ಇತಿಹಾಸವನ್ನು ನಾವು ಮರೆಯಬಾರದು. ಇಂದಿನ ಪರಿಸ್ಥಿತಿಯಲ್ಲಿ ಈ ಎರಡೂ ಚಳವಳಿಗಳು ತಾವು ತಪ್ಪಿದ್ದಲ್ಲಿ ಎನ್ನುವುದನ್ನು ಅರಿತು ತಮ್ಮ ಗುರಿಗಳು ಒಂದಕ್ಕೊಂದು ಹೆಣೆದುಕೊಂಡಿವೆ ಎಂದು ಅರಿತು ಮುನ್ನಡೆಯಬೇಕಿದೆ. ಪ್ರಗತಿಪರ ಶಕ್ತಿಗಳ ಸಹಾಯವಿಲ್ಲದೆ ದಲಿತರು ಜಾತಿವಿನಾಶದ ತಮ್ಮ ಗುರಿಸಾಧಿಸಲು ಸಾಧ್ಯವಿಲ್ಲ, ಹಾಗೆಯೇ ಎಡಪಂಥೀಯರು ದಲಿತ ಸಮೂಹವನ್ನು ತಮ್ಮ ಜೊತೆಗೊಯ್ಯದೇ ಕ್ರಾಂತಿಯನ್ನು ಕನಸುವುದು ಸಾಧ್ಯವಿಲ್ಲ. ಇವರನ್ನು ಒಗ್ಗೂಡಿಸುವ ಮಾರ್ಗವೆಂದರೆ ದಲಿತರಿಗೆ ಜಾತಿಮಾತನ್ನು ತೊರೆದು ವರ್ಗದ ಕಡೆ ಗಮನಹರಿಸುವಂತೆ ಮಾಡುವುದು ಮತ್ತು ಎಡಪಂಥಕ್ಕೆ ಜಾತಿ ದೌರ್ಜನ್ಯದ ವಿರುದ್ಧದ ಹೋರಾಟದಲ್ಲಿ ದಲಿತರಿಗೆ ಬೆಂಬಲ ಕೊಡುವುದು ತಮ್ಮ ಕರ್ತವ್ಯ ಎಂಬ ಅರಿವು ಮೂಡಿಸುವುದು. ಈ ಪ್ರಕ್ರಿಯೆ ಮಾತ್ರ ಈ ಎರಡೂ ಗುಂಪುಗಳನ್ನು ಹತ್ತಿರ ತಂದು ರಾಜಕೀಯವಾಗಿ ಒಂದಾಗುವಂತೆ ಮಾಡಬಲ್ಲದು.

ಉತ್ತರಪ್ರದೇಶದಲ್ಲಿ ಮಾಯಾವತಿಯ ಗೆಲುವನ್ನು ದಲಿತರ ಗೆಲುವು ಎಂದು ಪರಿಗಣಿಸಿರುವುದನ್ನು ನೋಡಿದ್ದೇವೆ. ಆದರೆ ಅವರ ವಿರುದ್ಧ ಭ್ರಷ್ಟಾಚಾರ, ಸ್ವಜನಪಕ್ಷಪಾತ, ರಾಜಿ ಹೊಂದಾಣಿಕೆಯ ರಾಜಕೀಯ ಮುಂತಾದ ಆರೋಪಗಳಿವೆ. ಈ ಕುರಿತು ಏನೆನ್ನುವಿರಿ?

ಆಗಲೇ ಹೇಳಿದಂತೆ ಮಾಯಾವತಿಯ ಗೆಲುವನ್ನು ನಾನು ದಲಿತರ ಗೆಲುವು ಎಂದು ಭಾವಿಸುವುದಿಲ್ಲ. ಅವರ ವಿರುದ್ಧದ ಎಲ್ಲ ಆರೋಪಗಳೂ ನನ್ನ ಮಾತನ್ನು ಪುಷ್ಟೀಕರಿಸುತ್ತವೆ. ಆರೋಪಿಸಲಾದ ನಡವಳಿಕೆಗಳು ನಮ್ಮ ವ್ಯವಸ್ಥೆಯ ಅವಿಭಾಜ್ಯ ಅಂಗಗಳು ಮತ್ತು ಅದನ್ನು ಹಾಗೇ ನೋಡಬೇಕು. ಮಾಯಾವತಿಯೇನು ಇದ್ಯಾವುದಕ್ಕೂ ಹೊರತಲ್ಲ, ಅಪವಾದವಲ್ಲ. ಉಳಿದವರು ಆಡುವ ಎಲ್ಲ ಆಟಗಳನ್ನು ಆಕೆಯೂ ಆಡುತ್ತಿದ್ದಾಳೆ. ಉಳಿದವರು ಮಾಡುತ್ತಿರುವುದನ್ನೇ ತಾನೂ ಮಾಡುತ್ತಿದ್ದಾಳೆ. ಒಂದೇ ವ್ಯತ್ಯಾಸವೆಂದರೆ ಆಕೆ ಅದನ್ನು ಉಳಿದವರಿಗಿಂತ ಚೆನ್ನಾಗಿ ಮಾಡುತ್ತಿದ್ದಾಳೆ ಅಷ್ಟೇ.

ಮಾಯಾವತಿಯ ಸರ್ವಜನ ಸಮಾಜದ ಬಗೆಗೆ ಏನು ಹೇಳುವಿರಿ? ಅದು ಜಾತಿವಿನಾಶ ಚಳವಳಿಯ ಕಡೆಗೆ ಒಂದು ಒಳ್ಳೆಯ ಪ್ರಯತ್ನ ಎನ್ನಬಹುದೆ?

ಸರ್ವಜನ ಎಂದರೇನು? ಆಳುವ ವರ್ಗದ ಪಕ್ಷ ಮಾತ್ರ ತಾನು ಎಲ್ಲ ಜನರ ಹಿತಾಸಕ್ತಿ ಕಾಪಾಡುತ್ತೇನೆನ್ನುವ ಮಾತಾಡಬಹುದು. ಹಾಗೆ ಹೇಳುತ್ತ ಬಿಎಸ್‌ಪಿ ಬಹುಜನರ ಪಕ್ಷ ಎಂಬ ತನ್ನ ಮುಖವಾಡವನ್ನು ಕಳಚಿಹಾಕಿದೆ. 'ಸರ್ವಜನ' ಪರಿಕಲ್ಪನೆ ಚುನಾವಣಾ ರಾಜಕೀಯದ ಒಂದು ತಂತ್ರವಾಗಿರುವಾಗ ಜಾತಿವಿನಾಶ ಚಳವಳಿಯ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ.

ಮಂಡಲ್ ಅವಧಿಯ ವೇಳೆ ಮತ್ತು ನಂತರ ಸವರ್ಣೀಯ ಹಿಂದುತ್ವ ಮತ್ತೆ ಚಿಗುರುತ್ತಿರುವುದನ್ನು ಕಂಡೆವು. ಪರಿಸ್ಥಿತಿ ಏನಾದರೂ ಬದಲಾಯಿತೆ? ಸಂಘ ಪರಿವಾರವಾಗಲೀ, ಹಿಂದೂ ಮೂಲಭೂತವಾದಿಗಳಾಗಲೀ ಏನಾದರೂ ಹಿನ್ನಡೆ ಅನುಭವಿಸಿದರು ಎಂದು ನಿಮಗನಿಸುತ್ತದೆಯೆ?

ಮಂಡಲ್ ಎನ್ನುವುದು ಮಧ್ಯಮ ಜಾತಿಗಳು ಎಚ್ಚೆತ್ತುಕೊಂಡ ಹಾಗೂ ಚುನಾವಣಾ ರಾಜಕೀಯದಲ್ಲಿ ಸ್ಪರ್ಧೆ ಹೆಚ್ಚಾಗಿದ್ದರ ಸಂಕೇತ. ಸಾಮಾಜಿಕವಾಗಿ ಅದು ಹಿಮ್ಮುಖ ಚಲನೆ. ಅದು ಮೇಲ್ಜಾತಿಗಳು ಮಂಡಲ್ ವಿರುದ್ಧ ಮಾತ್ರವಲ್ಲ, ಇಡೀ ಮೀಸಲಾತಿ ವ್ಯವಸ್ಥೆಯ ಕುರಿತೇ ವಿರೋಧ ತಾಳುವಂತೆ ಮಾಡಿತು. ಮೀಸಲಾತಿಯ ಜೊತೆಗೇ ದಲಿತರನ್ನು ಗುರುತಿಸಿ ಅದು ವೈರುಧ್ಯದ ಅಸಹ್ಯ ಕೊನೆ ಮುಟ್ಟಿತು. ದಲಿತರು ಮಂಡಲ್ ಪರವಾಗಿ ಬೀದಿಗಿಳಿದು ಅದರ ಫಲಾನುಭವಿಗಳಾಗಿದ್ದ ಹಿಂದುಳಿದ ಜಾತಿಗಳಿಂದ ಹೊಡೆತ ತಿಂದರು. ಹಿಂದುತ್ವದ ಶಕ್ತಿಗಳಿಗೆ ಮೇಲ್ಜಾತಿ ಬೆಂಬಲ ಗಳಿಸಿಕೊಳ್ಳಲು ಇದು ಸಹಾಯ ಮಾಡಿತು. ಬಿಜೆಪಿಯನ್ನು ಅಧಿಕಾರಕ್ಕೆ ತಂದ ಅಡ್ವಾಣಿಯ ರಥಯಾತ್ರೆಯೂ ಮಂಡಲ್ ಘಟನೆಗಳಿಂದ ಸಹಾಯ ಪಡೆದಿದೆ.

ಇವತ್ತು ಪರಿಸ್ಥಿತಿ ಹಾಗೇ ಇದೆ ಎಂದು ನಾನು ಭಾವಿಸುವುದಿಲ್ಲ. ಹಿಂದುತ್ವವಾದವು ತನ್ನ ಬಲ ಕಳೆದುಕೊಳ್ಳುತ್ತಿದೆ. ಸಂಘ ಪರಿವಾರವು ದೀರ್ಘಾವಧಿ ಬಲತುಂಬುವ ಯಾವುದಾದರೂ ವಿವಾದ ಇದೆಯೇ ಎಂದು ಹುಡುಕುತ್ತಿದೆ, ಆದರೆ ಸಫಲವಾಗಿಲ್ಲ. ಇತ್ತೀಚಿನ ಅಯೋಧ್ಯಾ ತೀರ್ಪಿಗೆ ಬಂದ ಪ್ರತಿಕ್ರಿಯೆಯಲ್ಲೇ ಜನ ಹಿಂದುತ್ವದ ಕುರಿತು ಆಸಕ್ತಿ ಕಳೆದುಕೊಂಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಸಂಘ ಪರಿವಾರ ಆ ವಿಷಯವನ್ನು ಕೈಬಿಟ್ಟಿದೆ ಎಂದಲ್ಲ, ಆದರೆ ರಾಮಮಂದಿರ ನಿರ್ಮಾಣವೊಂದನ್ನೇ ತನ್ನ ರಣತಂತ್ರವನ್ನಾಗಿಟ್ಟುಕೊಳ್ಳಲು ಅದಕ್ಕೂ ಧೈರ್ಯವಿಲ್ಲ. ಭವಿಷ್ಯದಲ್ಲಿ ಒಂದು ಕಾಲಕ್ಕೆ ಬೇಕಾಗಬಹುದೆಂದು ಅದನ್ನು ಹಾಗೇ ಇಟ್ಟುಕೊಂಡಿದೆ. ಸೂಕ್ತ ವಿವಾದದ ಬೆಂಬಲವಿಲ್ಲದೇ ಸಂಘಪರಿವಾರದ ಬಲ ಕುಂದಿದ್ದರೂ ಉಳಿದಂತೆ ರಾಜಕಾರಣದ ಸ್ಥಿತಿಯೂ ಇವತ್ತು ಮೊದಲಿಗಿಂತ ಬಹಳ ಬದಲಾಗಿದೆ. ಜನ ವಿವಾದಗಳಿಗೆ ಗಮನವನ್ನೇ ಹರಿಸುವುದಿಲ್ಲ. ತಮ್ಮ ಕಷ್ಟಗಳಿಂದ ಹೊರಬರುವ ಒಂದು ಪರ್ಯಾಯವನ್ನಷ್ಟೇ ಅವರು ಕೇಳುತ್ತಾರೆ. ಇಂದಿಗೂ ರಾಷ್ಟ್ರೀಯವಾಗಿ ಕಾಂಗ್ರೆಸ್‌ಗೆ ಬಿಜೆಪಿ ಮಾತ್ರ ಪರ್ಯಾಯವಾಗಿ ಕಾಣುತ್ತಿದೆ. ಜನರಿಗೆ ಅಷ್ಟೇ ಸಾಕಾಗುತ್ತದೆ.



ದಲಿತ, ಮಹಿಳೆ ಮತ್ತು ಕಾರ್ಮಿಕರ ವಿಷಯಗಳು ಒಂದರೊಡನೊಂದು ಸಂಬಂಧ ಹೊಂದಿವೆ. ಅವು ಮೂರೂ ದಮನಿತ ಎಂಬ ಒಂದೇ ಬ್ಯಾನರಿನಡಿ ಬರುತ್ತವೆ. ಆದರೆ ಕೆಲವರು ಇವನ್ನು ಬೇರೆಬೇರೆ ವಿಷಯಗಳೆಂದು ಪರಿಗಣಿಸುತ್ತಾರೆ. ದಲಿತ ಪ್ರಶ್ನೆಯನ್ನು ಸಾಮಾನ್ಯ ಗುರಿಯಿಂದ ಬೇರ್ಪಡಿಸುವುದು ಸರಿಯೆ?

ನನ್ನ ಅಭಿಪ್ರಾಯದಂತೆ ಪ್ರಗತಿಪರ ಗುಂಪುಗಳು ಉಳಿದ ವಿವಾದಗಳ ಜೊತೆಗೇ ಜಾತಿ ಪ್ರಶ್ನೆಯನ್ನೂ ಎತ್ತುವ ಉದ್ದೇಶವೆಂದರೆ ಅದಕ್ಕೆ ವಿಶೇಷವಾಗಿ ಬೇರೆ ಗಮನ ನೀಡಬೇಕಿಲ್ಲವೆನ್ನುವುದೇ ಆಗಿದೆ. ಲಿಂಗಭಿನ್ನತೆ, ಆದಿವಾಸಿ ಸಮಸ್ಯೆ, ರಾಷ್ಟ್ರೀಯತೆ, ಭಾಷಾ ಸಮಸ್ಯೆ ಇವೆಲ್ಲವೂ ಸಮಸ್ಯೆಗಳೇ. ಆದರೆ ಅವುಗಳನ್ನು ಜಾತಿಯ ಜೊತೆ ಸೇರಿಸುವುದೆಂದರೆ ಉದ್ದೇಶಪೂರ್ವಕವಾಗಿ ಜಾತಿಯನ್ನು ನಗಣ್ಯಗೊಳಿಸಿದಂತಾಗುತ್ತದೆ. ಹಲವು ವಿವಾದಗಳಿದ್ದರೂ ಅವುಗಳ ನಡುವೆ ಅತಿ ಹೆಚ್ಚು ವಿರೋಧಾಭಾಸ ಹೊಂದಿದ, ಪರಿಹಾರ ಬಯಸುವ ಒಂದು ಮುಖ್ಯವಾದ ಇಷ್ಯೂ ಇರಬೇಕು. ಹಲವಾರು ವಿವಾದಗಳ ಜೊತೆಗೆ ಜಾತಿಯನ್ನೂ ತಂದರೆ ಅದರರ್ಥ ಜಾತಿಸಮಸ್ಯೆ ಪರಿಗಣಿಸಲು ಅವರು ಸಿದ್ಧರಿಲ್ಲ ಎಂದು. ಅದು ದಲಿತ ವಿರೋಧಿ ಎನ್ನಬೇಕಾಗುತ್ತದೆ. ಪ್ರಗತಿಪರ ಎಂದುಕೊಂಡವರ ಇಂಥ ಮುಖವಾಡಗಳನ್ನು ಬಯಲುಮಾಡಬೇಕಾಗಿದೆ.

ಎಲ್ಲ ಸಮಸ್ಯೆಗಳೂ ಒಂದಕ್ಕೊಂದು ಸಂಬಂಧಿಸಿದವು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಅವುಗಳನ್ನು ಆದ್ಯತೆಯ ಮೇರೆಗೆ ಪಟ್ಟಿಮಾಡಿಕೊಳ್ಳಬೇಕು. ಎಲ್ಲವನ್ನೂ ಒಟ್ಟು ಸೇರಿಸಿದರೆ ಕೊನೆಗೆ ಏನೂ ಮಾಡಲಾಗುವುದಿಲ್ಲ.

ಕಮ್ಯುನಿಸ್ಟರು ಶಕ್ತಿಯುತವಾದ ಸಿದ್ಧಾಂತ ಹೊಂದಿದ್ದರು. ಸಾಮಾಜಿಕ ವಿಶ್ಲೇಷಣೆಗೆ ಅತ್ಯಾಧುನಿಕ ಉಪಕರಣವಿದ್ದರೂ ಅದನ್ನು ಬಳಸಿಕೊಳ್ಳುವಲ್ಲಿ ಹೀನಾಯವಾಗಿ ಸೋತರು. ನಮ್ಮ ಮೊದಲ ಕಮ್ಯುನಿಸ್ಟರ ಬ್ರಾಹ್ಮಣ್ಯದ ಧೋರಣೆ ಇದಕ್ಕೆ ಕಾರಣವಾಗಿರಬಹುದು. ಅದು ಬರೆದ ಅಕ್ಷರಗಳನ್ನು ಯಥಾವತ್ತಾಗಿ ನಂಬುವಂಥದ್ದು. ಅಕ್ಷರಗಳಲ್ಲಿ ವರ್ಣಿಸಿದ್ದಕ್ಕಿಂತ ಭಾರತದ ಸಾಮಾಜಿಕ ವಾಸ್ತವ ಬೇರೆಯೇ ಆಗಿದೆಯೆನ್ನುವುದನ್ನು ಗುರುತಿಸುವಲ್ಲಿ ಅವರು ವಿಫಲವಾದರು.

ಜಾಗತೀಕರಣಕ್ಕೆ ಮುಖ್ಯವಾಗಿ ಬಲಿಯಾಗಿದ್ದು ದಲಿತರು ಮತ್ತು ಆದಿವಾಸಿಗಳು. ಆದರೆ ದಲಿತ ಬುದ್ಧಿಜೀವಿಗಳು ಈ ಕುರಿತ ಹೋರಾಟದಲ್ಲಿ ಮೌನ ವಹಿಸಿದ್ದಾರಲ್ಲ? ಅದು ಸರಿಯೆ? ಈ ಉದಾಸೀನಕ್ಕೆ ನೀವು ಏನೆನ್ನುತ್ತೀರಿ?

ಓಹ್, ಇಲ್ಲ. ದಲಿತ ಬುದ್ಧಿಜೀವಿಗಳು ಜಾಗತೀಕರಣದ ಕುರಿತು ಉದಾಸೀನ ತಾಳಿರುವುದಷ್ಟೇ ಅಲ್ಲ, ಅವರು ಅದರ ಬೆಂಬಲಿಗರು ಕೂಡಾ ಹೌದು. ಇದರ ಹಿಂದಿನ ಅವರ ಪ್ರೇರಣೆ ಯಾವುದೆಂದು ನನಗಂತೂ ಅರ್ಥವಾಗಿಲ್ಲ. ಜಾಗತೀಕರಣ ಉಳ್ಳವರ ಪರವಾಗಿದ್ದು ಎಂದು ಅರ್ಥ ಮಾಡಿಕೊಳ್ಳಲು ಹೆಚ್ಚು ಬುದ್ಧಿವಂತಿಕೆ ಬೇಕಾಗಿಲ್ಲ. ಸೈದ್ಧಾಂತಿಕವಾಗಿ ಇದು ಸ್ಪೆನ್ಸರ್‌ನ ಸಾಮಾಜಿಕ ಡಾರ್ವಿನಿಸಂನ ತಪ್ಪು ಗ್ರಹಿಕೆಯಾಗಿದ್ದು, ಅಷ್ಟು ಅರ್ಥವಾದರೆ ಶ್ರೇಣೀಕೃತ ವ್ಯವಸ್ಥೆಯ ಕೆಳಗಿದ್ದಷ್ಟೂ ಅದು ನಿಮ್ಮನ್ನು ಹೆಚ್ಚು ದುಷ್ಟವಾಗಿ ನಡೆಸಿಕೊಳ್ಳುತ್ತದೆ ಎನ್ನುವುದು ಅರ್ಥವಾಗುತ್ತದೆ. ಸಾಮ್ರಾಜ್ಯಶಾಹಿ ವಿರೋಧವನ್ನು ದಲಿತ ಬುದ್ಧಿಜೀವಿಗಳು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಅದು ಅವರ ಶಬ್ದಕೋಶದಲ್ಲೇ ಇಲ್ಲ. ಆದರೆ ಕನಿಷ್ಠ ಜಾತೀಯತೆ ಎಂಬ ತಮ್ಮ ಪವಿತ್ರ ಭ್ರಾಂತಿಗೆ ಅದರಿಂದ ಏನಾಗುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಜಾತಿದೌರ್ಜನ್ಯವನ್ನು ಪ್ರಾತಿನಿಧಿಕವಾಗಿ ತೆಗೆದುಕೊಂಡು ಜಾತೀಯತೆಗೆ ಈಗೇನಾಗುತ್ತಿದೆ ಎಂದು ನೋಡಿದರೆ ಕಳೆದ ಎರಡು ದಶಕಗಳಿಂದ ಜಾತೀಯತೆ ಹೆಚ್ಚುತ್ತಿರುವುದು ಕಂಡುಬರುತ್ತದೆ. ಬಹುಪಾಲು ದಲಿತರ ಆರ್ಥಿಕ ಸ್ಥಿತಿ ರಸಾತಳ ತಲುಪಿದೆ. ಆದರೆ ಈ ಸ್ವಘೋಷಿತ ಪ್ರಗತಿಪರರು ದಲಿತರು ಜಾಗತೀಕರಣದಿಂದ ಲಾಭ ಪಡೆದಿದ್ದಾರೆಂದು ಸುಳ್ಳುಹೇಳಿ ನಂಬಿಸುತ್ತಿದ್ದಾರೆ. ನನಗೆ ಈ ಗುಂಪಿನ ಬೌದ್ಧಿಕ ದಿವಾಳಿತನವಷ್ಟೇ ಅಲ್ಲ, ಬೌದ್ಧಿಕ ಅಪ್ರಾಮಾಣಿಕತೆ ನೋವುಂಟುಮಾಡುತ್ತದೆ.

ಮತಾಂತರ ಜಾತಿನಾಶಕ್ಕೆ ಒಂದು ದಾರಿ ಎಂದು ಕೆಲವರು ಪ್ರತಿಪಾದಿಸುತ್ತಾರೆ. ಆದರೆ ಮತಾಂತರಗೊಂಡ ದಲಿತರು ಹೊಸ ಧರ್ಮದಲ್ಲೂ ದಲಿತರಾಗೇ ಉಳಿದರು. ಈ ಮತಾಂತರ ವಾದಕ್ಕೆ ನೀವೇನು ಹೇಳುತ್ತೀರಿ? ಅಂಬೇಡ್ಕರ್ ನಡೆ ತಪ್ಪು ಎನ್ನುತ್ತೀರಾ?

ಇತಿಹಾಸದುದ್ದಕ್ಕೂ ಮತಾಂತರಗಳು ನಡೆಯುತ್ತಲೇ ಬಂದಿವೆ. ಆದರೆ ಅದು ದಲಿತರ ಸ್ಥಿತಿಗತಿಯನ್ನೇನೂ ಸುಧಾರಿಸಲಿಲ್ಲ, ಬದಲಿಸಲಿಲ್ಲ. ಮತಾಂತರದ ಒಂದೇ ಒಂದು ಲಾಭ ಎಂದರೆ ಮತ್ತಿನ್ಯಾವ ಧರ್ಮವೂ ಹಿಂದೂ ಧರ್ಮದಷ್ಟು ಜಾತಿ ತಾರತಮ್ಯ ತೋರಿಸುವುದಿಲ್ಲ. ಅನುಭವದಿಂದ ಹೇಳುವುದಾದರೆ ಅದರಿಂದ ಹೆಚ್ಚು ಬದಲಾವಣೆ ಉಂಟಾಗಲಿಲ್ಲ. ಮುಸ್ಲಿಮರಲ್ಲಿ ಜಾತಿಗಳಿವೆ. ಕ್ರಿಶ್ಚಿಯನ್ನರಲ್ಲಂತೂ ಅದಕ್ಕಿಂತ ಹೀನ ಜಾತಿಪದ್ಧತಿಯಿದೆ. ಜಾತಿಗೆ ಬಂದರೆ ಸಿಖ್ಖರು ಹಿಂದೂಗಳಿಗಿಂತ ಬೇರೆಯಲ್ಲ. ಇಲ್ಲ. ಮತಾಂತರ ದಲಿತರ ಜಾತಿಸಮಸ್ಯೆಗೆ ಉತ್ತರವಲ್ಲ. ಅದು ನಿಮ್ಮ ಪ್ರತಿಭಟನೆಯನ್ನು ಧ್ವನಿಸಬಹುದು ಅಷ್ಟೇ ಹೊರತು ಸಮಸ್ಯೆಗೆ ಪರಿಹಾರವಲ್ಲ.

ಅಂಬೇಡ್ಕರರ ಮತಾಂತರ ಕುರಿತ ನಿರ್ಧಾರಗಳು ವಿವಾದಾತೀತವಲ್ಲ. ಅವರು ಹಿಂದೂ ಶಾಸ್ತ್ರಪುರಾಣ ಗ್ರಂಥಗಳಿಂದಲೇ ಜಾತಿಗಳು ಹುಟ್ಟಿದ್ದೆಂದು ಸಕಾರಣವಾಗಿ ನಂಬಿದರು ಮತ್ತು ಆ ಗ್ರಂಥಗಳನ್ನು ನಾಶಮಾಡದ ಹೊರತು ಜಾತಿ ನಾಶವಾಗದೆಂದು ಭಾವಿಸಿದರು. ಆಗ ಮತಾಂತರ ಪರ್ಯಾಯವಾಗಿ ತೋರಿತು. 1935ರಲ್ಲಿ ಯೆವೋಲಾದಲ್ಲಿ 'ನಾನು ಹಿಂದೂವಾಗಿ ಸಾಯಲಾರೆ' ಎಂಬ ಐತಿಹಾಸಿಕ ಹೇಳಿಕೆ ನೀಡಿದ ಮೇಲೆ ಅವರ ಬೆಂಬಲಿಗರಲ್ಲಿ ಅಪಾರ ಗೊಂದಲ ಸೃಷ್ಟಿಸಿತು. ಅದರಿಂದ 1936ರಲ್ಲಿ ಮುಂಬಯಿಯಲ್ಲಿ ಒಂದು ದೊಡ್ಡ ಸಮಾವೇಶ ನಡೆಸಿ ಬೆಂಬಲಿಗರಿಗೆ ತಮ್ಮ ಆಲೋಚನೆಯ ಕುರಿತು ವಿವರಿಸಬೇಕಾಯ್ತು. ಮತಾಂತರಕ್ಕೆ ಅವರು ನೀಡಿದ ಕಾರಣಗಳಲ್ಲಿ ದಲಿತರು ಸವರ್ಣೀಯರಿಂದ ಐಹಿಕ ಬದುಕಿನಲ್ಲಿ ಎದುರಿಸುವ ತಾರತಮ್ಯ ಮತ್ತು ದೌರ್ಜನ್ಯಗಳಂತಹ ಕಷ್ಟಗಳ ಪರಿಹಾರವೇ ಮುಖ್ಯವಾಗಿತ್ತು. ಅವರ ಕಷ್ಟಗಳ ಹಿಂದಿನ ಮುಖ್ಯ ಕಾರಣ ಸಮುದಾಯದ ದೌರ್ಬಲ್ಯವೆಂದು ವಿಶ್ಲೇಷಿಸುತ್ತಾ ಅದರ ಪರಿಹಾರಾರ್ಥವಾಗಿ ಇಡೀ ಸಮುದಾಯವೇ ಈ ದೇಶದ ಮತ್ತೊಂದು ಧರ್ಮದವರೊಂದಿಗೆ ಐಕ್ಯವಾಗುವುದು ಒಳ್ಳೆಯದು ಎಂದು ಪ್ರತಿಪಾದಿಸಿದರು. ಎರಡು ದಶಕಗಳ ನಂತರ ಅವರು ಬೌದ್ಧಧರ್ಮಕ್ಕೆ ಮತಾಂತರಗೊಂಡಾಗ ಆ ಧರ್ಮಬಾಂಧವರು ಈ ದೇಶದಲ್ಲಿರಲೇ ಇಲ್ಲ. ಅದೇನೇ ಇರಲಿ, ಅಂಬೇಡ್ಕರ್ ಅವರ ಐತಿಹಾಸಿಕ ಮತಾಂತರ ಪ್ರಕ್ರಿಯೆಯನ್ನು ಹೇಗೇ ನೋಡಲಿ, ದಲಿತರು ಬೌದ್ಧಧರ್ಮ ಸ್ವೀಕರಿಸಿದ್ದರಿಂದ ಅವರ ಕಷ್ಟಗಳು ಕಡಿಮೆಯಾಗಲಿಲ್ಲ. ಅದಕ್ಕೆ ವಿರುದ್ಧವಾಗಿ ಅದನ್ನು ದಲಿತರ ಸಾಂಸ್ಕೃತಿಕ ವಿರೋಧ ಎಂದು ಬಿಂಬಿಸಲ್ಪಟ್ಟು ಸವರ್ಣೀಯ ಹಿಂದೂಗಳಿಂದ ಖೈರ್ಲಾಂಜಿಯಲ್ಲಿ ಆದಂತೆ ಹೆಚ್ಚೆಚ್ಚು ದೌರ್ಜನ್ಯಕ್ಕೊಳಗಾದರು.

ಇತ್ತೀಚೆಗೆ ಎಲ್ಲ ರೀತಿಯ ಪುನರುಜ್ಜೀವನ ಮತ್ತು ಧಾರ್ಮಿಕ ಮೂಲಭೂತವಾದ ಹೆಚ್ಚುತ್ತಿರುವುದಕ್ಕೆ ನಾವು ಸಾಕ್ಷಿಯಾಗಿದ್ದೇವೆ. ಮುಸ್ಲಿಂ ಮೂಲಭೂತವಾದಿಗಳು ಕೆಲವು ವಿಷಯದಲ್ಲಿ ಮುನ್ನೆಲೆಗೆ ಬರುತ್ತಿದ್ದಾರೆ. ನೀವೇನೆನ್ನುತ್ತೀರಿ?

ನನಗನಿಸುವ ಮಟ್ಟಿಗೆ ಇದು ನವ ಉದಾರವಾದದ ಒಂದು ಪ್ರತಿಫಲ. ಈ ಪಾಲಿಸಿಗಳು ಬಹುಸಂಖ್ಯಾತರಿಗೆ ಬಿಕ್ಕಟ್ಟು ತಂದೊಡ್ಡುತ್ತವೆ. ಮುಕ್ತಮಾರುಕಟ್ಟೆ ದೃಷ್ಟಿಕೋನವು ಅನಿಶ್ಚಿತತೆ ಮತ್ತು ಅಭದ್ರತೆಯ ಭಾವನೆಯನ್ನು ತರುತ್ತದೆ. ಆಗ ಅವರು ಗುಪ್ತಶಕ್ತಿಗಳಾದ ದೇವರು, ಧರ್ಮ, ಸ್ವಾಮಿಗಳನ್ನು ನಂಬತೊಡಗುತ್ತಾರೆ. ಪ್ರಪಂಚಾದ್ಯಂತ ದೇವಮಾನವರು ಹೆಚ್ಚಾಗುತ್ತಿರುವುದಕ್ಕೆ, ಧಾರ್ಮಿಕ ಮೂಲಭೂತವಾದ ಬೆಳೆಯುತ್ತಿರುವುದಕ್ಕೆ ಒಂದು ಕಾರಣ ಇದು. ಮತ್ತೊಂದು ವಿವರಣೆಯೆಂದರೆ ಅಂತರರಾಷ್ಟ್ರೀಯ ಬಂಡವಾಳವು ಜನರ ಗಮನವನ್ನು ಮುಖ್ಯ ಸಮಸ್ಯೆಗಳಿಂದ ಬೇರೆಡೆಗೆ ಸೆಳೆಯಲು ಇಂಥವನ್ನು ಪ್ರೋತ್ಸಾಹಿಸುತ್ತದೆ. ಅಲ್ಲದೇ ಆಡಳಿತದ ನೆವದಲ್ಲಿ ಸುರಕ್ಷತೆಯ ನೆಪದಲ್ಲಿ ಜನರ ಮೇಲೆ ಪ್ರಭುತ್ವದ ಹಿಡಿತವನ್ನು ಬಲಗೊಳಿಸಲು ನೋಡುತ್ತದೆ. ಕಳೆದೆರೆಡು ದಶಕಗಳಿಂದ ಭದ್ರತೆಯ ನೆವದಲ್ಲಿ ಜನರನ್ನು ಸುತ್ತುವರೆದಿರುವ ಕಾಯಿಲೆಯು ಅವರ ಪ್ರಜಾಸತ್ತಾತ್ಮಕ ಅವಕಾಶವನ್ನೇ ಕಸಿದುಕೊಂಡಿದೆ.

ಕಾಂಚಾ ಐಲಯ್ಯಾ ಅವರ ಬಫೆಲೋ ನ್ಯಾಷನಾಲಿಸಂ ಬಗೆಗೆ ನಿಮ್ಮ ಅಭಿಪ್ರಾಯವೇನು? ನಿಜವಾಗಿ ಕೆಲವು ಬುದ್ಧಿಜೀವಿಗಳು ಜಾತಿಪ್ರಶ್ನೆಯನ್ನು ದಲಿತ ಮೂಲಭೂತವಾದವನ್ನಾಗಿ ಬೆಳೆಸುತ್ತಿದ್ದಾರೆ ಎಂದು ನಿಮಗನಿಸುತ್ತದೆಯೆ?

ಕಾಂಚಾ ಐಲಯ್ಯಾ ಅವರ ದಲಿತ ಬಹುಜನ ಎಂಬ ಫ್ರೇಸ್ ಅನ್ನು ನಾನು ಒಪ್ಪುವುದಿಲ್ಲ. ಅಥವಾ ಅವರ ಸಂಸ್ಕೃತಿಯು ಮೇಲ್ಜಾತಿಗಳ ಸಂಸ್ಕೃತಿಗಿಂತ ಉತ್ಕೃಷ್ಟ ಎಂದೂ ನಾನು ಭಾವಿಸುವುದಿಲ್ಲ. ಅದು ಹಾಗಿಲ್ಲ. ಜಾತಿಗೆ ಸಂಬಂಧಿಸಿದ ಅಥವಾ ಜಾತಿ ಅಹಂಕಾರ ಬೆಳೆಸುವ ಯಾವುದನ್ನೂ ನಾನು ಅನುಸರಿಸುವುದಿಲ್ಲ, ಅದು ದಲಿತರಿಂದ ದಲಿತರಿಗಾಗಿಯೇ ಇದ್ದರೂ ಸಹಾ.

ಬರಲಿರುವ ನಿಮ್ಮ ಪುಸ್ತಕಗಳು ಯಾವುವು?

ನಾನು ಪುಸ್ತಕಗಳನ್ನು ಯೋಜಿಸಿ ಬರೆಯುವುದಿಲ್ಲ, ಅವು ಆಗುತ್ತವೆ. ನಾನು ಬರೆದಿದ್ದೆಲ್ಲವೂ ವರ್ತಮಾನದ ಕೆಲವು ಸಮಸ್ಯೆಗಳ ಕುರಿತಾಗಿಯೇ ಇದೆ. ನನ್ನ ವೃತ್ತಿಯು ಪುಸ್ತಕ ಬರೆಯುವುದರ ಜೊತೆ ಹೊಂದಿಕೊಳ್ಳುವುದಿಲ್ಲ. ಆದರೆ ಜನರೆಡೆಗಿನ ನನ್ನ ಬದ್ಧತೆಯ ದೆಸೆಯಿಂದ ಸ್ವಲ್ಪ ಸಮಯವನ್ನು ಹೊಂದಿಸಿಕೊಳ್ಳಲೇಬೇಕಾಗಿದೆ. ಇತ್ತೀಚೆಗೆ ಝೆಡ್ ಬುಕ್ಸ್ ನನ್ನ 'ಪರ್ಸಿಸ್ಟೆನ್ಸ್ ಆಫ್ ಕ್ಯಾಸ್ಟ್' ತಂದರು. ಅರ್ಧ ಬರೆದ ಕೆಲವು ಬರಹಗಳು ಈ ವರ್ಷ ಮುಗಿಯಬಹುದು. ಅವೆಂದರೆ: 'ಸೈನ್ಸ್ ಅಂಡ್ ಟೆಕ್ನಾಲಜಿ ಇನ್ ಏನ್ಷಿಯೆಂಟ್ ಇಂಡಿಯಾ', 'ಅಂಡರ್‌ಸ್ಟಾಂಡಿಂಗ್ ಅಂಬೇಡ್ಕರ್', 'ಕ್ಯಾಸ್ಟ್ ಅಂಡ್ ಮಾಡರ್ನಿಟಿ' ಇತ್ಯಾದಿ.

ನಿಮ್ಮ ಬದುಕು, ಕುಟುಂಬದ ಬಗೆಗೆ..

ಮುಂಬಯಿಯಲ್ಲಿ ಹೆಂಡತಿ ರಮಾ ಮತ್ತು ತಾಯ್ತಂದೆಯರ ಜೊತೆಗೆ ವಾಸಿಸುತ್ತೇನೆ. ಇಬ್ಬರು ಹೆಣ್ಣು ಮಕ್ಕಳು. ಪ್ರಾಚಿ ಮುಂಬಯಿಯ ಜಿಎಸ್ ಮೆಡಿಕಲ್ ಕಾಲೇಜಿನಲ್ಲಿ ಎಂ.ಡಿ. ಮಾಡುತ್ತಿದ್ದಾಳೆ. ರಶ್ಮಿ ಅಮೆರಿಕದ ವರ್ಜೀನಿಯಾ ವಿಶ್ವವಿದ್ಯಾಲಯದಲ್ಲಿ ಪದವಿ ಓದುತ್ತಿದ್ದಾಳೆ. ಅವಳು ಉತ್ತಮ ಟೆನಿಸ್ ಆಟಗಾರ್ತಿ ಕೂಡಾ ಹೌದು. ■

ನೋ ಟೈಟಲ್ ಪ್ಲೀಸ್...

ಭಾರತಕ್ಕೆ ಅಂತೂ ಇಂತೂ ಒಲಿಂಪಿಕ್ಸ್‌ನಲ್ಲೊಂದು ಬೆಳ್ಳಿ ಪದಕ ದೊರೆಯಿತು. ಬೆಳ್ಳಿ ದೊರಕಿಸಿಕೊಟ್ಟ ಆಟ ನೋಡಲು ಮಾತ್ರ ಬಂಡೆಕಲ್ಲಿನಂತಹ ಮನಸ್ಸಿರಬೇಕು. ಏಕೆಂದರೆ ಎದುರಿರುವ ಮನುಷ್ಯನ ದುರ್ಬಲ, ಅಸಹಾಯಕ ಕ್ಷಣಗಳನ್ನು ಛಕ್ಕನೆ ಗುರುತಿಸಿ ಶರಣಾಗುವಂತೆ ಹಣಿಯುವ ಕ್ರೌರ್ಯವನ್ನು ಆಟ ಎಂದು ಹೇಗೆ ಕರೆಯುವುದು? ಭಾರತೀಯರು ಉಳಿದ ಆಟಗಳಿಗಿಂತ ಯುದ್ಧವಿದ್ಯೆಯಲ್ಲೇ ಪದಕ ಹೆಚ್ಚು ಗಳಿಸಿದರು ಎನ್ನುವುದು ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ ಕಾಕತಾಳೀಯ ಇರಲಿಕ್ಕಿಲ್ಲ ಎನಿಸುತ್ತದೆ.

ಎದುರಿರುವ ಜೀವದ ಮಾನ, ಪ್ರಾಣ ಹಾನಿಯನ್ನೂ ಲೆಕ್ಕಿಸದೇ ತೊಡಗಿಕೊಳ್ಳುವ ಮಾನವ ಕ್ರೌರ್ಯದ ಮೂಲ ಯಾವುದು? ಮನುಷ್ಯ ಹುಟ್ಟಾ ಕ್ರೂರಿ ಮತ್ತು ಸ್ವಾರ್ಥಿ; ಮೆಟ್ಟಿದಷ್ಟೂ ಹೆಡೆಯೆತ್ತಿ ನಿಲ್ಲುವ ಈ ಮೂಲಗುಣಗಳನ್ನು ಪಳಗಿಸಿ ಅವನು ಬೆಳೆಸಿಕೊಂಡ ಗುಣ ಮಾನವೀಯತೆ ಎಂದು ಅರ್ಥೈಸಿ ಸುಮ್ಮನಾಗಲು ಸಾಧ್ಯವಾಗುತ್ತಿಲ್ಲ. ತತ್‌ಕ್ಷಣದ ಪರಿಣಾಮ ಮತ್ತು ತೀರ್ಪು ನೀಡುವ ಹಿಂಸೆ ಮತ್ತು ಅದನ್ನು ಪ್ರಮಾಣೀಕರಿಸುವ ಕ್ರೌರ್ಯದ ಹಲವು ಮುಖಗಳು ಕಣ್ಣೆದುರು ಸುಳಿಯುತ್ತಿವೆ. ಬೇಟೆಯಾಡಿ ವಿಜಯೋತ್ಸವ ಆಚರಿಸುವುದರಿಂದ ಹಿಡಿದು ತನ್ನ ಸೇವಕರು ಕಾದಾಡಿ ರಕ್ತ ಸುರಿಸುವುದನ್ನೇ ಮನರಂಜನೆಯ ಆಟವನ್ನಾಗಿಸುವವರೆಗೆ; ಎದುರಾಳಿಯ ಕಿವಿ ಕಚ್ಚಿ, ನೆಲಕ್ಕೆ ಕೆಡವಿದವ ಪದಕ ಗೆಲ್ಲುವಂತಹ ಆಟ ಸೃಷ್ಟಿಸುವವರೆಗೆ; ಲಾಠಿ, ಬಂದೂಕು, ಬಾಂಬುಗಳು ಕಾನೂನುಬದ್ಧ ಸಮ್ಮತಿ ಹೊಂದುವವರೆಗೆ; ಮನೆತನದ ಮರ್ಯಾದೆಗಾಗಿ ಕಟ್ಟಳೆ ಉಲ್ಲಂಘಿಸಿದ ಮಕ್ಕಳನ್ನೇ ಕೊಲ್ಲುವವರೆಗೆ ಹಿಂಸೆಯ ಜಾಡು ಎಲ್ಲೆಲ್ಲೂ ಕಾಣಿಸುತ್ತದೆ. ಹಿಂಸೆಯನ್ನು ವೈಭವೀಕರಿಸುವುದರ ಮೂಲ ಯಾವುದು? ಅದು ಒಪ್ಪಿತವಾದದ್ದು ಹೇಗೆ? ಹಿಂಸೆಯ ಸಾರ್ವಜನಿಕ ಸಮ್ಮತಿಗೆ ಯುದ್ಧ, ದೇಶಪ್ರೇಮ, ರಾಷ್ಟ್ರೀಯತೆ, ಸಮಗ್ರತೆ, ಸಹಗಮನ, ವೀರಮರಣ, ಕುಲಗೌರವ ಎಂಬಿತ್ಯಾದಿ ವೈಭವಯುತ ಕಲ್ಪನೆಗಳು ಚಾಲ್ತಿಗೆ ಬಂದವೇ?

ಹಿಂಸೆ ನೀಡಿ ಭಯಗೊಳಿಸಿ ದಾರಿಗೆ ತರುವುದು ಲಾಗಾಯ್ತಿನಿಂದ ಪಾಲಿಸಿಕೊಂಡು ಬಂದಿರುವ ಶಿಕ್ಷಾ ವಿಧಾನ. ಅದರಲ್ಲೂ ಹೆಣ್ಣಿನ ಮೇಲಿನ ಹಿಂಸೆ ಅನೇಕ ರೂಪ, ಉದ್ದೇಶಗಳನ್ನು ಪಡೆದಿದೆ. ಯುದ್ಧವೋ, ಶಾಂತಿಯೋ; ಗೆಲುವೋ, ಸೋಲೋ; ಪೊಲೀಸ್–ಸೇನೆಯೋ ಅಥವಾ ಹೋರಾಡುವ ಗುಂಪೋ; ಅಂತೂ ಜೀವಹಿಂಸೆಯಾದಾಗಲೆಲ್ಲ ಮಹಿಳೆಯರ ಪ್ರಾಣ–ಮಾನ ಆಹುತಿಯಾಗುತ್ತದೆ. ಇದು ಒಂದು ತೆರನ ಹಿಂಸೆಯಾದರೆ, ಕಾನೂನು ಚೌಕಟ್ಟಿಗೇ ಸಿಗದ ಕೌಟುಂಬಿಕ ಹಿಂಸೆ ಸಾರ್ವತ್ರಿಕ ಒಪ್ಪಿಗೆ ಪಡೆದಿದೆ. ಅಮ್ಮ ಮಗುವಿಗೊಂದು ಹೊಡೆತ ಕೊಡುವಷ್ಟು ಅಥವಾ ಅದಕ್ಕಿಂತಲೂ ಸಹಜ ಗಂಡ ತನ್ನ ಹೆಂಡತಿಯನ್ನು ಹೊಡೆಯುವುದು ಎಂದು ಭಾವಿಸಲಾಗಿದೆ. ಇಂಥ ಹಿಂಸಾ ತಾತ್ವಿಕತೆಯನ್ನು ನಂಬಿದ ಸಮಾಜದಲ್ಲಿ ಧರ್ಮ–ಸಂಸ್ಕೃತಿಗಳ ರಕ್ಷಕರು ಮನ್ನಣೆ ಪಡೆದರೆ ಮಂಗಳೂರಿನಂಥ ಪ್ರಕರಣಗಳು ಸಂಭವಿಸುತ್ತವೆ. ಗೌಹಾತಿಯ ಮಾನಭಂಗ ದಿನನಿತ್ಯದ ಸುದ್ದಿಯಾಗಿಬಿಡುತ್ತದೆ.

ತವರಿನಿಂದ ಬರುವಾಗ ಧನಕನಕ ಹೊತ್ತು ತರಲಿಲ್ಲವೆಂದು ಪ್ರತಿವರ್ಷ ಸಾವಿರಾರು ಹೆಣ್ಣು ಮಕ್ಕಳನ್ನು ಜೀವಂತ ಸುಡುವ ದೇಶದಲ್ಲಿ ಹೆಣ್ಣಿನ ಮಾನಭಂಗ ದೊಡ್ಡ ಕ್ರೈಂ ಎನಿಸುವುದಿಲ್ಲ. ಆದರೆ ಮಾನಹಾನಿ ಜೀವಹಾನಿಗಿಂತಲೂ ವಿಕೃತ. ಇತ್ತೀಚೆಗೆ ದಿಗಿಲು ಹುಟ್ಟಿಸಿದ ಅಂಥ ಎರಡು ಮಾನಭಂಗ ಪ್ರಯತ್ನಗಳು ತಮ್ಮ ವಿಲಕ್ಷಣತೆಯಿಂದ ಮಾನವ ಕ್ರೌರ್ಯದ ಬೇರೆಬೇರೆ ಮಜಲುಗಳನ್ನು ಅನಾವರಣಗೊಳಿಸಿವೆ. ಅಸ್ಸಾಂ ರಾಜಧಾನಿ ಗೌಹಾತಿಯಲ್ಲಿ ಎಲ್ಲರೆದುರು ಯುವತಿಯ ಮಾನಭಂಗ ನಡೆಯಿತು. ಕಳೆದ ವರ್ಷ ಪಬ್ ದಾಳಿಯಿಂದ ಕುಖ್ಯಾತವಾಗಿದ್ದ ಮಂಗಳೂರು ಮತ್ತೆ ಹೋಂ ಸ್ಟೇ ಪ್ರಕರಣದಿಂದ ಮೂಲಭೂತವಾದದ ಮಹಿಳಾ ವಿರೋಧಿ ಮುಖ ತೋರಿಸಿತು. ಮೇಲಿನೆರಡು ಮಾನಭಂಗ ಘಟನೆಗಳಲ್ಲಿ ಒಂದು ವಿಲಕ್ಷಣ ಮತ್ತು ಸಾಮಾನ್ಯ ಅಂಶವಿದೆ: ಅವು ಮಾಧ್ಯಮದ ಕಣ್ಣೆದುರೇ ನಡೆದವು.

ಧ್ವನಿಯನ್ನು ಇರುವುದಕ್ಕಿಂತ ಎತ್ತರಿಸಿ ಹೇಳುವ ಮೈಕ್ ಹಾಗೂ ಚಲನವಲನಗಳನ್ನು ಚಿತ್ರವಾಗಿ ತೋರಿಸುವ ಕ್ಯಾಮೆರಾ ಬಗ್ಗೆ ಮನುಷ್ಯನಿಗೆ ಭಯಮಿಶ್ರಿತ ಸೆಳೆತವಿದೆ. ಸುದ್ದಿಯಾಗುತ್ತಿರುವವರು ಮೈಕ್ ಮತ್ತು ಕ್ಯಾಮೆರಾ ಎದುರು ಬಡಬಡಿಸುವುದನ್ನು ದಿನನಿತ್ಯ ನೋಡುತ್ತೇವೆ. ಮಾಧ್ಯಮವು ವಾಸ್ತವವನ್ನು ಬಿಂಬಿಸಲು ಉತ್ಪ್ರೇಕ್ಷೆ ಮತ್ತು ಉಪೇಕ್ಷೆ – ಈ ಎರಡನ್ನೂ ನೆಚ್ಚಿಕೊಂಡಿದೆ. ದೃಶ್ಯ ಮಾಧ್ಯಮದಲ್ಲಿ ಲೈವ್ ಕವರೇಜ್ ಹಾಗೂ ಟಿಆರ್‌ಪಿ ಉನ್ಮಾದ ಯಾವ ಹಂತ ತಲುಪಿದೆ ಎಂದರೆ ಗೌಹಾತಿಯಲ್ಲಿ ಮುಕ್ಕಾಲು ಗಂಟೆ ಯುವತಿಯೊಬ್ಬಳ ಮಾನಭಂಗ ಕ್ಯಾಮೆರಾ ಎದುರು, ಕ್ಯಾಮೆರಾಗಾಗಿಯೇ ನಡೆಯಿತು. ನಡೆಯುತ್ತಿದ್ದುದನ್ನು ತಡೆಗಟ್ಟಬೇಕಿದ್ದ, ಅದು ನಡೆಯದಂತೆ ಎಚ್ಚರಿಸಬೇಕಿದ್ದ ಮಾಧ್ಯಮವೇ ಘಟನೆ ರೋಚಕವಾಗುವಂತೆ ನೋಡಿಕೊಂಡಿತು. ವ್ಯಾಪಾರೀ ಹಿತಾಸಕ್ತಿಯ ಮಾಧ್ಯಮಗಳ ಜೀವನ್ಮರಣದ ಪ್ರಶ್ನೆಯಾಗಿ ಏರ್ಪಟ್ಟಿರುವ ಇಂಥ ಸ್ಪರ್ಧೆಗಾಗಿ ಬೆಲೆ ತೆರಬೇಕಾದವರು ಯಾರು? ಎಷ್ಟು? ಕ್ಯಾಮೆರಾಗೆ ಹೃದಯವಿಲ್ಲ, ಆದರೆ ಅದರ ಹಿಂದಿರುವ ಮನುಷ್ಯ ಹೃದಯ ಮಿಡಿಯುವುದಿಲ್ಲವೆ? ರ್‍ವಾಂಡಾದ ಭೀಕರ ಕ್ಷಾಮಕ್ಕೆ ಸಾಕ್ಷಿಯೆನ್ನುವಂತಹ, ಸಾವಿನೆದುರು ದೈನೇಸಿಯಾಗಿ ಕೂತಿದ್ದ ಕೃಶದೇಹದ ಮಗುವಿನ ಫೋಟೋ ತೆಗೆದ ಕೆವಿನ್ ಕಾರ್ಟರ್ ಅದಕ್ಕಾಗಿ ಪ್ರಶಸ್ತಿ ಪಡೆದರೂ ಅಪರಾಧಿ ಪ್ರಜ್ಞೆಯಿಂದ ಆತ್ಮಹತ್ಯೆ ಮಾಡಿಕೊಂಡ. ಅವನಂಥ ಆತ್ಮಸಾಕ್ಷಿ ಬೇಡ, ಅಬಲ ಜೀವವೊಂದು ಅಂಗಲಾಚಿದರೂ ಕೇಳಿಸಿಕೊಳ್ಳದಿದ್ದರೆ ವರದಿಗಾರನನ್ನು ಮನುಷ್ಯನೆಂದು ಹೇಗೆ ಕರೆಯುವುದು?

ಕಳೆದ ತಿಂಗಳು ಗೌಹಾತಿಯ ಪಬ್‌ನಿಂದ ಮುಸ್ಸಂಜೆ ಯುವತಿಯರಿಬ್ಬರು ಜನ್ಮದಿನ ಪಾರ್ಟಿ ಮುಗಿಸಿ ಹೊರಬಿದ್ದರು. ತುಂಡುಡುಗೆ ತೊಟ್ಟು ಮಾಡ್ ಆಗಿದ್ದವಳ ಫೋಟೋವನ್ನು ಮೊಬೈಲ್‌ನಲ್ಲಿ ಕೆಲ ಹುಡುಗರು ದೂರ ನಿಂತು ಚಿತ್ರಿಸುತ್ತಿದ್ದರು. ಇದನ್ನು ಗಮನಿಸಿ ಅವಳು ಪ್ರತಿರೋಧಿಸಿದಾಗ ಚಕಮಕಿ ಶುರುವಾಯಿತು. ಅದೇ ವೇಳೆ ಇನ್ನೊಂದು ಗುಂಪು ಮತ್ತೊಬ್ಬ ಯುವತಿಯ ಹಿಂದೆ ಬಿತ್ತು. ಅವಳ ಅಂಗಾಂಗಗಳನ್ನು ಹಿಡಿದೆಳೆದು ನಗ್ನಗೊಳಿಸಲು ಯತ್ನಿಸುತ್ತ, ಅವಾಚ್ಯವಾಗಿ ಮಾತನಾಡುತ್ತ, ಅಶ್ಲೀಲವಾಗಿ ವರ್ತಿಸತೊಡಗಿತು. ಸಹಾಯವೆಂದು ಆಕೆ ಕಿರುಚುತ್ತಿದ್ದದ್ದು ಯಾರ ಕಿವಿಗೂ ಬೀಳಲಿಲ್ಲ. ದಿಗ್ಭ್ರಮೆಯ ವಿಷಯವೆಂದರೆ ಈ ಅಮಾನವೀಯ ಕೃತ್ಯ ನ್ಯೂಸ್‌ಲೈವ್ ಎಂಬ ಟಿವಿ

ಚಾನೆಲ್ ವರದಿಗಾರನ ಕುಮ್ಮಕ್ಕಿನಿಂದ ನಡೆದಿದ್ದು. ಮುಖ ಸರಿಯಾಗಿ ಕಾಣಲೆಂದು ಅಲ್ಲಿದ್ದವರು ಅವಳನ್ನು ತಿರುತಿರುಗಿಸಿ ಕ್ಯಾಮೆರಾ ಎದುರು ಹಿಡಿಯುತ್ತಿದ್ದರು. ಬೇಟೆಯಾಡಿದ ಸಂಭ್ರಮೋತ್ಸಾಹಗಳಿಂದ ತಾವೂ ಪೋಸ್ ಕೊಡುತ್ತಿದ್ದರು. ಗೌಹಾತಿಯ ರಸ್ತೆಗಳಲ್ಲಿ ಓಡಾಡುತ್ತಿದ್ದ ವಾಹನಗಳಾಗಲೀ, ಪಾದಚಾರಿಗಳಾಗಲೀ, ನಿಂತು ನೋಡಿ ತಮಾಷೆ ಅನುಭವಿಸಿದರೇ ಹೊರತು ಯಾಕೆ ಹೀಗೆ ಮಾಡುತ್ತಿದ್ದೀರೆಂದು ಒಬ್ಬರೂ ಕೇಳಲಿಲ್ಲ. ಕೊನೆಗೊಮ್ಮೆ ಆ ದಾರಿಯಲ್ಲಿ ಹೋಗುತ್ತಿದ್ದ ವರದಿಗಾರನೊಬ್ಬ ಪೊಲೀಸರಿಗೆ ವಿಷಯ ತಿಳಿಸಿದ. ಎಂದಿನಂತೆ ಎಲ್ಲ ಮುಗಿದ ಮೇಲೆ ಪೊಲೀಸರು ಬರುವಾಗ ಆ ಚಾನೆಲ್ಲಿನವ ಅವಳ ಮುಖದೆದುರು ಮೈಕ್ ಹಿಡಿದು 'ನಿಮಗೆ ಏನೆನಿಸುತ್ತಿದೆ?' ಎಂದು ಕೇಳುತ್ತಿದ್ದ! ತಪ್ಪಿತಸ್ಥರನ್ನು ಬಂಧಿಸಲಾಯಿತು. ಈಗ ರಾಜಕೀಯ ದ್ವೇಷ, ವಿರೋಧಿಗಳ ಸಂಚು ಎಂಬ ಮಾತು ಕೇಳಿಬರುತ್ತಿದ್ದು ಬಂಧಿಸಲ್ಪಟ್ಟವರು ಬಿಡುಗಡೆಗಾಗಿ ರಾಜಕೀಯದ ಸುಲಭ ದಾರಿ ಹಿಡಿಯತೊಡಗಿದ್ದಾರೆ.

ಡಾ|| ಎಚ್. ಎಸ್. ಅನುಪಮಾ

10

ಈ ಘಟನೆ ದೇಶಾದ್ಯಂತ ಟಿವಿ ಚಾನೆಲ್ಲುಗಳಲ್ಲಿ ಮೇಲಿಂದ ಮೇಲೆ

ಗೌಹಾತಿಯಲ್ಲಿ ಮುಕ್ಕಾಲು ಗಂಟೆ ಯುವತಿಯೊಬ್ಬಳ ಮಾನಭಂಗ ಕ್ಯಾಮೆರಾ ಎದುರು, ಕ್ಯಾಮೆರಾಗಾಗಿಯೇ ನಡೆಯಿತು. ನಡೆಯುತ್ತಿದ್ದುದನ್ನು ತಡೆಗಟ್ಟಬೇಕಿದ್ದ, ಅದು ನಡೆಯದಂತೆ ಎಚ್ಚರಿಸಬೇಕಿದ್ದ ಮಾಧ್ಯಮವೇ ಘಟನೆ ರೋಚಕವಾಗುವಂತೆ ನೋಡಿಕೊಂಡಿತು. ವ್ಯಾಪಾರೀ ಹಿತಾಸಕ್ತಿಯ ಮಾಧ್ಯಮಗಳ ಜೀವನ್ಮರಣದ ಪ್ರಶ್ನೆಯಾಗಿ ಏರ್ಪಟ್ಟಿರುವ ಇಂಥ ಸ್ಪರ್ಧೆಗಾಗಿ ಬೆಲೆ ತೆರಬೇಕಾದವರು ಯಾರು? ಎಷ್ಟು? ಕ್ಯಾಮೆರಾಗೆ ಹೃದಯವಿಲ್ಲ, ಆದರೆ ಅದರ ಹಿಂದಿರುವ ಮನುಷ್ಯ ಹೃದಯ ಮಿಡಿಯುವುದಿಲ್ಲವೆ?

ಪ್ರಸಾರವಾಯಿತು. ಇದರಿಂದ ನ್ಯೂಸ್‌ಲೈವ್ ವಾಹಿನಿಯ ಜನಪ್ರಿಯತೆ ಹೆಚ್ಚಾಗಿರಬಹುದು. ಆದರೆ ನೊಂದ ಯುವತಿಯ ಜೀವನದ ಗತಿಯೇನಾಗಬಹುದೆಂದು ಟಿಆರ್‌ಪಿ ಅಮಲಿನ ಮಾಧ್ಯಮಕ್ಕೆ ಅರ್ಥವಾದೀತೇ? ಮಾಧ್ಯಮವೆಂಬ ಹೃದಯಹೀನ ವ್ಯವಸ್ಥೆಯ ಮಾತು ಒತ್ತಟ್ಟಿಗಿರಲಿ, ಘಟನೆಯ ವಿವರಗಳನ್ನು ಕೊಡುವಾಗ ರಾಜ್ಯ ಸರ್ಕಾರದ ಮಂತ್ರಿ ಮತ್ತು ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರು ಯುವತಿಯ ನಿಜ ಹೆಸರನ್ನು ಉಲ್ಲೇಖಿಸಿದರು. ಅವರೂ ಆಕೆಯ ಭವಿಷ್ಯದ ಕುರಿತು ಯೋಚಿಸಲಿಲ್ಲ! ದುರ್ಬಲರ ಪರ ಇರಬೇಕಾದ ಸರ್ಕಾರ, ಮಾಧ್ಯಮ, ಮಹಿಳಾ ಹಕ್ಕು ರಕ್ಷಣೆಗಾಗಿಯೇ ಇರುವ ಆಯೋಗ – ಮೂರೂ ಇಷ್ಟೊಂದು ಅಸೂಕ್ಷ್ಮವಾದರೆ ಇನ್ಯಾರಿಂದ ನ್ಯಾಯ ನಿರೀಕ್ಷಿಸಬಹುದು? ದುರ್ಬಲರು ಹಿಂಸೆಗೊಳಪಡುವುದು ಸಹಜ ಎಂಬಂತೆ ಸುತ್ತಮುತ್ತ ಇರುವವರು ವರ್ತಿಸಿದ್ದೇಕೆ? ಪ್ರಜಾಪ್ರಭುತ್ವವಿರುವ ದೇಶದಲ್ಲಿ ಸರ್ವರೂ ಸಮಾನರು ಎಂದಾಗ, ಮಹಿಳಾ ದೌರ್ಜನ್ಯದ ವಿರುದ್ಧ ಇಷ್ಟೆಲ್ಲ ಕಾನೂನುಗಳಿರುವಾಗ ತಮಗೆ ಒದಗಲಿರುವ ಶಿಕ್ಷೆಯ ಭಯವೂ ಆ ಗುಂಪಿಗೆ ಆಗಲಿಲ್ಲ ಏಕೆ?

ಮಾಧ್ಯಮಗಳ ತಾಜಾಸುದ್ದಿಯ ಹಸಿವೆ ಸೃಷ್ಟಿಸುತ್ತಿರುವ ಅವಾಂತರ ಒಂದೆರೆಡಲ್ಲ. ಉತ್ತರಪ್ರದೇಶದ ಒಂದು ಹಳ್ಳಿಯ ಎರಡು ಕುಟುಂಬಗಳು ತಮ್ಮ ಹೆಣ್ಣುಮಕ್ಕಳಿಗೆ ಕೆಲ ನಿರ್ಬಂಧ ಹೇರಿದ್ದವು. 40 ವರ್ಷ ಮೀರಿದ ಮಹಿಳೆಯರಷ್ಟೇ ಮೊಬೈಲ್ ಹೊಂದಬಹುದು, ಹೆಣ್ಣುಮಕ್ಕಳು ತಲೆಮೇಲೆ ಸೀರೆ ಸೆರಗು ಹೊದ್ದಿರಬೇಕು, ಪ್ಯಾಂಟ್‌ನಂತಹ ಆಧುನಿಕ ದಿರಿಸು ತೊಡುವಂತಿಲ್ಲ, ಕಾಲೇಜಿಗೆ ಒಬ್ಬರೇ ಹೋಗುವಂತಿಲ್ಲ ಇತ್ಯಾದಿ. ಇಂಥ 'ಮಹಿಳಾ ವಿರೋಧಿ' ಆಜ್ಞೆಯನ್ನು ಸುದ್ದಿ ಮಾಡಿದರೆ ತನಗೊದಗಬಹುದಾದ ಟಿಆರ್‌ಪಿ ಊಹೆಯಿಂದ ರೋಮಾಂಚಿತಗೊಂಡ ವಾಹಿನಿಯೊಂದು ಖಾಪ್ ಪಂಚಾಯ್ತಿ ಸೇರಿಸಿತು. ಕುಟುಂಬದ ತೀರ್ಮಾನಗಳು ಪಂಚಾಯ್ತಿ ತೀರ್ಪುಗಳಾಗಿ ಹೊರಬೀಳಲು ಕಾರಣವಾಯಿತು. ಚಾನೆಲ್‌ನ ರೇಟಿಂಗ್ ಹಿತಾಸಕ್ತಿಗೆ ಮಹಿಳಾ ವಿರೋಧಿ ತೀರ್ಮಾನಗಳು ಇಡೀ ಖಾಪ್ ಪ್ರದೇಶಕ್ಕೆ ಅನ್ವಯಿಸುವಂತಾಯಿತು.

* * *

ರಾಣಿ ಅಬ್ಬಕ್ಕ ಆಳಿದ ಮಂಗಳೂರು ಮಾತೃಪ್ರಧಾನ ತುಳು ಸಂಸ್ಕೃತಿಯಿರುವ ನಾಡು. ಈಗ ಮಂಗಳೂರು ನಗರದ ಮೇಯರ್ ಒಬ್ಬ ಮಹಿಳೆ. ಅಲ್ಲಿ ಇತ್ತೀಚೆಗೆ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿದರೆ ನಾವು ಬದುಕುತ್ತಿರುವುದು ಆಧುನಿಕ ಭಾರತದಲ್ಲೋ ಅಥವಾ ಮನುಸ್ಮೃತಿಯ ಕಾಲದಲ್ಲೋ ಎಂದು ಅನುಮಾನ ಬರುತ್ತದೆ. ವರ್ಷ ಕೆಳಗೆ ಪಬ್ ಮೇಲೆ ದಾಳಿ ನಡೆದಿತ್ತು. ಇತ್ತೀಚೆಗೆ ಸಂಘಟನೆಯೊಂದರ ತರುಣರು ಮಾಧ್ಯಮದೆದುರು ಹೋಂಸ್ಟೇಯೊಂದರಲ್ಲಿ ಬರ್ತ್‌ಡೇ ಪಾರ್ಟಿ ನಡೆಸುತ್ತಿದ್ದವರ ಮೇಲೆ ದಾಳಿ ಮಾಡಿದ್ದಾರೆ. ಅಲ್ಲಿದ್ದ ಹೆಣ್ಣುಮಕ್ಕಳ ಮೈಕೈ ಎಳೆದಾಡಿ, ಪರಚಿ ಕಾನೂನನ್ನು ಕೈಗೆತ್ತಿಕೊಂಡಿದ್ದಾರೆ. ಇಂಥ ಘಟನೆಗಳು ಮಂಗಳೂರಿನಲ್ಲೇ ಮರುಕಳಿಸುತ್ತಿರುವುದರ ಕಾರಣಗಳೇನು? ಕರಾವಳಿಯಲ್ಲಿ ಬೆಳೆಯುತ್ತಿರುವ ಧಾರ್ಮಿಕ ಮೂಲಭೂತವಾದಕ್ಕೂ, ಸಾಮಾಜಿಕ ಕ್ಷೋಭೆಗೂ, ಬುಡಕಟ್ಟು–ಅಲ್ಪಸಂಖ್ಯಾತ–ಮಹಿಳಾ ಸಮುದಾಯ ಬಲಿಪಶುವಾಗುತ್ತಿರುವುದಕ್ಕೂ ಪರಸ್ಪರ ಸಂಬಂಧವಿದೆಯೆ?

ಕರಾವಳಿ ಊರುಗಳಲ್ಲಿ ಬದುಕು ಸೂಕ್ಷ್ಮವೆಂದು ಹೇಳುತ್ತ ಇದು ಇಲ್ಲಿಗೇ ವಿಶಿಷ್ಟ ತಲ್ಲಣ ಎಂದು ಹೇಳಿ ಮುಗಿಸಿಬಿಡಲು ಸಾಧ್ಯವಿಲ್ಲ. ಹೌದು. ಕರಾವಳಿಯಲ್ಲಿ ಪ್ರತಿದಿನ ಹುಟ್ಟುವ ಸೂರ್ಯನೊಂದಿಗೆ ಕೆಲವು ಗೋಡೆಗಳೇಳುತ್ತವೆ. ಪ್ರತಿದಿನ ಕಡಲಿನ ಉಬ್ಬರವಿಳಿತದ ಜೊತೆಗೆ ಕೆಲ ಹಾದಿಗಳು ಮುಚ್ಚುತ್ತವೆ. ಆದರೆ ಇದು ಎಲ್ಲಿ ಸಂಭವಿಸುತ್ತಿಲ್ಲ? ಇದೂ ಸಾವಿಲ್ಲದ ಮನೆಯ ಸಾಸಿವೆ ಕಾಳಿನಂತೆಯೇ. ನೀವು ಕರಾವಳಿಯಲ್ಲಿ ಬದುಕುತ್ತಿರುವವರಾದರೆ ನಿಮ್ಮ ಅನುಭವಕ್ಕೆ ದಕ್ಕುವ ಬಿಕ್ಕಟ್ಟುಗಳು ಬೇರೆ. ವಿಶಾಲ ಕರ್ನಾಟಕದ ಇನ್ನೆಲ್ಲೋ ಕುಳಿತು ಕರಾವಳಿಯನ್ನು ವರದಿಯಾಧಾರದ ಮೇಲೆ ಗ್ರಹಿಸುವವರಾದರೆ ನಿಮ್ಮ ಊಹೆ ಬೇರೆ.

ಸಮಸ್ಯೆ ಕರಾವಳಿಯಲ್ಲೂ ಇದೆ, ಗ್ರಹಿಸುವ ಮನಸ್ಸಿನಲ್ಲೂ:

ರಾಜ್ಯದಲ್ಲೇ ಅತಿ ಹೆಚ್ಚು ಲಿಂಗಾನುಪಾತ, ಸಾಕ್ಷರತೆ, ಆರ್ಥಿಕ ಅಭಿವೃದ್ಧಿ ಹೊಂದಿರುವ ದಕ್ಷಿಣ ಕನ್ನಡ ತನ್ನದೇ ಭಾಷೆ, ಪರಂಪರೆ, ಸಂಸ್ಕೃತಿಗಳನ್ನು ಹೊಂದಿರುವ, ಅಸಂಖ್ಯ ಅಭಿವೃದ್ಧಿ ಸಾಧ್ಯತೆಗಳನ್ನು ಜೀವಂತ ಇರಿಸಿಕೊಂಡಿರುವ ನೆಲ. ಅಲ್ಲಿ ಬಯಲಿದೆ, ಕಡಲಿದೆ, ಸಂಪನ್ಮೂಲವಿದೆ, ವ್ಯಾಪಾರದ ಅನುಭವವಿದೆ, ಉದ್ಯೋಗಾವಕಾಶವಿದೆ; ಎಲ್ಲಿ ಬೇಕಾದರೂ ವಲಸೆ ಹೋಗಿ ಅಲ್ಲೇ ನೆಲೆಯಾಗಿಬಿಡಬಲ್ಲ ಗಟ್ಟಿಹೃದಯಗಳಿವೆ; ಇವೆಲ್ಲದರ ಜೊತೆಗೇ ರಟ್ಟೆಬಲವನ್ನು ಎದುರಿರುವವನ ಮೇಲೆ ಪ್ರಯೋಗಿಸಿ ಅಳೆಯುವ, ವ್ಯವಸ್ಥೆಯ ನ್ಯಾಯದಾನದ ಬಗ್ಗೆ ವಿಶ್ವಾಸವಿಡದೇ ಎಲ್ಲವನ್ನೂ ಆಗಿಂದಾಗಲೇ ತೀರ್ಮಾನಿಸುವ ಹುಚ್ಚು ಹುಮ್ಮಸದ ಫ್ಯೂಡಲ್ ಹಿಂಸೆ ಮೊದಲಿನಿಂದ ಇದೆ. ಆಕಾಶದತ್ತ ದೃಷ್ಟಿ ನೆಟ್ಟ ಮಹಾತ್ವಾಕಾಂಕ್ಷಿ ಯುವಪೀಳಿಗೆ ಸಿಗುವ ಅವಕಾಶಕ್ಕಾಗಿ ಚಾತಕ ಪಕ್ಷಿಯಂತೆ ಕಾದಿದ್ದು ಹೊಟ್ಟೆ–ಬಟ್ಟೆ–ಹಣಗಳಿಕೆಯ ಸಿದ್ಧಾಂತಕ್ಕಾಗಿ ಹೋರಾಡಲು ಸಿದ್ಧವಿದೆ. ಇದೆಲ್ಲದರ ನಡುವೆ ಆರ್ಥಿಕ ಅಸಮಾನತೆ ಈ ಕಾಲದ ಕ್ಷೋಭೆಯಾಗಿ ಅವಕಾಶವಂಚಿತ ತರುಣ ಪೀಳಿಗೆಯನ್ನು ಅಸಮಾಧಾನ, ಹತಾಶೆಗೆ ತಳ್ಳಿದೆ. ಸಹಜವಾಗಿಯೇ ಇಂಥವರು ಮೂಲಭೂತವಾದಿಗಳ, ಅವಕಾಶವಾದಿ ರಾಜಕೀಯ ಧುರೀಣರ ಗೂಂಡಾಪಡೆಯಾಗಿ ಸಂಸ್ಕೃತಿ ರಕ್ಷಕರಂತೆ ವರ್ತಿಸಲು ಕುಮ್ಮಕ್ಕು ಪಡೆದಿದ್ದಾರೆ.

ಎಲ್ಲಿ ಮಳೆ ಬರದಿದ್ದರೂ ಕರಾವಳಿ ಜಿಲ್ಲೆಗಳಲ್ಲಿ ಮಳೆಗೆ ಬರಗಾಲವಿಲ್ಲ. ನೈರುತ್ಯ ಮಾರುತಗಳು ಮೊದಲು ಇಲ್ಲಿ ಮಳೆ ಸುರಿಸಿಯೇ ಮುಂದೆ ಸಾಗುತ್ತವೆ. ಇಡೀ ರಾಜ್ಯ ಮಳೆಯಿಲ್ಲದೇ ಬರಗಾಲದಲ್ಲಿ ತತ್ತರಿಸುತ್ತಿರುವಾಗ, ಕರಾವಳಿ ಜಿಲ್ಲೆಗಳ ದೊಡ್ಡ ನಗರ ಮಂಗಳೂರಿನ ಬೀದಿಗಳಲ್ಲಿ ನೀವೊಮ್ಮೆ ಅಡ್ಡಾಡಬೇಕು. ಅಲ್ಲಿ ಬರ, ಹಸಿವೆ, ಅಪೌಷ್ಟಿಕತೆ ಎಲ್ಲ ಯಾವುದೋ ದೇಶದ ಕಷ್ಟದಂತೆ ಕಾಣಿಸಿದರೆ ಅಚ್ಚರಿಯಿಲ್ಲ. ಅಲ್ಲಿನ ಹೈಫೈಸ್, ಥಳಕು ಬಳುಕಿನ ಮಾಲ್‌ಗಳು, ಪರರಾಜ್ಯ–ವಿದೇಶಗಳಿಂದ ಕಲಿಯಲೆಂದು ಮಂಗಳೂರಿಗೆ

ಬಂದಿಳಿವ ಸಿರಿವಂತ ಮಕ್ಕಳು. ಹೊಚ್ಚ ಹೊಸ ಬ್ರ್ಯಾಂಡ್ ಕಾರು–ಬೈಕುಗಳನ್ನು ಮಂಗಳ ಗ್ರಹಕ್ಕೆ ಯಾತ್ರೆ ಹೊರಟವರಂತೆ ಓಡಿಸುವ ಪಡ್ಡೆ ಹುಡುಗರು – ಇವನ್ನೆಲ್ಲ ನೀವು ಸುರಿವ ಮಳೆಯ ತಂಪಿನೊಳಗೆ ಬೆವರಿಳಿಸುತ್ತ ನೋಡಬಹುದು. ಈ ಸಮೃದ್ಧಿ ಎಲ್ಲ ಶಹರಗಳಲ್ಲೂ ಕಾಣಬಹುದಾದರೂ ಮಂಗಳೂರಿಗೊಂದು ಫ್ಯೂಡಲ್ ಸಿರಿವಂತಿಕೆ ಮೊದಲಿನಿಂದ ಲಭ್ಯವಾಗಿದೆ. ನಿರ್ಮಾಣ ಹಂತದ ಕಟ್ಟಡ–ರಸ್ತೆ–ಫ್ಲೈ ಓವರ್‌ಗಳ ಬಳಿ ಕೆಲಸ ಮಾಡುವ ಬಯಲಸೀಮೆಯ ಕೃಶದೇಹಗಳನ್ನೊಮ್ಮೆ ನೋಡಿ ಬದುಕಿನ ಕಷ್ಟಗಳು ಹೀಗೂ ಇರಬಹುದೆಂದು ಅರ್ಥಮಾಡಿಕೊಳ್ಳಬೇಕು. ಅದು ಬಿಟ್ಟರೆ ಗ್ಯಾಟ್ ಬರಲಿ, ವ್ಯಾಟ್ ಬರಲಿ, ಅಲ್ಲಿಯ ವ್ಯಾಪಾರಿಗಳಿಗೆ ತೊಂದರೆಯಾಗಲಿಲ್ಲ. ಒಳ ಊರುಗಳ ಕೃಷಿಕರಿಗೂ ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪ್ರಸಂಗ ಬಂದಿಲ್ಲ.

ರ್‍ವಾಂಡಾದ ಭೀಕರ ಕ್ಷಾಮಕ್ಕೆ ತುತ್ತಾಗಿ ಸಾವಿನೆದುರು ದೈನೇಸಿಯಾಗಿ ಕೂತಿದ್ದ ಕೃಶದೇಹದ ಮಗುವಿನ ಈ ಫೋಟೋ ತೆಗೆದ ಕೆವಿನ್ ಕಾರ್ಟರ್ ಅಪರಾಧಿ ಪ್ರಜ್ಞೆಯಿಂದ ಮೂರೇ ತಿಂಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ.

ಸಮೃದ್ಧಿ, ಅಭಿವೃದ್ಧಿ, ಶಿಕ್ಷಣ, ಅಧಿಕಾರ ಎಲ್ಲ ಇದ್ದೂ ಅಸಮಾನ ಹಂಚಿಕೆ ಅಸಮಾಧಾನಕ್ಕೆ ಕಾರಣವಾಗಿದೆ. ಹೆಮ್ಮೆ ಪಡಬೇಕಾದ ಸೂಚ್ಯಂಕ–ಸಂಗತಿಗಳೇ ಕೋಮುವಾದ ಬೆಳೆಸುವ ಗೊಬ್ಬರವಾಗಿವೆ. ಕರಾವಳಿಯ ಬಿಕ್ಕಟ್ಟುಗಳ ಮೂಲ ವೇಗದ ಅಭಿವೃದ್ಧಿ ಮತ್ತು ಆಧುನಿಕತೆ ಎನ್ನುವುದು ಇಂದಿನ ವಿಪರ್ಯಾಸವಾಗಿದೆ. ಹಸಿದವನ ಭಾಷೆ, ಆದ್ಯತೆ, ಅಗತ್ಯಗಳು ಬೇರೆ ಇರುತ್ತವೆ. ಹೊಟ್ಟೆ ತುಂಬಿದವನ ಮಾತು, ಗಮನ ಬೇರೆಯೇ ಇರುತ್ತದೆ. ಹಸಿದು, ಬಾಯಾರಿ ತಿಳಿಯದವರಿಗೆ ಧರ್ಮದ ಅಮಲೂ ಏರಿಬಿಟ್ಟರೆ ಏನಾಗುತ್ತದೆ ಎನ್ನುವುದಕ್ಕೆ ಮಂಗಳೂರು ಒಂದು ಉದಾಹರಣೆಯಾಗಿದೆ.

* * *

ಮಂಗಳೂರು ಹೋಂ ಸ್ಟೇ ಪ್ರಕರಣದ ಸಂದರ್ಭದಲ್ಲಿ ನೈತಿಕತೆ, ಮೌಲ್ಯ ವ್ಯವಸ್ಥೆ, ಮಾರಲ್ ಪೊಲೀಸಿಂಗ್ ಎಂಬ ಪದಪುಂಜಗಳು ಕೇಳಿಬರುತ್ತಿದ್ದು ಕೆಲವು ಸೂಕ್ಷ್ಮ ವಿಷಯಗಳನ್ನು ಪರಿಶೀಲಿಸಬೇಕಾದ ಅಗತ್ಯವಿದೆ.

* 'ಮಾರ್ನಿಂಗ್ ಮಿಸ್ಟ್'ನಲ್ಲಿ ನಡೆಯುತ್ತಿದ್ದ ಚಟುವಟಿಕೆಗಳು ಅನೈತಿಕವೋ, ಕಾನೂನು ಬಾಹಿರವೋ ಎಂಬ ಪ್ರಶ್ನೆ ಕೇಳಲಾಗುತ್ತಿದೆ. ನೈತಿಕತೆ ಎಂದರೇನು? ಮೌಲ್ಯ ವ್ಯವಸ್ಥೆಯನ್ನು ಸೃಷ್ಟಿಸುವವರು ಯಾರು? ವ್ಯಕ್ತಿಯ ಜೀವಿತಾವಧಿಯುದ್ದಕ್ಕೂ ತನ್ನಿಂತಾನೇ ರೂಪುಗೊಳ್ಳುತ್ತ ಹೋಗುವ ಅಂತರ್ಗತ ಮೌಲ್ಯವೇ ನೈತಿಕತೆ. ಅದು ಪ್ರತಿಯೊಬ್ಬ ವ್ಯಕ್ತಿಯೂ ತಾನೇ ವ್ಯಾಖ್ಯಾನಿಸಿಕೊಳ್ಳಬೇಕಾದದ್ದು. ವ್ಯಕ್ತಿ ಸಮಾಜದ ಭಾಗವೇ ಆಗಿದ್ದರಿಂದ ವ್ಯಕ್ತಿಯ ಮೌಲ್ಯ ಸಮಾಜದ ಮೌಲ್ಯವಾಗಿ ಪರಿವರ್ತಿತಗೊಳ್ಳುತ್ತದೆ. ಅಷ್ಟೇ ಹೊರತು ಸ್ಥಾಪಿತ ಮೌಲ್ಯವ್ಯವಸ್ಥೆ ಇಲ್ಲ. ಪರಂಪರೆಯನ್ನು ಸಾಕಾರಗೊಳಿಸಿಕೊಂಡು ಹುಟ್ಟುವ ವ್ಯಕ್ತಿ ವರ್ತಮಾನದಲ್ಲಿ ಹೇಗೆ ಬದುಕುತ್ತಾನೋ ಅದು ಹೊಸ ಮೌಲ್ಯವನ್ನು ಸೃಷ್ಟಿಸುತ್ತದೆ. ಸಹಜವಾಗಿಯೇ ಅದು ಕಾಲ–ದೇಶಗಳಿಗೆ ತಕ್ಕಂತೆ ಬದಲಾಗುತ್ತದೆ. ಬದುಕನ್ನು ನಿರ್ಧರಿಸುವ ಎಷ್ಟೆಷ್ಟೋ ಅಂಶಗಳು ಸಮಾಜ–ಸರ್ಕಾರದ ಹಿಡಿತದಲ್ಲಿದ್ದು ಆ ಮೂಲಕ ಅವನ ನೈತಿಕತೆಯ ಮೇಲೆ ಅವು ಪ್ರಭಾವ ಬೀರಬಹುದೇ ಹೊರತು ಸರಿತಪ್ಪುಗಳನ್ನು ನಿರ್ಧರಿಸುವುದು ಐದು ವರ್ಷಕ್ಕೊಮ್ಮೆ ಬದಲಾಗಿ ಹೋಗುವ ಸರ್ಕಾರವಲ್ಲ. ಅಥವಾ ಅದರ ವ್ಯಾಖ್ಯಾನ ಸಮಾಜ, ಮಾಧ್ಯಮ ಅಥವಾ ಸರ್ಕಾರದ ಕೆಲಸವಲ್ಲ. ಪುರಾಣ–ಶಾಸ್ತ್ರದ ಆಧಾರದ ಮೇಲಾಗಲೀ, ಸಿವಿಲ್–ಕ್ರಿಮಿನಲ್ ಪ್ರೊಸೀಜರ್ ಕೋಡುಗಳ ಭಯದಿಂದಾಗಲೀ ಮೌಲ್ಯವನ್ನು ರೂಪಿಸಿ ಕಾಯುವುದು ಸಾಧ್ಯವಿಲ್ಲ. ನೈತಿಕತೆ ಕಾಪಾಡಬೇಕಾದದ್ದಲ್ಲ, ತನ್ನಿಂತಾನೇ ಅರಳಬೇಕಾದದ್ದು. ಕಾವಲು ಕಾಯುವಲ್ಲಿ ವ್ಯಕ್ತಿಗಾಗಲೀ, ವ್ಯಕ್ತಿ ಸ್ವಾತಂತ್ರ್ಯಕ್ಕಾಗಲೀ ಬೆಲೆಯಿಲ್ಲ. ಅಂಥಲ್ಲಿ ಸಂವೇದನೆಗಳು ಹುಟ್ಟಲಾರವು, ಉಲ್ಲಂಘಿಸುವ ಪ್ರವೃತ್ತಿ ಮಾತ್ರ ಜಾಗೃತಗೊಳ್ಳುತ್ತದೆ.

* ಮಂಗಳೂರು ಎಂಬ ಕಾಸ್ಮೊಪಾಲಿಟನ್ ಮಾಯಾನಗರಿಯಲ್ಲಿ ಪರವೂರ ವಿದ್ಯಾರ್ಥಿಗಳು ಹೇರಳವಾಗಿದ್ದು ಅವರಿಗೆ ಮನೆಯ ನಿರ್ಬಂಧವಿಲ್ಲ. ಬರ್ತ್‌ಡೇ ಎಂದಲ್ಲ, ಕಾರಣವೇ ಇಲ್ಲದೇ ಸೆಲೆಬ್ರೇಷನ್ ನಡೆಯುತ್ತದೆ. ಯುವಪೀಳಿಗೆ ಗುಂಪಾಗಿ, ಗುಟ್ಟಾಗಿ ಇನ್ನೆಷ್ಟೋ ಅಪಾಯಕಾರಿ ಚಟುವಟಿಕೆಗಳನ್ನು ನಡೆಸುತ್ತದೆ. ಈ ತರುಣ ಪೀಳಿಗೆಗೆ ಕಿವಿಮಾತು ಹೇಳುವುದು ಸುಲಭವಲ್ಲ. ಆ ವಯಸ್ಸಿನ ಗ್ರಹಿಕೆ, ಆಕಾಂಕ್ಷೆಗಳೇ ಬೇರೆ. ಅದು ಬದುಕಿನ ಕುರಿತು ನಿರೀಕ್ಷೆ, ಮಹತ್ವಾಕಾಂಕ್ಷೆಗಳಿರುವ; ರಿಸ್ಕ್ ತೆಗೆದುಕೊಳ್ಳಲು ಹಿಂದೆಮುಂದೆ ನೋಡದೇ ಮುನ್ನುಗ್ಗುವ; ಗ್ರಹಿಸಿರುವುದನ್ನು ಪ್ರತಿರೋಧದೊಂದಿಗೇ ಸ್ವೀಕರಿಸುವ ವಯಸ್ಸು. ಸಮಾನತೆಯ ಬಗೆಗೆ ಮಾತನಾಡುವ ತರುಣ ಪೀಳಿಗೆಗೆ ಸ್ವಾತಂತ್ರ್ಯ–ಸ್ವೇಚ್ಛೆಯ ನಡುವಿನ ಗೆರೆ ಯಾವುದೆಂದು ನಿರ್ಧರಿಸಲು; ಅವರ ಪ್ರತಿರೋಧವನ್ನು ಒಪ್ಪಿಗೆಯನ್ನಾಗಿ ಪರಿವರ್ತಿಸಲು ಸಹನೆ, ಪ್ರೀತಿ, ವಿಶ್ವಾಸ ಅವಶ್ಯವಾಗಿದೆ. ಪಾಲಕರಿಂದ ದೂರವಿರುವ ಅವರನ್ನು ಪ್ರಭಾವಿಸುವಂತಹ ಪೂರಕ ಪರಿಸರ ಸಮಾಜದಲ್ಲಿದೆಯೆ?

* ಹಲ್ಲೆಯ ಆರೋಪಿಗಳಾಗಿ ಈಗ ಲಾಕಪ್ಪಿನಲ್ಲಿರುವವರ ವಯಸ್ಸನ್ನು ಗಮನಿಸಿದರೆ ಹೆಚ್ಚಿನವರು 20–25ರ ವಯೋಮಾನದವರು. 22ರ ಆಸುಪಾಸಿನ ತರುಣ ಮತ್ತೊಬ್ಬ ವ್ಯಕ್ತಿಯ ಸರಿತಪ್ಪು ವಿಶ್ಲೇಷಿಸಿ ತಕ್ಕ ಕ್ರಮ ತೆಗೆದುಕೊಳ್ಳಬಲ್ಲನಾದರೆ ಅದು ಪಕ್ವ ಮನಸ್ಥಿತಿಯಾಯಿತು. ಆದರೆ ಹೋಂ ಸ್ಟೇ ದಾಳಿ ನಡೆಸಿದವರ ವಿವೇಚನಾ ಪ್ರಜ್ಞೆ ಜೀವನ ಅನುಭವದಿಂದಾಗಲೀ, ಬದುಕಿನ ಕುರಿತ ಒಳನೋಟಗಳಿಂದಾಗಲೀ, ಪರಂಪರೆಯ ಜ್ಞಾನದಿಂದಾಗಲೀ ದೊರೆತಿದ್ದಲ್ಲ; ಯಾವ ಚಳವಳಿ ಅಥವಾ ಕ್ರಾಂತಿಯಿಂದ ಪ್ರೇರಿತವಾದದ್ದೂ ಅಲ್ಲ. ಬದಲಾಗಿ ಅದು ಸ್ಪೂನ್‌ಫೀಡ್ ಮಾಡಲ್ಪಟ್ಟ ತತ್ವಜ್ಞಾನ. ಹೀಗಾಗಿ ಸರಿತಪ್ಪುಗಳ ನಡುವಿನ ಗೆರೆ ಅವರಿಗೆ ಬಹಳ ಸ್ಪಷ್ಟ. ಅಪರಾಧ ಯಾವುದು, ಅದಕ್ಕೆ ಶಿಕ್ಷೆ ಏನೆನ್ನುವುದೂ ಸ್ಪಷ್ಟ. ಅವರು ದಂಡಿಸಹೊರಡುವುದು ಮನುಷ್ಯರನ್ನಲ್ಲ, ಅಪರಾಧಿಗಳನ್ನು. ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡಹೊರಟವರು ಇಂಥ ಅಪಾಯಕಾರಿ ತತ್ವವನ್ನು ಬೋಧಿಸಿ ತರುಣಪೀಳಿಗೆಯ ದಾರಿ ತಪ್ಪಿಸುತ್ತಿರುವುದು ಈ ಘಟನೆಯಿಂದ ಇನ್ನಷ್ಟು ಸ್ಪಷ್ಟವಾಗಿದೆ.

* ಮಂಗಳೂರು ಘಟನೆಯಲ್ಲಿ ಕೆಲ ವಿಪರ್ಯಾಸಕರ ಬೆಳವಣಿಗೆಗಳು ಸಂಭವಿಸಿವೆ. ಇಡೀ ರಾಜ್ಯ ಯಾರ ಪರವಾಗಿ ನಿಂತು ವಾದಿಸುತ್ತಿದೆಯೋ ಅವರಿಗದರ ಅವಶ್ಯಕತೆ ಇದೆಯೇ? ಪಾರ್ಟಿ ನಡೆಸುತ್ತಿದ್ದ ಮೇಲ್ವರ್ಗದ ವಿದ್ಯಾರ್ಥಿಗಳು ಕೆಲದಿನಗಳ ಬಳಿಕ ಎಂದಿನ ಜೀವನಕ್ಕೆ ಮರಳುತ್ತಾರೆ. ಟಿವಿಯಲ್ಲಿ ತಮ್ಮ ಸುದ್ದಿ ಬಂದಿದ್ದು ಕೆಲ ತಿಂಗಳು, ವರ್ಷದ ನಂತರ ಅವರನ್ನು ಅಷ್ಟೇನೂ ಕಾಡಲಾರದು. ಇದೆಲ್ಲದರ ಹಿಂದಿನ ಅದೃಶ್ಯ ಸೂತ್ರಧಾರ – ಅದು ಒಬ್ಬ ವ್ಯಕ್ತಿ ಮಾತ್ರವಲ್ಲ, ಅಂಥ ಮನಸ್ಥಿತಿಯನ್ನು ರೂಪಿಸಿದ ಒಂದು ವ್ಯವಸ್ಥೆಯೂ ಆಗಿರಬಹುದು – ಹಾಗೇ ಉಳಿಯುತ್ತದೆ. ಇಡೀ ಘಟನೆಯಲ್ಲಿ ನಿಜವಾದ ಬಲಿಪಶುಗಳು ಈಗ ಲಾಕಪ್ಪಿನಲ್ಲಿ ಹೊಡೆತ ತಿನ್ನುತ್ತಿರುವ ತರುಣರು. ತಮ್ಮ ಜೊತೆ ಮಾಧ್ಯಮದವರನ್ನೂ ಕರೆದೊಯ್ದು ಸ್ಪಷ್ಟ ಸಾಕ್ಷಿಯನ್ನೂ ಒದಗಿಸಿಕೊಟ್ಟು ಕೋಳ ಕೈಗೆ ತೊಡಿಸಿಕೊಂಡವರು. ಅವರ ಮೇಲೆ ಬಲವಾದ ಚಾರ್ಜ್‌ಶೀಟ್ ಹಾಕಬೇಕೆಂದು ಮಹಿಳಾ ಆಯೋಗ ಸೂಚಿಸಿದೆ. ಸರ್ಕಾರವೂ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಹೇಳಿ ತನ್ನ ಕಳಂಕ ಕಳೆದುಕೊಳ್ಳಲೆತ್ನಿಸುತ್ತಿದೆ. ಹೀರೋಗಳಾಗಹೊರಟವರನ್ನು ಹುತಾತ್ಮರಾಗಿಸಲು ಅವರನ್ನು ಬಳಸಿಕೊಂಡ ವ್ಯವಸ್ಥೆಯೇ ಪ್ರಯತ್ನಿಸುತ್ತಿದೆ.

* ಯಾವುದೇ ವ್ಯಕ್ತಿಯ ಖಾಸಗಿ ಸರಿತಪ್ಪುಗಳ ವಿಚಾರಣೆ ಮಾಧ್ಯಮದವರ ಎದುರಿಗೆ ಆಗಬೇಕಾದ ಕೆಲಸವಲ್ಲ. ಟಿವಿಯ ರಿಯಾಲಿಟಿ ಶೋಗಳ ಪ್ರಹಸನದಲ್ಲಿ ಅದು ಸಾಧ್ಯವಾಗಬಹುದು. ಆದರೆ ಅದು ವೈಯಕ್ತಿಕ ಸ್ವಾತಂತ್ರ್ಯ ಮತ್ತು ಘನತೆಯ ನಾಶ. ಕಾನೂನುಬಾಹಿರ, ಸಮಾಜ ವಿರೋಧಿ ಚಟುವಟಿಕೆ ನಡೆಯುತ್ತಿದೆ ಎಂದಾದಲ್ಲಿ ಅದನ್ನು ನಿಲ್ಲಿಸುವಂತೆ ಮನವೊಲಿಸಬೇಕು ಅಥವಾ ಅದು ಸಾಧ್ಯವಾಗದಿದ್ದಲ್ಲಿ ಪೊಲೀಸರಿಗೆ ದೂರು ನೀಡಬೇಕು. ಅದುಬಿಟ್ಟು ಸುದ್ದಿಯ ಹಪಾಹಪಿತನಕ್ಕಾಗಿ ನಡೆದಿದ್ದನ್ನು ಪೊಲೀಸರಿಗೆ ತಿಳಿಸದೇ, ತಡೆಗಟ್ಟದೇ ಚಿತ್ರೀಕರಿಸಿಕೊಂಡಿದ್ದು ಮಾಧ್ಯಮದ ಮಂದಿಯ ತಪ್ಪು. ಅವರನ್ನು ಸೂಕ್ತ ವಿಚಾರಣೆಗೊಳಪಡಿಸಬೇಕು.

* ಸಮಾಜ ಮತ್ತು ಸರ್ಕಾರದ ದ್ವಂದ್ವ ನೀತಿಗಳು ತರುಣಪೀಳಿಗೆಯನ್ನು ಗೊಂದಲಗೊಳಿಸುವಂತಿವೆ. ಸರ್ಕಾರ ಒಂದೆಡೆ ಉಗುರು ಪಾಲಿಶ್, ಶೇವಿಂಗ್ ಕ್ರೀಂ,

ಮಂಗಳೂರು ಘಟನೆಯಲ್ಲಿ ಕೆಲ ವಿಪರ್ಯಾಸಕರ ಬೆಳವಣಿಗೆಗಳು ಸಂಭವಿಸಿವೆ. ಇಡೀ ರಾಜ್ಯ ಯಾರ ಪರವಾಗಿ ನಿಂತು ವಾದಿಸುತ್ತಿದೆಯೋ ಅವರಿಗದರ ಅವಶ್ಯಕತೆ ಇದೆಯೇ? ಪಾರ್ಟಿ ನಡೆಸುತ್ತಿದ್ದ ಮೇಲ್ವರ್ಗದ ವಿದ್ಯಾರ್ಥಿಗಳು ಕೆಲದಿನಗಳ ಬಳಿಕ ಎಂದಿನ ಜೀವನಕ್ಕೆ ಮರಳುತ್ತಾರೆ. ಟಿವಿಯಲ್ಲಿ ತಮ್ಮ ಸುದ್ದಿ ಬಂದಿದ್ದು ಕೆಲ ತಿಂಗಳು, ವರ್ಷದ ನಂತರ ಅವರನ್ನು ಅಷ್ಟೇನೂ ಕಾಡಲಾರದು. ಇಡೀ ಘಟನೆಯಲ್ಲಿ ನಿಜವಾದ ಬಲಿಪಶುಗಳು ಈಗ ಲಾಕಪ್ಪಿನಲ್ಲಿ ಹೊಡೆತ ತಿನ್ನುತ್ತಿರುವ ತರುಣರು. ತಮ್ಮ ಜೊತೆ ಮಾಧ್ಯಮದವರನ್ನೂ ಕರೆದೊಯ್ದು ಸ್ಪಷ್ಟ ಸಾಕ್ಷಿಯನ್ನೂ ಒದಗಿಸಿಕೊಟ್ಟು ಕೋಳ ಕೈಗೆ ತೊಡಿಸಿಕೊಂಡವರು.

ಬ್ಲೇಡ್ ಕಂಪನಿಗಳಿಂದ ಹಿಡಿದು ಸುಗಂಧ ದ್ರವ್ಯಗಳ ತನಕ ಸರ್ವಾಂಗಗಳನ್ನೂ ಸುಂದರಗೊಳಿಸುವ ಪ್ರಸಾಧನ ಕಂಪನಿಗಳಿಗೆ ರತ್ನಗಂಬಳಿ ಹಾಕಿ ಸ್ವಾಗತಿಸಿ ಬಂಡವಾಳ ಹೂಡಲು ನೆಲ-ನೀರು-ಮಾನವ ಸಂಪನ್ಮೂಲಗಳನ್ನು ಒದಗಿಸುವುದಾಗಿ ಹೇಳುತ್ತಿದೆ. ಉತ್ಪಾದಿಸಿದ ಸರಕನ್ನು ಮಾರಾಟ ಮಾಡಲು ತನ್ನ ತರುಣತರುಣಿಯರನ್ನೇ ರೂಪದರ್ಶಿಯಾಗಿ ಸಮಾಜ ಒಪ್ಪಿಕೊಳ್ಳುತ್ತಿದೆ. ಮದ್ಯ ಕಂಪನಿಗಳೂ ಸೋಡಾದ ಹೆಸರಲ್ಲಿ ತಮ್ಮ ಬ್ರ್ಯಾಂಡ್ ಅನ್ನು ಪ್ರಚಾರ ಮಾಡಬಹುದಾಗಿದೆ. ಸರ್ಕಾರವೇ ಮುಂದೆ ನಿಂತು ವಿಶ್ವ ಸುಂದರಿ ಸ್ಪರ್ಧೆ ಆಯೋಜಿಸುತ್ತದೆ. ಹೆಚ್ಚು ಕಡಿಮೆ ಎಲ್ಲ ಕಾಲೇಜುಗಳಲ್ಲಿ ಫ್ಯಾಷನ್ ಶೋ ನಡೆಯುತ್ತವೆ. ಹಾಗಾದರೆ ಮೋಜು-ಹೊಸದರ ಬಗೆಗೆ ಸಹಜ ಸೆಳೆತವುಳ್ಳ ತರುಣ ಪೀಳಿಗೆ ಇವನ್ನೆಲ್ಲ ನೋಡುತ್ತ ಯಾವುದನ್ನು ಮೌಲ್ಯವೆಂದುಕೊಂಡೀತು? ಈ ಕುರಿತು 'ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್' ನಡೆಸುವ ಸರ್ಕಾರ ಯೋಚಿಸಿದೆಯೆ? ಮಾಧ್ಯಮದಲ್ಲಿ ಪ್ರಸಾರವಾಗುವ ಪ್ರತಿ ಸೀರಿಯಲ್, ಜಾಹೀರಾತು, ಶೋಗಳೂ ಹೆಣ್ಣನ್ನು ಸರಕುಗಳ ದಾಸಿಯೆಂಬಂತೆ ಚಿತ್ರಿಸುತ್ತಿವೆ.

ಅಲಂಕಾರವಿಲ್ಲದೇ ಸರಳವಾಗಿ, ನೀಟಾದ ಉಡುಪು ತೊಟ್ಟ ಒಂದು ಪಾತ್ರವೂ ಸೀರಿಯಲ್-ಸಿನಿಮಾಗಳಲ್ಲಿ ಕಂಡುಬರುವುದಿಲ್ಲ. ಸರಕು ಸಂಸ್ಕೃತಿಯ ಏಜೆಂಟರಿಗೆ ಸರಳತೆ ಮೌಲ್ಯವಲ್ಲ, ಹೆಚ್ಚೆಂದರೆ ಅದಕ್ಕೆ ಮ್ಯೂಸಿಯಮ್ಮಿನ ವಸ್ತುವಿಗಿರುವ ಬೆಲೆ ಇದೆ ಅಷ್ಟೇ. ಹೀಗಿರುತ್ತ ಹುಡುಗಿಯರು ಮಾತ್ರ ಮೈತುಂಬ ಉಡುಗೆ ತೊಡಬೇಕು; ಪ್ರಚೋದಕ ಉಡುಪುಗಳನ್ನು ತೊಡುವುದೇ ಮಾನಭಂಗ, ಅತ್ಯಾಚಾರಕ್ಕೆ ಕಾರಣವಾಗುತ್ತದೆ ಎನ್ನುವುದು ಯಾವ ನ್ಯಾಯ?

* ರಾಜ್ಯ ಮಹಿಳಾ ಆಯೋಗ ಮಹಿಳೆ ನೈತಿಕತೆ ಉಳಿಸಿಕೊಂಡು ಹೋಗಬೇಕೆಂಬ ಮಾತನ್ನೇ ಹೇಳಿ ಹೋಗಿದೆ. ಇದು ಸಾಮಾಜಿಕ ನಿರೀಕ್ಷೆಯೂ ಆಗಿದೆ. ಸಂಸ್ಕೃತಿ, ನೈತಿಕತೆಯನ್ನುಳಿಸಿ ಬೆಳೆಸುವುದು ಮಹಿಳೆಯ ಕರ್ತವ್ಯವೆಂದು ಭಾವಿಸುವ ಸನಾತನ ಮನಸ್ಸುಗಳು ಅವಳು ಉಲ್ಲಂಘಿಸುವುದನ್ನು ಎಷ್ಟು ಮಾತ್ರಕ್ಕೂ ಸಹಿಸುವುದಿಲ್ಲ. ಹೀಗಾಗಿಯೇ ಹುಡುಗರು ಪಬ್‌ಗೆ ಹೋಗುವುದು ಕಡಿಮೆ ಅಪರಾಧವಾಗಿಯೂ, ಹುಡುಗಿ ಹೋಗುವುದು ಮಹಾಪರಾಧವಾಗಿಯೂ ತೋರುತ್ತದೆ. ಇತ್ತೀಚೆಗೆ ಪತ್ರಿಕೆಯೊಂದು ರೇಪ್‌ವಿಕ್ಟಿಮ್‌ಗಳ ಕುರಿತು ಸಮೀಕ್ಷೆ ನಡೆಸಿ ಕೆಲ ಪೊಲೀಸ್ ಅಧಿಕಾರಿಗಳನ್ನೂ ಭೇಟಿ ಮಾಡಿತು. ಅವರ ಒಟ್ಟೂ ಅಭಿಪ್ರಾಯ - ಹೆಣ್ಣು ಕೆರಳಿಸುವಂತಹ ಉಡುಗೆ ತೊಟ್ಟು ಹೊರಹೋಗಬಾರದು. ಡೀಸೆಂಟ್ ಆದ ಬಟ್ಟೆ ಧರಿಸಿದರೆ ರೇಪ್ ತಡೆಗಟ್ಟಬಹುದು ಇತ್ಯಾದಿ. ಈ ಘಟನೆ ಹೇಳುವ ಕೆಲ ಸಂದೇಶಗಳು ಗಾಬರಿ ಹುಟ್ಟಿಸುವಂತಿವೆ. ಕೆಲ ದಿನಗಳ ಹಿಂದೆ ಮಹಿಳಾ ಆಯೋಗ ಹೆಣ್ಣುಮಕ್ಕಳ ಉಡುಪಿನ ಕುರಿತು ಹೇಳುವಾಗ ಪುರುಷರು ಕೆರಳುವಂತಹ ಉಡುಪು ಧರಿಸಬಾರದೆಂದು ಹೇಳಿತ್ತು. ಇದು ಹೀಗೇ ಮುಂದುವರೆದು ಸಂಜೆ ಮೇಲೆ ಮನೆ ಬಿಟ್ಟು ಹೊರಹೋಗಬಾರದು, ಪರವೂರುಗಳಲ್ಲಿ ಒಂಟಿಯಾಗಿರಬಾರದು, ನೌಕರಿ ಮಾಡಬಾರದು, ನೈಟ್‌ಶಿಫ್ಟ್ ಕೆಲಸ ಮಾಡಬಾರದು, ಹುಡುಗರ ಜೊತೆ ಮಾತನಾಡಬಾರದು - ಏಕೆಂದರೆ ಆಗೆಲ್ಲ ಪುರುಷ ಕೆರಳುವ ಸಾಧ್ಯತೆ ಇರುತ್ತದೆ ಎನ್ನುವುದಾದರೆ ಇದು ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತದೆ? ಶುದ್ಧತೆಯ, ಪಾವಿತ್ರ್ಯತೆಯ ಪಾಠಗಳು ಸಾರ್ವಜನಿಕವಾಗಿ ಉಪದೇಶಿಸಲ್ಪಟ್ಟರೆ, ಲಾಠಿ ಒಡಿದ ಪೊಲೀಸರು ಶೀಲದ ಬಗೆಗೆ ಮಾತನಾಡುವಂತಾದರೆ, ಯುವತಿ ತೊಟ್ಟ ಬಟ್ಟೆ ಹರಿದು ಬಲವಂತವಾಗಿ ಸೆರಗು ಮುಚ್ಚುವ ಸೀರೆ ಉಡಿಸುವಂತಾದರೆ ಅದನ್ನು ಗೂಂಡಾಗಿರಿ ಎನ್ನದೇ ವಿಧಿಯಿಲ್ಲ. ಸಂಸ್ಕೃತಿ ರಕ್ಷಣೆಯ ಹೆಸರಿನ ಬಲವಂತದ ಹೇರಿಕೆಗಳು ಬ್ಯಾಕ್‌ಫೈರ್ ಆಗುವುದರಲ್ಲಿ ಸಂದೇಹವೇ ಇಲ್ಲ.

* * *

ಕೆನೆಯುತ್ತಿರುವ ಕುದುರೆಯ ಮೇಲೆ ಕುಳಿತು, ಗುರಾಣಿ ತೊಟ್ಟು, ಖಡ್ಗ ಹಿರಿದ ಕಿತ್ತೂರು ಚೆನ್ನಮ್ಮ ಹೆಣ್ಣಿನ ಧೈರ್ಯ, ಸ್ವಾತಂತ್ರಗಳು ಘನೀಕರಣಗೊಂಡ ಸಂಕೇತವಾಗಷ್ಟೇ ಉಳಿದಿದ್ದಾಳೆ ಎಂದು ಹುಬ್ಬಳ್ಳಿಯ ಚೆನ್ನಮ್ಮನ ಪ್ರತಿಮೆಯ ಸುತ್ತ ಸುತ್ತುಹಾಕುವಾಗ ಅನಿಸಿತ್ತು. ನಿಜ ಜೀವನದಲ್ಲಿ ಹೆಣ್ಣು ಕತ್ತಿ ಹಿರಿದು ನಿಲ್ಲುವುದನ್ನು, ಹೋರಾಡುವುದನ್ನು ಯಾರೂ ಬಯಸುವುದಿಲ್ಲ. ಅಂದು ಹಲ್ಲೆ ನಡೆದ ದಿನ ಹುಡುಗಿಯರು ತಿರುಗಿ ಕೈಕೈ ಮಿಲಾಯಿಸಿದ್ದರೆ ಈಗ ಅವರ ಪರವಾಗಿ ಮಾತನಾಡುತ್ತಿರುವವರಾರೂ ದನಿಯೆತ್ತುತ್ತಿರಲಿಲ್ಲ. ಆರ್ಥಿಕವಾಗಿ ಸಬಲಳಾಗತೊಡಗಿದ್ದರೂ, ಶಿಕ್ಷಣ-ಅಧಿಕಾರಗಳಲ್ಲಿ ಹೆಣ್ಣು ಅಸ್ತಿತ್ವ ಕಾಣತೊಡಗಿದ್ದರೂ ದೈಹಿಕ ರಕ್ಷಣೆ, ಆತ್ಮರಕ್ಷಣೆ ಮಾಡಿಕೊಳ್ಳದ ಮೇಲೆ ಸಮಾನತೆ ಹಾಗೂ ಸ್ವಾತಂತ್ರ್ಯಕ್ಕೆ ಯಾವ ಅರ್ಥವಿದೆ? ಅದಕ್ಕೇ ಹೆಣ್ಣು ಗಂಡೆನ್ನದೇ ಎಲ್ಲರೂ ಆತ್ಮರಕ್ಷಣೆಯ ವಿಧಾನಗಳನ್ನು, ನೈತಿಕತೆಯ ಮಾಪನಗಳನ್ನು ಅವರವರೇ ರೂಪಿಸಿಕೊಂಡು ಸ್ವನಿರ್ಬಂಧ ಹೇರಿಕೊಳ್ಳಬೇಕು. ಹಾಗೆಂದುಕೊಳ್ಳುತ್ತಿರುವಾಗಲೇ ಮೈಸೂರು-ಬೆಂಗಳೂರು ಮಾರ್ಗದ ರೈಲಿನಿಂದ ಒಬ್ಬ ಯುವತಿಯನ್ನು ಕೆಳತಳ್ಳಲಾಗಿದೆ. ಆಕೆಯ ಕುರಿತು, ಅವಳ ನಡತೆಯ ಕುರಿತು, ದೂಡಲು ಕಾರಣರಾದವರ ಕುರಿತು ದಿನಕ್ಕೊಂದು ಸುದ್ದಿ ಹೊರಬರುತ್ತಿದೆ. ಆ ಹುಡುಗಿಯ ನಡತೆ ಸರಿಯಿಲ್ಲವೆಂದು ಘಟನೆಯನ್ನು ಮುಕ್ತಾಯ ಮಾಡಲು ಪ್ರಯತ್ನಿಸಲಾಗುತ್ತಿದೆ. ಎಂದರೆ ರೈಲಿನಿಂದ ದೂಡಲ್ಪಟ್ಟವಳ ನಡತೆ ಸರಿಯಿಲ್ಲವೆಂದರೆ ದೌರ್ಜನ್ಯ ಸಮರ್ಥನೀಯವೇ?

ಪುರುಷ ಪ್ರಧಾನ ಸಮಾಜ ಸೃಷ್ಟಿಸಿದ ಕಪ್ಪುಚುಕ್ಕೆ ವೇಶ್ಯಾವಾಟಿಕೆ. ತನ್ನ ದೇಹ, ಮಾನ, ಆರೋಗ್ಯ, ಯೌವನ, ಸಂಸಾರ ಸುಖ - ಎಲ್ಲವನ್ನೂ ಹೆಣ್ಣು ನಾಲ್ಕು ಕಾಸಿಗೆ ಮಾರುವ ವ್ಯವಸ್ಥೆಯೊಂದನ್ನು ಸಾವಿರಾರು ವರ್ಷಗಳಿಂದ ಜೀವಂತ ಇಟ್ಟುಕೊಂಡುಬಂದಿರುವ ವ್ಯವಸ್ಥೆ ಎಷ್ಟು ಕ್ರೂರ! ಮಂಗಳೂರಿನಲ್ಲಾಗಲೀ ಅಥವಾ 'ಕಾಮರೂಪ' ಎನಿಸಿಕೊಂಡ ಅಸ್ಸಾಮಿನಲ್ಲಾಗಲೀ ವೇಶ್ಯಾವಾಟಿಕೆಗಳಿಗೆ ಹೆಣ್ಣು ಮಾರುವವರನ್ನು, ಅಪ್ರಾಪ್ತ ವಯಸ್ಸಿನ ಲಕ್ಷಾಂತರ ಬಾಲಕಿಯರನ್ನು ಸಾಗಿಸುವವರನ್ನು ಸಂಸ್ಕೃತಿ ರಕ್ಷಕರು ಪ್ರಶ್ನಿಸುವುದಿಲ್ಲ. ತಮ್ಮ ಮಗಳು-ಮೊಮ್ಮಗಳ ವಯಸ್ಸಿನವಳ ಜೊತೆ ಮಲಗೆದ್ದು ಬರಲು ಯಾವ ಸಂಸ್ಕೃತಿಯೂ ಅಡ್ಡಿಪಡಿಸುವುದಿಲ್ಲ. ಶೀಲ ಮಾರಿಕೊಳ್ಳುವ ಪರಿಸ್ಥಿತಿ ಏಕೆ ಬಂತೆಂಬುದರ ಬಗ್ಗೆ ಆಳ ಚಿಂತನೆ ನಡೆಸುವುದಿಲ್ಲ.

ಏಕೆಂದರೆ ಬಾಡಿಗೆ ನೈತಿಕತೆಯ ನ್ಯಾಯಪ್ರಜ್ಞೆಗೆ ಅಸಲಿಗೆ ಇವು ಸಮಸ್ಯೆ ಎನಿಸಿಯೇ ಇಲ್ಲ!

* * *

ಸುದ್ದಿಗಾಗಿ ನಡೆದ ಮಾನಭಂಗವನ್ನು ಒಂದು ಶೀರ್ಷಿಕೆಯಡಿ ಬರೆದು ಸರಿಪಡಿಸಲಾಗುವುದಿಲ್ಲ. ಆತ್ಮಸಾಕ್ಷಿಯಿಲ್ಲದ ಮಾಧ್ಯಮ, ಮಾನಭಂಗ, ಕರಾವಳಿಯ ಬಿಕ್ಕಟ್ಟು, ನೈತಿಕತೆ, ವೇಶ್ಯಾವಾಟಿಕೆ, ಯುವತಲ್ಲಣ - ಇವೆಲ್ಲವನ್ನೂ ಒಂದೇ ಶೀರ್ಷಿಕೆಯಡಿ ವಿವರಿಸಲೂ ಸಾಧ್ಯವಿಲ್ಲ.

ಅದಕ್ಕೇ, ಈ ಬರಹಕ್ಕೆ 'ನೋ ಟೈಟಲ್ ಪ್ಲೀಸ್...' ■

ಕನ್ನಡ-ಕನ್ನಡಿಗ-ಕರ್ನಾಟಕ: ಕೆಲವು ಟಿಪ್ಪಣಿಗಳು

ಕನ್ನಡ-ಕನ್ನಡಿಗ-ಕರ್ನಾಟಕ ಈ ಮೂರು ವಿಷಯಗಳನ್ನು ಕುರಿತ ವೈಚಾರಿಕತೆ, ಅದರೊಳಗಿನ ರಾಜಕೀಯ ಧೋರಣೆ ಮತ್ತು ಅದರ ವರ್ಗಹಿತಾಸಕ್ತಿ ಇವುಗಳನ್ನು ಮರುವಿಮರ್ಶೆ ಮಾಡುವ ಅಗತ್ಯವಿದೆ. ಇವುಗಳ ಬಗ್ಗೆ ಸಾಮಾಜಿಕ ಶ್ರೇಣೀಕರಣದಲ್ಲಿ ಯಾರು ಆಸಕ್ತಿ ತೋರಿದ್ದಾರೆ ಮತ್ತು ಯಾರು ಆಸಕ್ತಿ ತೋರಿಲ್ಲ ಎಂಬುದು ಕುತೂಹಲದ ಮತ್ತು ಗಂಭೀರವಾದ ಆಯಾಮ. ಬಹುತೇಕ ದಲಿತರು ಮತ್ತು ಮಹಿಳೆಯರು ಇವುಗಳ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಕರ್ನಾಟಕದಲ್ಲಿ 'ಹಿಂದುಳಿದ' ಪ್ರದೇಶದವರು, ಕೆಲವು ಹೋರಾಟಗಳು ಇವುಗಳ ಬಗ್ಗೆ ತಲೆಕೆಡಿಸಿಕೊಂಡಿಲ್ಲ.

ಔಪಚಾರಿಕ ಶಿಕ್ಷಣದಲ್ಲಿ ಹಾಗೂ ಸಾರ್ವಜನಿಕ ಜೀವನದಲ್ಲಿ ಇವುಗಳ ಬಗ್ಗೆ ಒಂದೇ ಮಾದರಿಯ ನಂಬಿಕೆಯನ್ನು ಗಟ್ಟಿಗೊಳಿಸಲಾಗಿದೆ. ಕನ್ನಡ-ಕನ್ನಡಿಗ-ಕರ್ನಾಟಕವನ್ನು ಕುರಿತ ವೈಚಾರಿಕತೆಯು ಮೌಲ್ಯವಾಗಿ, ಸಾಮಾಜಿಕ ಪ್ರಜ್ಞೆಯಾಗಿ ಇವೆಲ್ಲಕ್ಕಿಂತ ಹೆಚ್ಚಾಗಿ ಒಂದು ಗಟ್ಟಿ ನಂಬಿಕೆಯಾಗಿ ಬೇರುಬಿಟ್ಟಿದೆ. ಹಾಗಾಗಿ ಇವುಗಳ ವೈಚಾರಿಕತೆಯನ್ನು ಪ್ರಶ್ನೆ ಮಾಡಲು ಅವಕಾಶವೇ ಇಲ್ಲದಂತಾಗಿದೆ. ಈ ಹಿನ್ನೆಲೆಯಲ್ಲಿ ಈ ಮೂರು ವಿಷಯಗಳ ಚಲನಶೀಲ ವೈರುಧ್ಯತೆಯ ಪ್ರಧಾನ ಅಂಶಗಳನ್ನು ಇಲ್ಲಿ ಚರ್ಚಿಸಲಾಗುವುದು.

'ನಾವೆಲ್ಲ ಕನ್ನಡಿಗರು' ಎಂಬುದು ಒಂದು ಕಲ್ಪಿತ ನಂಬಿಕೆ. ಅದೊಂದು ಹೇರಿಕೆಯ ವಿಷಯ. ಅದೊಂದು ಹುಸಿ ವಾಸ್ತವ. 'ನಾವೆಲ್ಲ ಕನ್ನಡಿಗರು' ಎಂದು ಹೇಳಿದಾಗಲೆಲ್ಲ ಅಥವಾ ಅದನ್ನು ಕೇಳಿದಾಗಲೆಲ್ಲ ಸಮಾಜದ ಹಲವು ಜಾತಿ, ವೃತ್ತಿ ಮತ್ತು ಆರ್ಥಿಕ ಏರುಪೇರುಗಳು ಕಣ್ಣೆದುರು ಬರುತ್ತವೆ; ಬರಬೇಕು. ಹೊಲೆಯ, ಮಾದಿಗ, ದಕ್ಕಲ, ಭಂಗಿ, ಹಕ್ಕಿಪಿಕ್ಕಿ, ಒಕ್ಕಲಿಗ, ಲಿಂಗಾಯಿತ, ಬ್ರಾಹ್ಮಣ ಈ ಸಮುದಾಯದವರನ್ನೆಲ್ಲ ಯಾವ ಕಾರಣಕ್ಕೆ ಒಂದೇ ಎಂದು ಹೇಳಲು ಸಾಧ್ಯ? ಅವರ ನಡುವೆ ಯಾವ ಬಗೆಯ ಸಾಮಾಜಿಕ-ಆರ್ಥಿಕ ಸಂಬಂಧಗಳಿವೆ? ಅವರ ನಡುವೆ ಯಾವ ಬಗೆಯ ನಂಟುಗಳಿವೆ? ಅವರ ನಡುವೆ ಪರಸ್ಪರ ಊಟ, ಮದುವೆ ಇವು ಸಾಧ್ಯವೆ? ಇವು ನಡೆದಿವೆಯೆ? ಸಾಮಾಜಿಕ, ಆರ್ಥಿಕ ಶ್ರೇಣೀಕರಣದಲ್ಲಿ ಒಬ್ಬರ ತಲೆಯ ಮೇಲೆ ಒಬ್ಬರು ಸಾಗುತ್ತಿರುವುದರಿಂದ; ಒಬ್ಬರ ಪಾದದ ಕೆಳಗೆ ಒಬ್ಬರು ಸಾಗುತ್ತಿರುವುದರಿಂದ ಅವರನ್ನೆಲ್ಲ ಒಂದೇ ಎನ್ನಲು ಬರುತ್ತದೆಯೆ?

ಕೆಲವು ಅಪ ಕಲ್ಪನೆಗಳು

ಕನ್ನಡ-ಕನ್ನಡಿಗ-ಕರ್ನಾಟಕ 'ಇವು ಹೀಗಿದ್ದವು' ಎಂದು ಔಪಚಾರಿಕವಾಗಿ ಹೇಳಿಕೊಡಲಾಗಿದೆ. ಪ್ರಧಾನವಾಗಿ ಔಪಚಾರಿಕ ಶಿಕ್ಷಣ, ಉಳಿದಂತೆ ವಿವಿಧ ಮಾಧ್ಯಮಗಳು ಈ ಕೆಲಸವನ್ನು ಮಾಡುತ್ತಿವೆ. ಕನ್ನಡ-ಕನ್ನಡಿಗ-ಕರ್ನಾಟಕ ಇವುಗಳ ನಿಜವಾದ ಚಲನಶೀಲ ವಸ್ತುಸ್ಥಿತಿಯ ವಿಷಯ ಬೇರೆ ಇದೆ. ಇವುಗಳ ಬಗ್ಗೆ ಭಾವನಾತ್ಮಕವಾದ ಗೌರವವನ್ನು ಬಲಾತ್ಕಾರವಾಗಿ ಮೂಡಿಸಲಾಗಿದೆ. ಜ್ಞಾನ ಹಾಗೂ ತಿಳುವಳಿಕೆ ಎಂಬುದು ನಂಬಿಕೆಯಾದಾಗ ಅದನ್ನು ಪ್ರಶ್ನಿಸುವ ಮನೋಭಾವ ಹುಟ್ಟುವುದಿಲ್ಲ. ಪರಿಣಾಮವಾಗಿ ಇವು ಪ್ರಶ್ನಾತೀತ ಜಡ ನಂಬಿಕೆಗಳಾಗಿ ಮತ್ತು ಜಡ ಮೌಲ್ಯಗಳಾಗಿ ಮುಂದುವರಿದಿವೆ.

ಕನ್ನಡ-ಕನ್ನಡಿಗ-ಕರ್ನಾಟಕ ಇವನ್ನು ಸಾಮಾನ್ಯವಾಗಿ ಗತದ ಸಂಗತಿಗಳಾಗಿ ವಿವರಿಸಲಾಗುತ್ತಿದೆ. ಗತಿಸಿದ ಇತಿಹಾಸದಲ್ಲಿ ಕನ್ನಡ ಹಾಗೂ ಕರ್ನಾಟಕ ಹೇಗಿತ್ತು, ಕನ್ನಡಿಗರು ಹೇಗಿದ್ದರು ಎಂಬ ಸಂಗತಿಗಳಿಗೆ ಪ್ರಧಾನ ಮನ್ನಣೆ ಸಿಕ್ಕಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ 'ಕವಿರಾಜಮಾರ್ಗ'ದ ಒಂದು ಉಲ್ಲೇಖವನ್ನು ಮೇಲಿಂದ ಮೇಲೆ ಹೇಳಿಹೇಳಿ ಜನಪ್ರಿಯಗೊಳಿಸಲಾಗಿದೆ. ಗತವನ್ನು ವಿವರಿಸುವುದು, ಅದರ ಬಗ್ಗೆ ಭಾವನಾತ್ಮಕವಾದ ಒಲವನ್ನು ಹುಟ್ಟುಹಾಕಲು ಪ್ರಯತ್ನಿಸುವುದು ಒಂದು ಜನಪ್ರಿಯ ವಿಧಾನ. ನಾಡುನುಡಿಯ ಬಗ್ಗೆ ಹೆಮ್ಮೆ, ಅಭಿಮಾನ ಮೂಡಬೇಕು ಮತ್ತು ಅದು ಗಟ್ಟಿಯಾಗಬೇಕು ಎಂಬ ಧೋರಣೆ ಇಲ್ಲಿ ಕೆಲಸ ಮಾಡಿದೆ. ಇದು ವರ್ತಮಾನವನ್ನು ಕುರಿತು ಆಲೋಚಿಸಲು ಅಡ್ಡಿಯಾಗಿದೆ.



ವಸಾಹತುಶಾಹಿ ಕಾಲದಲ್ಲಿ ಬ್ರಿಟಿಶ್ ವಿರೋಧಿ ಹೋರಾಟ ಮತ್ತು ಅದಕ್ಕೆ ಪೂರಕವಾದ ವೈಚಾರಿಕತೆ ಕೆಲಸ ಮಾಡಿತ್ತು. ವಸಾಹತುಶಾಹಿಗೆ ವಿರುದ್ಧ ನೆಲೆಯಲ್ಲಿ ಕನ್ನಡ–ಕನ್ನಡಿಗ–ಕರ್ನಾಟಕ ಇವುಗಳನ್ನು ನಿರೂಪಿಸುವ ಪ್ರಯತ್ನಗಳು ನಡೆದವು. ನಂತರ ಏಕೀಕರಣಕ್ಕೆ ನಡೆದ ಪ್ರಯತ್ನಗಳಲ್ಲಿ ಕನ್ನಡ–ಕನ್ನಡಿಗ–ಕರ್ನಾಟಕ ಇವುಗಳನ್ನು ಅಖಂಡವಾಗಿ ನಿರೂಪಿಸಿಕೊಳ್ಳಲಾಯಿತು. ಇವೆರಡೂ ಕೂಡ ಚಾರಿತ್ರಿಕ ಅಗತ್ಯಕ್ಕಾಗಿ ನಡೆಸಿದ ಪ್ರಯತ್ನಗಳು. ಅದರ ಪರಿಣಾಮವಾಗಿ ಕನ್ನಡ–ಕನ್ನಡಿಗ–ಕರ್ನಾಟಕ ಇವನ್ನು ಅಖಂಡವಾಗಿಯೇ ನಿರೂಪಿಸಿ ನಂಬಿಸಲಾಯಿತು. ಅವನ್ನು ಸಾಬೀತುಪಡಿಸಲು ಲಿಖಿತ ಆಕರಗಳನ್ನು ಆಧಾರವಾಗಿ ಕೊಡಲಾಯಿತು. ಲಿಖಿತ ಆಕರಗಳ ಆಚೆಗಿದ್ದ ಲೋಕವನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಲಾಯಿತು. ಈ ಅಖಂಡ ಕಲ್ಪನೆಯ ನಿರೂಪಣೆಯು ಹಲವು ಕನ್ನಡಗಳನ್ನು, ಹಲವು ಕನ್ನಡಿಗರನ್ನು ಮತ್ತು ಹಲವು ಕರ್ನಾಟಕಗಳನ್ನು ಸಂಪೂರ್ಣ ಮುಚ್ಚಿಟ್ಟಿತು. ಈ ಅಖಂಡ ಕಲ್ಪನೆಯ ವೈಚಾರಿಕತೆಯ ಹಿಂದೆ ಯಜಮಾನಿಕೆಯ ಧೋರಣೆ ಇದೆ; ಆಳುವ ವರ್ಗದ ನೇರ ಮತ್ತು ಪ್ರತ್ಯಕ್ಷ ಹಿತಾಸಕ್ತಿ ಇದೆ. ಅದು ಸಂಕುಚಿತವಾದುದು; ಅಭಿಮಾನದ ಹೆಸರಿನಲ್ಲಿ ದುರಭಿಮಾನವನ್ನು ಮತ್ತು ಅಂಧಾಭಿಮಾನವನ್ನು; ಹೆಮ್ಮೆಯ ಹೆಸರಿನಲ್ಲಿ ಅಹಂಕಾರ ಮತ್ತು ಯಜಮಾನಿಕೆಯನ್ನು ಹೊಂದಿರುವಂತಹದ್ದು. ಆದರೆ ಇದು ಪ್ರಭುತ್ವ ಶಕ್ತಿಗೆ ಅತ್ಯಂತ ಆಪ್ಯಾಯಮಾನವಾದುದು. ಹಾಗಾಗಿಯೆ ಅಖಂಡ ಕನ್ನಡ, ಅಖಂಡ ಕನ್ನಡಿಗ ಮತ್ತು ಅಖಂಡ ಕರ್ನಾಟಕಗಳನ್ನು ತನ್ನ ಉದಾರವಾದಿ ನಿಲುವಿನಲ್ಲಿ ಹಾಡಿಹೊಗಳಲು ಪ್ರಭುತ್ವ ತನ್ನ ವೈಚಾರಿಕತೆಯನ್ನು ಧಾರಾಳವಾಗಿ ಹರಿಯಬಿಡುತ್ತದೆ.

ಕನ್ನಡ–ಕನ್ನಡಿಗ–ಕರ್ನಾಟಕ ಇವು ಅಖಂಡತೆಯ ವೈಚಾರಿಕತೆಯಲ್ಲಿ ಒಂದು ರೀತಿಯಲ್ಲಿ ರಾರಾಜಿಸುತ್ತಿವೆ. ಆಗಲೆ ಹೇಳಿದಂತೆ ಅದಕ್ಕೆ ಯಜಮಾನಿಕೆಯ ಗುಣ ಇರುವುದರ ಜೊತೆಗೆ ದಬ್ಬಾಳಿಕೆಯ ಗುಣ ಕೂಡ ಇದೆ. ತನ್ನದನ್ನು ಮಾತ್ರ ವೈಭವೀಕರಿಸುವ ತನ್ನದಲ್ಲದ್ದನ್ನು ನಿರಾಕರಿಸುವ ಸರ್ವಾಧಿಕಾರಿ ಗುಣ ಆ ವೈಚಾರಿಕತೆಗಿದೆ. ಈ ವೈಚಾರಿಕತೆ ನಿರಾಕರಿಸಿರುವ ಜಗತ್ತು ಬಹಳ ದೊಡ್ಡದಿದೆ. ಇದು ದಿನದಿಂದ ದಿನಕ್ಕೆ ಮತ್ತಷ್ಟು ಗಟ್ಟಿಯಾಗುತ್ತಲೆ ಸಾಗಿದೆ. ಈ ಎರಡು ಗುಣಗಳ ಜೊತೆಗೆ ಆ ವೈಚಾರಿಕತೆಗೆ ಸ್ತ್ರೀ ವಿರೋಧಿಯಾದ ಮತ್ತು ಪುರುಷ ಪರವಾದ ಗುಣ ಕೂಡ ಇದೆ. ಅದು ಆದರ್ಶ ಕನ್ನಡವನ್ನು, ಆದರ್ಶ ಕನ್ನಡಿಗನನ್ನು ಮತ್ತು ಆದರ್ಶ ಕರ್ನಾಟಕವನ್ನು ಕಲ್ಪಿಸಿಕೊಂಡಿದೆ. ಹಾಗಾಗಿ ಈ ಮೂರೂ ಕೂಡ ಕಲ್ಪಿತ ನೆಲೆಯವೇ ಆಗಿವೆ. ಅಂದರೆ ವೈಚಾರಿಕವಾಗಿ ಕಲ್ಪಿತ ಕನ್ನಡ, ಕಲ್ಪಿತ ಕನ್ನಡಿಗ ಮತ್ತು ಕಲ್ಪಿತ ಕರ್ನಾಟಕಗಳನ್ನು ಕುರಿತ ಪ್ರಜ್ಞೆಯನ್ನು ನಿರ್ಮಾಣ ಮಾಡಲಾಗಿದೆ.



ಕನ್ನಡ–ಕನ್ನಡಿಗ–ಕರ್ನಾಟಕ ಇವುಗಳನ್ನು ನಿರೂಪಿಸಿಕೊಂಡಿರುವ ಜಗತ್ತು ಅತ್ಯಂತ ಕಿರಿದಾದುದು; ಮತ್ತೂ ಹೇಳಬೇಕೆಂದರೆ ಅದು ಪಾರ್ಶ್ವಿಕವಾದುದು. ಅದು ಕೆಲವರ ಹಿತಾಸಕ್ತಿಯನ್ನು ಮಾತ್ರ ಅವಲಂಬಿಸಿದೆ. ಆ ನಿರೂಪಣೆಯಲ್ಲಿ ಮೇಲು–ಕೀಳು, ಶ್ರೇಷ್ಠ–ಕನಿಷ್ಠ ಎಂಬ ತಾರತಮ್ಯಗಳಿವೆ. ಅದು ತನಗೆ ಶ್ರೇಷ್ಠ ಎಂದು ಕಲ್ಪಿಸಿಕೊಂಡಿರುವುದನ್ನು ಮಾತ್ರ ಭಾಷಿಕವಾಗಿ ನಿರೂಪಿಸಿದೆ; ಸಮರ್ಥಿಸಿದೆ; ನಂಬಿಸಿದೆ. ಉಳಿದುದನ್ನು ಇದರಿಂದ ಹೊರಗಿಟ್ಟಿದೆ. ಜೊತೆಗೆ ಈ ಮೂರನ್ನೂ ಸಮಸ್ಯಾತೀತ ಜಡ ಸಂಗತಿಗಳೆಂದು ಪರಿಗಣಿಸಲಾಗಿದೆ. ಪರಿಣಾಮವಾಗಿ ಇಡೀ ಒಂದು ತಲೆಮಾರಿಗೆ ಪಾರ್ಶ್ವಿಕ, ಸಂಕುಚಿತ ಮತ್ತು ಕಲ್ಪಿತವಾದ ಕನ್ನಡ–ಕನ್ನಡಿಗ ಮತ್ತು ಕರ್ನಾಟಕದ ಪರಿಚಯ ಮಾಡಲಾಗಿದೆ.

ಈ ಪಾರ್ಶ್ವಿಕವಾದ, ಸಂಕುಚಿತವಾದ ಮತ್ತು ಕಲ್ಪಿತವಾದ ಕನ್ನಡ–ಕನ್ನಡಿಗ ಮತ್ತು ಕರ್ನಾಟಕ ಎಂಬ ಪ್ರಜ್ಞೆಯು ಭಾಷಿಕ ಅಂಧಾಭಿಮಾನವನ್ನು ಹಾಗೂ ದುರಭಿಮಾನವನ್ನು ನಿರ್ಮಾಣ ಮಾಡಿದೆ. ಭಾಷಿಕವಾಗಿ ಕನ್ನಡಿಗರು ಮತ್ತು ಕನ್ನಡಿಗರಲ್ಲದವರು ಎಂಬ ತರತಮವನ್ನು ಆ ಮೂಲಕ ಕಲ್ಪಿಸಿಕೊಳ್ಳಲಾಗಿದೆ. ಕನ್ನಡಿಗ ಎಂಬುದು ಹೇಗೆ ಒಂದು ಬಗೆಯಲ್ಲಿ ಕಲ್ಪಿತವೊ ಅದೇ ರೀತಿಯಲ್ಲಿ ಕನ್ನಡೇತರರು ಎಂಬುದೂ ಕೂಡ ಮತ್ತೊಂದು ಬಗೆಯಲ್ಲಿ ಕಲ್ಪಿತವಾದುದು. ನಾಡಿನ ಭಾಷಿಕ ಮತ್ತು ಕೆಲವು ಭಾಷಿಕೇತರ ಸಮಸ್ಯೆಗಳಿಗೆ ಆ ಕಲ್ಪಿತ ಕನ್ನಡೇತರರನ್ನು ಅತ್ಯಂತ ಸುಲಭವಾಗಿ ಗುರಿ ಮಾಡಲಾಗುತ್ತಿದೆ. ತಮ್ಮ ಎಲ್ಲ ಬಗೆಯ ದೌರ್ಬಲ್ಯ ಮತ್ತು ವಿಫಲತೆಗಳನ್ನು ಅತ್ಯಂತ ಸುಲಭವಾಗಿ ಆ ಕಲ್ಪಿತ ಕನ್ನಡೇತರರ ತಲೆಗೆ ಕಟ್ಟಲಾಗುತ್ತಿದೆ. ಪ್ರಭುತ್ವದ ಧೋರಣೆ ಮತ್ತು ಅದರ ಹುನ್ನಾರಗಳು ಈ ಕೆಲಸಕ್ಕೆ ಅತ್ಯಂತ ಶಕ್ತಿಶಾಲಿಯಾಗಿ ಬಳಕೆಯಾಗುತ್ತಿವೆ. ಕನ್ನಡೇತರರನ್ನು ಕನ್ನಡಿಗರಿಗೆ ಕಂಟಕರು ಎಂದು ದೂರಲಾಗುತ್ತಿದೆ; ಆರೋಪಿಸಲಾಗುತ್ತಿದೆ. ಈ ಪ್ರವೃತ್ತಿಯ ಹಿಂದೆ ಕನ್ನಡಿಗರು ಎಂದು ಕರೆದುಕೊಳ್ಳುತ್ತಿರುವವರಲ್ಲೇ ಇರುವ ಮಹಾನ್ ಕಂಟಕರನ್ನು ಮುಚ್ಚಿಡುವ ಕುತಂತ್ರಗಳು ಪರಿಣಾಮಕಾರಿಯಾಗಿ ಸಾಗಿವೆ. ಕನ್ನಡ, ಕನ್ನಡಿಗ ಮತ್ತು ಕರ್ನಾಟಕ ಇವುಗಳ ಎಲ್ಲ ಕೆಡುಕುಗಳಿಗೆ ಕನ್ನಡೇತರರನ್ನು ಗುರಿ ಮಾಡಲಾಗಿದೆ. ಇದು ಅತ್ಯಂತ ಅಪಾಯಕಾರಿ ಪರಿಸ್ಥಿತಿ.

ಎಲ್ಲದಕ್ಕೂ ಕನ್ನಡೇತರರನ್ನು ಗುರಿ ಮಾಡುತ್ತಿರುವ ಈ ಪ್ರವೃತ್ತಿ ಸಾಮಾಜಿಕ ಭಾವನೆಯಾಗಿ ಬೆಳೆದಿದೆ. ಅದು ಕರ್ನಾಟಕದೊಳಗಿನವರ ಸ್ವಂತ ಆಲೋಚನೆ ಇಲ್ಲದೆ ಮತ್ತು ಇವರ ಆಯ್ಕೆ ಇಲ್ಲದೆ ಕಲ್ಪಿತ ಮತ್ತು ಭ್ರಮಾತ್ಮಕ ಧೋರಣೆಯಾಗಿ ಮಾರ್ಪಟ್ಟಿದೆ. ಅದು ಸಾಮಾಜಿಕ ಮತ್ತು ರಾಜಕೀಯ ಮನೋಧರ್ಮವಾಗಿ ಬಹುಸಂಖ್ಯಾತರ ಪ್ರಜ್ಞೆಯಲ್ಲಿ ಮನೆ ಮಾಡಿದೆ. ತಮ್ಮದಲ್ಲದ ಈ ಮನೋಧರ್ಮವನ್ನು ಜನತೆ ತಮ್ಮದೆಂದೇ ಭಾವಿಸುವಂತೆ ಮಾಡಲಾಗಿದೆ.

ಹಲವು ಕನ್ನಡಗಳು ಮತ್ತು ಬದಲಾಗುತ್ತಿರುವ ಕನ್ನಡ

'ಹಲವು ಕನ್ನಡಗಳಿವೆ' ಎಂಬುದು ಕವಿರಾಜಮಾರ್ಗಕಾರನ ಒಂದು ಮಾತು. ಅದು ನಿಜವೂ ಹೌದು. ಕನ್ನಡ ಎಂಬುದು ಒಂದು ಭಾಷೆ, ಒಂದು ಮಾತು, ಒಂದು ಬರವಣಿಗೆ, ಒಂದು ತಿಳುವಳಿಕೆ, ಒಂದು ಅರಿವು, ಒಂದು ಜ್ಞಾನ, ಒಂದು ಜೀವನ ಕ್ರಮ, ಒಂದು ಸಂಸ್ಕೃತಿ, ಒಂದು ಪರಂಪರೆ. ಹೀಗೆ ಇದನ್ನು ವಿಸ್ತರಿಸುತ್ತ, ವಿವರಿಸುತ್ತ ಹೋಗಬಹುದು.

ಕನ್ನಡವು ಕೇವಲ ಒಂದು ಭಾಷೆಯಲ್ಲ; ಅದು ಹಲವು ಭಾಷೆಗಳನ್ನು ಹೊಂದಿದೆ. ಅದೇ ರೀತಿಯಲ್ಲಿ ಕನ್ನಡವು ಹಲವು ಬರವಣಿಗೆಗಳನ್ನು, ಹಲವು ತಿಳುವಳಿಕೆಗಳನ್ನು, ಹಲವು ಅರಿವುಗಳನ್ನು, ಹಲವು ಜ್ಞಾನಗಳನ್ನು, ಹಲವು ಜೀವನ ಕ್ರಮಗಳನ್ನು, ಹಲವು ಸಂಸ್ಕೃತಿಗಳನ್ನು, ಹಲವು ಪರಂಪರೆಗಳನ್ನು ಒಳಗೊಂಡಿದೆ.

ಕನ್ನಡ ಮಾತು ಹಲವು ಪ್ರಾದೇಶಿಕ ಪ್ರಭೇದಗಳನ್ನು ಮತ್ತು ಹಲವು ಸಾಮಾಜಿಕ ಪ್ರಭೇದಗಳನ್ನು ಒಳಗೊಂಡಿದೆ. ಬೀದರ್‌ನಿಂದ ಕೊಡಗಿನವರೆಗೆ, ಕೋಲಾರದಿಂದ ಬೆಳಗಾಂವರೆಗೆ ಕನ್ನಡದ ಹಲವು ಪ್ರಾದೇಶಿಕ ಪ್ರಭೇದಗಳು ಕ್ರಿಯಾಶೀಲವಾಗಿವೆ. ಅದೇ ರೀತಿಯಲ್ಲಿ ಜಾತಿ ಅಸಮಾನತೆ ಮತ್ತು ಅವುಗಳ ಶ್ರೇಣೀಕರಣಗಳಿಗೆ ಅನುಗುಣವಾಗಿ ಕನ್ನಡದ ಹಲವು ಸಾಮಾಜಿಕ ಪ್ರಭೇದಗಳೂ ಬಳಕೆಯಲ್ಲಿವೆ. ಮಾತ್ರವಲ್ಲ ಬೇರೆ ಬೇರೆ ವೃತ್ತಿಗಳಿಗೆ ಅನುಗುಣವಾಗಿ ಹಲವು ವೃತ್ತಿ ಪ್ರಭೇದಗಳು ಬಳಕೆಯಲ್ಲಿವೆ. ಹೆಣ್ಣು–ಗಂಡು ಎಂಬ ವಿಂಗಡಣೆಗೆ ಮತ್ತು ಅವುಗಳ ನಡುವಿನ ತಾರತಮ್ಯಗಳಿಗೆ ಅನುಗುಣವಾದ ಪ್ರಭೇದಗಳು ಬಳಕೆಯಲ್ಲಿವೆ. ವಯೋಮಾನಕ್ಕೆ ಅನುಗುಣವಾದ ಪ್ರಭೇದಗಳು ಬಳಕೆಯಲ್ಲಿವೆ. ಆರ್ಥಿಕ ಮತ್ತು ಸಾಮಾಜಿಕ ಅಂತಸ್ತುಗಳಿಗೆ ಅನುಗುಣವಾದ ಪ್ರಭೇದಗಳು ಬಳಕೆಯಲ್ಲಿವೆ. ಒಟ್ಟಾರೆ ಸಾಮಾಜಿಕ ರಚನೆ ಮತ್ತು ಸಾಮಾಜಿಕ ಚಲನಶೀಲತೆ ಎಷ್ಟು ಬಗೆಯಲ್ಲಿ ಹೋಳಾಗಿದೆಯೊ ಅಷ್ಟು ಬಗೆಯ ಭಾಷಿಕ ಪ್ರಭೇದಗಳು ಬಳಕೆಯಲ್ಲಿವೆ. ಇವೆಲ್ಲವೂ ಸಾಮಾಜಿಕ ತರಮತಗಳನ್ನು, ಏಣಿಶ್ರೇಣಿಗಳನ್ನು ಪ್ರತಿಬಿಂಬಿಸುತ್ತವೆ; ಪ್ರಕಟಿಸುತ್ತವೆ ಮತ್ತು ಪ್ರತಿನಿಧಿಸುತ್ತವೆ.

ಉತ್ಪಾದನೆಯ ವಿಧಾನಗಳು ಬದಲಾದಂತೆ ಹಾಗೂ ಅವು ವಿಸ್ತರಿಸಿದಂತೆ ಭಾಷಿಕ ಬಳಕೆಯ ವಲಯಗಳೂ ಹೊಸದೆಂಬಂತೆ ನಿರ್ಮಾಣವಾಗುತ್ತಿವೆ; ಬೆಳೆಯುತ್ತಿವೆ. ಸಾಂಪ್ರದಾಯಿಕ ಕೃಷಿ ಉತ್ಪಾದನೆಯಲ್ಲಿ ಒಂದು ಬಗೆಯ ಕನ್ನಡ ಬಳಕೆಯಲ್ಲಿತ್ತು. ಈಗ ಆಧುನಿಕ ಕೃಷಿ ಚಟುವಟಿಕೆಗಳು ಬಂದಿರುವುದರಿಂದ ಆ ಉತ್ಪಾದನ ವಲಯದಲ್ಲಿ ಬೇರೊಂದು ಕನ್ನಡ ಸೃಷ್ಟಿಯಾಗಿದೆ. ಹಾರೆ, ಗುದ್ದಲಿ, ಪಿಕಾಸಿ, ಸೆಗಣಿ ಇವುಗಳ ಜಾಗದಲ್ಲಿ ಕೈಗಾರಿಕೆಯ ಉತ್ಪನ್ನಗಳಾದ ರಸಗೊಬ್ಬರ, ಕ್ರಿಮಿನಾಶಕ ಇತ್ಯಾದಿಗಳನ್ನು ಪರಿಚಯಿಸುವ ಭಾಷೆಯೊಂದು ನಿರ್ಮಾಣವಾಗಿದೆ. ಕಂಪ್ಯೂಟರ್ ಹಾಗೂ ಸೈಬರ್ ಜಗತ್ತಿನಲ್ಲಿ ಕನ್ನಡವು ಬೇರೆ ರೂಪದಲ್ಲಿ ಬೆಳೆಯುತ್ತಿದೆ. ವಾಣಿಜ್ಯ, ವ್ಯಾಪಾರ ಮುಂತಾದ ವಲಯಗಳಲ್ಲಿ ಕನ್ನಡವು ತನ್ನದೇ ಆದ ಸ್ವರೂಪವನ್ನು ರೂಢಿಸಿಕೊಂಡಿದೆ.

ಕನ್ನಡವು ಕೆಲವು ವಲಯಗಳಲ್ಲಿ ತನ್ನ ರಚನೆ ಮತ್ತು ಬಳಕೆಯಲ್ಲಿ ಬದಲಾಗುತ್ತಾ ಸಾಗಿದೆ. ವಿಶೇಷವಾಗಿ ಬರವಣಿಗೆಯ ಲೋಕದಲ್ಲಿ ಇದನ್ನು ಗುರುತಿಸಬಹುದು. ಮಾಧ್ಯಮಗಳಲ್ಲಿ ಇಂಗ್ಲಿಶ್ ವಾಕ್ಯ ರಚನೆಯ ಸ್ವರೂಪಕ್ಕೆ ಅನುಗುಣವಾಗಿ ಕನ್ನಡ ವಾಕ್ಯ ರಚನೆಗಳನ್ನು ಮಾಡಲಾಗುತ್ತಿದೆ. ಕೆಲವು ಪದಗಳನ್ನು ಇಂಗ್ಲಿಶ್ ಪದಗಳಿಗೆ ಪರ್ಯಾಯವಾಗಿ ಬಳಸಲಾಗುತ್ತಿದೆ. ಕಂಪ್ಯೂಟರ್ ಕೀ ಬೋರ್ಡ್ ಮತ್ತು ಮೊಬೈಲ್‌ಗಳಲ್ಲಿ ನಾವು ಟೈಪ್

ಮಾಡಲು ಬಳಸುವುದು ಇಂಗ್ಲಿಶ್ ಅಕ್ಷರಗಳನ್ನು. ಆದರೆ ಪರದೆಯ ಮೇಲೆ ಮೂಡುವುದು ಕನ್ನಡ ಅಕ್ಷರಗಳು. ಈ ಕೆಲಸದಲ್ಲಿ ತೊಡಗಿರುವವರಿಗೆ ಕೀ ಬೋರ್ಡಿನ ಇಂಗ್ಲಿಶ್ ಅಕ್ಷರಗಳು ಕನ್ನಡ ಅಕ್ಷರಗಳೇ ಎಂಬ ಭಾವನೆ ಗಟ್ಟಿಯಾಗಿರುತ್ತದೆ. ಅಂದರೆ ಈ ಕೆಲಸದಲ್ಲಿ ಕನ್ನಡ–ಇಂಗ್ಲಿಶ್ ಅಕ್ಷರಗಳ ನಡುವಿನ ವ್ಯತ್ಯಾಸದ ಗೆರೆ ತೆಳುವಾಗುತ್ತಿದೆ; ಇಲ್ಲವೆ ಅದು ಇಲ್ಲವಾಗುತ್ತಿದೆ. ತಂತ್ರಜ್ಞಾನ ಮತ್ತು ವ್ಯಾಪಾರಿ ವಲಯದಲ್ಲಿ ನಡೆಯುತ್ತಿರುವ ಈ ಬೆಳವಣಿಗೆಗಳು ನಮ್ಮ ಸಾಂಪ್ರದಾಯಿಕ ಕಲ್ಪನೆಯ ಕನ್ನಡದ ಸ್ವರೂಪವನ್ನು ಬದಲಾಯಿಸುತ್ತಿವೆ. ಕನ್ನಡವು ತಾನು ಬದಲಾಗಬೇಕಾದ ಪರಿಸ್ಥಿತಿಯನ್ನು ಎದುರಿಸುತ್ತಿದೆ; ಅದು ತನ್ನೊಳಗೆ ಬದಲಾಗುತ್ತಲೆ ಬೆಳೆಯುತ್ತಿದೆ. ಕನ್ನಡವು ಇಂಗ್ಲಿಶಿನ ಎದುರು ಸಮಕಾಲೀನಗೊಳ್ಳಬೇಕಾದ ಗಂಭೀರ ಸವಾಲನ್ನು ಎದುರಿಸುತ್ತಿದೆ; ಅದೇ ಕಾಲಕ್ಕೆ ತುಳು, ಉರ್ದು, ಹಕ್ಕಿಪಿಕ್ಕಿ ಮುಂತಾದ ಭಾಷೆಗಳನ್ನು ತುಳಿಯುತ್ತಿದೆ.

ಹಲವು ಕನ್ನಡಿಗರು ಮತ್ತು ಬದಲಾಗುತ್ತಿರುವ ಕನ್ನಡಿಗರು

ಹಲವು ಕನ್ನಡಗಳು ಇರುವ ಹಾಗೆಯೇ ಹಲವು ಕನ್ನಡಿಗರು ಇದ್ದಾರೆ. ಹಾಗೆ ನೋಡಿದರೆ 'ಕನ್ನಡಿಗರು' ಎಂದು ಹೇಳಲು ಯಾವುದು ಮಾನದಂಡ ಎಂಬುದು ಇನ್ನೂ ಖಚಿತವಾಗಿಲ್ಲ. ಕನ್ನಡ ಮಾತು ಮನೆ ಮಾತಾಗಿರುವವರೆಲ್ಲ ಕನ್ನಡಿಗರು ಎನ್ನಬಹುದೆ? ಅಥವಾ ಕರ್ನಾಟಕ ಎಂದು ಕರೆಯಲಾಗುವ ಭೂಪ್ರದೇಶದ ಒಳಗಿರುವವರನ್ನೆಲ್ಲ ಕನ್ನಡಿಗರು ಎನ್ನಬಹುದೆ? ಹಾಗಾದರೆ ಕರ್ನಾಟಕ ಎಂದು ಕರೆಯಲಾಗುವ ಭೂ ಪ್ರದೇಶದ ಒಳಗೆ ಕನ್ನಡದ ಜೊತೆಗೆ ಕನ್ನಡವಲ್ಲದ ಬೇರೆ ಮಾತನ್ನು ಮನೆ ಮಾತಾಗಿ ಹೊಂದಿರುವವರು ಇದ್ದಾರೆ. ಕರ್ನಾಟಕ ಎಂದು ಕರೆಯಲಾಗುವ ಭೂ ಪ್ರದೇಶದ ಹೊರಗೆ ಕನ್ನಡವಲ್ಲದ ಭಾಷೆಯೊಂದರ ಜೊತೆಗೆ ಕನ್ನಡವನ್ನು ಬಳಸುವವರೂ ಇದ್ದಾರೆ. ಅವರನ್ನು ಏನೆನ್ನಬೇಕು? ಕರ್ನಾಟಕದ ಒಳಗೆ ತುಳು, ಕೊಂಕಣಿ, ಮಲೆಯಾಳಿ, ತಮಿಳು, ಕೊಡವ, ಮರಾಠಿ, ತೆಲುಗು, ಹಕ್ಕಿಪಿಕ್ಕಿ, ಲಂಬಾಣಿ, ಉರ್ದು, ಬ್ಯಾರಿ ಮುಂತಾದ ಭಾಷೆಗಳನ್ನು ಮನೆ ಮಾತಾಗಿ ಹೊಂದಿರುವವರೂ ಇದ್ದಾರೆ. ಅವರು ತಮ್ಮ ಆ ಭಾಷೆಯ ಜೊತೆಗೆ ಕನ್ನಡವನ್ನು ಮಾತಾಡುತ್ತಾರೆ. ಹಾಗಾದರೆ ಕನ್ನಡಿಗರು ಎಂದರೆ ಯಾರು? ಇದನ್ನು ಖಚಿತವಾಗಿ ನಿರ್ಧರಿಸುವ ಮಾನದಂಡ ಯಾವುದು?

ಕರ್ನಾಟಕ ಎಂದು ಕರೆಯಲಾಗುವ ಭೂ ಪ್ರದೇಶದ ಒಳಗೆ ವಾಸಿಸುವವರು ಮತ್ತು ಕನ್ನಡವನ್ನು ಮನೆ ಮಾತಾಗಿ ಹೊಂದಿರುವವರು ಪ್ರಪಂಚದ ಯಾವುದೇ ಭಾಗದಲ್ಲಿದ್ದರೂ ಅವರನ್ನು ಕನ್ನಡಿಗರು ಎಂದು ಕರೆಯುವುದು ಒಂದು ರೂಢಿ. ಹಾಗಾಗಿ ಬೇರೆಬೇರೆ ವೃತ್ತಿ, ದುಡಿಮೆ, ವ್ಯಾಪಾರ, ಉದ್ದಿಮೆ ಮುಂತಾದ ಕಾರಣಗಳಿಗೆ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ನೆಲೆಸಿರುವ ಕನ್ನಡ ಬಲ್ಲವರನ್ನು ಕನ್ನಡಿಗರು ಎಂದು ಕರೆಯಲಾಗುತ್ತಿದೆ.

ಕರ್ನಾಟಕ ಎಂದು ಕರೆಯಲಾಗುವ ಭೂ ಪ್ರದೇಶದ ಒಳಗೆ ವಾಸಿಸುವ ಎಲ್ಲರನ್ನೂ ಒಂದೇ ಮಾತಿನಲ್ಲಿ ಕನ್ನಡಿಗರು ಎಂದು ಕರೆದುಬಿಡಬಹುದು. ನಾವು ಯಾರನ್ನು ಕೇವಲ ಭಾಷಿಕ ಕಾರಣಕ್ಕಾಗಿ ಕನ್ನಡಿಗರು ಎಂದು ಕರೆಯುತ್ತೇವೊ ಅವರು ಕೇವಲ ಭಾಷಿಕ ಜೀವಿಗಳಾಗಿರುವುದಿಲ್ಲ; ಅವರು ಸಾಮಾಜಿಕ ಜೀವಿಗಳಾಗಿರುತ್ತಾರೆ. ವಿವಿಧ ದುಡಿಮೆ, ವೃತ್ತಿಗಳನ್ನು ಮಾಡುವವರಾಗಿರುತ್ತಾರೆ. ಸಾಮಾಜಿಕ ಜೀವನದಲ್ಲಿ ವಿವಿಧ ಪಾತ್ರಗಳನ್ನು (ರೋಲ್) ಮಾಡುವವರಾಗಿರುತ್ತಾರೆ. ಕನ್ನಡ ಸಮಾಜವು ಆರ್ಥಿಕ ಮತ್ತು ಸಾಮಾಜಿಕ ಕಾರಣಕ್ಕೆ ಹಲವು ಶ್ರೇಣಿಗಳಲ್ಲಿ ಒಡೆದುಹೋಗಿದೆ. ಸಾಮಾಜಿಕ ನೆಲೆಯಲ್ಲಿ ಶೋಷಕ ಜಾತಿಗಳು, ಮಧ್ಯಮ ಜಾತಿಗಳು ಮತ್ತು ಶೋಷಿತ ಜಾತಿಗಳಾಗಿ ಅದು ಛಿದ್ರಗೊಂಡಿದೆ ಹಾಗೂ ಅಸಮಾನತೆಯಿಂದ ಕೂಡಿದ ಶ್ರೇಣೀಕರಣಕ್ಕೆ ಒಳಗಾಗಿದೆ. ಆರ್ಥಿಕ ನೆಲೆಯಲ್ಲಿ ಶ್ರೀಮಂತ ವರ್ಗ, ಮಧ್ಯಮ ವರ್ಗ ಮತ್ತು ದುಡಿಯುವ ವರ್ಗಗಳಾಗಿ ಛಿದ್ರವಾಗಿದೆ. ದುಡಿಮೆ ಮತ್ತು ವೃತ್ತಿಗಳಿಗೆ ಸಂಬಂಧಿಸಿದಂತೆ ಚಪ್ಪಲಿ ಹೊಲಿಯುವವರು ಮತ್ತು ಕಂಪ್ಯೂಟರ್ ಇಂಜಿನಿಯರ್ ಈ ರೀತಿಯ ಅಜಗಜಾಂತರ ವ್ಯತ್ಯಾಸದ ಸಾಮಾಜಿಕ ಅಸಮಾನತೆ ಅಸ್ತಿತ್ವದಲ್ಲಿದೆ. ಆರ್ಥಿಕ, ಸಾಮಾಜಿಕ ಮತ್ತು ವಿವಿಧ ವೃತ್ತಿಗಳಿಗೆ ಸಂಬಂಧಿಸಿದ ವ್ಯತ್ಯಾಸಗಳನ್ನು, ಅವುಗಳ ನಡುವಿನ ತಾರತಮ್ಯ ಹಾಗೂ ಅಸಮಾನತೆಗಳನ್ನು ಮುಚ್ಚಿಡಲು ಬರುವುದಿಲ್ಲ. ಹಾಗಾಗಿ ಕನ್ನಡಿಗರು ಎಂದ ತಕ್ಷಣ ಅವರನ್ನೆಲ್ಲ ಒಂದೇ ಎನ್ನಲು ಬರುವುದಿಲ್ಲ.

ಕನ್ನಡ ಸಮಾಜದ ರಚನೆ ಮತ್ತು ಚಲನೆಯಲ್ಲಿ ಆರ್ಥಿಕ, ಸಾಮಾಜಿಕ ಶ್ರೇಣೀಕರಣಗಳಿವೆ. ಈ ಶ್ರೇಣೀಕರಣಗಳು ಅಸಮಾನತೆಯಿಂದ ಕೂಡಿವೆ. ಈ ಅಸಮಾನತೆಯ ಹಿಂದೆ ಹಲವು ಬಗೆಯ ಶೋಷಣೆಗಳಿವೆ. ಕನ್ನಡಿಗರು ಎಂದು ಗುರುತಿಸುವ ಅಥವಾ ಹಾಗೆಂದು ಕರೆಸಿಕೊಳ್ಳುವವರೆಲ್ಲ ಈ ಶ್ರೇಣೀಕರಣ, ಅಸಮಾನತೆ ಮತ್ತು ಹಲವು ಬಗೆಯ ಶೋಷಣೆಗಳ ಜಾಲದಲ್ಲಿ ಸಾಗುತ್ತಿದ್ದಾರೆ. ಈ ಜಾಲದಿಂದ ಅವರು ಹೊರಗಿರಲು ಸಾಧ್ಯವೇ ಇಲ್ಲ. ಆದ್ದರಿಂದ ಈ ಎಲ್ಲ ಬಗೆಯ ಶ್ರೇಣೀಕರಣ, ಅಸಮಾನತೆ ಮತ್ತು ಶೋಷಣೆಯ ಜಾಲವನ್ನು ಬದಿಗಿಟ್ಟು ಕನ್ನಡಿಗರನ್ನು ನಿರೂಪಿಸಲು ಆಗುವುದಿಲ್ಲ; ಸಾಧ್ಯವೂ ಇಲ್ಲ.

'ನಾವೆಲ್ಲ ಕನ್ನಡಿಗರು' ಎಂಬುದು ಒಂದು ಕಲ್ಪಿತ ನಂಬಿಕೆ. ಅದೊಂದು ಹೇರಿಕೆಯ ವಿಷಯ. ಅದೊಂದು ಹುಸಿ ವಾಸ್ತವ. 'ನಾವೆಲ್ಲ ಕನ್ನಡಿಗರು' ಎಂದು ಹೇಳಿದಾಗಲೆಲ್ಲ ಅಥವಾ ಅದನ್ನು ಕೇಳಿದಾಗಲೆಲ್ಲ ಸಮಾಜದ ಹಲವು ಜಾತಿ, ವೃತ್ತಿ ಮತ್ತು ಆರ್ಥಿಕ ಏರುಪೇರುಗಳು ಕಣ್ಣೆದುರು ಬರುತ್ತವೆ; ಬರಬೇಕು. ಹೊಲೆಯ, ಮಾದಿಗ, ದಕ್ಕಲ, ಭಂಗಿ, ಹಕ್ಕಿಪಿಕ್ಕಿ, ಒಕ್ಕಲಿಗ, ಲಿಂಗಾಯಿತ, ಬ್ರಾಹ್ಮಣ ಈ ಸಮುದಾಯದವರನ್ನೆಲ್ಲ ಯಾವ ಕಾರಣಕ್ಕೆ ಒಂದೇ ಎಂದು ಹೇಳಲು ಸಾಧ್ಯ? ಅವರ ನಡುವೆ ಯಾವ ಬಗೆಯ ಸಾಮಾಜಿಕ–ಆರ್ಥಿಕ ಸಂಬಂಧಗಳಿವೆ? ಅವರ ನಡುವೆ ಯಾವ ಬಗೆಯ ನಂಟುಗಳಿವೆ? ಅವರ ನಡುವೆ ಪರಸ್ಪರ ಊಟ, ಮದುವೆ ಇವು ಸಾಧ್ಯವೆ? ಇವು ನಡೆದಿವೆಯೆ? ಸಾಮಾಜಿಕ, ಆರ್ಥಿಕ ಶ್ರೇಣೀಕರಣದಲ್ಲಿ ಒಬ್ಬರ ತಲೆಯ ಮೇಲೆ ಒಬ್ಬರು ಸಾಗುತ್ತಿರುವುದರಿಂದ; ಒಬ್ಬರ ಪಾದದ ಕೆಳಗೆ ಒಬ್ಬರು ಸಾಗುತ್ತಿರುವುದರಿಂದ ಅವರನ್ನೆಲ್ಲ ಒಂದೇ ಎನ್ನಲು ಬರುತ್ತದೆಯೆ?

ಕರ್ನಾಟಕವನ್ನು ಆಳಿದ, ಆಳುತ್ತಿರುವ ಕನ್ನಡಿಗರಿದ್ದಾರೆ; ಆಳಿಸಿಕೊಂಡ, ಆಳಿಸಿಕೊಳ್ಳುತ್ತಿರುವ ಕನ್ನಡಿಗರಿದ್ದಾರೆ. ಲೂಟಿ ಮಾಡಿದ, ಲೂಟಿ ಮಾಡುತ್ತಿರುವ ಕನ್ನಡಿಗರಿದ್ದಾರೆ. ಲೂಟಿಗೆ ಒಳಗಾಗಿರುವ, ಒಳಗಾಗುತ್ತಿರುವ ಕನ್ನಡಿಗರಿದ್ದಾರೆ. ಅನ್ಯಾಯ ಮಾಡುತ್ತಿರುವ ಮತ್ತು ಅನ್ಯಾಯಕ್ಕೆ ಬಲಿಯಾಗುತ್ತಿರುವ ಕನ್ನಡಿಗರಿದ್ದಾರೆ. ಕರ್ನಾಟಕವನ್ನು ಕಟ್ಟಿರುವ ಮತ್ತು ಕಟ್ಟುತ್ತಿರುವ ಕನ್ನಡಿಗರಿದ್ದಾರೆ. ಜೊತೆಗೆ ಕರ್ನಾಟಕವನ್ನು ಕೊಳ್ಳೆ ಹೊಡೆಯುತ್ತಿರುವ ಕನ್ನಡಿಗರಿದ್ದಾರೆ.

ಆದರೆ 'ಕನ್ನಡಿಗರು' ಎಂಬ ಪದವನ್ನು ಕೇಳಿದ ತಕ್ಷಣ ಒಂದು ಬಗೆಯ ಭಾವನಾತ್ಮಕ ರೋಮಾಂಚನ ಸೃಷ್ಟಿಯಾಗುತ್ತದೆ. ಈ ಭಾವನಾತ್ಮಕವಾದ ಹುಸಿ ರೋಮಾಂಚನವು ಸಾಮಾಜಿಕವಾದ ಅದೆಷ್ಟೊ ನಿಜ ಸಂಗತಿಗಳನ್ನು ಅತ್ಯಂತ ನಯವಾಗಿ ಮುಚ್ಚಿಡುತ್ತದೆ. ಹಾಗಾಗಿ 'ಕನ್ನಡಿಗರು' ಎಂಬುದು ಕೇವಲ ತೋರಿಕೆಯ ಮತ್ತು ಸಾಮಾಜಿಕ–ಆರ್ಥಿಕ ನಿಜ ಸಂಗತಿಗಳನ್ನು ನಯವಾಗಿ ಮುಚ್ಚಿಡುವ ಒಂದು ಭಾವನಾತ್ಮಕ ಪದವಾಗಿದೆ. ಇದು ಯಾರನ್ನೂ ಸ್ಪಷ್ಟವಾಗಿ ಸೂಚಿಸುವುದಿಲ್ಲ ಮತ್ತು ಪ್ರತಿನಿಧಿಸುವುದಿಲ್ಲ.

ವಾಣಿಜ್ಯ ಮತ್ತು ವ್ಯಾಪಾರಿ ವಲಯವು ಮತ್ತೊಂದು ಬಗೆಯ ವಾತಾವರಣವನ್ನು ನಿರ್ಮಾಣ ಮಾಡಿದೆ. ಕರ್ನಾಟಕದೊಳಗೆ ವಿವಿಧ ಉತ್ಪಾದನೆಯ ವಲಯಗಳಲ್ಲಿ ಕನ್ನಡಿಗರಲ್ಲದವರು ಬಂಡವಾಳ ಹೂಡಿದ್ದಾರೆ. ಕನ್ನಡಿಗರ ಶ್ರಮದಿಂದ ಅವರ ಬಂಡವಾಳ ಬೆಳೆಯುತ್ತಿದೆ. ಅದೇ ರೀತಿಯಲ್ಲಿ ಕನ್ನಡಿಗರು ಎಂದು ಕರೆಯಲಾಗುವ ಕೆಲವರು ಕರ್ನಾಟಕದ ಆಚೆಗೆ ಕೆಲವು ಉತ್ಪಾದನೆಯ ವಲಯಗಳಲ್ಲಿ ಬಂಡವಾಳ ಹೂಡಿದ್ದಾರೆ. ಕನ್ನಡಿಗರಲ್ಲದವರ ಶ್ರಮದಿಂದ ಇವರ ಬಂಡವಾಳ ಬೆಳೆಯುತ್ತಿದೆ. ಹಸಿವು ಹಾಗೂ ಅಪಮಾನಗಳನ್ನು ಅನುಭವಿಸುತ್ತಿರುವ ಮತ್ತು ಇವುಗಳಿಗೆ ಕಾರಣರಾಗಿರುವ ಕನ್ನಡಿಗರು ಒಟ್ಟಿಗೇ ಇದ್ದಾರೆ. ಈ ಆಯಾಮಗಳಲ್ಲಿ ಸಾಂಪ್ರದಾಯಿಕ ನಂಬಿಕೆಯ ಕನ್ನಡಿಗರು ಎಂಬ ಕಲ್ಪನೆ ಬದಲಾಗುತ್ತಾ ಸಾಗಿದೆ.

ಹಲವು ಕರ್ನಾಟಕಗಳು ಮತ್ತು ಬದಲಾಗುತ್ತಿರುವ ಕರ್ನಾಟಕ

ಕರ್ನಾಟಕ ಎಂದ ಕೂಡಲೆ ನಮಗೆ ಭೂಪಟ ಕಣ್ಣೆದುರು ಬರುತ್ತದೆ. ಅದರಲ್ಲಿ ಹಲವು ಜಿಲ್ಲೆಗಳು, ತಾಲೂಕುಗಳು, ಆಫೀಸು ಕಛೇರಿಗಳು, ರಸ್ತೆಗಳು, ಕೆರೆಗಳು, ನದಿಗಳು, ಅಣೆಕಟ್ಟುಗಳು, ದೇವಸ್ಥಾನಗಳು ಇತ್ಯಾದಿ ಮಾಹಿತಿಗಳ ವಿವರಗಳು ತೋರುತ್ತವೆ.

ಭೂಪಟದಲ್ಲಿ ನಮೂದಿಸಿರುವುದನ್ನೇ ಮತ್ತು ನಮೂದಿಸಿರುವುದಷ್ಟನ್ನೇ ಕರ್ನಾಟಕ ಎಂದು ನಂಬಿದ್ದೇವೆ. ಯಾಕೆಂದರೆ ಹಾಗೆಂದು ನಂಬುವಂತೆ ಮಾಡಲಾಗಿದೆ. ಹಾಗಾಗಿ ಭೂಪಟದ ಮೇಲಿರುವ ಕರ್ನಾಟಕದ ರಾಜಕೀಯ ಗಡಿಯನ್ನು ಕುರಿತ ಗೆರೆಗಳ ಸುತ್ತಳತೆಯು ಒಂದು ಬಗೆಯಲ್ಲಿ ಯಾಂತ್ರಿಕ ಕರ್ನಾಟಕ. ಆದರೆ ಅದನ್ನು ಒಪ್ಪಿತ ಸಂಗತಿಯನ್ನಾಗಿ ಮಾರ್ಪಡಿಸಲಾಗಿದೆ.

ಭೌಗೋಳಿಕವಾಗಿ ಉತ್ತರ ಕರ್ನಾಟಕ ಮಧ್ಯ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂದು ಗುರುತಿಸಲಾಗಿದೆ. ಹವಾಮಾನಕ್ಕೆ ಸಂಬಂಧಿಸಿದಂತೆ ಬಯಲು ಸೀಮೆ, ಮಲೆನಾಡು, ಅರೆಮಲೆನಾಡು ಮತ್ತು ಕರಾವಳಿ ಎಂದು ಗುರುತಿಸಲಾಗಿದೆ. ಇವೂ ಕೂಡ ಜನಪ್ರಿಯ ವಿಂಗಡಣೆಗಳೇ ಆಗಿವೆ.

ಕರ್ನಾಟಕ ಎಂಬುದನ್ನು ಹೀಗೆ ಯಾಂತ್ರಿಕವಾಗಿ ಮತ್ತು ಕೇವಲ ಭೌತಿಕವಾಗಿ ಮಾತ್ರ ನೋಡಲು ಬರುವುದಿಲ್ಲ. ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸಬಹುದು. ನಮ್ಮ ಕಣ್ಣ ಮುಂದೆ ಕ್ಯಾಲೆಂಡರ್ ಇದೆ ಎಂದು ತಿಳಿಯೋಣ. ಆ ಕ್ಯಾಲೆಂಡರ್‌ನಲ್ಲಿ ಕೆಲವು ದಿನಾಂಕಗಳನ್ನು ಕೆಂಪು ಬಣ್ಣದಲ್ಲಿ ನಮೂದಿಸಿರುತ್ತಾರೆ. ಆ ಕೆಂಪು ಬಣ್ಣವು ರಜೆಯನ್ನು ಸೂಚಿಸುತ್ತದೆ ಮತ್ತು ಸಂಕೇತಿಸುತ್ತದೆ. ಯಾಂತ್ರಿಕವಾಗಿ ಮತ್ತು ಒಪ್ಪಿತ ದೃಷ್ಟಿಕೋನದ ಮೂಲಕ ಕ್ಯಾಲೆಂಡರನ್ನು ನೋಡುವವರಿಗೆ ಅವೆಲ್ಲವೂ ನಿಜವಾಗಿಯೂ ರಜೆಯ ದಿನಗಳೇ ಆಗಿರುತ್ತವೆ. ಕ್ಯಾಲೆಂಡರ್‌ನಲ್ಲಿ ನಮೂದಿಸಲಾಗಿರುವ ಎಲ್ಲಾ ದಿನಾಂಕಗಳೂ ಎಲ್ಲರ ಪಾಲಿಗೂ ಒಂದೇ. ಆದರೆ ಆಯಾ ದಿನಾಂಕಗಳಂದು ಯಾರು ಯಾರು ಏನು ಏನು ಕೆಲಸ ಮಾಡುತ್ತಾರೆ ಅಥವಾ ಮಾಡುವುದಿಲ್ಲ ಎಂಬುದನ್ನು ಅವಲಂಬಿಸಿ ಪ್ರತಿಯೊಂದು ದಿನಾಂಕಗಳೂ ಪ್ರತಿಯೊಬ್ಬರ ಪಾಲಿಗೂ ಬದಲಾಗುತ್ತಾ ಹೋಗುತ್ತವೆ. ಇಲ್ಲಿ ಕೆಲಸ ಮಾಡುವುದು ಅಥವಾ ಮಾಡದಿರುವುದು ಮುಖ್ಯವಾಗುತ್ತದೆ; ಕ್ಯಾಲೆಂಡರ್‌ನ ದಿನಾಂಕ ನಗಣ್ಯವಾಗುತ್ತದೆ. ಆದರೆ ಮತ್ತೆ ಕೆಲವರಿಗೆ ಕ್ಯಾಲೆಂಡರ್‌ನ ದಿನಾಂಕವೇ ಮುಖ್ಯವಾಗುತ್ತದೆ. ಆ ದಿನಾಂಕವೇ ಕೆಲಸ ಮಾಡುವ ಅಥವಾ ಮಾಡದಿರುವುದನ್ನು ನಿರ್ಧರಿಸುತ್ತದೆ. ಅಂದರೆ ಕ್ಯಾಲೆಂಡರ್ ಮೂಲಕ ಸಮಾಜವನ್ನು ನೋಡುವ ಒಂದು ಸಾಧ್ಯತೆ. ಸಮಾಜದ ಮೂಲಕ ಕ್ಯಾಲೆಂಡರನ್ನು ನೋಡುವ ಮತ್ತೊಂದು ಸಾಧ್ಯತೆ. ಇದನ್ನೆ ಸಾಮಾಜಿಕವಾಗಿ ವಿವರಿಸುವುದಾದರೆ ಭೂಪಟದ ಮೂಲಕ ಕರ್ನಾಟಕ ಸಮಾಜವನ್ನು ನೋಡುವುದು ಒಂದು ವಿಧಾನ. ಕರ್ನಾಟಕ ಸಮಾಜದ ಮೂಲಕ ಕರ್ನಾಟಕದ ಭೂಪಟವನ್ನು ನೋಡುವುದು ಮತ್ತೊಂದು ವಿಧಾನ.

ಈಗ ನಮ್ಮ ಮುಂದಿರುವುದು ಕರ್ನಾಟಕ ಸಮಾಜದ ಮೂಲಕ ಕರ್ನಾಟಕದ ಭೂಪಟವನ್ನು ನೋಡುವುದು. ಇಲ್ಲಿ ನಮಗೆ ಕರ್ನಾಟಕದ ಸಮಾಜ ಮುಖ್ಯ. ಕರ್ನಾಟಕದ ಸಮಾಜ ಅಥವಾ ಯಾವುದೇ ಸಮಾಜ ದುಡಿಮೆಯ ಮೇಲೆ ನಿಂತಿರುತ್ತದೆ. ಅಲ್ಲಿ ಮಾಡುವ ದುಡಿಮೆಯ ವಿಧಾನ ಮತ್ತು ದುಡಿಮೆಯ ಸಂಬಂಧಗಳು ಆ ಸಮಾಜದ ರಚನೆಯನ್ನು ಮತ್ತು ಚಲನೆಯನ್ನು ನಿರ್ಧರಿಸುತ್ತವೆ. ಈ ದೃಷ್ಟಿಯಿಂದ ಕರ್ನಾಟಕದ ಸಮಾಜದಲ್ಲಿ ಎಂತಹ ದುಡಿಮೆ ಮಾಡಲಾಗುತ್ತಿದೆ, ಯಾರು ದುಡಿಮೆ ಮಾಡುತ್ತಿದ್ದಾರೆ, ಯಾರು ದುಡಿಮೆ ಮಾಡಿಸುತ್ತಿದ್ದಾರೆ, ದುಡಿಮೆಯ ಉತ್ಪಾದಿತ ಫಲವೇನು, ಅದರ ಹಂಚಿಕೆ ಹೇಗೆ ಆಗುತ್ತಿದೆ, ಹೇಗೆ ಆಗುತ್ತಿಲ್ಲ ಮುಂತಾದ ಸಂಗತಿಗಳು ನಮಗಿಲ್ಲಿ ಮುಖ್ಯವಾಗುತ್ತವೆ.

ಈ ದೃಷ್ಟಿಯಿಂದ ವಿವಿಧ ಉತ್ಪಾದನೆಗಳಲ್ಲಿ ತೊಡಗಿಕೊಂಡಿರುವ ವರ್ಗಸಮೂಹವನ್ನು ಗಮನಿಸಬೇಕು. ವಿವಿಧ ಸಮುದಾಯಗಳನ್ನು, ವಿವಿಧ ಜಾತಿ ಶ್ರೇಣೀಕರಣಗಳನ್ನು, ವಿವಿಧ ವೃತ್ತಿಗಳಲ್ಲಿರುವವರನ್ನು, ವಿವಿಧ ಊರುಗಳನ್ನು, ಕೇರಿಗಳನ್ನು,

ದಿನ ಬೆಳಗಾದರೆ ಬಹಿಷ್ಕಾರ ಹಾಕಿಸಿಕೊಳ್ಳುವ, ಕೂಲಿನಾಲಿ ಮಾಡಿದರೂ ಹೊಟ್ಟೆ ತುಂಬದಿರುವ, ಮನೆ ಮಠಗಳನ್ನು ಇನ್ನೂ ಕಾಣದಿರುವ, ಹಸಿವು ಮತ್ತು ಸಾಮಾಜಿಕ ಅಪಮಾನಗಳನ್ನು ನಿರಂತರವಾಗಿ ಅನುಭವಿಸುತ್ತಿರುವವರ ಕರ್ನಾಟಕ ಮತ್ತೊಂದು. ಅಪಮಾನ, ದಬ್ಬಾಳಿಕೆ, ಅನ್ಯಾಯ ಮತ್ತು ಶೋಷಣೆಗಳನ್ನು ಅನುಭವಿಸುವುದೇ ಇವರ ಪಾಲಿನ ಕರ್ನಾಟಕ. ವ್ಯವಸ್ಥೆಯ ಕ್ರೌರ್ಯ ಮತ್ತು ಪುರುಷಾಧಿಪತ್ಯದ ಯಜಮಾನಿಕೆಯಿಂದ ನರಳುತ್ತಿರುವ ಮಹಿಳೆಯರ ಪಾಲಿನ ಕರ್ನಾಟಕ ಮತ್ತೊಂದು.

ತಾಂಡಾಗಳನ್ನು, ಓಣಿಗಳನ್ನು ಗಮನಿಸಬೇಕು. ಜೊತೆಗೆ ಆಯಾ ಉತ್ಪಾದನಾ ವಲಯಗಳನ್ನು, ಉತ್ಪಾದನೆಯ ಸ್ವರೂಪ ಹಾಗೂ ಅದರ ಹಂಚಿಕೆಯ ವಿಧಾನವನ್ನು ಗಮನಿಸಬೇಕು. ವಿವಿಧ ಉತ್ಪಾದನೆಗಳಲ್ಲಿ ತೊಡಗಿರುವವರದ್ದು ಒಂದು ಕರ್ನಾಟಕ. ಉತ್ಪಾದನೆಯನ್ನು ನಿಯಂತ್ರಿಸುತ್ತಿರುವವರು ಮತ್ತು ಅದರೆಲ್ಲ ಲಾಭಕ್ಕೆ ಒಡೆಯರಾಗಿರುವವರದ್ದು ಮತ್ತೊಂದು ಕರ್ನಾಟಕ. ಅಂಚಿನ ಸಮುದಾಯಗಳದ್ದು, ಆದಿವಾಸಿ, ಬುಡಕಟ್ಟು, ಅಲೆಮಾರಿ ಸಮುದಾಯಗಳದ್ದು ಒಂದು ಕರ್ನಾಟಕ. ಇವರದ್ದು ಅಭದ್ರತೆ ಮತ್ತು ಅತಂತ್ರ ಬದುಕು. ಕರ್ನಾಟಕದಲ್ಲಿದ್ದೂ ಕರ್ನಾಟಕದಲ್ಲಿ ವಾಸ ಮಾಡುತ್ತಿರುವ ಸ್ಥಳದಲ್ಲಿ ವಾಸ ಮಾಡಲಾರದ ಬದುಕು. ಇಂತಹವರ ಪಾಲಿಗೆ ಕರ್ನಾಟಕ ಎಂಬುದು ಇಲ್ಲ. ಇವರನ್ನು ಯಾವಾಗ ಎಂದರೆ ಆಗ ಎತ್ತಂಗಡಿ ಮಾಡುವ ಅಧಿಕಾರಿಗಳು, ಪೋಲೀಸು ಮತ್ತು ಮಿಲಿಟರಿ ಇರುವಾಗ ಅಭದ್ರತೆ ಹಾಗೂ ಅತಂತ್ರತೆಯ ಸ್ಥಿತಿಯೇ ಇವರ ಪಾಲಿನ ಕರ್ನಾಟಕ.

ದಿನ ಬೆಳಗಾದರೆ ಬಹಿಷ್ಕಾರ ಹಾಕಿಸಿಕೊಳ್ಳುವ, ಕೂಲಿನಾಲಿ ಮಾಡಿದರೂ ಹೊಟ್ಟೆ ತುಂಬದಿರುವ, ಮನೆ ಮಠಗಳನ್ನು ಇನ್ನೂ ಕಾಣದಿರುವ, ಹಸಿವು ಮತ್ತು ಸಾಮಾಜಿಕ ಅಪಮಾನಗಳನ್ನು ನಿರಂತರವಾಗಿ ಅನುಭವಿಸುತ್ತಿರುವವರ ಕರ್ನಾಟಕ ಮತ್ತೊಂದು. ಅಪಮಾನ, ದಬ್ಬಾಳಿಕೆ, ಅನ್ಯಾಯ ಮತ್ತು ಶೋಷಣೆಗಳನ್ನು ಅನುಭವಿಸುವುದೇ ಇವರ ಪಾಲಿನ ಕರ್ನಾಟಕ. ವ್ಯವಸ್ಥೆಯ ಕ್ರೌರ್ಯ ಮತ್ತು ಪುರುಷಾಧಿಪತ್ಯದ ಯಜಮಾನಿಕೆಯಿಂದ ನರಳುತ್ತಿರುವ ಮಹಿಳೆಯರ ಪಾಲಿನ ಕರ್ನಾಟಕ ಮತ್ತೊಂದು.

ಕರ್ನಾಟಕದ ನಿಸರ್ಗ ಸಂಪತ್ತನ್ನು ಲೂಟಿ ಮಾಡಿ ಮೋಜು ಮಾಡುತ್ತಿರುವವರದ್ದು ಒಂದು ಕರ್ನಾಟಕ. ಅವರ ಮೋಜಿನ ದಾಹದ ದುಷ್ಪರಿಣಾಮಗಳನ್ನು ವಿನಾಃ ಕಾರಣ ಅನುಭವಿಸುತ್ತಿರುವವರದ್ದು ಮತ್ತೊಂದು ಕರ್ನಾಟಕ. ಭಾಷೆ, ಸಂಸ್ಕೃತಿ, ಕೋಮು ಮುಂತಾದ ಹೆಸರುಗಳಲ್ಲಿ ದಾಳಿ, ದಬ್ಬಾಳಿಕೆ, ಕ್ರೌರ್ಯ ಹಾಗೂ ಹಿಂಸೆ ನಡೆಸುತ್ತಿರುವವರದ್ದು ಒಂದು ಕರ್ನಾಟಕ. ಅವುಗಳಿಗೆ ವಿನಾಃ ಕಾರಣ ಬಲಿಯಾಗಿ ನಲುಗುತ್ತಿರುವವರದ್ದು ಮತ್ತೊಂದು ಕರ್ನಾಟಕ. ಕುದುರೆಮೋತಿ, ನಿತ್ಯಾನಂದ, ಚಂದ್ರಗುತ್ತಿ, ತತ್ತೂರು, ಬೆಂಡಿಗೇರಿ, ಸವಣೂರು, ಹಂಗರವಳ್ಳಿ, ಕಂಬಾಲಪಲ್ಲಿಗಳ ಕರ್ನಾಟಕ ಒಂದು. ಐಟಿ, ಬಿಟಿ ಏರ್‌ಕಂಡೀಶನ್‌ಗಳ ಕರ್ನಾಟಕ ಮತ್ತೊಂದು. ಹೀಗೆ ಕರ್ನಾಟಕದ ಒಳಗೇ ಆರ್ಥಿಕ ಮತ್ತು ಸಾಮಾಜಿಕ ಏರುಪೇರುಗಳಿಗೆ ಅನುಗುಣವಾಗಿ ಹಲವು ಕರ್ನಾಟಕಗಳು ಇವೆ.

ಜಾಗತೀಕರಣ ಪ್ರಕ್ರಿಯೆಯು ನಿರ್ದಿಷ್ಟ ಭೂಪಟವನ್ನು ಸಡಿಗೊಳಿಸಿದೆ. ಸಾಮ್ರಾಜ್ಯಶಾಹಿ ಜಾಗತೀಕರಣದ ಕಾರ್ಯಕ್ರಮಗಳು, ನೀತಿಗಳು ಕರ್ನಾಟಕವನ್ನು ಪ್ರವೇಶ ಮಾಡಿವೆ. ಅದೇ ಕಾಲಕ್ಕೆ ಕರ್ನಾಟಕದ ವಾಣಿಜ್ಯ, ವ್ಯಾಪಾರಿ ಚಟುವಟಿಕೆಗಳು ಕರ್ನಾಟಕದ ಆಚೆಗೆ ವಿಸ್ತರಿಸಿವೆ. ಕರ್ನಾಟಕದ ನೆಲ, ಜಲ ಮತ್ತಿತರೆ ಸಂಪತ್ತು ಮತ್ತು ಅವುಗಳ ವಾರಸುದಾರಿಕೆ ಕೇವಲ ಕರ್ನಾಟಕ ಎಂದು ಕರೆಯಲಾಗುವ ಗಡಿಭಾಗದೊಳಗೆ ಇಲ್ಲ. ಅದು ರಾಜಕೀಯ ಕಾರಣಕ್ಕಾಗಿ ತನ್ನ ವ್ಯಾಪ್ತಿಯನ್ನು ಮೀರಿ ವಿಸ್ತರಿಸಿದೆ.

ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗಳು ಹಾಗೂ ವರ್ತಮಾನದ ಒತ್ತಡಗಳು ಕನ್ನಡ–ಕನ್ನಡಿಗ ಮತ್ತು ಕರ್ನಾಟಕದ ಸ್ವರೂಪವನ್ನು ಬದಲಾಯಿಸುತ್ತಿವೆ. ಇವು ಆಂತರಿಕವಾಗಿ ಬದಲಾಗುತ್ತಲೂ ಸಾಗಿವೆ. ಈ ಬದಲಾವಣೆ ಅನಿವಾರ್ಯ. ಆದರೆ ಇವುಗಳನ್ನು ಕುರಿತ ನಮ್ಮ ಹಳೆಯ ನಂಬಿಕೆಗಳು ಈ ಬದಲಾವಣೆಯ ಗತಿಯನ್ನು ಅರಿಯದಂತೆ ಮಾಡಿವೆ. ಹಾಗಾಗಿ ಬದಲಾವಣೆಯ ಗತಿಯನ್ನು ಮತ್ತು ಅದರ ಮುಂದಿನ ಪರಿಣಾಮಗಳನ್ನು ಕುರಿತು ಆಲೋಚನೆ ಮಾಡುವ ಅಗತ್ಯ ನಮ್ಮ ಮುಂದಿದೆ. ■

ಚಂದ್ರಭಾನ್ ಪ್ರಸಾದ್ ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

‘ದಲಿತ’ರೊಬ್ಬರನ್ನು ಹಾಲಿವುಡ್ ಅಪ್ಪಿಕೊಂಡಿತು

ರಾಮ್‌ಪಿಲ್ಲಾ ನಾರಾಯಣ ರಾವ್ ಖಂಡಿತವಾಗಿಯೂ ದಲಿತರಲ್ಲ. ಆದರೆ ಜೆ.ಎನ್.ಯುನ ಹೆಚ್ಚು ಜನ ಅವರನ್ನು ದಲಿತರೆಂದೇ ತಿಳಿದಿದ್ದರು. ಭಾರತದ ಪ್ರಮುಖ ವಿದ್ಯಾಕೇಂದ್ರವಾದ ಜವಹರ್‌ಲಾಲ್ ನೆಹರು ವಿಶ್ವವಿದ್ಯಾಲಯ (ಜೆ.ಎನ್.ಯು) 1982ರಲ್ಲಿ ದಲಿತ ವಿದ್ಯಾರ್ಥಿಯೊಬ್ಬನ ವಿಷಯದಲ್ಲಿ ಒಂದು ದೊಡ್ಡ ಚಳವಳಿಗೆ ಸಾಕ್ಷಿಯಾಯಿತು. ನ್ಯಾಯ ಪಡೆದುಕೊಳ್ಳಲು ಉಪವಾಸ ಸತ್ಯಾಗ್ರಹವನ್ನು ಆಯುಧವಾಗಿ ಆರಿಸಿಕೊಳ್ಳಲಾಯಿತು. ಹತ್ತು ದಿನಗಳ ಕಾಲ ನಡೆದ ಈ ಸತ್ಯಾಗ್ರಹಕ್ಕೆ ಚಳವಳಿಯ ಹಿನ್ನೆಲೆ ಇದ್ದ ನಾನೂ ಸೇರಿಕೊಂಡೆ. ನಕ್ಸಲ್ ಚಳವಳಿಯ ಸಂಪರ್ಕವಿದ್ದ ನನಗೆ ಉಪವಾಸ ಸತ್ಯಾಗ್ರಹವನ್ನು ನಡೆಸುವುದು ಅಂತಹ ಉತ್ತಮ ಮಾರ್ಗವೆಂದು ಅನಿಸಲಿಲ್ಲ. ಉಪವಾಸದ ಎಂಟನೇ ದಿನ ನಾನು ವಿಪರೀತ ಹಸಿವಿನಿಂದ ದಣಿದಿದ್ದೆ. ಸ್ನೇಹಿತನೊಬ್ಬ ಬಿಸ್ಕತ್‌ಗಳನ್ನು ತಂದು ನಾವೆಲ್ಲರೂ ತಿನ್ನಬಹುದು ಎಂದು ಹೇಳಿದ.

“ನಾವೆಲ್ಲರೂ ಸತ್ತರೂ ಸರಿ, ಆದರೆ ನಮ್ಮ ಬೆಂಬಲಿಗರಿಗೆ ಮೋಸ ಮಾಡುವುದಿಲ್ಲ,” ರಾಮ್‌ಪಿಲ್ಲಾ ಹೇಳಿದರು. “ಡಾ॥ ಬಿ.ಆರ್.ಅಂಬೇಡ್ಕರ್‌ರ ಹಿಂಬಾಲಕರು ಇತರರಂತಲ್ಲ”, ಅವರು ಮತ್ತೂ ಸೇರಿಸಿದರು. ಬಿಸ್ಕತ್ ತಿನ್ನಬೇಕೆಂದು ಬಯಸಿದ್ದ ನನ್ನ ಆಸೆ ಮಣ್ಣುಪಾಲಾಯಿತು. ಆ ಸಂದರ್ಭದಲ್ಲಿಯೇ ನಾನು ನನ್ನ ಪ್ರಾಣ ಸ್ನೇಹಿತ ರಾಮ್‌ಪಿಲ್ಲಾ ಬಗ್ಗೆ ಆಳವಾದ ಗೌರವ ಬೆಳೆಸಿಕೊಂಡದ್ದು. ಅವರು ಉತ್ತರ ಪ್ರದೇಶದಲ್ಲಿನ ನನ್ನ ಹುಟ್ಟೂರಿಗೂ ಸಹ ಬಂದರು. ಅಲ್ಲಿಯವರೆಗೆ ನಾನು ಅವರನ್ನು ದಲಿತರು ಎಂದೇ ತಿಳಿದಿದ್ದೆ.

1983ರಲ್ಲಿ ಜೆ.ಎನ್.ಯು ಮತ್ತೊಮ್ಮೆ ಭುಗಿಲೆದ್ದಿತು. ನನ್ನ ಜೊತೆಯ ನೂರಾರು ಚಳವಳಿಗಾರರೊಡನೆ ನಾನೂ ಸಹ ತಿಹಾರ್ ಜೈಲಿನಲ್ಲಿ ಹದಿನಾಲ್ಕು ದಿನಗಳನ್ನು ಕಳೆದೆ. ಇತರರಂತೆ ನನ್ನನ್ನೂ ಸಹ ವಿಶ್ವ ವಿದ್ಯಾಲಯದಿಂದ ಹೊರಹಾಕಿದರು. ರಾಮ್‌ಪಿಲ್ಲಾ ತನ್ನ ಮುಂದಿನ ವ್ಯಾಸಂಗಕ್ಕಾಗಿ ಯು.ಎಸ್.ಗೆ ಹೋದರು. ನಾನು ನಕ್ಸಲ್ ಚಳವಳಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡೆ. ನಾನು ಬಹಳ ಕಷ್ಟದ ಪರಿಸ್ಥಿತಿಯಲ್ಲಿರಬಹುದೆಂದು ರಾಮ್‌ಪಿಲ್ಲಾ ನನಗೆ ಇನ್ನೂರು ಡಾಲರ್ ಕಳುಹಿಸಿಕೊಟ್ಟರು. ಪ್ರಪಂಚದ ಸಾಮ್ರಾಜ್ಯಶಾಹಿಗಳ ಕೇಂದ್ರವಾದ ಯು.ಎಸ್.ನಿಂದ ಅದು ಬಂದುದರಿಂದ ನಾನು ಆ ಹಣವನ್ನು ತಿರಸ್ಕರಿಸಿದೆ. ನಂತರ ಎರಡು ದಶಕಗಳ ಕಾಲ ನಮ್ಮಲ್ಲಿ ಸಂಪರ್ಕವಿರಲಿಲ್ಲ. ಇಂಟರ್‌ನೆಟ್‌ನಿಂದಾಗಿ ಕೆಲ ವರ್ಷಗಳ ಹಿಂದೆ ನಾವು ಒಬ್ಬರನ್ನೊಬ್ಬರು ಕಂಡುಕೊಂಡೆವು.

“ನಾನು ಹಾಲಿವುಡ್‌ನಲ್ಲಿ ನಟನಾಗಲು ಪ್ರಯತ್ನಿಸುತ್ತಿದ್ದೇನೆ” ಎಂದು ರಾಮ್‌ಪಿಲ್ಲಾ ನನಗೆ ಈಮೇಲ್ ಕಳುಹಿಸಿದಾಗ ನಾನು ಹೊಟ್ಟೆ ತುಂಬಾ ನಕ್ಕೆ. ಸ್ವಲ್ಪ ಯೋಚಿಸಿದ ಮೇಲೆ ಅವರ ಅತ್ಯುತ್ತಮ ಹಾಸ್ಯ ಪ್ರಜ್ಞೆಯನ್ನು ನೆನಪಿಸಿಕೊಂಡು ಅವರು ಅದರಲ್ಲೂ ಯಶಸ್ವಿಯಾಗಬಹುದು ಎನಿಸಿತು. ನಾನು ಅದನ್ನು ಸಂಪೂರ್ಣ ನಂಬಿದ್ದೆನೊ ಇಲ್ಲವೊ. “ನೀನು ಹುಟ್ಟಿರುವುದೇ ಯಶಸ್ವಿಯಾಗಲಿಕ್ಕಾಗಿ ಪ್ರಿಯ ರಾಮ್‌ಪಿಲ್ಲಾ” ಎಂದು ಮೇಲ್ ಕಳುಹಿಸುತ್ತಿದ್ದೆ.

2001ರಲ್ಲಿ ನಾನು ಕೆಲ ಸಮಯ ಯು.ಎಸ್.ನಲ್ಲಿದ್ದೆ ಮತ್ತು ಕೆಲದಿನಗಳ ಕಾಲ ರಾಮ್‌ಪಿಲ್ಲಾ ಅವರ ನ್ಯೂಯಾರ್ಕ್ ಅಪಾರ್ಟ್‌ಮೆಂಟ್‌ನಲ್ಲಿ ತಂಗಿದ್ದೆ. ಅವರು ತಮ್ಮ ಬಾಲ್ಯದ ದಿನಗಳನ್ನು ಮೆಲುಕು ಹಾಕುತ್ತಿದ್ದರು ಮತ್ತು ಯು.ಎಸ್.ನಲ್ಲಿ ತಾನೆಷ್ಟು ಶ್ರಮಪಟ್ಟೆ ಎಂಬುದನ್ನೂ ವಿವರಿಸಿದರು. ಹುಟ್ಟು ಕ್ರಾಂತಿಕಾರಿಯಾದ ರಾಮ್‌ಪಿಲ್ಲಾ 1961ರಲ್ಲಿ ಜೆ.ಎನ್.ಯುಗೆ ಬಂದಾಗ ತಮ್ಮ ಕುಟುಂಬದೊಡನೆ ಸಂಬಂಧ ಕಡಿದುಕೊಂಡಿದ್ದರು.

ಬಾಲ್ಯದಿಂದಲೂ ರಾಮ್‌ಪಿಲ್ಲಾ ತಮ್ಮ ತಂದೆ ತಾಯಿಗಳೊಡನೆ ಉತ್ತಮ ಬಾಂಧವ್ಯ ಹೊಂದಿರಲಿಲ್ಲ. ಅಸ್ಪೃಶ್ಯ ಮಕ್ಕಳೊಡನೆ ಆಟವಾಡಿದ್ದಕ್ಕಾಗಿ ಅವರ ಬೈಗಳು ತಿನ್ನುತ್ತಿದ್ದರು. ಅಸ್ಪೃಶ್ಯ ಶಾಲಾ ಸಹಪಾಠಿಗಳೊಡನೆ ಊಟ ಹಂಚಿಕೊಂಡಿದ್ದಕ್ಕಾಗಿ ಕೆಲವೇಳೆ ಅವರನ್ನು ಥಳಿಸಲಾಗುತ್ತಿತ್ತು. ಅಸ್ಪೃಶ್ಯರ ಸಹವಾಸಕ್ಕಾಗಿ ಅವರನ್ನು ಥಳಿಸಿದಷ್ಟೂ ಅವರಿಗೆ ಇನ್ನೂ ಹತ್ತಿರವಾಗುತ್ತಿದ್ದರು.

ಯು.ಎಸ್.ಗೆ ಬಂದಿಳಿದ ಹೆಚ್ಚು ಭಾರತೀಯರು ಹಣ ಸಂಪಾದನೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಈ ಸಂಪ್ರದಾಯವನ್ನು ಮುರಿದ ರಾಮ್‌ಪಿಲ್ಲಾ ಸ್ಥಳೀಯ ಅಮೇರಿಕನ್ನರನ್ನು ಬೆಂಬಲಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ವಿಶ್ವಸಂಸ್ಥೆಯ ಕೇಂದ್ರ ನ್ಯೂಯಾರ್ಕ್‌ನಲ್ಲಿ ಕೆಲಸ ಮಾಡಿದ ರಾಮ್‌ಪಿಲ್ಲಾ ತನ್ನಲ್ಲಿ ಅದುಮಿಡಿಯಲ್ಪಟ್ಟಿದ್ದ ನಟನೊಬ್ಬನ ಹುಡುಕಾಟದಲ್ಲಿ ತೊಡಗಿದರು. ಭಾರತದಲ್ಲಿನ ತನ್ನ ಹುಟ್ಟೂರಿನಲ್ಲಿಯೇ ಕಾಲೇಜು ದಿನಗಳಲ್ಲಿ ಒಂದು ಸಂಗೀತ–ನಟನಾ ಶಾಲೆಯನ್ನು ಅವರು ಸೇರಿದ್ದರು.

ದಶಕಗಳ ತ್ಯಾಗ ಮತ್ತು ಶ್ರಮದ ನಂತರ ರಾಮ್‌ಪಿಲ್ಲಾ “ದಟ್ಸ್ ಮೈ ಬಾಯ್” ಎಂಬ ಹಾಲಿವುಡ್ ಸಿನಿಮಾದಲ್ಲಿ ಖ್ಯಾತ ಹಾಲಿವುಡ್ ನಟ ಆ್ಯಡಮ್ಸ್ ಸ್ಯಾಂಡ್ಲರ್ ಎದುರು ಒಂದು ಪೋಷಕ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಆಂಧ್ರ ಪ್ರದೇಶದ ವಿಜಯವಾಡದಂತ ಪಟ್ಟಣದಲ್ಲಿ ಹುಟ್ಟಿದ ರಾಮ್‌ಪಿಲ್ಲಾ ಈಗ ಹಾಲಿವುಡ್‌ನ ಅಪ್ಪುಗೆಯಲ್ಲಿದ್ದಾರೆ. ನ್ಯೂಯಾರ್ಕ್‌ನ ಕಲಾವಿದರ ಗುಂಪಿನಲ್ಲಿ “ಗಾಂಧಿ, ದಲಿತರು ಮತ್ತು ನಾನು” ಎಂಬ ಅವರೇ ಬರೆದ ನಾಟಕದ ಏಕಪಾತ್ರಾಭಿನಯಕ್ಕಾಗಿ ರಾಮ್‌ಪಿಲ್ಲಾ ಗುರುತಿಸಲ್ಪಟ್ಟಿದ್ದಾರೆ. ಇದರಿಂದಾಗಿ ಅನೇಕರು ರಾಮ್‌ಪಿಲ್ಲಾ ದಲಿತರು ಎಂದು ಭಾವಿಸಿದ್ದಾರೆ. ಆದರೆ ಅವರೆಂದೂ ಆ ರೀತಿ ಹೇಳಿಕೊಂಡಿಲ್ಲ.

2011ರ ಸೆಪ್ಟೆಂಬರ್ ನಂತರ ರಾಮ್‌ಪಿಲ್ಲಾ ಕೆಲಸ ಕಳೆದುಕೊಂಡರು ಮತ್ತು ನ್ಯೂಯಾರ್ಕ್‌ನ ಬೀದಿ ಬೀದಿಗಳಲ್ಲಿ ಅಲೆದರು. ಅವರ ಅದೃಷ್ಟ ಖುಲಾಯಿಸಿತು. ಅವರನ್ನು ಅಮೇರಿಕಾದ ಪ್ರಖ್ಯಾತ ಪ್ರದರ್ಶನವಾದ “ವೀಸಾ ಸೂಪರ್ ಬೌಲ್ ಕಮರ್ಷಿಯಲ್”ಗೆ ಆರಿಸಿಕೊಳ್ಳಲಾಯಿತು. ಅವರು ಹಾಲಿವುಡ್‌ನ ಖ್ಯಾತ ನಟ ಕೆವಿನ್ ಬೇಕನ್ ಜೊತೆ ನಟಿಸಿದರು.

ರಾಮ್‌ಪಿಲ್ಲಾ ಈವರೆಗೆ ಅಮೇರಿಕದಲ್ಲಿ ಇಪ್ಪತ್ತು ನ್ಯಾಷನಲ್ ಕಮರ್ಷಿಯಲ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ. ಅವರು ಸಾರ ಜಸ್ಸಿಕಾ ಪಾರ್ಕ್, ಜಿಮ್ಮಿ ಫ್ಯಾಲನ್, ಕೊನನ್ ಒಬ್ರಿಯನ್, ರೆಜಿಸ್ ಫಿಲ್‌ಬಿನ್, ಕೆವಿನ್ ಬೇಕನ್ ಮುಂತಾದ ಖ್ಯಾತನಾಮರ ಜೊತೆ ಕೆಲಸ ಮಾಡಿದ್ದಾರೆ. ಹಾಗೆಯೇ ಅವರು ಥರ್ಟಿ ರಾಕ್, ಫ್ರೈಡೆ ನೈಟ್ ಲೈಟ್ಸ್, ಲೆಟ್ ಇಟ್ ಗೊ, ಸೆಕ್ಸ್ ಅಂಡ್ ದ ಸಿಟಿ, ಕೊಲಿನ್ ಕ್ವಿನ್ ಶೋ, ಲಾಸ್ಟ್ ಕಾಲ್ ವಿತ್ ಕಾರ್ಸನ್ ಡೈಲಿ ಮುಂತಾದ ಕಿರುತೆರೆ ಧಾರಾವಾಹಿಗಳಲ್ಲೂ ಸಹ ಕಾಣಿಸಿಕೊಂಡಿದ್ದಾರೆ. ಅನೇಕ ಸ್ವತಂತ್ರ ಸಿನಿಮಾಗಳಲ್ಲಿ ಸಹ ಅವರು ನಟಿಸಿದ್ದಾರೆ.

ರಾಮ್ ಪಿಲ್ಲಾ ಪಾಕಿಸ್ತಾನಿ ಅಂಗಡಿ ಮಾಲೀಕನಾಗಿ ಕಾಣಿಸಿಕೊಂಡಿರುವ “ದಟ್ಸ್ ಮೈ ಬಾಯ್” ಚಿತ್ರ ಜೂನ್ ಹದಿನೈದರಂದು ತೆರೆಕಂಡಿದೆ.

ದಲಿತನಾಗಿ ಹುಟ್ಟದಿದ್ದರೂ ನನ್ನ ಸ್ನೇಹಿತ ರಾಮ್‌ಪಿಲ್ಲಾ ತಮ್ಮ ಜೀವನದ ಹೆಚ್ಚುಕಾಲವನ್ನು ದಲಿತ ಪ್ರಪಂಚದಲ್ಲಿಯೇ ಕಳೆದಿದ್ದಾರೆ. ರಾಮ್‌ಪಿಲ್ಲಾ ನಾರಾಯಣ ರಾವ್ ಅವರನ್ನು ಅಪ್ಪಿಕೊಂಡಿರುವ ಹಾಲಿವುಡ್ ನನ್ನಂತಹ ಅನೇಕ ದಲಿತರಿಗೆ ಖುಷಿ ತಂದಿದೆ.

* * *

ಸಂವಿಧಾನ ರಚನೆಯಲ್ಲಿ ವಿಳಂಬವಾಯಿತೆ ಅಥವಾ ಸಂವಿಧಾನ ರಚನೆ ಬಸವನ ಹುಳುವಿನ ವೇಗದಲ್ಲಿ ನಡೆಯುತ್ತಿದೆ ಎಂದು ಚರ್ಚೆಗಳೇನಾದರೂ ನಡೆಯಿತೆ ಎಂಬುದರ ಬಗ್ಗೆ ಇಂದಿನ ಭಾರತೀಯರಿಗೆ ತಿಳುವಳಿಕೆ ಇರುವುದಿಲ್ಲ. ಸಂವಿಧಾನ ರಚನೆಯ ಸಂದರ್ಭದಲ್ಲಿ ಕೆಲ ಸದಸ್ಯರು ಸಂವಿಧಾನ ರಚನೆ ವಿಳಂಬವಾಗುತ್ತಿದೆ ಎಂಬ ಪ್ರಶ್ನೆಗಳನ್ನೆತ್ತಿದ್ದರು, ನಿಜ. ಸಂವಿಧಾನ ರಚನೆಯಾದ ನಂತರ ಸಂವಿಧಾನವನ್ನು ಅತಿ ಕಡಿಮೆ ಸಮಯದಲ್ಲಿ ರಚಿಸಿದ್ದಕ್ಕಾಗಿ ಕೆಲವು ಸದಸ್ಯರು ಡಾ॥ ಅಂಬೇಡ್ಕರ್ ಮತ್ತು ಅವರ ತಂಡವನ್ನು ಹೊಗಳಿದರು. ಅಂದರೆ 1949ರಲ್ಲಿ ಸಂವಿಧಾನ ರಚನೆ ನಿಧಾನಗತಿಯಲ್ಲಿ

ಸಂವಿಧಾನ ರಚನೆಯಲ್ಲಿ ವಿಳಂಬವಾಯಿತೆ?

ನಡೆಯುತ್ತಿದೆ ಎಂದು ಶಂಕರ್ ರಚಿಸಿದ ವ್ಯಂಗ್ಯ ಚಿತ್ರ ತಪ್ಪುಗ್ರಹಿಕೆಯದಾಗಿತ್ತು. ಹಾಗಿದ್ದರೂ ಎನ್.ಸಿ.ಇ.ಆರ್.ಟಿ ಪುಸ್ತಕದ ಬರಹಗಾರರು ಸಮರ್ಪಕವಲ್ಲದ ವ್ಯಂಗ್ಯಚಿತ್ರವನ್ನೇಕೆ ಪುಸ್ತಕದಲ್ಲಿ ಸೇರಿಸಿದರು? ಡಾ॥ ಅಂಬೇಡ್ಕರ್‌ರವರು ಸಂವಿಧಾನ ರಚನೆಯಲ್ಲಿ ವಿಳಂಬ ಮಾಡಿದರು ಎಂಬ ಭಾವನೆಯನ್ನು ಎಳೆಯ ಮನಸ್ಸುಗಳಲ್ಲಿ ಬಿತ್ತುವುದರ ಹೊರತು ಬೇರಾವ ಉದ್ದೇಶ ಅದಕ್ಕಿದೆ? ಸಂವಿಧಾನ ಸಭೆಯಲ್ಲಿ ಸಂವಿಧಾನದ ಮೇಲಿನ ಚರ್ಚೆಯ ಸಂದರ್ಭದಲ್ಲಿ ಕೆಲವು ಸದಸ್ಯರು ಮಾಡಿದ ಭಾಷಣದ ಆರಿಸಿದ ಭಾಗಗಳನ್ನು ಈ ಕೆಳಗೆ ನೀಡಿದೆ.

ಡಾ॥ ರಾಜೇಂದ್ರ ಪ್ರಸಾದ್, ಅಧ್ಯಕ್ಷರು, ಸಂವಿಧಾನ ಸಭೆ: "ಈ ಕೆಲಸವನ್ನು ಪೂರೈಸಲು ಮೂರು ವರ್ಷ ತೆಗೆದುಕೊಂಡಿದ್ದೇವೆ. ಆದರೆ ಈ ಸಾಧನೆಯ ಮಹತ್ವವನ್ನು ಮತ್ತು ಗೌರವಾನ್ವಿತ ಡಾ॥ ಅಂಬೇಡ್ಕರ್ ನಿನ್ನೆ ವಿವರಿಸಿರುವಂತೆ ಸಂವಿಧಾನ ರಚನೆಯಲ್ಲಿ ನಾವು ಎಷ್ಟು ದಿನಗಳನ್ನು ಕಳೆದಿದ್ದೇವೆ ಎಂಬುದನ್ನು ಪರಿಗಣಿಸಿದಾಗ ನಾವು ಕಳೆದಿರುವ ಸಮಯದ ಬಗ್ಗೆ ನೊಂದುಕೊಳ್ಳಲು ಕಾರಣಗಳಿಲ್ಲ".

ಡಾ॥ ಬಿ.ಆರ್. ಅಂಬೇಡ್ಕರ್, ಅಧ್ಯಕ್ಷರು, ಕರಡು ಸಂವಿಧಾನ ರಚನಾ ಸಮಿತಿ: "ಕರಡು ಸಂವಿಧಾನ ರಚನಾ ಸಮಿತಿಯ ಬಗ್ಗೆ ಹೇಳುವುದಾದರೆ ಸಮಿತಿಯನ್ನು ಸಂವಿಧಾನ ಸಭೆ 29 ಆಗಸ್ಟ್ 1947ರಲ್ಲಿ ಆರಿಸಿತು. ಅದು ತನ್ನ ಪ್ರಥಮ ಸಭೆಯನ್ನು ಆಗಸ್ಟ್ 30ರಲ್ಲಿ ನಡೆಸಿತು. ಅಂದಿನಿಂದ ಸಂವಿಧಾನದ ಕರಡು ತಯಾರಿಸಲು ಅದು 141 ದಿನಗಳು ಸಭೆ ಸೇರಿದೆ. ಸಂವಿಧಾನ ಸಲಹೆಗಾರರು ಸಂವಿಧಾನ ಕರಡು ರಚನಾ ಸಮಿತಿಯ ಕೆಲಸಕ್ಕೆ ಅನುಕೂಲವಾಗುವಂತೆ ತಯಾರಿಸಿದ ಕರಡು ಸಂವಿಧಾನ 243 ವಿಧಿಗಳು ಮತ್ತು 13 ಅನುಚ್ಛೇದಗಳನ್ನು ಹೊಂದಿತ್ತು. ಸಂವಿಧಾನ ಕರಡು ರಚನಾ ಸಮಿತಿಯು ರಚಿಸಿ ಸಂವಿಧಾನ ಸಭೆಯ ಮುಂದಿಟ್ಟ ಕರಡು ಸಂವಿಧಾನವು 315 ವಿಧಿಗಳು ಮತ್ತು 8 ಅನುಚ್ಛೇದಗಳನ್ನು ಹೊಂದಿ ಅದರ ಪರಿಶೀಲನೆಯು ಮುಗಿದ ನಂತರ ಕರಡು ಸಂವಿಧಾನದ ವಿಧಿಗಳು 386ಕ್ಕೆ ಏರಿತು. ಅನುಮೋದನೆಗೊಂಡಾಗ ಸಂವಿಧಾನ 395 ವಿಧಿಗಳು ಮತ್ತು 8 ಅನುಚ್ಛೇದಗಳನ್ನೊಂದಿದೆ. ಕರಡು ಸಂವಿಧಾನಕ್ಕೆ ಸೂಚನೆಯಾದ ತಿದ್ದುಪಡಿಗಳ ಒಟ್ಟು ಮೊತ್ತ ಸುಮಾರು 7635. ಅವುಗಳಲ್ಲಿ ಸಂವಿಧಾನ ಸಭೆಯ ಮುಂದೆ ಬಂದ ಸೂಚನೆಗಳ ಒಟ್ಟು ಸಂಖ್ಯೆ 2423.

"ನಾನು ಈ ಎಲ್ಲವನ್ನೂ ಹೇಳುತ್ತಿರುವುದಕ್ಕೆ ಕಾರಣವೇನೆಂದರೆ ಒಂದು ಹಂತದಲ್ಲಿ ಈ ಸಭೆ ತನ್ನ ಕೆಲಸ ಪೂರ್ಣಗೊಳಿಸುವಲ್ಲಿ ವಿಳಂಬ ಮಾಡುತ್ತಿದೆ. ಅದು ಬಹಳ ಆರಾಮವಾಗಿ ಕೆಲಸ ಮಾಡುತ್ತಿದೆ ಮತ್ತು ಸಾರ್ವಜನಿಕರ ಹಣವನ್ನು ಪೋಲು ಮಾಡುತ್ತಿದೆ ಎಂಬ ಆರೋಪಗಳು ಎದ್ದಿದ್ದವು. ರೋಮ್ ಧಗಧಗಿಸುತ್ತಿದ್ದಾಗ ನೀರೊ ಪಿಟೀಲು ಭಾರಿಸುತ್ತಿದ್ದಂತೆ ಇವರ ಕಾರ್ಯವೈಖರಿ ಎಂದರು ಕೆಲವರು. ಈ ರೀತಿಯ ಆರೋಪಗಳಲ್ಲಿ ಏನಾದರೂ ಹುರುಳಿದೆಯೆ? ಇತರೆ ದೇಶಗಳ ಸಂವಿಧಾನ ಸಭೆಗಳು ಎಷ್ಟು ಸಮಯ ತೆಗೆದುಕೊಂಡಿವೆ ಎಂಬುದನ್ನು ಈಗ ನೋಡೋಣ. ಕೆಲ ಉದಾಹರಣೆ ನೀಡುವುದಾದರೆ, ಅಮೆರಿಕಾದ ಸಭೆ ಮೇ 25, 1787ರಲ್ಲಿ ಮೊದಲಿಗೆ ಸಭೆ ಸೇರಿ ತನ್ನ ಕೆಲಸವನ್ನು ಸುಮಾರು 4 ತಿಂಗಳುಗಳಲ್ಲಿ ಅಂದರೆ 17 ಸೆಪ್ಟೆಂಬರ್ 1787ರಲ್ಲಿ ಮುಗಿಸಿತು. ಕೆನಡಾದ ಸಂವಿಧಾನ ಸಭೆ 10 ಅಕ್ಟೋಬರ್ 1864ರಲ್ಲಿ ಮೊದಲ ಸಭೆ ನಡೆಸಿತು. ಅದರ ಸಂವಿಧಾನವು ಕಾನೂನಾಗಿ 1867ರಲ್ಲಿ ಜಾರಿಗೆ ಬಂತು. ಅದು ತೆಗೆದುಕೊಂಡ ಸಮಯ ಸುಮಾರು 2 ವರ್ಷ 5 ತಿಂಗಳು. ಆಸ್ಟ್ರೇಲಿಯಾದ ಸಂವಿಧಾನ ಸಭೆ ಪ್ರಥಮ ಬಾರಿಗೆ ಮಾರ್ಚ್ 1891ರಲ್ಲಿ ಸೇರಿತು. ಅದರ ಸಂವಿಧಾನ ಜಾರಿಯಾದುದು 9 ಜುಲೈ 1900ರಂದು. ಅಂದರೆ ಅದು ತೆಗೆದುಕೊಂಡ ಸಮಯ 9 ವರ್ಷಗಳು. ದಕ್ಷಿಣ ಆಫ್ರಿಕಾದ ಸಭೆ ಅಕ್ಟೋಬರ್ 1908ರಲ್ಲಿ ಸೇರಿತು ಮತ್ತು ಅದರ ಸಂವಿಧಾನ ಒಂದು ವರ್ಷದ ಶ್ರಮದ ನಂತರ 20 ಸೆಪ್ಟೆಂಬರ್ 1909ರಲ್ಲಿ ಜಾರಿಗೆ ಬಂತು"



ತಾಜಮುಲ್ ಹುಸೇನ್ (ಬಿಹಾರ್): "ಮಾನ್ಯ ಅಧ್ಯಕ್ಷರೆ, ಸಂವಿಧಾನವನ್ನು ರಚಿಸಲು ಬಹಳ ಸಮಯ ತೆಗೆದುಕೊಂಡುದುದಾಗಿ ನಮ್ಮನ್ನು ಟೀಕಿಸಲಾಗುತ್ತಿದೆ. ಈ ಟೀಕಾಕಾರರ ಗಮನವನ್ನು ನಾನು ಈ ವಿಷಯದ ಕಡೆಗೆ ಸೆಳೆಯಲಿಚ್ಛಿಸುತ್ತೇನೆ. ಎರಡೂ ದೇಶಗಳು ಸಂವಿಧಾನ ರಚಿಸಲು ಹೆಚ್ಚು ಕಡಿಮೆ ಒಂದೇ ಸಮಯದಲ್ಲಿ ಪ್ರಾರಂಭಿಸಿದವು. ನಾವು ಸಂವಿಧಾನ ಬರೆದು ಮುಗಿಸಿದ್ದೇವೆ. ಅವರಿನ್ನೂ ಪ್ರಾರಂಭವನ್ನೇ ಮಾಡಿಲ್ಲ".

ಚೌಧರಿ ರಣ್‌ಬೀರ್ ಸಿಂಗ್, (ಪೂರ್ವ ಪಂಜಾಬ್): "ಮಾನ್ಯ ಅಧ್ಯಕ್ಷರೆ, ಇಂದು ನನ್ನ ಅನೇಕ ಸಹೋದರರು ಸಂವಿಧಾನ ರಚಿಸಲು ನಾವು ಅತಿ ಹೆಚ್ಚು ಸಮಯ ತೆಗೆದುಕೊಂಡೆವು ಎಂದು ಆರೋಪ ಮಾಡುತ್ತಿದ್ದಾರೆ. ಆದರೆ ಈ ಸಭೆಯನ್ನು ನಾವು ರಚಿಸಿದಾಗ ಭಾರತ ಪರಕೀಯರ ಆಳ್ವಿಕೆಯಲ್ಲಿದ್ದು ಆರುನೂರು ಭಾಗಗಳಾಗಿ ಅದು ವಿಭಜನೆಗೊಂಡಿತ್ತು, ಅನೇಕ ಜನರು ಮತ್ತು ಪಕ್ಷಗಳು ದೇಶವನ್ನು ಛಿದ್ರಗೊಳಿಸಲು ತಯಾರಾಗಿದ್ದರು. ಈ ಮೂರು ವರ್ಷಗಳಲ್ಲಿ ದೇಶದಲ್ಲಾಗಿರುವ ಬದಲಾವಣೆಗಳಿಗೆ ಸಮನಾದುದು ಹಿಂದೆಂದೂ ನಡೆದಿಲ್ಲ. ಈ ಸಮಯದಲ್ಲಿ ದೇಶ ಇಭ್ಭಾಗವಾಯಿತು. ಆದಾಗ್ಯೂ ಚರಿತ್ರೆಯಲ್ಲಿ ಮೊಟ್ಟ ಮೊದಲಿಗೆ ನಿಮ್ಮ ಅಧ್ಯಕ್ಷತೆಯಲ್ಲಿ ನಾವು ಹಿಂದೆಂದಿಗಿಂತಲೂ ದೊಡ್ಡದಾದ ಒಂದೇ ಭಾರತವನ್ನು ಹಿಂದೆಂದಿಗಿಂತಲೂ ಗಟ್ಟಿಯಾಗಿ ಸ್ಥಾಪಿಸುತ್ತಿದ್ದೇವೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು".

ಮು.ವಿ. ಅಳಗೇಶನ್ (ಮದ್ರಾಸ್): "ನಾವು ಈ ಸಂವಿಧಾನ ರಚಿಸಲು ಬಹಳಷ್ಟು ಸಮಯ ತೆಗೆದುಕೊಂಡೆವು ಎಂಬ ಟೀಕೆ ಮತ್ತೆ ತಲೆಯೆತ್ತಿದೆ ಎನ್ನುವುದು ಸರಿಯಲ್ಲ. ಈ ಸಭೆ ಎಷ್ಟು ದಿನ ಸೇರಿದೆ ಎಂಬುದನ್ನು ಲೆಕ್ಕ ಹಾಕಿದಾಗ ಸಮಯದ ಅಪವ್ಯಯವಾಗಿದೆ ಎಂಬುದು ನಿರಾಧಾರವೆಂದು ಗೊತ್ತಾಗುತ್ತದೆ. ಯಾರಿಗಾದರೂ ಇನ್ನೂ ಅನುಮಾನವಿದ್ದರೆ ಪಾಕಿಸ್ಥಾನವನ್ನು ನಾವು ನೆನಪಿಸಿಕೊಳ್ಳಬಹುದು. ಅವರೂ ಸಹ ಸಂವಿಧಾನ ರಚನೆಯ ಕೆಲಸವನ್ನು ನಮ್ಮ ಜತೆಯೆ ಪ್ರಾರಂಭಿಸಿದರು. ಆದರೆ ಅವರು ಇನ್ನೂ ಯಾವುದೇ ಪ್ರಗತಿ ಸಾಧಿಸಿಲ್ಲ. ನಾವು ನಮ್ಮ ಸಂವಿಧಾನವನ್ನು ರಚಿಸಿ ಮುಗಿಸಿದ್ದೇವೆ ಮತ್ತು ಅದನ್ನು ಜಾರಿಗೆ ತರುತ್ತೇವೆ".

ಎಲ್. ಕೃಷ್ಣಸ್ವಾಮಿ ಭಾರತಿ: "ಮಾನ್ಯರೆ, ಕಳೆದ ಮೂರು ವರ್ಷಗಳು ನೀಡಿರುವಷ್ಟು ನೆನಪಿಸಿಕೊಳ್ಳುವ ಘಟನೆಗಳನ್ನು ಭಾರತದ ಚರಿತ್ರೆಯಲ್ಲಿ ಯಾವುದೇ ಕಾಲ ನೀಡಿಲ್ಲ. ನಾವು ಸಂವಿಧಾನ ರಚಿಸುವ ಈ ಘನ ಕಾರ್ಯ ಪ್ರಾರಂಭಿಸಿದಂದಿನಿಂದ ಈವರೆಗಿನ ಮೂರು ವರ್ಷಗಳ ಕಡೆ ಒಮ್ಮೆ ನೋಟ ಬೀರಿದಾಗ ಕಾಣುವ ಭಾರತ ಚರಿತ್ರೆಯಲ್ಲಿನ ಮಹತ್ವದ ಬದಲಾವಣೆಗಳು ಯಾರನ್ನಾದರೂ ಮಂತ್ರಮುಗ್ಧ ಮಾಡಬಲ್ಲವು".

ಬಿ.ಎಂ.ಗುಪ್ತೆ (ಬಾಂಬೆ): "ಮಾನ್ಯರೆ, ನಾವು ನಮ್ಮ ಜವಾಬ್ದಾರಿಯನ್ನು ಪೂರ್ಣಗೊಳಿಸಲು ಮೂರು ವರ್ಷಗಳನ್ನು ತೆಗೆದುಕೊಂಡಿದ್ದೇವೆ. ಕೆಲವರು ಇದು ತುಂಬಾ ಹೆಚ್ಚು ಸಮಯ ಎಂದು ತಪ್ಪಾಗಿ ನಂಬಿದ್ದಾರೆ ಆದರೆ ಆತುರದಲ್ಲಿ, ವಿವೇಚನಾರಹಿತವಾಗಿ ರಚಿಸಿದ ಸಂವಿಧಾನ ಬಹಳ ವೇಗವಾಗಿ ಬದಲಾಗುತ್ತಿರುವ ಇಂದಿನ ಸಂದರ್ಭದಲ್ಲಿ ಹೆಚ್ಚು ಅಪಾಯಕಾರಿಯೂ ಆಗಬಹುದಿತ್ತು ಎಂಬ ಅಂಶಕ್ಕೆ ನಾನು ಅವರ ಗಮನ ಸೆಳೆಯಬಯಸುತ್ತೇನೆ."

* * *

ಸಂವಿಧಾನದ ತಂದೆ ಯಾರು?

ವಿವಾದಾತ್ಮಕ ಎನ್.ಸಿ.ಇ.ಆರ್.ಟಿ ಪುಸ್ತಕ ಅಂಬೇಡ್ಕರ್‌ರನ್ನು ಭಾರತ ಸಂವಿಧಾನದ ವಾಸ್ತು ಶಿಲ್ಪಿಯಾಗಿ ಪರಿಗಣಿಸಲಿಲ್ಲ. ಪುಸ್ತಕದ ಬರಹಗಾರರು ಸಂವಿಧಾನ ಕರಡು ರಚನಾ ಸಮಿತಿಯ ಬಗ್ಗೆ ಹೇಳುವುದಿಲ್ಲ ಮತ್ತು ಡಾ.ಅಂಬೇಡ್ಕರ್ ಅವರನ್ನು ಆ ಸಮಿತಿಯ ಅಧ್ಯಕ್ಷರು ಎಂದೂ ಪರಿಚಯಿಸುವುದಿಲ್ಲ. ಆದುದರಿಂದ ಸಂವಿಧಾನದ ಕರಡನ್ನು ತಯಾರಿಸಿದವರು ಯಾರು? " ಕರಡು ಸಂವಿಧಾನವನ್ನು ತಯಾರಿಸಿದ ಸಂವಿಧಾನ ಸಭೆ"... (ಪುಟ 16) ಎಂದು ಎನ್.ಸಿ.ಇ.ಆರ್.ಟಿ ಪುಸ್ತಕ ಹೇಳುತ್ತದೆ.

ಹೆಚ್ಚು ಕಡಿಮೆ ಎಲ್ಲಾ ಸಂವಿಧಾನ ಸಭೆಯ ಸದಸ್ಯರೂ ಸಂವಿಧಾನವನ್ನು ಅನುಮೋದಿಸುವಾಗ ಸಂವಿಧಾನ ಬರೆದವರು ಡಾ.ಬಿ.ಆರ್.ಅಂಬೇಡ್ಕರ್ ಎಂದು ಮುಕ್ತ ಕಂಠದಿಂದ ಅವರನ್ನು ಹೊಗಳಿದ್ದಾರೆ.

ಇದಕ್ಕೆ ಸಂಬಂಧಿಸಿದ ಭಾಷಣಗಳ ಆಯ

ಭಾರತದ ಸಂವಿಧಾನವನ್ನು ಬರೆದವರು ಯಾರು?

ಭಾಗಗಳನ್ನು ಕೆಳಗೆ ನೀಡಲಾಗಿದೆ:

ಡಾ.ರಾಜೇಂದ್ರ ಪ್ರಸಾದ್, ಅಧ್ಯಕ್ಷರು, ಸಂವಿಧಾನ ಸಭೆ (ನವೆಂಬರ್ 26, 1949): "ಕರಡು ಸಂವಿಧಾನ ಸಮಿತಿಯ ಸದಸ್ಯರು, ಅದರಲ್ಲೂ ಮುಖ್ಯವಾಗಿ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಎಷ್ಟು ಉತ್ಸಾಹ ಮತ್ತು ಶ್ರದ್ಧೆಯಿಂದ ಕೆಲಸ ಮಾಡಿದ್ದಾರೆ ಎಂಬುದನ್ನು ಬೇರೆಲ್ಲರಿಗಿಂತ ನಾನು ಅರಿತುಕೊಂಡಿದ್ದೇನೆ. (ಹರ್ಷೋದ್ಗಾರ) ಅಂಬೇಡ್ಕರ್ ಅವರನ್ನು ಸಂವಿಧಾನ ಕರಡು ಸಮಿತಿಯ ಸದಸ್ಯರನ್ನಾಗಿ ಮಾಡಿ, ನಂತರ ಅವರಿಗೆ ಅದರ ಅಧ್ಯಕ್ಷತೆಯನ್ನು ನೀಡಿದ ತೀರ್ಮಾನಕ್ಕಿಂತ ಉತ್ತಮ ತೀರ್ಮಾನವನ್ನು ನಾವು ಹಿಂದೆಯೂ ಮಾಡಿಲ್ಲ, ಮುಂದೆಯೂ ಮಾಡಲಾರೆವು. ಅವರು ತಮ್ಮ ಆರಿಸುವಿಕೆಯನ್ನು ಸಂಪೂರ್ಣವಾಗಿ ಸಮರ್ಥಿಸಿಕೊಂಡಿದ್ದಾರಲ್ಲದೆ ತಾವು ಮಾಡಿರುವ ಕೆಲಸಕ್ಕೆ ವಿಶೇಷ ಮೆರುಗನ್ನು ತಂದಿದ್ದಾರೆ".

ಕೆ.ಎಮ್.ಜದೆ ನವೆಂಬರ್ 24, 1949 (ಬಾಂಬೆ: ಸಾಮಾನ್ಯ): "ಮಾನ್ಯ ಅಧ್ಯಕ್ಷರೆ, ನಾನು ಡಾ.ಅಂಬೇಡ್ಕರ್ ಮತ್ತು ಅವರ ಸಹೋದ್ಯೋಗಿಗಳನ್ನು ಅಭಿನಂದಿಸಲು ಎದ್ದುನಿಂತಿದ್ದೇನೆ. ಕೆಲವು ಸದಸ್ಯರು ಡಾ. ಅಂಬೇಡ್ಕರ್‌ರವರನ್ನು ಅಭಿನಂದಿಸುತ್ತಾ ಅವರನ್ನು ಆಧುನಿಕ ಮನು ಎಂದು ಕರೆದಿದ್ದಾರೆ. ಅವರು ಈ ವಿಶೇಷಣವನ್ನು ಇಚ್ಛಿಸುವುದಿಲ್ಲ ಎಂದು ನನಗೆ ಖಂಡಿತವಾಗಿಯೂ ಗೊತ್ತಿದೆ. ನಾಲ್ಕು ವರ್ಣಗಳನ್ನು ರಚಿಸಿದ ಮನುವನ್ನು ಅವರು ದ್ವೇಷಿಸುತ್ತಾರೆ. ಸ್ಪೃಶ್ಯ ವರ್ಗಕ್ಕೆ ಸೇರಿದ್ದರೂ ನಾನು ಸಂವಿಧಾನವನ್ನು ಭೀಮಸ್ಮೃತಿ ಎಂದು ಕರೆಯುತ್ತೇನೆ."

ಹರ್‌ಗೋವಿಂದ್ ಪಂತ್ – ನವೆಂಬರ್ 24, 1949 (ಯುನೈಟೆಡ್ ಪ್ರಾವಿನ್ಸ್ – ಜನೆರಲ್): "ಮಾನ್ಯ ಅಧ್ಯಕ್ಷರೆ, ನಾನು ಪಂಡಿತ್ ಅಂಬೇಡ್ಕರರ ಸೂಚನೆಯನ್ನು ಬೆಂಬಲಿಸಲಿಕ್ಕಾಗಿ ಇಲ್ಲಿ ಬಂದಿದ್ದೇನೆ. ನಾನು ಪ್ರಜ್ಞಾಪೂರ್ವಕವಾಗಿ ಪಂಡಿತ ಎಂಬ ವಿಶೇಷಣವನ್ನು ಉಪಯೋಗಿಸುತ್ತಿದ್ದೇನೆ. ಅವರ ಪಾಂಡಿತ್ಯದಿಂದ ಪ್ರಭಾವಗೊಂಡು ಇಲ್ಲೇ ಇರುವ ಗೌರವಾನ್ವಿತ ಸದಸ್ಯರಲ್ಲಿ ಕೆಲವರಾದ ನಾವು ಅವರಿಗೆ 'ಮನು ಭಗವಾನ್' ಎಂಬ ಬಿರುದು ನೀಡುತ್ತಿದ್ದೇವೆ."

ಹರಿಬಹದ್ದೂರ್ ಗುರಂಗ್ – ನವೆಂಬರ್ 23, 1949, (ಪಶ್ಚಿಮ ಬಂಗಾಳ – ಸಾಮಾನ್ಯ): "ಮಾನ್ಯ ಅಧ್ಯಕ್ಷರೆ, ಕರಡು ಸಂವಿಧಾನ ಸಮಿತಿ ಅಧ್ಯಕ್ಷರನ್ನು ಈ ಅತ್ಯಮೂಲ್ಯವಾದ ಕೆಲಸವನ್ನು ಯಶಸ್ವಿಯಾಗಿ ಕೊನೆಗೊಳಿಸಿದ್ದಕ್ಕೆ ಅಭಿನಂದಿಸುವಲ್ಲಿ ಕರಡು ಸಮಿತಿಯ ಅಧ್ಯಕ್ಷರನ್ನು ಅಭಿನಂದಿಸುತ್ತಿರುವ ನನ್ನ ಸಹೋದ್ಯೋಗಿಗಳ ಜೊತೆ ನಾನೂ ಸೇರಿಕೊಳ್ಳುತ್ತೇನೆ."

ಆರ್.ವಿ.ದುಲೇಕರ್ – ನವೆಂಬರ್ 23, 1949: "ಮಾನ್ಯರೇ, ಡಾ॥ ಬಿ.ಆರ್. ಅಂಬೇಡ್ಕರ್‌ರವರು ಬಹಳ ಮಹತ್ವದ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಅವರು ಪಾಂಡವರ ಭೀಮನೂ ಸಹ ಹೆಮ್ಮೆ ಪಡಬಹುದಾದಂತ ಕೆಲಸವನ್ನು ಮಾಡಿದ್ದಾರೆ ಮತ್ತು ಭೀಮ್‌ರಾವ್ ಅಂಬೇಡ್ಕರ್ ಎಂದು ಹೆಸರಿಟ್ಟುಕೊಂಡಿದ್ದಕ್ಕೆ ತಕ್ಕದಾದ ಕೆಲಸವನ್ನು ಮಾಡಿದ್ದಾರೆ. ನಾವೆಲ್ಲರೂ ಅವರಿಗೆ ಋಣಿಗಳು.

ಧರಣೀದರ್ ಬಸು ಮತಾರಿ – ನವೆಂಬರ್ 23, 1949 (ಅಸ್ಸಾಂ – ಸಾಮಾನ್ಯ): "ಮಾನ್ಯ ಅಧ್ಯಕ್ಷರೆ, ಡಾ.ಅಂಬೇಡ್ಕರ್ ಮತ್ತು ಕರಡು ಸಮಿತಿಗೆ ಅವರ ಈ ಮಹತ್ವದ ಸಾಧನೆಗಾಗಿ ನನ್ನ ಸ್ವಂತ ಅಭಿನಂದನೆಗಳನ್ನು ಸೇರಿಸದ ಹೊರತು, ನಾನು ಸಂವಿಧಾನ ಸಭೆಯನ್ನು ಬಿಟ್ಟು ನನ್ನ ರಾಜ್ಯವಾದ ಅಸ್ಸಾಂಗೆ ಹೋಗುವ ಹಾಗಿಲ್ಲವೆಂದು ನನಗನ್ನಿಸುತ್ತದೆ."

ಪಂಡಿತ್ ಹೃದಯಾನಾಥ್ ಕುಂಜ್ರು – ನವೆಂಬರ್ 22, 1949: "...ನಮ್ಮ ಅದ್ಭುತ ಸಂವಿಧಾನದ ಮಹಾ ಶಿಲ್ಪಿ ಡಾ॥ ಅಂಬೇಡ್ಕರ್, ಮಾನ್ಯ ಅಧ್ಯಕ್ಷರೆ, ಡಾ॥ ಅಂಬೇಡ್ಕರ್ ಈ ಸಂವಿಧಾನ ಸಭೆ ಮಾತ್ರವಲ್ಲದೆ ಇಡೀ ರಾಷ್ಟ್ರದ ಧನ್ಯತೆಗೆ ಅರ್ಹರು. ಸಂವಿಧಾನವನ್ನು ಅವರು ಈ ಸಭೆಯಲ್ಲಿ ವಿಶ್ಲೇಷಿಸಿ ಅನುಮೋದನೆ ಪಡೆದ ಅದ್ಭುತ ರೀತಿಯನ್ನು ನಾವು ಮಾತ್ರವಲ್ಲ, ನಮ್ಮ ಮುಂದಿನ ಪೀಳಿಗೆಗಳೂ ಸಹ ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತವೆ."

ಗೋಪಾಲ್ ನಾರಾಯಣ್ – ನವೆಂಬರ್ 22, 1949 (ಯುನೈಟೆಡ್ ಪ್ರಾವಿನ್ಸ್ – ಸಾಮಾನ್ಯ): "ಮೊದಲಿಗೆ ನಾನು ಡಾ.ಅಂಬೇಡ್ಕರ್, ಕರಡು ಸಂವಿಧಾನ ಸಮಿತಿಯ ಅಧ್ಯಕ್ಷರು ಮತ್ತು ಇತರ ಸದಸ್ಯರನ್ನು ಎಲ್ಲಾ ವಿಷಯಗಳನ್ನೂ ಒಳಗೊಂಡ ಇಷ್ಟು ಬೃಹದಾಕಾರದ ಸಂವಿಧಾನವನ್ನು ರಚಿಸಿಕೊಟ್ಟಿದ್ದಕ್ಕಾಗಿ ಅಭಿನಂದಿಸುತ್ತೇನೆ. ಅವರು ಸ್ಪಷ್ಟತೆ ಮತ್ತು ಸರಳತೆಯನ್ನೇ ಮೈಗೂಡಿಸಿಕೊಂಡಿದ್ದಾರೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ."

ಅಜಿತ್ ಪ್ರಸಾದ್ ಜೈನ್ – ನವೆಂಬರ್ 22, 1949 (ಯುನೈಟೆಡ್ ಪ್ರಾವಿನ್ಸ್ – ಸಾಮಾನ್ಯ): "ಮಾನ್ಯ ಅಧ್ಯಕ್ಷರೆ, ಮುಂದೆ ಹೋಗುವ ಮೊದಲು ನಾವು ಡಾ.ಅಂಬೇಡ್ಕರ್ ಮತ್ತು ಕರಡು ಸಮಿತಿಗೆ ನಮ್ಮ ಧನ್ಯವಾದವನ್ನು ಹೇಳುವುದು ಅವಶ್ಯಕ. ಅವರು ಸತತವಾಗಿ ಬಿಡುವಿಲ್ಲದೆ ಬಹಳ ಕಷ್ಟಪಟ್ಟು ಕೆಲಸ ಮಾಡಿದ್ದಾರೆ."

ಕಾಜೀ ಸೈಯದ್ ಕರಿಮುದ್ದೀನ್ – ನವೆಂಬರ್ 21, 1949 (ಸೆಂಟ್ರಲ್ ಪ್ರಾವಿನ್ಸ್ ಮತ್ತು ಬೇರಾರ್ – ಮುಸ್ಲಿಮ್): "ಮಾನ್ಯ ಅಧ್ಯಕ್ಷರೆ, ಸಂವಿಧಾನದ ಕರಡು ತಯಾರಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಕ್ಕಾಗಿ ಮತ್ತು ಅತ್ಯುತ್ತಮ ಸಂವಿಧಾನ ತಯಾರಿಸಿ ಮಂಡಿಸಿ, ಅದನ್ನು ತೀಕ್ಷ್ಣ ವಿಶ್ಲೇಷಣೆಗೆ ಒಳಪಡಿಸಿ ಮತ್ತು ವಾದಗಳ ಮೂಲಕ ಸಮರ್ಥಿಸಿಕೊಂಡಿದ್ದಕ್ಕಾಗಿ ನಾನು ಮುಖ್ಯವಾಗಿ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಅಭಿನಂದಿಸುತ್ತೇನೆ."

ಶಂಕರರಾವ್ ದೇವ್ – ನವೆಂಬರ್ 21, 1949 (ಬಾಂಬೆ – ಸಾಮಾನ್ಯ): "ಮಾನ್ಯರೆ, ಡಾ.ಅಂಬೇಡ್ಕರ್ ಮತ್ತು ಅವರ ಸಹೋದ್ಯೋಗಿಗಳು ನಮ್ಮ ಗೌರವಕ್ಕೆ ಅರ್ಹರು. ಅವರು ಪ್ರಪಂಚದ ಯಾವುದೇ ದೇಶದ ಸಂವಿಧಾನ ತಯಾರಕರಿಗೆ ಸಮನಾಗಿ ನಿಲ್ಲಬಲ್ಲರು ಎಂದು ನನಗನ್ನಿಸುತ್ತದೆ."

ಮೆಹಬೂಬ್ ಅಲಿ ಬೇಗ್ ಸಾಹೇಬ್ – ನವೆಂಬರ್ 21, 1949 (ಮದ್ರಾಸ್ – ಮುಸ್ಲಿಂ): "ಮಾನ್ಯರೆ, ಡಾ.ಅಂಬೇಡ್ಕರ್ ಅವರು ತಮ್ಮ ಚಿಂತನೆ ಮತ್ತು ಸ್ಪಷ್ಟ ಅಭಿವ್ಯಕ್ತಿಯಲ್ಲಿ ಎಲ್ಲಾ ಹೋಲಿಕೆಗಳನ್ನೂ ಮೀರಿದಂತಹವರು. ಮತ್ತು ಹಣಕಾಸನ್ನೊಳಗೊಂಡಂತೆ ಸಂವಿಧಾನಾತ್ಮಕ ಸಮಸ್ಯೆಗಳ ಮೇಲೆ ಅವರ ಹಿಡಿತ ಅದ್ಭುತವಾದದ್ದೂ, ಸರಿಸಾಟಿಯಿಲ್ಲದ್ದು, ಅವರೊಬ್ಬರೇ ಹೊಂದಿರುವಂತದ್ದು ಮತ್ತು ಸಂಪೂರ್ಣವಾದದ್ದು."

ಎಸ್.ನಾಗಪ್ಪ – ನವೆಂಬರ್ 21, 1949 (ಮದ್ರಾಸ್ – ಸಾಮಾನ್ಯ): "ಮಾನ್ಯರೆ, ಡಾ.ಅಂಬೇಡ್ಕರ್ ಅವರು ಪರಿಶಿಷ್ಟ ವರ್ಗಗಳಿಗೆ ಸೇರಿದ್ದರೂ ಅವಕಾಶವೊದಗಿದರೆ ಯಾವ ಮಟ್ಟಕ್ಕೆ ಏರಬಲ್ಲರು ಎಂಬುದನ್ನು ಇದು ತೋರಿಸಿಕೊಟ್ಟಿದೆ. ಅವರು ಸಂವಿಧಾನದ ಕರಡನ್ನು ತಯಾರಿಸಿ ಅದನ್ನು ಈ ಸಭೆಯ ಮುಂದಿಟ್ಟು ಅದರ ಅನುಮೋದನೆ ಪಡೆಯುವ ಮೂಲಕ ತಮ್ಮ ದಕ್ಷತೆ ಮತ್ತು ಶಕ್ತಿ ಸಾಮರ್ಥ್ಯವನ್ನು ತೋರಿಸಿಕೊಟ್ಟಿದ್ದಾರೆ. ಈಗ ಪರಿಶಿಷ್ಟ ವರ್ಗಗಳಿಗೆ ಅಂಟಿರುವ ಅಧ್ಯಕ್ಷತೆಯ ಕಳಂಕ ತೊಳೆಯಲ್ಪಟ್ಟಿದೆ. ಮತ್ತು ಇನ್ನು ಮುಂದೆ ಅದು ಇರುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಅವಕಾಶ ಕೊಟ್ಟಲ್ಲಿ ಅವರು ಬೇರೆಲ್ಲರನ್ನೂ ಮೀರಿಸಿ ತೋರಿಸುತ್ತಾರೆ."

ಜಸ್ಪತ್ ರಾಯ್ – ನವೆಂಬರ್ 23, 1949(ಯುನೈಟೆಡ್ ಪ್ರಾವಿನ್ಸ್ – ಸಾಮಾನ್ಯ): "ಮಾನ್ಯರೆ, ಡಾ.ಅಂಬೇಡ್ಕರ್ ಮತ್ತು ಅವರ ಸಹೋದ್ಯೋಗಿಗಳು ಈವರೆಗಿನ ಎಲ್ಲಾ ಭಾಷಣಕಾರರೂ ಸ್ಫುರಿಸಿದ ಎಲ್ಲಾ ಹೊಗಳಿಕೆಗೂ ನಿಜವಾಗಿಯೂ ಅರ್ಹರು. ನಾನು ಮೊದಮೊದಲು ಡಾ.ಅಂಬೇಡ್ಕರ್ ಅವರ ಬಗ್ಗೆ ಪೂರ್ವಾಗ್ರಹ ಹೊಂದಿದ್ದೆ. ಏಕೆಂದರೆ ಬಹಳ ವರ್ಷಗಳ ಹಿಂದೆ ಮಹಾತ್ಮ ಗಾಂಧಿಯವರು ಉಪವಾಸ ನಿರತರಾಗಿದ್ದಾಗ ಈ ಪೂರ್ವಾಗ್ರಹ ನನ್ನಲ್ಲಿ ಮೂಡಿತು."

ಶೇಠ್ ದಾಮೋದರ್ ಸ್ವರೂಪ್ – ನವೆಂಬರ್ 20, 1949 (ಯುನೈಟೆಡ್ ಪ್ರಾವಿನ್ಸ್ – ಸಾಮಾನ್ಯ): "ಮಾನ್ಯರೆ, ಗೌರವಾನ್ವಿತ ಡಾ. ಅಂಬೇಡ್ಕರ್ ಮತ್ತು ಕರಡು ಸಮಿತಿಯು ಅವರ ಇತರೆ ಸಹೋದ್ಯೋಗಿಗಳೂ ಸಂವಿಧಾನ ಸಭೆಯ ಎಲ್ಲಾ ಸದಸ್ಯರ ಅಭಿನಂದನೆಗೆ ಅರ್ಹರು."

ಕುಲಾಧರ್ ಚಾಲಿಹಾ – ನವೆಂಬರ್ 19, 1949 (ಅಸ್ಸಾಂ ಸಾಮಾನ್ಯ): "ಮಾನ್ಯರೆ, ಮೊದಲಿಗೆ ಸಂವಿಧಾನ ಕರಡು ಸಮಿತಿ ಮತ್ತು ಅದರಲ್ಲೂ ಡಾ.ಅಂಬೇಡ್ಕರ್ ಅವರು ಈ ಅತ್ಯುತ್ತಮ ಸಂವಿಧಾನವನ್ನು ನೀಡಿದ್ದಕ್ಕೆ ಅವರಿಗೆ ಅಭಿನಂದಿಸುವುದು ಅವಶ್ಯಕ."

ಬಿ.ಐ.ಮುನಿಸ್ವಾಮಿ ಪಿಳ್ಳೆ – ನವೆಂಬರ್ 17,1947 (ಮದ್ರಾಸ್ – ಸಾಮಾನ್ಯ): "ಮಾನ್ಯರೆ, ಕರಡು ಸಮಿತಿಯ ಅಧ್ಯಕ್ಷರಾದ ಡಾ.ಬಿ.ಆರ್.ಅಂಬೇಡ್ಕರ್ ಅವರ ಯೋಗ್ಯತೆ ಮತ್ತು ಸಾಮರ್ಥ್ಯದ ಬಗ್ಗೆ ಒಂದೆರಡು ಪ್ರಶಂಸೆಯ ಮಾತುಗಳನ್ನು ನಾನು ಹೇಳಲು ಇಚ್ಛಿಸುತ್ತೇನೆ. (ಗಟ್ಟಿಯಾದ ಹರ್ಷೋದ್ಗಾರ)

ಸೇಟ್ ಗೋವಿಂದ್‌ದಾಸ್ – ನವೆಂಬರ್ 17, 1949 (ಸೆಂಟ್ರಲ್ ಪ್ರಾವಿನ್ಸ್ – ಸಾಮಾನ್ಯ): "ಮಾನ್ಯರೆ, ಈ ಸಂವಿಧಾನವನ್ನು ಒಂದು ಆಕಾರಕ್ಕೆ ತರಲು ಬಹಳವಾಗಿ

ಅಂಬೇಡ್ಕರ್ ಅವರನ್ನು ಸಂವಿಧಾನ ಕರಡು ಸಮಿತಿಯ ಸದಸ್ಯರನ್ನಾಗಿ ಮಾಡಿ, ನಂತರ ಅವರಿಗೆ ಅದರ ಅಧ್ಯಕ್ಷತೆಯನ್ನು ನೀಡಿದ ತೀರ್ಮಾನಕ್ಕಿಂತ ಉತ್ತಮ ತೀರ್ಮಾನವನ್ನು ನಾವು ಹಿಂದೆಯೂ ಮಾಡಿಲ್ಲ, ಮುಂದೆಯೂ ಮಾಡಲಾರೆವು."

– ಡಾ. ರಾಜೇಂದ್ರ ಪ್ರಸಾದ್

ಶ್ರಮಿಸಿದವರು ಡಾ.ಅಂಬೇಡ್ಕರ್. ಅವರಿಗೆ ಅಭಿನಂದಿಸಲು ನಾನು ಮೊದಲು ಇಚ್ಛಿಸುತ್ತೇನೆ. ಡಾ.ಅಂಬೇಡ್ಕರ್ ನಮ್ಮ ಯುಗದ ಮನು ಎಂದು ಹೇಳಲಾಗುತ್ತಿದೆ."

* * *

ಡಾ॥ ಅಂಬೇಡ್ಕರ್‌ರವರ ಉದಾತ್ತಗುಣಗಳ ಬಗ್ಗೆ ಹೆಚ್ಚೇನೂ ಬರಹಗಳಿಲ್ಲ ಮತ್ತು ಜನರಿಗೆ ಆ ಬಗ್ಗೆ ಹೆಚ್ಚೇನೂ ತಿಳಿದಿಲ್ಲ. ಅವರಲ್ಲೇನೊ ವಿಶೇಷತೆ ಇರಬೇಕು. ಆದುದರಿಂದಲೇ ಸಂವಿಧಾನ ಸಭೆಯ ಕೆಲ ಸದಸ್ಯರು ಅವರನ್ನು ದೇವರು ಎಂದು ಸಂಭೋದಿಸಿದ್ದು.

1949ರ ನವೆಂಬರ್ 25ರಂದು ಡಾ॥ ಅಂಬೇಡ್ಕರ್‌ರವರು ಕರಡು ಸಂವಿಧಾನವನ್ನು ಅನುಮೋದನೆಗಾಗಿ ಸಂವಿಧಾನ ಸಭೆಯ ಮುಂದಿಟ್ಟರು. ಅದಕ್ಕೆ ಮೊದಲು ಕರಡು ಸಂವಿಧಾನದ ಮೂರು ಓದು ಮುಗಿದಿದ್ದು ಸದಸ್ಯರು ಒಂದೊಂದೂ ವಿಧಿಯನ್ನು ಪ್ರತ್ಯೇಕವಾಗಿ ಚರ್ಚಿಸಿದ್ದರು.

ಹೆಚ್ಚು ಸದಸ್ಯರು ಡಾ॥ ಅಂಬೇಡ್ಕರ್‌ರವರನ್ನು ಸಂವಿಧಾನದ ಮುಖ್ಯ ವಾಸ್ತುಶಿಲ್ಪಿ ಎಂದು ಕರೆದು ಗೌರವಿಸಿದರು. ಕರಡು ಸಂವಿಧಾನ ಸಮಿತಿಯ ಸದಸ್ಯರುಗಳಲ್ಲಿ ಒಬ್ಬರಾದ ಟಿ.ಟಿ.ಕೃಷ್ಣಮಾಚಾರಿಯವರು ನವೆಂಬರ್ 25ರ ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು. "ಮಾನ್ಯ ಅಧ್ಯಕ್ಷರೆ, ತಾವು ಕರಡು ಸಂವಿಧಾನ ಸಮಿತಿಗೆ ನಾಮಕರಣ ಮಾಡಿದ 7 ಸದಸ್ಯರಲ್ಲಿ ಒಬ್ಬರು ಸಂವಿಧಾನ ಸಭೆಯಿಂದಲೇ ನಿವೃತ್ತಿ ಹೊಂದಿದರು ಮತ್ತು ಅವರಿಗೆ ಬದಲಾಗಿ ಮತ್ತೊಬ್ಬರನ್ನು ಸಮಿತಿಗೆ ನಾಮಕರಣ ಮಾಡಲಾಯಿತು ಎಂಬುದು ಬಹುಶಃ ಸಂವಿಧಾನ ಸಭೆಗೆ ಗೊತ್ತಿರಬಹುದು. ಕರಡು ಸಮಿತಿಯ ಮತ್ತೊಬ್ಬ ಸದಸ್ಯರು ಮರಣ ಹೊಂದಿದರು ಮತ್ತು ಅವರ ಸ್ಥಳಕ್ಕೆ ಬೇರೆಯಾರನ್ನೂ ನಾಮಕರಣ ಮಾಡಲಿಲ್ಲ. ಒಬ್ಬರು ಅಮೆರಿಕಾದಲ್ಲಿದ್ದರು ಅವರ ಸ್ಥಳವನ್ನು ತುಂಬಲಿಲ್ಲ. ಮತ್ತೊಬ್ಬ ಸದಸ್ಯರು ರಾಜ್ಯಾಡಳಿತದಲ್ಲಿ ತೊಡಗಿಸಿಕೊಂಡಿದ್ದರು ಆ ಕಾರಣದಿಂದ ಒಂದು ಸ್ಥಾನ ಖಾಲಿ ಉಳಿದಿತ್ತು. ಒಬ್ಬರು ಅಥವಾ ಇಬ್ಬರು ಸದಸ್ಯರು ದೆಹಲಿಯಿಂದ ದೂರ ವಾಸಿಸುತ್ತಿದ್ದರು ಮತ್ತು ಬಹುಶಃ ಆರೋಗ್ಯದ ಕಾರಣವೂ ಸಹ ಸೇರಿ ಅವರನ್ನು ಸಭೆಗಳಿಗೆ ಗೈರುಹಾಜರಾಗುವಂತೆ ಮಾಡಿತು. ಆದುದರಿಂದ ಕೊನೆಗೆ ಈ ಸಂವಿಧಾನದ ಕರಡು ತಯಾರಿಸುವ ಸಂಪೂರ್ಣ ಹೊರೆಯು ಡಾ॥ ಅಂಬೇಡ್ಕರ್‌ರವರ ಮೇಲೆ ಬಿದ್ದಿತು. ಅವರು ಈ ಜವಾಬ್ದಾರಿಯನ್ನು ಮೆಚ್ಚುವ ರೀತಿಯಲ್ಲಿ ಸಾಧಿಸಿರುವುದಕ್ಕೆ ನಾವೆಲ್ಲರೂ ಕೃತಜ್ಞರಾಗಿದ್ದೇವೆ ಎಂಬುದರಲ್ಲಿ ನನಗೆ ಅನುಮಾನವಿಲ್ಲ".

ಅಂಬೇಡ್ಕರ್‌ರವರ ಉದಾತ್ತತೆ

ಡಾ॥ಅಂಬೇಡ್ಕರ್‌ರವರು ಕೊನೆಯ ಭಾಷಣಕಾರರಾಗಿದ್ದರು. ಜನರು ಒಬ್ಬರನ್ನು ಅವರ ಯಶಸ್ಸಿಗಾಗಿ ಹೊಗಳತೊಡಗಿದಾಗ ಅವರು ಅದಕ್ಕೆ ಸ್ಪಂದಿಸುವುದು ಹೇಗೆ ಎಂದುಕೊಳ್ಳಬಹುದು? ನಿಜವಾದ ನಾಯಕ "ಇಲ್ಲ, ಎಲ್ಲವೂ ನಿಮ್ಮ ಬೆಂಬಲದಿಂದಲೇ ಸಾಧ್ಯವಾಯಿತು", ಎಂದು ಹೇಳಬಹುದು.

ಹೊಗಳಿಕೆಯ ಸುರಿಮಳೆ ಅವರ ಮೇಲೆ ಸುರಿದಾಗ ಡಾ॥ ಅಂಬೇಡ್ಕರ್‌ರವರು ಹೇಳಿದ್ದು ಹೀಗೆ. "ನೀವು ಹೀಗೆ ನನಗೆ ನೀಡುತ್ತಿರುವ ಗೌರವ ನಿಜವಾಗಿಯೂ ನನಗೆ ಸೇರಿದ್ದಲ್ಲ. ಅದು ಭಾಗಶಃ ಸಂವಿಧಾನ ಸಲಹೆಗಾರರಾದ ಸರ್. ಬಿ.ಎನ್.ರಾವ್ ಅವರಿಗೆ ಸೇರಬೇಕಾದ್ದು. ಅವರು ಕರಡು ಸಮಿತಿಯ ಪರಿಶೀಲನೆಗೆ ಒಂದು ಸಂವಿಧಾನದ ಕರಡನ್ನು ತಯಾರಿಸಿಕೊಟ್ಟರು. ಭಾಗಶಃ ಈ ಯಶಸ್ಸಿನ ಕೀರ್ತಿ ಕರಡು ಸಮಿತಿಯ ಸದಸ್ಯರಿಗೆ ಸಲ್ಲಬೇಕಾದ್ದು, ಈಗಾಗಲೇ ನಾನು ಹೇಳಿರುವಂತೆ 141 ದಿನ ಸಮಿತಿ ಸಭೆ ಸೇರಿತು. ಹೊಸ ಸೂತ್ರ ರೂಪಿಸುವ ಅವರ ಚಾತುರ್ಯವಿಲ್ಲದಿದ್ದಲ್ಲಿ ಮತ್ತು ವಿವಿಧ ದೃಷ್ಟಿಕೋನಗಳನ್ನು ಗ್ರಹಿಸಿ ಅವುಗಳನ್ನು ಅಳವಡಿಸಿಕೊಳ್ಳಬಲ್ಲ ಅವರ ಸಾಮರ್ಥ್ಯವಿಲ್ಲದಿದ್ದಲ್ಲಿ ಸಂವಿಧಾನವನ್ನು ತಯಾರು ಮಾಡುವ ಈ ಜವಾಬ್ದಾರಿ ಇಷ್ಟು ಯಶಸ್ವಿಯಾಗಿ ಕೊನೆಗೊಳ್ಳುತ್ತಿರಲಿಲ್ಲ. ಇದಕ್ಕಿಂತ ಹೆಚ್ಚಾಗಿ ಯಶಸ್ಸಿನ ಒಂದು ಭಾಗ ಎಸ್.ಎನ್. ಮುಖರ್ಜಿ, ಮುಖ್ಯ ಡ್ರಾಫ್ಟ್‌ಮನ್ ಅವರಿಗೆ ಸಲ್ಲಬೇಕಾದದ್ದು. ಅತಿ ಕ್ಲಿಷ್ಟವಾದ ಪ್ರಸ್ತಾವನೆಗಳನ್ನು ಸರಳ ಮತ್ತು ಸುಲಭವಾಗಿ ಅರ್ಥಮಾಡಿಕೊಳ್ಳಬಲ್ಲ ಕಾನೂನು ರೂಪದಲ್ಲಿ ಇಡುವಲ್ಲಿನ ಅವರ ಶಕ್ತಿಗೆ ಸಮಾನವಾದುದನ್ನು ಕಾಣುವುದು ಬಹಳ ಅಪರೂಪ. ಹಾಗೆಯೇ ಬಹಳ ಕಷ್ಟಪಟ್ಟು ದುಡಿಯುವ ಅವರ ಸಾಮರ್ಥ್ಯ ಸಹ ಈ ಸಭೆಗೆ ಅವರೊಂದು ದೊಡ್ಡ ಆಸ್ತಿ. ಅವರ ಸಹಾಯವಿಲ್ಲದಿದ್ದಲ್ಲಿ ಈ ಸಂವಿಧಾನ ಕರಡು ಸಮಿತಿ ಸಂವಿಧಾನವನ್ನು ಪೂರ್ಣಗೊಳಿಸಲು ಇನ್ನೂ ಅನೇಕ ವರ್ಷಗಳನ್ನು ತೆಗೆದುಕೊಳ್ಳುತ್ತಿತ್ತು. ಈ ಸಂದರ್ಭದಲ್ಲಿ ನಾನು ಮುಖರ್ಜಿಯವರ ಕೆಳಗಡೆ ಕೆಲಸಮಾಡುವ ಸಿಬ್ಬಂದಿಯನ್ನು ಹೆಸರಿಸಲು ಮರೆಯಬಾರದು. ಏಕೆಂದರೆ ಈ ಕೆಲಸದಲ್ಲಿ ಅವರೆಷ್ಟು ದುಡಿದಿದ್ದಾರೆ ಮತ್ತು ಅನೇಕ ವೇಳೆ ಮಧ್ಯರಾತ್ರಿಯನ್ನೂ ದಾಟಿ ಸಹ ಅವರು ಶ್ರಮಿಸಿದ್ದಾರೆ ಎಂದು ನನಗೆ ತಿಳಿದಿದೆ. ನಾನು ಅವರೆಲ್ಲರ ಪ್ರಯತ್ನಕ್ಕೆ ಮತ್ತು ಸಹಕಾರಕ್ಕೆ ಅವರಿಗೆ ಧನ್ಯವಾದವನ್ನು ಹೇಳುತ್ತೇನೆ. (ಹರ್ಷೋದ್ಗಾರ)

ಕೆಲವರು ಡಾ॥ ಅಂಬೇಡ್ಕರ್ ಅವರ ಈ ಭಾಷಣವನ್ನು ಉದಾಹರಿಸುತ್ತ, 'ನೋಡಿ ಅಂಬೇಡ್ಕರ್ ಅವರೇ ಏನು ಹೇಳುತ್ತಾರೆ' ಎಂದು ಕೇಳುತ್ತಾರೆ.

ನಿಜ. ಡಾ॥ ಅಂಬೇಡ್ಕರ್ ಅವರಿಗೆ ಬೆಂಬಲವಾಗಿ ಒಂದು ದೊಡ್ಡ ತಂಡವೇ ಇತ್ತು. ಡಾ॥ ಅಂಬೇಡ್ಕರ್ ಅವರು ತುಂಬಾ ಪ್ರಾಮಾಣಿಕವಾಗಿ ತಂಡದ ಸದಸ್ಯರು ವಹಿಸಿದ ಪಾತ್ರಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ. ಶ್ರೇಷ್ಠ ನಾಯಕರು ಮಾತ್ರ ಹೀಗೆ ಮಾಡಬಲ್ಲರು.

ಆದರೆ ಡಾ॥ ಅಂಬೇಡ್ಕರ್ ಅವರು ಏನನ್ನು ಹೇಳಲಿಲ್ಲವೊ ಅದನ್ನು ಡಾ॥ ರಾಜೇಂದ್ರ ಪ್ರಸಾದ್ ಅವರು ನವೆಂಬರ್ 26ರಂದು ಸಂವಿಧಾನ ಸಭೆ ಸಂವಿಧಾನಕ್ಕೆ ಅನುಮೋದನೆ ನೀಡಿದ ಸಂದರ್ಭದಲ್ಲಿ ಹೇಳಿದರು. ಸಂವಿಧಾನ ಸಭೆಯ ಅಧ್ಯಕ್ಷರೂ ಆದ ಡಾ॥ ರಾಜೇಂದ್ರ ಪ್ರಸಾದ್ ಅವರು ತಮ್ಮ ಭಾಷಣದಲ್ಲಿ ಕರಡು ಸಂವಿಧಾನಕ್ಕೆ ಒಟ್ಟು 7635 ತಿದ್ದುಪಡಿಗಳನ್ನು ಸಲಹೆ ಮಾಡಲಾಗಿತ್ತೆಂದೂ ಮತ್ತು ಅವುಗಳಲ್ಲಿ ಅಂತಿಮವಾಗಿ 2473 ತಿದ್ದುಪಡಿಗಳನ್ನು ಸಭೆಯಲ್ಲಿ ಪರಿಶೀಲಿಸಲಾಯಿತೆಂದೂ ತಿಳಿಸಿದರು.

ಅದರ ಅರ್ಥ ಏನು? ಅದರ ಅರ್ಥ ಎಸ್.ಎನ್. ಮುಖರ್ಜಿ ಮತ್ತು ಸರ್.ಬಿ.ಎನ್. ರಾವ್ ತಯಾರಿಸಿದ ಕರಡು 2473 ತಿದ್ದುಪಡಿಗಳ ಪರಿಶೀಲನೆಯ ಮೂಲಕ ಸಂಪೂರ್ಣ ಬದಲಾವಣೆ ಹೊಂದಿತು. ಅದರ ಮೇಲುಸ್ತುವಾರಿಯನ್ನು ಡಾ॥ ಅಂಬೇಡ್ಕರ್ ಅವರು ವಹಿಸಬೇಕಾಯಿತು ಮತ್ತು ಈ ಎಲ್ಲ ತಿದ್ದುಪಡಿ ಸಲಹೆಗಳನ್ನು ವಿಶದವಾಗಿ ಸ್ಪಷ್ಟಪಡಿಸಬೇಕಾಯಿತು.

ಡಾ॥ ಅಂಬೇಡ್ಕರ್ ಸಂವಿಧಾನ ಸಭೆಯ ಬಗ್ಗೆ ಕೆಳಗಿನ ಪ್ರಸಂಶಾತ್ಮಕ ಮಾತುಗಳನ್ನು ಹೇಳಿದ್ದಾರೆ.

"ನಾನು ಸಂವಿಧಾನ ಸಭೆಗೆ ಬಂದದ್ದು ಪರಿಶಿಷ್ಟ ಜಾತಿಗಳ ಆಸಕ್ತಿಯನ್ನು ಕಾಪಾಡಲೋಸ್ಕರವೆ ವಿನಃ ನನ್ನಲ್ಲಿ ಬೇರಾವುದೇ ಘನ ಉದ್ದೇಶಗಳಿರಲಿಲ್ಲ. ಅದಕ್ಕಿಂತ ದೊಡ್ಡ ಜವಾಬ್ದಾರಿ ಹೊರಬೇಕಾಗುತ್ತದೆ ಎಂದು ನಾನು ಕನಸುಮನಸ್ಸಿನಲ್ಲಿಯೂ ಊಹಿಸಿರಲಿಲ್ಲ. ಆದುದರಿಂದ ಕರಡು ಸಂವಿಧಾನ ಸಮಿತಿಗೆ ನನ್ನನ್ನು ಸಂವಿಧಾನ ಸಭೆ ಆರಿಸಿದಾಗ ನನಗೆ ತುಂಬಾ ಆಶ್ಚರ್ಯವಾಯಿತು. ಕರಡು ಸಂವಿಧಾನ ಸಮಿತಿ ಅದರ ಅಧ್ಯಕ್ಷನಾಗಿ ನನ್ನನ್ನು ಚುನಾಯಿಸಿದಾಗ ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ! ಕರಡು ಸಂವಿಧಾನ ಸಮಿತಿಯಲ್ಲಿ ನನ್ನ ಸ್ನೇಹಿತ ಅಲ್ಲಾಡಿ ಕೃಷ್ಣಸ್ವಾಮಿ ಐಯ್ಯರ್ ಅಂತಹ ನನಗಿಂತ ದೊಡ್ಡವರು, ಉತ್ತಮರು ಮತ್ತು ದಕ್ಷರಾದ ಸದಸ್ಯರಿದ್ದರು . ನನ್ನಲ್ಲಿ ಇಷ್ಟು ನಂಬಿಕೆಯಿಟ್ಟು ನನ್ನನ್ನು ತಮ್ಮ ಉಪಕರಣವಾಗಿ ಆರಿಸಿ ನನಗೆ ದೇಶಸೇವೆ ಮಾಡಲು ಒಂದು ಅವಕಾಶ ನೀಡಿದ ಸಂವಿಧಾನ ಸಭೆ ಮತ್ತು ಕರಡು ಸಮಿತಿಗಳಿಗೆ ನಾನು ಚಿರಋಣಿಯಾಗಿದ್ದೇನೆ." (ಹರ್ಷೋದ್ಗಾರ)

ಇದು ಡಾ॥ ಅಂಬೇಡ್ಕರ್ ಎಂಬ ಮಹಾನಾಯಕನ ಉದಾರತೆ. ■

ಡಾ. ಜೆ. ಬಾಲಕೃಷ್ಣ

ಮೋಸಗಾರ ಫಕೀರ

ಆ ಊರಿಗೆ ಬಂದಿದ್ದ ಫಕೀರ ತಾನು ಮಂತ್ರದಿಂದ ಓದು ಬರಹ ಬಾರದ ಅನಕ್ಷರಸ್ಥರಿಗೂ ಸಹ ತತ್‌ಕ್ಷಣವೇ ಓದುವಂತೆ ಮಾಡಬಲ್ಲೆನೆಂದು ಹೇಳುತ್ತಿದ್ದ. ಆದರೆ ಯಾರೂ ಆತನ ಮಾತು ನಂಬಲಿಲ್ಲ. ಅನಕ್ಷರಸ್ಥನಾಗಿದ್ದ ನಸ್ರುದ್ದೀನನಿಗೆ ಬಹಳ ದಿನಗಳಿಂದ ಓದುವುದನ್ನು ಕಲಿಯಬೇಕೆಂಬ ಆಸೆ ಇತ್ತು, ಆದರೆ ಅದಕ್ಕೆ ಆತನಿಗೆ ಅವಕಾಶವೇ ಸಿಕ್ಕಿರಲಿಲ್ಲ. ಈಗ ಸುಲಭವಾಗಿ ಅದೂ ತತ್‌ಕ್ಷಣವೇ ಓದಲು ಕಲಿಯಲು ಅವಕಾಶ ಸಿಕ್ಕಿರುವಾಗ ಏಕೆ ಬಿಡಬೇಕೆಂದು ಆತ ಮುಂದೆ ಬಂದ. ಫಕೀರ ನಸ್ರುದ್ದೀನ್‌ನನ್ನು ಮುಂದೆ ಕೂಡ್ರಿಸಿಕೊಂಡು ಅದೇನೋ ಮಂತ್ರವನ್ನು ಗುಣಗುಣಿಸಿ ತನ್ನ ಮಂತ್ರದಂಡವನ್ನು ಆತನ ತಲೆಯಮೇಲಿರಿಸಿ 'ಹೋಗು ಈಗ ನಿನಗೆ ಓದಲು ಬರುತ್ತದೆ' ಎಂದು ಹೇಳಿ ಕಳುಹಿಸಿದ. ನಸ್ರುದ್ದೀನ್ ಸಂತೋಷದಿಂದ ಓಡಿದ.

ಜನ ನೋಡುತ್ತಿರುವಂತೆ ನಸ್ರುದ್ದೀನ್ ಓಡುತ್ತಾ ಬಂದ. ಆತನ ಮುಖ ಕೋಪದಿಂದ ಬುಸುಗುಡುತ್ತಿತ್ತು ಹಾಗೂ ಆತನ ಕೈಯಲ್ಲಿ ಒಂದು ಪುಸ್ತಕವೂ ಇತ್ತು. ಫಕೀರನ ಬಳಿ ಇದ್ದ ಜನರೆಲ್ಲಾ ನಸ್ರುದ್ದೀನನ ಮುಖವನ್ನು ನೋಡಿ, 'ಏಕೆ ನಸ್ರುದ್ದೀನ್ ಫಕೀರನ ಮಾಯಾ ಮಂತ್ರ ನಿನಗೆ ಓದು ಕಲಿಸಿಕೊಡಲಿಲ್ಲವೆ?' ಎಂದು ಕೇಳಿದರು. 'ಓದಲು ಕಲಿತಿದ್ದೇನೆ. ಆದರೆ ನಾನು ವಾಪಸ್ಸು ಬಂದದ್ದು ಅದಕ್ಕಲ್ಲ. ಎಲ್ಲಿ ಹೋದ ಮೋಸಗಾರ ಫಕೀರ?' ಎಂದು ಕೇಳಿದ.

'ಏನು? ನಿನಗೆ ಒಂದು ನಿಮಿಷದಲ್ಲಿ ಓದಲು ಕಲಿಸಿದ ಫಕೀರ ಮೋಸಗಾರನೆಂದು ಕರೆಯುತ್ತಿದ್ದೀಯಾ?' ಎಂದರು ಅಲ್ಲಿದ್ದ ಜನರು.



'ಹೌದು, ಮನೆಗೆ ಹೋದ ತಕ್ಷಣ ಈ ಪುಸ್ತಕ ಓದಿದೆ. ನೋಡಿ, ಇದರಲ್ಲಿ ಫಕೀರರೆಲ್ಲಾ ಮೋಸಗಾರರು ಎಂದು ಬರೆದಿದೆ' ಎಂದ ನಸ್ರುದ್ದೀನ್ ತನ್ನ ಬಳಿ ಇದ್ದ ಪುಸ್ತಕ ತೋರಿಸುತ್ತಾ.

ಚಳಿ

ಅದೊಂದು ಚಳಿಗಾಲದ ದಿನ. ಉಣ್ಣೆಯ ಬಟ್ಟೆ ಧರಿಸಿದ್ದರೂ ಚಳಿ ತಡೆಯಲಾಗದೆ ಆತ ಗಡಗಡ ನಡುಗುತ್ತಿದ್ದ. ಆತನ ಎದುರಿಗೆ ಮುಲ್ಲಾ ನಸ್ರುದ್ದೀನ್ ನಡೆದು ಹೋಗುತ್ತಿದ್ದ. ನಸ್ರುದ್ದೀನ್ ತೆಳುವಾದ ಬಟ್ಟೆ ಧರಿಸಿದ್ದರೂ ಆತನ ಮೇಲೆ ಚಳಿ ಯಾವುದೇ ಪ್ರಭಾವ ಬೀರಿದಂತಿರಲಿಲ್ಲ. ಚಳಿಯಲ್ಲಿ ನಡುಗುತ್ತಿದ್ದಾತ ನಸ್ರುದ್ದೀನ್‌ನನ್ನು ಕರೆದು, 'ಮುಲ್ಲಾ ನಾನು ಇಷ್ಟೊಂದು ಉಣ್ಣೆ ಬಟ್ಟೆ ಧರಿಸಿದ್ದರೂ ಚಳಿ ತಡೆಯಲಾಗದೆ ಗಡಗಡ ನಡುಗುತ್ತಿದ್ದೇನೆ. ನೀನು ಅಷ್ಟು ತೆಳುವಾದ ಬಟ್ಟೆ ಧರಿಸಿದ್ದರೂ ಆರಾಮವಾಗಿ ಓಡಾಡುತ್ತಿದ್ದೀಯಲ್ಲಾ. ನಿನ್ನಿಂದ ಅದು ಹೇಗೆ ಸಾಧ್ಯ?' ಎಂದು ಕೇಳಿದ.

ಆ ಮಾತಿಗೆ ನಸ್ರುದ್ದೀನ್, 'ನೋಡಿ. ನನ್ನ ಬಳಿ ಇರುವುದು ಈಗ ನಾನು ಧರಿಸಿರುವ ಬಟ್ಟೆ ಮಾತ್ರ, ಹಾಗಾಗಿ ಚಳಿಯನ್ನು ಅನುಭವಿಸುವಂತಹ ಸಿರಿತನ ನನ್ನಲ್ಲಿಲ್ಲ. ನಿಮ್ಮ ಬಳಿ ಬೇಕಾದಷ್ಟು ಬಟ್ಟೆಗಳಿವೆ ಹಾಗೂ ಅದರಿಂದಾಗಿ ಚಳಿಯನ್ನು ಅನುಭವಿಸುವಂತಹ ಸ್ವಾತಂತ್ರ್ಯವೂ ನಿಮಗಿದೆ' ಎಂದ.

ಕತ್ತೆ ಮತ್ತು ಹಸು

ಒಂದು ದಿನ ನಸ್ರುದ್ದೀನ್‌ನ ಪತ್ನಿ 'ನಾವೊಂದು ಹಸುವನ್ನು ಸಾಕಿಕೊಳ್ಳೋಣ. ಅದರಿಂದಾಗಿ ನಾವು ಹಾಲಿಗೆ ಪಡಿಪಾಡುವುದು ತಪ್ಪುತ್ತದೆ' ಎಂದಳು. ನಸ್ರುದ್ದೀನನಿಗೆ ಹಸು ಸಾಕುವುದು ಇಷ್ಟವಿರಲಿಲ್ಲ, ಏಕೆಂದರೆ ಅವನ ಕೊಟ್ಟಿಗೆ ಚಿಕ್ಕದಾಗಿದ್ದು ಅದರಲ್ಲಿ ಅವನ ಪ್ರೀತಿಪಾತ್ರವಾದ ಕತ್ತೆಗೆ ಸಾಕಾಗುವಷ್ಟು ಮಾತ್ರ ಜಾಗವಿತ್ತು. ಆದರೂ ಅವನ ಹೆಂಡತಿಯು ತನ್ನ ಹಠ ಬಿಡಲಿಲ್ಲ. ಕೊನೆಗೆ ಒಂದು ಹಸುವನ್ನು ಕೊಂಡುತಂದರು. ಹಸುವನ್ನು ಕೊಟ್ಟಿಗೆಗೆ ಕೊಂಡೊಯ್ಯಾಗ ಅಲ್ಲಿ ಅವನು ಊಹಿಸಿದಂತೆಯೇ ಇತ್ತು. ಹಸು ಮತ್ತು ಕತ್ತೆಯನ್ನು ಒಟ್ಟಿಗೇ ಕಟ್ಟಿದಾಗ ಆ ಎರಡೂ ಪ್ರಾಣಿಗಳಿಗೂ ಇಕ್ಕಟ್ಟಾಗಿತ್ತು. ತನ್ನ ಕತ್ತೆಗೆ ಹಿಂಸೆಯಾಗುತ್ತಿರುವುದನ್ನು ಸಹಿಸದ ನಸ್ರುದ್ದೀನ್ ಆ ದಿನ ರಾತ್ರಿ ಮಲಗುವಾಗ, 'ಹೋ ದೇವರೇ! ಬೆಳಗಾಗುವಷ್ಟರಲ್ಲಿ ಆ ಹಸು ಸತ್ತು ಹೋಗಿರಲಿ. ಅದರಿಂದಾದರೂ ನನ್ನ ಹೆಂಡತಿ ಸುಮ್ಮನಾಗಬಹುದು. ಮತ್ತೊಂದು ಹಸು ತರಲು ಆಕೆ ಒತ್ತಾಯ ಮಾಡುವುದಿಲ್ಲ. ನನ್ನ ಕತ್ತೆ ತನ್ನ ಕೊಟ್ಟಿಗೆಯಲ್ಲಿ ಆರಾಮವಾಗಿರುತ್ತದೆ' ಎಂದು ಪ್ರಾರ್ಥಿಸಿದ.

ಬೆಳಗಾಗೆದ್ದು ನೋಡಿದಾಗ ಕೊಟ್ಟಿಗೆಯಲ್ಲಿ ನಸ್ರುದ್ದೀನನ ಪ್ರೀತಿಪಾತ್ರ ಕತ್ತೆ ಸತ್ತುಬಿದ್ದಿತ್ತು. ಆತನಿಗೆ ವಿಪರೀತ ಸಿಟ್ಟುಬಂತು. 'ದೇವರೇ! ನಿನಗೇನು ಬುದ್ಧಿ ಇದೆಯೋ ಇಲ್ಲವೋ? ಇಷ್ಟು ವರ್ಷಗಳ ನಂತರವೂ ನಿನಗೆ ಕತ್ತೆ ಮತ್ತು ಹಸುವಿನ ನಡುವಿನ ಅಂತರವೇ ತಿಳಿದಿಲ್ಲವಲ್ಲಾ!' ಎಂದು ಗೊಣಗಿದ.

ಅರ್ಧಪಾಲು ಮಗು

ಸರಿ ರಾತ್ರಿಯಲ್ಲಿ ಮಗು ಜೋರಾಗಿ ಅಳುತ್ತಿತ್ತು. ನಸ್ರುದ್ದೀನನ ಪತ್ನಿ ಆತನನ್ನು ಎಬ್ಬಿಸಿ, 'ನೋಡು ಮಗು ಅಳುತ್ತಿದೆ. ನನಗೂ ಸಾಕಾಗಿದೆ. ಮಗುವಿನಲ್ಲಿ ನಿನ್ನದೂ ಅರ್ಧ ಪಾಲಿದೆಯಲ್ಲವೆ? ಹೋಗಿ ಮಗುವಿಗೆ ನಿದ್ರೆ ಮಾಡಿಸು' ಎಂದಳು. ಅದಕ್ಕೆ ನಸ್ರುದ್ದೀನ್, 'ನೀನು ಹೋಗಿ ನಿನ್ನ ಅರ್ಧ ಭಾಗ ಮಗುವಿಗೆ ನಿದ್ರೆ ಮಾಡಿಸು. ನನ್ನ ಅರ್ಧ ಭಾಗ ಅತ್ತರೆ ಅಳಲಿ' ಎಂದು ಮಗ್ಗುಲು ಬದಲಿಸಿದ. ■

SHARMA TRANSPORTS

Branches at Bangalore:

Chickpete: Sharma Complex, Ph.: 22264382, 41141081
Gandhinagar: 5th Main, Jayadeva Hostel Bldg., Ph.: 41540441, 22352321
Mejestic: Totadappa Choultry Building, Before City Railway Station Next to Bell Hotel. Ph.: 22871373, 41571508
Madiwala: Hosur Main Road, Opp. Bata Show Room, Ph.:25631438, 2502936
Rajajingar: 1st Main, 1st Block, Dr. Rajkumar Road, Ph.: 41149577
Singasandra: Kurl-on Show Room Building, Next to Dakshin Honda, Hosur Main Road. Ph.: 42045283
Yeshwanthpur: Old No. 378, New No. 72, Ground Floore, SC Road, OPP. Yeshwanthpur Police Station, 23578585

Cargo Booking: Kalasipalyam Ph.: 41149576/26701960, V.V. Puram Ph.: 26623132/41204310, Singasandra, Hosur Road Ph.: 42045283

Cargo Delivery:
(North)- National High School Road, V.V. Puram Ph. 26623132/41204310
(South)-R.V. Road, V.V. Puram Ph.: 26578273/26568017

HEAD OFFICE

328, SangeethaBhavan, Tippu Sultan Palace Road,
Kalasipalayam, Bangalore-560002
Passenger Help Line :26702426, 26702447, 26708791, 40873000,
26701721, 41149578-79, 41224115, 41149533 Fax:+91 80 26703331
Agency Help-Line: 41149360
E-mail:sharma_transports@yahoo.co.in
E-ticketing: www.sharmatransports.com

RICHIES

RAHHAM'S

Families International

#82, M.M. Road, Frazer Town, Bangalore-56- 005. Ph.:25486696/25484590

Frazer Town • R.T. Nagar • Airport Road • Kammanahalli

'SAMVADA' Kannada Monthly, SEPTEMBER 2012 KA/BGW-706/2012-2014 RNI No. KARKAN/ 2002/ 9246
Posted at Bengaluru G.P.O on 1st & 7th of Every Month. (No of pages- 52)

When a Problem is too big to solve but too important to ignore.

Malnutrition is one of the largest problems facing our country.

40% of the world's malnutrition manifests in India.

We at Pristine Organics reach low cost nutrition products to more than a lakh of malnourished children and people living with HIV positive in collaboration with a network of 50 Non Governmental Organizations. We also help self help groups and NGO's produce affordable local nutritional solutions for vulnerable segments.

PRISTINE ORGANICS

Join hands to tackle malnutrition a national shame

Contact- Akshata 9538898016 | Email - akshatha@pristineorganics.com